ಮಹಾತ್ಮಾ ಗಾಂಧಿ



...ೀತನ ಪ್ರಕಟನಾಲಯ, ಮೈಸೂರು.

೧೯೪೮

ಮಹಾತ್ಮಾ ಗಾಂಧಿ

ಚೇತನ ಪ್ರಕಟನಾಲಯ, ಮೈಸೂರು.

೧೯೪೮

ಮೊದಲನೆಯ ಮುದ್ರಣ ೧೯೩೯
ಎರಡನೆಯ ಮುದ್ರಣ ೧೯೪೧
ಮೂರನೆಯ ಮುದ್ರಣ ೧೯೪೮

ಪ್ರಕಾಶಕರು: ಚೇತನ ಪ್ರಕಟನಾಲಯ, ಮೈಸೂರು.

ಮುದ್ರಕರು: ಡಿ. ರಾಜರತ್ನಂ, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಸಯ್ಯಾಜಿರಾವ್ ರೋಡ್, ಮೈಸೂರು.

ಬೆಲೆ: ಸಾದಾ—ಒಂದೂವರೆ ರೂಪಾಯಿ
ಕ್ಯಾಲಿಕೊ—ಎರಡೂವರೆ ರೂಪಾಯಿ

ಪರಿವಿಡಿ

ಭಾರತದ ಸಂಸ್ಕೃತಿ, ಭಾರತೀಯರ ನಡತೆ, ಸ್ವಭಾವ, ಸಹನೆ, ಪ್ರೇಮ, ತ್ಯಾಗ ಇವುಗಳ ಅನುಭವ ಪಡೆಯಲು, ನಿಜವಾದ, ಶುದ್ಧವಾದ ಸನಾತನಧರ್ಮವನ್ನು, ಶೀಲವನ್ನು ತಿಳಿದುಕೊಳ್ಳಲು ಮಹಾತ್ಮಾ ಗಾಂಧೀಜಿಯ ದಿವ್ಯ ಜೀವನ ಅರಿಯಬೇಕು.

ಮರ್ತ್ಯನು ಅಮರನಾಗುವ ರಹಸ್ಯವನ್ನು ಅರಿಯಬೇಕಾದರೆ, ಕರ್ಮಯೋಗಿಯ, ಸತ್ಯಾನ್ವೇಷಕನ ಸಾಧನಮಾರ್ಗ ತಿಳಿಯಬೇಕಾದರೆ ಗಾಂಧೀಜಿಯ ಜೀವನಕಥೆ ತಿಳಿಯಬೇಕು.

ಭಾರತ ಭಾಗ್ಯವಿಧಾತ ಮಹಾತ್ಮಾ ಗಾಂಧೀಜಿಯ ಜೀವನಕಥೆ ಭಾರತ ರಾಷ್ಟ್ರದ ಇತಿಹಾಸ.


ಈ ದೃಷ್ಟಿಯಿಂದ ಈ ಪುಸ್ತಕ ಕೊಂಚಮಟ್ಟಿಗಾದರೂ ನೆರವಾದೀತು ಎಂಬುದು ನಮ್ಮ ನಂಬಿಕೆ.

ಈ ಪುಸ್ತಕದ ಮೊದಲನೆಯ ಮತ್ತು ಎರಡನೆಯ ಮುದ್ರಣ 'ಮಹಾತ್ಮಾಗಾಂಧೀ' ಎಂಬ ಹೆಸರಿನಿಂದಾಯಿತು. ಈಗ ಆ ಪುಸ್ತಕವನ್ನು ಪೂರ್ಣಗೊಳಿಸಿ 'ಗಾಂಧೀಜಿ' ಎಂದು ಕರೆಯಲಾಗಿದೆ.

ಇಲ್ಲಿ ಅಚ್ಚಾಗಿರುವ ಪಡಿಯಚ್ಚುಗಳನ್ನು ಎರವು ಕೊಟ್ಟು ಉಪಕರಿಸಿದ ಮೈಸೂರಿನ 'ಕಾವ್ಯಾಲಯ' ಪ್ರಕಟನ ಮಂದಿರ, ಗ್ರಾಮ ಸೇವಾನಿಲಯ ಪ್ರಕಟನಮಂದಿರ, ಮತ್ತು ಬೀರೂರಿನ 'ಪ್ರತಿನಿಧಿ' ಮಾಸಪತ್ರಿಕೆ ಇವುಗಳಿಗೆ ಋಣಿಯಾಗಿದ್ದೇವೆ. ಈ ಪುಸ್ತಕವನ್ನು ನಮ್ಮ ಅನುಕೂಲವನ್ನು ಅನುಸರಿಸಿ ಮುದ್ರಿಸಿಕೊಟ್ಟ ಶ್ರೀ ಪಂಚಾಚಾರ್ಯ ಮುದ್ರಣಾಲಯಕ್ಕೂ ನಮ್ಮ ಕೃತಜ್ಞತೆ.

ಆಗಸ್ಟ ೧೫ }
೧೯೪೮ }

ಪ್ರಕಾಶಕರು



ಗಾಂಧೀಜಿ

ಗಾಂಧೀಜಿ

ಪ್ರಪಂಚದಲ್ಲಿ ಜನ್ಮವೆತ್ತ ಎಂತೆಂತಹ ವೀರರನ್ನೋ ಸಾರ್ವಭೌಮರನ್ನೋ ಕಾಲ ಮರೆತಿದೆ. ಆದರ ನೆನಪಿನಲ್ಲಿ ಉಳಿದಿರುವ ಮಹಾಪುರುಷರ ವಿರಳಪಂಕ್ತಿಯಲ್ಲಿ ಗಾಂಧೀಜಿ ಪ್ರಕಾಶಿಸುತ್ತಾರೆ. ಇವರು ಎಲ್ಲ ಯುಗಕ್ಕೂ ಎಲ್ಲ ಜನಾಂಗಕ್ಕೂ ಬೇಕಾದ ಜೀವನವನ್ನು ನಡಸಿದ್ದಾರೆ. ಭಾರತದ ಸಾಂಪ್ರದಾಯಿಕ ರೀತಿಯಲ್ಲಿ ಇವರು ಋಷಿ; ಹೊಸ ಕಾಲದ ರೀತಿಯಲ್ಲಿ ರಾಷ್ಟ್ರದ ಮಹಾನಾಯಕ, ನಮ್ಮ ಜನಾಂಗದ ಪಿತ. ಇವೆರಡೂ ಶಕ್ತಿ ಇವರಲ್ಲಿ ಹಿತವಾದ ರೀತಿಯಲ್ಲಿ ಸಮ್ಮಿಳಿತವಾಗಿವೆ. ಇಹಪರಗಳು ಎರಡನ್ನೂ ಮೇಳೈಸಿ ಭೂಮಿಸ್ವರ್ಗಗಳೆರಡನ್ನೂ ಐಕ್ಯಗೊಳಿಸಲು ಪ್ರಯತ್ನಪಟ್ಟ ಮಹಾಮಹಿಮರಿವರು.

ಎಲ್ಲರ ಹೃದಯಾಂತರಾಳದಲ್ಲಿ ಮನೆಮಾಡಿರುವ ಭಗವಂತನನ್ನು ನಮ್ಮ ಉಪನಿಷತ್ತುಗಳು ಮಹಾತ್ಮನೆಂದಿರುವವು. ಆ ವಿಶೇಷಣ ಗಾಂಧೀಜಿಗೆ ಒಪ್ಪುತ್ತದೆ. ಇವರು ಭಾರತದ ಕೋಟಿ ಕೋಟಿ ಜನರ ಹೃದಯದಲ್ಲಿ ನೆಲೆಮಾಡಿದ್ದಾರೆ.

ಭಾರತದ ಸಂಸ್ಕೃತಿ, ಭಾರತೀಯರ ನಡತೆ, ಸ್ವಭಾವ, ಔದಾರ್ಯ, ವಿಶ್ವಪ್ರೇಮ, ತ್ಯಾಗ, ಸೇವೆ ಇವುಗಳ ಸಂಗಮವೇ ಗಾಂಧೀಜಿ. ಶುದ್ಧ ಹಿಂದೂಧರ್ಮ ಮತ್ತು ಚಾರಿತ್ರ್ಯಮೂರ್ತಿ ಇವರು.

ಮಹಾತ್ಮಾ ಗಾಂಧೀಜಿಯ ಕಥೆ ಭಾರತ ಸ್ವಾತಂತ್ರ್ಯ ಇತಿಹಾಸದ ತಿರುಳು. ಇದರ ಶ್ರವಣ ರಾಷ್ಟ್ರಕಥಾಶ್ರವಣ.

ಇವರು ಯಾವ ಬಗೆಯ ಬಾಹ್ಯಾಧಿಕಾರದ ಆಸರೆಯೂ ಇಲ್ಲದೆ ಭಾರತದ ಮಹಾನಾಯಕರಾಗಿರುವರು; ಅಹಿಂಸಾಧರ್ಮ ಮಾರ್ಗ

ದಲ್ಲಿಯೆ ಭಾರತಕ್ಕೆ ಮುಕ್ತಿ ತೋರಿ ನಮ್ಮ ಸ್ವಾತಂತ್ರ್ಯದ ಶಿಲ್ಪಿಯಾಗಿರುವರು. ಪ್ರಪಂಚದ ಅನ್ಯಾಯ ಅಧರ್ಮಗಳನ್ನೂ ಪಶುತ್ವಶಕ್ತಿಯನ್ನೂ ಎದುರಿಸಿ ನಿಂದ ದೇವಪುರುಷ ಇವರು. ಇಂತಹ ಒಬ್ಬ ವ್ಯಕ್ತಿ ದೇಹಹೊತ್ತು ಈ ನೆಲದಮೇಲೆ ಬಾಳು ನಡೆಸಿದನೆಂದು ಮುಂದಿನ ಪೀಳಿಗೆ ನಂಬಲಾರದೋ ಏನೋ!

ನರನು ಅಮರನಾಗುವ ರಹಸ್ಯವನ್ನು ಅರಿಯಬೇಕಾದರೆ, ಕರ್ಮಯೋಗಿಯ ಸ್ವರೂಪವೆಂತಹುದು ಎಂಬುದನ್ನು ತಿಳಿದುಕೊಳ್ಳಬೇಕಾದರೆ, ಸತ್ಯಶೋಧಕನ ಸಾಧನೆಯ ತಿಳಿವು ಉಂಟಾಗಬೇಕಾದರೆ ಮಹಾತ್ಮಾ ಗಾಂಧೀಜಿಯ ಜೀವನಕಥೆಯನ್ನು ತಿಳಿದುಕೊಳ್ಳಬೇಕು.

ಪ್ರಾರಂಭ ಜೀವನ

ಗಾಂಧೀ ಮನೆತನದವರು ಬನಿಯರು. ಕರಮಚಂದ ಗಾಂಧಿ ಅಥವಾ ಕಬಾಗಾಂಧಿಯವರು ಪೋರಬಂದರು ಮತ್ತು ರಾಜಕೋಟೆಗಳಲ್ಲಿ ದಿವಾನರಾಗಿದ್ದರು. ಅವರು ಕುಟುಂಬಪ್ರೇಮಿ, ಸತ್ಯವಂತ, ಶೂರ, ಉದಾರಿ ಮತ್ತು ಸುಚರಿತರಾಗಿದ್ದರು. ಎಲ್ಲರನ್ನೂ ತನ್ನವರಂತೆ ತಿಳಿಯುವುದು ಅವರ ಸ್ವಭಾವ. ಅವರು ನ್ಯಾಯಪಕ್ಷಪಾತಿ ಎಂಬ ಹೆಸರು ಪಡೆದಿದ್ದರು. ಧನವನ್ನು ಶೇಖರಿಸಬೇಕೆಂಬ ಅತಿಯಾಸೆ ಅವರಿಗಿರಲಿಲ್ಲ. ಆಧುನಿಕಶಿಕ್ಷಣ ವಿಲ್ಲದಿದ್ದರೂ ಅನುಭವ ಸಾಕಾದಷ್ಟಿತ್ತು. ಇದರಿಂದ ಅವರು ವ್ಯವಹಾರ ದಲ್ಲಿ ಕುಶಲರಾಗಿದ್ದರು. ಜನರನ್ನು ಹದ್ದಿನಲ್ಲಿಡಲು ಶಕ್ತರಾಗಿದ್ದರು. ಇವರ ಹೆಂಡತಿ ಪುತಲೀಬಾಯಿಯವರು ಸಾಧ್ವಿ, ದೈವಭಕ್ತೆ, ಆಚಾರವಂತೆ; ವ್ಯವಹಾರಕುಶಲೆಯಾಗಿದ್ದು ರಾಣೀವಾಸದವರಿಗೆ ಆಗಾಗ್ಗೆ ಉತ್ತಮ ಸಲಹೆಗಳನ್ನು ಕೊಡುತ್ತಿದ್ದರು. ಈ ತಂದೆತಾಯಿಗಳಲ್ಲಿ ೧೮೬೯ ನೆಯ ಇಸವಿ ಅಕ್ಟೋಬರು ೨ನೆಯ ತಾರೀಖಿನ ದಿನ ಪೋರಬಂದರಿನಲ್ಲಿ ಕೊನೆಯ ಮಗನಾಗಿ ಮೋಹನದಾಸ ಕರಮಚಂದ ಗಾಂಧಿಯವರು ಹುಟ್ಟಿದರು. ಇವರೇ ಭಾರತ ಭಾಗ್ಯವಿಧಾತ ಮಹಾತ್ಮ ಗಾಂಧೀಜಿ. ಇವರಿಗೆ ಇಬ್ಬರು ಸೋದರರೂ ಒಬ್ಬಳು ಸೋದರಿಯೂ ಇದ್ದರು.

ಗಾಂಧೀಜಿಯ ಬಾಲ್ಯ ಪೋರಬಂದರು, ರಾಜಕೋಟೆಗಳಲ್ಲಿ ಕಳೆಯಿತು. ಶಾಲೆಯಲ್ಲಿ ಓದುತ್ತಿದ್ದಾಗ ಇವರು ಒಂದು ಸುಳ್ಳಾದರೂ ಆಡಲಿಲ್ಲ. ಒಮ್ಮೆ ಇನ್ಸ್ಪೆಕ್ಟರು ಶಾಲೆಗೆ ಬಂದು ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಿದ್ದರು. ಗಾಂಧೀಜಿ ತಪ್ಪುಬರೆದಿರುವುದು ಉಪಾಧ್ಯಾಯರಿಗೆ ತಿಳಿದು ಪಕ್ಕದವನು ಬರೆದಿರುವುದನ್ನು ನೋಡಿ ಆ ತಪ್ಪನ್ನು ತಿದ್ದಿಕೊಳ್ಳುವಂತೆ ಅವರಿಗೆ ಸಂಜ್ಞೆಮಾಡಿದರು. ಆದರೆ ಆ ರೀತಿ ಮಾಡುವುದು ಗಾಂಧಿಯವರಿಗೆ ಸರಿದೋರಲಿಲ್ಲ. ಹಾಗೆ ಮಾಡಲೂ ಇಲ್ಲ. ಶಾಲೆಯಲ್ಲಿ ಯಾವ

ಕೆಟ್ಟ ಅಭ್ಯಾಸವೂ ತಮ್ಮಲ್ಲಿ ಬೇರೂರದಂತೆ ಎಚ್ಚರಿಕೆಯಿಂದಿದ್ದರು. ತಮ್ಮ ನಡತೆ ಮತ್ತು ಅಭ್ಯಾಸದ ವಿಷಯದಲ್ಲಿ ಉಪಾಧ್ಯಾಯರಿಂದ ಬೈಗಳನ್ನು ಕೇಳುವುದಾಗಲಿ ಅವರನ್ನು ಮೋಸಪಡಿಸುವುದಾಗಲಿ ಅವರಿಗೆ ಹಿಡಿಸುತ್ತಿರಲಿಲ್ಲ. ತಾವು ಸರಿಯಾಗಿರಲು ಆಯಾದಿನದ ಪಾಠಗಳನ್ನು ಚೆನ್ನಾಗಿ ಅಭ್ಯಾಸಮಾಡುತ್ತಿದ್ದರು. ತಮ್ಮ ನಡತೆಯ ವಿಷಯದಲ್ಲಿ ಬಹು ಜಾಗರೂಕರಾಗಿರುತ್ತಿದ್ದರು.

ತಾವು ಬಾಲ್ಯದೆಸೆಯಲ್ಲಿರುವಾಗಲೆ 'ಶ್ರವಣ ಭಕ್ತಿ' ಎಂಬ ಕಥೆ ಗಾಂಧೀಜಿಗೆ ಮೆಚ್ಚಿಗೆಯಾಗಿತ್ತು. ಶ್ರವಣನು ತನ್ನ ತಂದೆತಾಯಿಗಳನ್ನು ಜೋಳಿಗೆಯಲ್ಲಿ ಹೊತ್ತು ಯಾತ್ರೆ ತಿರುಗಿ ತನ್ನ ಸೇವೆ ಸಲ್ಲಿಸುತ್ತಿದ್ದುದು ಅವರಲ್ಲಿ ಸೇವಾಸಕ್ತಿಯನ್ನು ಬೆಳೆಸಿತು. ತಂದೆತಾಯಿಗಳಲ್ಲಿ ಶ್ರವಣನಿಗಿದ್ದ ಭಕ್ತಿ ಮತ್ತು ಅವನ ಸೇವೆ ತಮ್ಮ ಆದರ್ಶವಾಗಿರಬೇಕೆಂದು ನಿರ್ಧರಿಸಿ ಕೊಂಡರು. ಹಾಗೆಯೇ ಹರಿಶ್ಚಂದ್ರನ ಕಥೆಯೂ ಅವರ ಮನಸ್ಸನ್ನು ಒಲಿಸಿಕೊಂಡಿತು. ಸತ್ಯಕ್ಕಾಗಿ ಹರಿಶ್ಚಂದ್ರನು ಪಟ್ಟಪಾಡು ಸಹಿಸಿದ ಕಷ್ಟಗಳು ಅವರನ್ನು ಆಕರ್ಷಿಸಿದವು. ಸತ್ಯವನ್ನೆಂದಿಗೂ ಬಿಟ್ಟು ಹೋಗ ಬಾರದೆಂಬ ನಂಬಿಕೆ ಅವರ ಹೃದಯದಲ್ಲಿ ಮನೆಮಾಡಿತು.

ಗಾಂಧಿಯವರಿಗೆ ಹದಿಮೂರು ವರ್ಷ ವಯಸ್ಸು. ಆಗ ಅವರ ಮದುವೆ ಮಾಡಿಬಿಡಬೇಕೆಂದು ಹಿರಿಯರು ಯೋಚಿಸಿದರು. ಬಾಲ್ಯ ವಿವಾಹಕ್ಕೆ ಶಾಸ್ತ್ರದಲ್ಲಿ ಸಮ್ಮತವಾದ ಆಧಾರವಿಲ್ಲ. ಆದರೂ ಅರಿಯದ ಮಕ್ಕಳನ್ನು ಕಟುತರವಾದ ಸಂಸಾರದ ಬಲೆಗೆ ತಳ್ಳುವುದು ಹಿಂದುಗಳ ಲ್ಲೊಂದು ಸಂಪ್ರದಾಯ ಬಂದುಹೋಗಿದೆ. ಗಾಂಧೀ ಮನೆತನದವರು ಈ ಸಂಪ್ರದಾಯವನ್ನು ಮೀರಲಿಲ್ಲ. ಗಾಂಧಿಯವರಿಗೆ ಕಸ್ತೂರಿಬಾಯಿಯ ವರನ್ನು ತಂದು ಮದುವೆಮಾಡಲು ನಿಶ್ಚಯಿಸಿದರು.

"ಹಿಂದುಗಳ ಮದುವೆಯೆಂದರೆ ಸಾಮಾನ್ಯವಿಷಯವಲ್ಲ. ಅನೇಕ ವೇಳೆ ವಧೂವರರ ತಂದೆತಾಯಿಗಳು ಹಾಳಾಗುತ್ತಾರೆ. ಅವರು ಆಸ್ತಿ

ಮತ್ತು ಕಾಲವನ್ನು ಹಾಳುಮಾಡಿಕೊಳ್ಳುತ್ತಾರೆ. ಬೇಕಾಗುವ ಬಟ್ಟೆ ಒಡವೆವಸ್ತುಗಳನ್ನು ಹವಣಿಸುವುದಕ್ಕೂ ಊಟ ಉಪಚಾರಗಳಿಗಾಗುವ ಖರ್ಚನ್ನು ಒದಗಿಸುವುದಕ್ಕೂ ತಿಂಗಳುಗಟ್ಟಳೆ ಹೆಣಗುತ್ತಾರೆ. ಒದಗಿಸ ಬೇಕಾದ ಸಾಮಾನುಗಳು ಹೆಚ್ಚಾಗಿಯೂ ಉತ್ತಮವಾಗಿಯೂ ಇರಬೇ ಕೆಂದು ಎರಡು ಪಕ್ಷದವರೂ ಪ್ರಯತ್ನಿಸುತ್ತಾರೆ. ಹೆಂಗಸರು ತಮಗೆ ಒಳ್ಳೆಯ ಕಂಠವಿರಲಿ ಇಲ್ಲದಿರಲಿ ಗಂಟಲುಒಣಗಿ ಕಾಯಿಲೆ ಬಂದರೂ ಸರಿಯೆ ಹಾಡುತ್ತಾರೆ. ನೆರೆಯವರಿಗೂ ಗದ್ದಲದಿಂದ ನೆಮ್ಮದಿ ಇಲ್ಲ. ಆದರೆ ಒದಗುವ ಕಾಟವನ್ನೂ ಮನೆಯ ಸುತ್ತನ್ನೆಲ್ಲ ಕೆಡಿಸುವ ಕೊಳ ಕನ್ನೂ ಅವರು ಸಹಿಸಲೇ ಬೇಕಾಗುತ್ತದೆ. ಏಕಂದರೆ ಅವರಿಗೆ ಗೊತ್ತು, ಅಂತಹ ಕಾರ್ಯಗಳಲ್ಲಿ ತಾವೂ ಹಾಗೆಯೇ ವರ್ತಿಸುವೆವೆನ್ನುವುದು.” ಈ ಎಲ್ಲಾ ತೊಂದರೆಯನ್ನೂ ಒಂದೇಸಾರಿ ಮುಗಿಸಿಬಿಡಲು ಮತ್ತು ಕಡಮೆ ಖರ್ಚಿನಲ್ಲಿ ವಿಜೃಂಭಣೆಯಿಂದ ಕಾರ್ಯನಡೆಸಲು ಹಿರಿಯರು ಗಾಂಧೀಜಿ, ಅವರಣ್ಣನೊಬ್ಬ ಮತ್ತು ದಾಯಾದಿಯೊಬ್ಬ ಈ ಮೂವರ ಮದುವೆಗಳನ್ನೂ ಒಟ್ಟಿಗೆ ನಡೆಸಲು ಏರ್ಪಾಡುಮಾಡಿದರು. ಮದುವೆ ಎಂದರೆ ಒಳ್ಳೆಯ ಬಟ್ಟೆಗಳು ಸಿಗುತ್ತವೆ, ವಾದ್ಯ ಮೆರವಣಿಗೆ ಮತ್ತು ಆಟಕ್ಕೆ ಒಬ್ಬೊಬ್ಬ ಹುಡುಗಿ ದೊರಕುತ್ತಾಳೆ ಅಷ್ಟೆ ಆ ಮದವಣಿಗರ ಸಂತೋಷ. ಅಂತು ಮದುವೆ ವಿಜೃಂಭಣೆಯಿಂದಲೆ ಮುಗಿಯಿತು.

ತಮ್ಮ ಮದುವೆಯಾದಾಗ ಗಾಂಧೀಜಿ ಹೈಸ್ಕೂಲಿನಲ್ಲಿ ಓದುತ್ತಿದ್ದರು. ಅವರ ಓದು ಮುಂದೆ ಸಾಗಿತು. ಹೈಸ್ಕೂಲಿನಲ್ಲಿ ಅವರು ದಡ್ಡನೆನಿಸಿ ಕೊಂಡಿರಲಿಲ್ಲ. ಉಪಾಧ್ಯಾಯರು ಯಾವಾಗಲೂ ಇವರನ್ನು ಪ್ರೀತಿಸುತ್ತಿ ದ್ದರು. ಶಾಲೆಗಳಿಂದ ಪ್ರತಿವರ್ಷವೂ ಹುಡುಗರ ಅಭ್ಯಾಸ ಮತ್ತು ನಡತೆಯ ವಿಷಯದಲ್ಲಿ ಯೋಗ್ಯತಾಪತ್ರಗಳು ಅವರ ತಂದೆತಾಯಿಗಳಿಗೆ ಕಳುಹಿಸ ಲ್ಪಡುತ್ತಿದ್ದವು. ಗಾಂಧೀಜಿಗೆ ಕೊಡುತ್ತಿದ್ದ ಯೋಗ್ಯತಾ ಪತ್ರದಲ್ಲಿ ಅವರ ವಿಷಯದಲ್ಲಿ ಒಳ್ಳೆಯದನ್ನೇ ಬರೆದಿರುತ್ತಿತ್ತು. ಅಲ್ಲದೆ ಅವರ ಓದಿಗಾಗಿ

ಬಹುಮಾನ ಕೂಡಾ ಬಂದಿತು. ಯೋಗ್ಯತಾ ವೇತನವೂ ಬರುತ್ತಿತ್ತು. ತಮ್ಮ ನಡತೆಯಲ್ಲಿ ಸ್ವಲ್ಪ ಕುಂದು ತೋರಿದರೂ ಅದಕ್ಕಾಗಿ ಗಾಂಧೀಜಿಗೆ ವ್ಯಸನವಾಗುತ್ತಿತು. ಯಾವ ಕೆಲಸದಲ್ಲಾದರೂ ತಾವು ತಪ್ಪುಮಾಡಿದರೆ ಅದು ಸರಿಹೋಗುವವರೆಗೆ ಅವರಿಗೆ ನೆಮ್ಮದಿ ಇರುತ್ತಿರಲಿಲ್ಲ.

ಗಾಂಧೀಜಿ ಇನ್ನೂ ಚಿಕ್ಕವರಾಗಿದ್ದಾಗ ಜನರು ಬೀಡಿ ಸೇದಿ ಬಾಯಿಂದ ಮೂಗಿಂದ ಹೊಗೆ ಬಿಡುವುದನ್ನು ನೋಡಿ ಅವರಿಗೂ ಸೇದ ಬೇಕೆನಿಸಿತು. ಆದರೆ ಅವರಲ್ಲಿ ಬೀಡಿಕೊಳ್ಳಲು ಕಾಸಿರಲಿಲ್ಲ. ಆದಕ್ಕಾಗಿ ಅವರ ಚಿಕ್ಕಪ್ಪನು ಸೇದಿ ಬಿಸುಟ ತುಂಡುಗಳನ್ನು ಕದ್ದು ಸೇದಲು ಮೊದಲು ಮಾಡಿದರು. ಕೊನೆಕೊನೆಗೆ ಇದಕ್ಕಾಗಿ ಮನೆ ಆಳಿನ ಜೇಬಿನಿಂದ ಕಾಸು ಕದಿಯಲು ಪ್ರಾರಂಭಿಸಿದರು. ಸ್ವಲ್ಪ ದಿನದಲ್ಲಿ ಈ ಕೀಳು ಕೆಲಸ ಕೆಟ್ಟ ದೆಂದು ತಿಳಿದು ಆ ಛಾಳಿಗಳಿಂದ ದೂರಾದರು. ಆದರೆ ಅವರು ಹೈಸ್ಕೂಲಿ ನಲ್ಲಿ ವ್ಯಾಸಂಗ ಮಾಡುತ್ತಿದಾಗ ಅಯೋಗ್ಯ ಸಹವಾಸ ಮಾಡಿದುದ್ದರ ಫಲವಾಗಿ ಒಂದೆರಡು ಪರಿಣಾಮಕಾರಿಯಾದ ಪ್ರಸಂಗಗಳು ಒದಗಿದವು. ಮುಖ ಹೇಡಿಯಾಗಿದ್ದುದರಿಂದ ಗಾಂಧೀಜಿಗೆ ಶಾಲೆಯಲ್ಲಿ ಹೆಚ್ಚು ಜನ ಗೆಳೆಯರಿರಲಿಲ್ಲ. ಇದ್ದ ಒಬ್ಬಿಬ್ಬರು ಸ್ನೇಹಿತರಲ್ಲಿ ಒಬ್ಬನು ಮಾಂಸ ತಿಂದು ಬಲಾಢ್ಯನಾಗಬೇಕೆಂದು ಅನೇಕ ಉದಾಹರಣೆಗಳೊಡನೆ ಅವರಿಗೆ ಬೋಧಿ ಸಿದನು. ಗಾಂಧೀ ಮನೆತನದವರು ವೈಷ್ಣವರು. ಅಲ್ಲದೆ ಆಚಾರವಂತರು. ಹೀಗಿರುವಲ್ಲಿ ತಾವು ಮಾಂಸ ತಿಂದರೆಂದು ತಂದೆತಾಯಿಗಳಿಗೆ ಗೊತ್ತಾದರೆ ಅವರಿಗೆ ಅತಿ ಸಂಕಟವಾಗುವುದೆಂದೂ ತಾವು ಅವರಿಗೆ ದ್ರೋಹಮಾಡಿ ದಂತಾಗುತ್ತದೆಂದೂ ಗಾಂಧೀಜಿಗೆ ಗೊತ್ತು. ಆದರೂ ಮಿತ್ರನ ಮಾತಿಗೆ ಸೋತರು; ಅವರ ಅಣ್ಣನೊಬ್ಬ ಅದಕ್ಕೆ ಸಹಾಯಕರಾದರು. ಗೊತ್ತಾದ ದಿನ ಗುಪ್ತಸ್ಥಳದಲ್ಲಿ ಮಾಂಸಭಕ್ಷಣೆಯ ಪ್ರಾರಂಭೋತ್ಸವವಾಯಿತು. ಮಾಂಸ ಭಕ್ಷಣೆಯು ಕಳ್ಳತನದಲ್ಲೇ ಒಂದು ವರ್ಷ ನಡೆಯಿತು. ಆದರೆ ತಂದೆ ತಾಯಿಗಳಿಗೆ ಮೋಸಮಾಡುತ್ತಿರುವುದು ಗಾಂಧೀಜಿಗೆ ಅಸಹ್ಯವಾಗಿ

ಕಂಡಿತು. ಮಾಂಸಭಕ್ಷಣೆಯನ್ನು ಬಿಟ್ಟುಬಿಟ್ಟರು. ಮತ್ತೊಮ್ಮೆ ಈ ಗೆಳೆಯನು ಗಾಂಧೀಜಿಯನ್ನು ವ್ಯಭಿಚಾರಗೃಹಕ್ಕೆ ಕೊಂಡುಹೋದನು. ಗಾಂಧೀಜಿ ವೇಶ್ಯಾಗೃಹವನ್ನು ಹೊಕ್ಕು ಸಜ್ಜುಗೊಳಿಸಿದ್ದ ಕೊಠಡಿಗೆ ಹೋದರು. ಅಲ್ಲಿಗೆ ಕಾಲಿಟ್ಟೊಡನೆ ಇವರ ಸುಗುಣವು ಎಚ್ಚರಗೊಂಡಿತು. ಇವರ ಶಕ್ತಿ ಉಡುಗಿಹೋಯಿತು. ಮೈ ಬೆವರಿತು. ಆಯಾಸದಿಂದ ಕೆಳಗೆ ಕುಳಿತುಬಿಟ್ಟರು. ವೇಶ್ಯೆ ಆ ನಡತೆಗೆ ಬೇಸತ್ತು ಬೈದು ಅವರನ್ನು ಹೊರಗೆ ಕಳುಹಿಸಿಬಿಟ್ಟಳು. ಈ ಅನಿಷ್ಟದಿಂದ ತಮ್ಮನ್ನು ಪಾರುಮಾಡಿದ ಭಗವಂತನನ್ನು ಕೊಂಡಾಡುತ್ತ ಗಾಂಧೀಜಿ ತಮ್ಮ ಮನೆ ಸೇರಿದರು.

ಈ ಕಳ್ಳತನದ ಕೆಲಸಗಳಿಗಾಗಿ ಗಾಂಧಿಯವರು ಮತ್ತು ಅವರ ಅಣ್ಣ ಇಬ್ಬರೂ ಯಾರೋ ಒಬ್ಬರಿಂದ ಸಾಲಮಾಡಬೇಕಾಯಿತು. ಸಾಲದ ತಗಾದೆ ಹೆಚ್ಚಾಯಿತು. ಸಾಲವನ್ನು ತೀರಿಸಲು ಅಣ್ಣನ ಕೈಯಲ್ಲಿದ್ದ ಚಿನ್ನದ ಬಳೆಯ ಒಂದು ಚೂರನ್ನು ಕದ್ದು ಕತ್ತರಿಸಿಕೊಂಡುದಾಯಿತು. ಅದನ್ನು ಮಾರಿ ಸಾಲ ತೀರಿಸುದುದೂ ಆಯಿತು. ಈ ನಡತೆ ಗಾಂಧೀಜಿಗೆ ಹೇಸಿಗೆಯನ್ನುಂಟುಮಾಡಿತು. ತಾವು ಮಾಡುತ್ತಿರುವ ತಪ್ಪುಗಳ ಪಾಪವು ತಮ್ಮನ್ನು ನುಂಗುತ್ತಿರುವಂತೆ ಕಂಡರು. ಇದಕ್ಕೆ ಪಶ್ಚಾತ್ತಾಪವೇ ಸರಿಯಾದ ಪ್ರಾಯಶ್ಚಿತ್ತವೆಂದು ತಿಳಿದು ಒಂದು ಕಾಗದದಲ್ಲಿ ತನ್ನ ತಪ್ಪುಗಳನ್ನು ಮುಚ್ಚುಮರೆಯಿಲ್ಲದೆ ಬರೆದು ಅದಕ್ಕಾಗಿ ಕ್ಷಮೆಬೇಡಿ ಇನ್ನು ಮುಂದೆ ಅಂತಹ ಅಪರಾಧವನ್ನು ಮಾಡೆನೆಂದು ತಿಳಿಸಿ ಆ ಕಾಗದವನ್ನು ತಂದೆಗೆ ಒಪ್ಪಿಸಿದರು. ತಂದೆ ಕಾಗದವನ್ನು ನೋಡಿದರು; ಕಣ್ಣಲ್ಲಿ ನೀರು ತಂದುಕೊಂಡರು. ಆದರೂ ಈರೀತಿ ವರ್ತಿಸಿದುದರಿಂದ ಮಗನ ಭವಿಷ್ಯದ ವಿಷಯದಲ್ಲಿ ನಿರ್ಭಯರಾದರು. ಮಗನಲ್ಲಿ ಪ್ರೇಮವೂ ಹೆಚ್ಚಿತು.

ಚಿಕ್ಕಂದಿನಿಂದಲೂ ಗಾಂಧೀಜಿಯ ಬುದ್ಧಿ ಹೇಗೆ ಬೆಳೆಯುತ್ತ ಬಂತೆಂಬುದನ್ನು ಈಗ ಹೇಳಬೇಕಾಗಿದೆ. ತಂದೆತಾಯಿಯರು ದೈವ

ಭಕ್ತರು. ಅವರು ಅನೇಕವೇಳೆ ದೇವರ ಪೂಜಾಕಾರ್ಯಗಳನ್ನು ಇವರಿಗೆ ಒಪ್ಪಿಸುತ್ತಿದ್ದರು. ಅಲ್ಲದೆ ಗಾಂಧೀಜಿಗೆ ತಮ್ಮ ತಂದೆಯ ಪುಸ್ತಕ ಭಂಡಾರದಲ್ಲಿದ್ದ ಅನೇಕ ಧರ್ಮಪುಸ್ತಕಗಳನ್ನು ಓದಿ ತಿಳಿದುಕೊಳ್ಳುವ ಅವಕಾಶ ಒದಗಿತು. ಭೂತ ಪಿಶಾಚಿಗಳ ಭಯಕ್ಕೆ ರಾಮನಾಮದ ಉಚ್ಚಾರಣೆಯೇ ಮದ್ದು ಎಂದು ಮನೆಕೆಲಸದ ರಂಭೆಯು ಚಿಕ್ಕಂದಿನಲ್ಲೇ ಹೇಳಿಕೊಟ್ಟಳು. ಆ ಹೆದರಿಕೆಯಿಂದ ಪಾರಾಗಲು ಅವರು ಚಿಕ್ಕವಯಸ್ಸಿನಲ್ಲೇ ಆ ದಾರಿ ಹಿಡಿದರು. ಆ ಹೆದರಿಕೆ ಬಹುದಿನ ಉಳಿಯಲಿಲ್ಲವಾದರೂ ಎಳೆತನದಲ್ಲಿ ಚೆಲ್ಲಿದ ಬಿತ್ತನೆಯು ಅನ್ಯಾಯವಾಗಲಿಲ್ಲ. ಗಾಂಧೀಜಿಗೆ ರಾಮನಾಮದಲ್ಲಿ ಭಕ್ತಿ ನೆಲಸಿತು. ಇದರ ಜೊತೆಗೆ ತಮ್ಮ ತಂದೆಯ ಮುಂದೆ ನಡೆಯುತ್ತಿದ್ದ ರಾಮಾಯಣದ ಪಾರಾಯಣವು ರಾಮನಾಮದಲ್ಲಿ ಅವರಿಗಿದ್ದ ಭಕ್ತಿಯನ್ನು ಮತ್ತೂ ಹೆಚ್ಚಿಸಿತು. ರಾಮಾಯಣವು ಅಮೋಘವಾದ ಶಕ್ತಿದಾಯಕವೆಂದು ಅವರು ನಂಬಿದರು. ತಂದೆ ಸರ್ವಮತ ಸಹಿಷ್ಣುವಾಗಿದ್ದರು. ಅವರಿಗೆ ಎಲ್ಲಾ ಮತದ ಗೆಳೆಯರಿದ್ದರು. ಅವರು ಮನೆಯಲ್ಲಿ ಸೇರಿದಾಗಲೆಲ್ಲ ಧರ್ಮದ ವಿಚಾರವಾಗಿ ಪ್ರಸಂಗ ನಡೆಯುತ್ತಿದ್ದುದರಿಂದ ಗಾಂಧೀಜಿ ಎಲ್ಲಾ ಮತಗಳನ್ನು ಸಹನೆಯಿಂದಲೂ ಸಮಭಾವದಿಂದಲೂ ಕಾಣುವುದನ್ನು ಅರಿತರು; ಹಿಂದೂಧರ್ಮದ ಮಹತ್ವವನ್ನು ತಿಳಿದುಕೊಂಡರು. "ನೀತಿಯೇ ಜಗತ್ತಿನ ಆಧಾರ; ಸತ್ಯವೇ ನೀತಿಯ ಸತ್ವ, ಸತ್ಯೋಪಾಸನೆಯೇ ಜೀವನದ ಉದ್ದೇಶವಾಗಿರಬೇಕು" ಎಂಬುದು ಅವರ ಮನಸ್ಸಿನಲ್ಲಿ ಬೇರೂರಿತು. ದಿನದಿನವೂ ಅವರ ದೃಷ್ಟಿಯಲ್ಲಿ ಸತ್ಯದ ಮಹಿಮೆಯು ಹೆಚ್ಚುತ್ತಾಬಂತು. ಇದರ ಜೊತೆಗೆ,

ಬೊಗಸೆ ನೀರಿತ್ತವಗೆ ತೃಪ್ತಿಯುಪ್ಪಂತುಣಿಸು,
ಒಳ್ಳಿತನು ಬಯಸಿದಗೆ ಭಕುತಿಯಿಂ ಬಾಗು,
ಕಿರುಗಾಸನಿತ್ತವಗೆ ತಿರುಗಿ ಚಿನ್ನವ ನೀಡು,

ನೋವ ಅಳಿಸಿದವಗೆ ನಿನ್ನ ಪ್ರಾಣದಾನವ ಮಾಡು.
ಕಿರಿನೆರವಿಗೂ ಹಿರಿಯ ಸೇವೆಯನು ಸಲಿಸುವುದು
ಪ್ರಾಜ್ಞರಾದವರ ನಡೆ; ಅಂತೆಯೇ ಅವರ ನುಡಿ.
ಜ್ಞಾನಿಗಳು ಮಾನವರ ಭೇದಗಳನೆಣಿಸದೆಯೆ
ಕೇಡಿಗುಂ ಸಂತಸದಿ ಶುಭವನೆಸಗುವರು.

ಈ ಅರ್ಥವುಳ್ಳ ಗುಜರಾತಿಯ ನೀತಿಪದ್ಯವು ಅವರನ್ನು ಬಹುವಾಗಿ ಮೆಚ್ಚಿಸಿತು. ಅದು ಅವರ ಹೃದಯದಲ್ಲಿ ಮನೆಮಾಡಿತು. ಇದರಿಂದ ಅಪಕಾರ ಮಾಡಿದವರಿಗೆ ಕೂಡ ಉಪಕಾರವನ್ನೆಸಗುವುದೇ ಜೀವನವನ್ನು ಪವಿತ್ರಗೊಳಿಸಲು ದಾರಿ ಎಂಬುದು ಗೊತ್ತಾಯಿತು. ಈ ದಾರಿಯನ್ನು ಗಾಂಧೀಜಿ ತಮ್ಮದಾಗಿ ಮಾಡಿಕೊಂಡರು.

೧೮೮೭ ನೆಯ ಇಸವಿಯಲ್ಲಿ ಗಾಂಧೀಜಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆಗ ಅವರಿಗೆ ಹದಿನೆಂಟುವರ್ಷ. ಇದಕ್ಕೆ ಎರಡು ವರ್ಷಗಳ ಹಿಂದೆಯೇ ಇವರ ತಂದೆಯವರು ಕಾಲವಾಗಿದ್ದರು. ತಾಯಿಯ ಮತ್ತು ಅಣ್ಣನ ಇಚ್ಛೆಯಂತೆ ಅವರು ಭಾವಾನಗರದಲ್ಲಿ ಕಾಲೇಜು ಸೇರಿದರು.

ಕಾಲೇಜಿನ ಪಾಠಪ್ರವಚನಗಳು ಇವರ ಮನಸ್ಸಿಗೆ ಹಿಡಿಯಲಿಲ್ಲ. ಕಾಲೇಜಿಗೆ ರಜ ಬರಲು ಗಾಂಧೀಜಿ ಮನೆಗೆ ಬಂದಿದ್ದರು. ಬುದ್ಧಿವಂತರೂ ವಿದ್ಯಾವಂತರೂ ಆದ ಮಾಧವಜಿ ದವೆ ಎಂಬ ಬ್ರಾಹ್ಮಣರು ಅವರ ಮನೆಗೆ ಬಂದರು. ಅವರು ಗಾಂಧೀ ಕುಟುಂಬಕ್ಕೆ ಬಹುಕಾಲದಿಂದ ಮಿತ್ರರಾಗಿದ್ದರು. ಅವರಿಗೆ ಗಾಂಧೀಜಿ ಕಾಲೇಜಿನಲ್ಲಿ ಓದುತ್ತಿರುವುದು ಗೊತ್ತಾಯಿತು. ಅವರು ಗಾಂಧೀಜಿಯ ತಾಯಿ, ಅಣ್ಣ ಇವರೊಡನೆ, “ ಈಗ ಕಾಲವು ಬದಲಾಯಿಸಿದೆ. ಸರಿಯಾದ ವಿದ್ಯಾಭ್ಯಾಸವಿಲ್ಲದೆ ನಿಮ್ಮಲ್ಲಿ ಯಾರೂ ಕಬಾ ಗಾಂಧಿಯ ಅಧಿಕಾರವನ್ನೂ ದಿವಾನಗಿರಿಯನ್ನೂ ಹೊಂದಲಾಗುವುದಿಲ್ಲ. ಮೋಹನದಾಸನಿನ್ನೂ ಓದುತ್ತಿದ್ದಾನೆ.

ನೀವು ನಿಮ್ಮ ಮನೆತನಕ್ಕೆ ಅಧಿಕಾರವನ್ನು ಳಿಸಬೇಕಾದರೆ ಇವನ ಮೂಲಕ ಮಾತ್ರ ಸಾಧ್ಯ. ಇವನಿಗೆ ಬಿ. ಎ. ಆಗಬೇಕಾಗಿದ್ದರೆ ಇನ್ನೂ ೪-೫ ವರ್ಷ ಬೇಕು. ಅಷ್ಟಾದರೂ ಒಂದು ಸಾಮಾನ್ಯ ಕೆಲಸ ಸಿಗಬಹುದು. ದಿವಾನ ಪದವಿಯೇನು ಸಿಕ್ಕುವುದಿಲ್ಲ. ಅವನು ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾದರೆ ಇನ್ನೂ ಹೆಚ್ಚು ಕಾಲ ಹಿಡಿಯುತ್ತದೆ. ಅಷ್ಟುಹೊತ್ತಿಗೆ ಪ್ರಧಾನಪದವಿಗೆ ವಕೀಲಿಪರೀಕ್ಷೆಯಾಗಿರುವವರು ಅನೇಕರು ಸಿಕ್ಕುತ್ತಾರೆ. ಆದ್ದರಿಂದ ಅವನನ್ನು ವಿಲಾಯಿತಿಗೆ ಕಳುಹಿಸುವುದು ಮೇಲು. ಮೂರು ವರ್ಷದಲ್ಲಿಯೇ ಬ್ಯಾರಿಸ್ಟರಾಗಿ ಬರಬಹುದು. ವೆಚ್ಚ ನಾಲ್ಕೈದುಸಾವಿರ ರೂಪಾಯಿ ಆಗಬಹುದು," ಎಂದರು. ಗಾಂಧೀಜಿಗೆ ಈ ಸಲಹೆ ಅತ್ಯುತ್ತಮವೆನಿಸಿತು. ಅವರ ಅಣ್ಣನೂ ಇದಕ್ಕೆ ಒಪ್ಪಿದರು. ಆದರೆ ತಾಯಿಗೆ ಸಮಾಧಾನವಿರಲಿಲ್ಲ. ಅವರು ಸೀಮೆಗೆ ಹೋದ ಯುವಕರೆಲ್ಲಾ ನೀತಿಗೆಡುವರೆಂದೂ ಮಾಂಸಾಹಾರಿಗಳಾಗುವರೆಂದೂ ಅಲ್ಲಿ ಮದ್ಯಸೇವನೆಯಿಲ್ಲದೆ ಇರಲಾಗುವುದೇ ಇಲ್ಲವೆಂದೂ ಕೇಳಿದ್ದರು. ಇದೆಲ್ಲದರ ಹೆದರಿಕೆಯಿಂದ ತಮ್ಮ ಪ್ರೀತಿಯ ಮಗನನ್ನು ವಿಲಾಯಿತಿಗೆ ಕಳುಹಿಸಲು ಹಿಂದುಮುಂದು ನೋಡಿದರು. ಮಾಂಸ, ಮದ್ಯ ಮತ್ತು ವ್ಯಭಿಚಾರದಿಂದ ದೂರವಾಗಿರುತ್ತೇನೆಂದು ಗಾಂಧೀಜಿ ಪ್ರತಿಜ್ಞೆಮಾಡಿದಮೇಲೆ ಇಂಗ್ಲೆಂಡಿಗೆ ಹೋಗಲು ಆಕೆ ಅನುಮತಿಯಿತ್ತರು. ಅಂತು ಇಗ್ಲೆಂಡಿಗೆ ಹೋಗುವುದು ನಿಶ್ಚಯವಾಯಿತು. ಅಣ್ಣ ಕಷ್ಟಪಟ್ಟು ಖರ್ಚಿಗೆ ಹಣವನ್ನು ಒದಗಿಸಿದರು. ಗಾಂಧೀಜಿ ಎಲ್ಲರ ಅಪ್ಪಣೆಯನ್ನೂ ಆಶೀರ್ವಾದವನ್ನೂ ಪಡೆದು ತಮ್ಮ ಹೆಂಡತಿಯನ್ನೂ ನಾಲ್ಕು ತಿಂಗಳ ಮಗನನ್ನೂ ಬಿಟ್ಟು ಇಗ್ಲೆಂಡಿಗೆ ಹಡಗು ಹತ್ತಲು ಅಣ್ಣನೊಡನೆ ಬೊಂಬಾಯಿಗೆ ಹೋದರು.

ಆದರೆ ಅವರು ಕೂಡಲೆ ಹಡಗು ಹತ್ತಲು ಅಡಚಣೆಗಳು ಬಂದವು. ಹಿಂದೂಸಾಗರದಲ್ಲಿ ಬಿರುಗಾಳಿ ಎದ್ದಿರುವುದೆಂದೂ ಅದು ಪ್ರಯಾಣಕ್ಕೆ ಪ್ರತಿಕೂಲವಾದ ಕಾಲವೆಂದೂ ತಿಳಿಯಿತು. ಆದುದರಿಂದ ಸ್ವಲ್ಪ ದಿನದ

ಮಟ್ಟಿಗೆ ಬೊಂಬಾಯಿಯಲ್ಲೇ ನಿಲ್ಲಬೇಕಾಯಿತು. ಕೆಲಸವಿದ್ದುದರಿಂದ ಗಾಂಧೀಜಿಯನ್ನು ಅಲ್ಲಿ ಬಿಟ್ಟು ಅವರ ಅಣ್ಣ ಊರಿಗೆ ಹಿಂತಿರುಗಿದರು. ಇಷ್ಟರಲ್ಲಿ ಗಾಂಧೀಜಿ ವಿಲಾಯಿತಿಗೆ ಹೋಗುವ ಸಮಾಚಾರ ಅವರ ಕುಲದವರಲ್ಲಿ ಅಸಮಾಧಾನವನ್ನು ಹುಟ್ಟಿಸಿತ್ತು. ಕುಲದ ಸಭೆಯೊಂದು ಸೇರಿ ಅವರ ಯಜಮಾನನು ಗಾಂಧೀಜಿಯನ್ನು ಸಭೆಯಮುಂದೆ ಕರೆಸಿದನು. "ನೀನು ಇಂಗ್ಲೆಂಡಿಗೆ ಹೋಗಬೇಕೆಂದಿರುವುದು ಮತದ ದೃಷ್ಟಿಯಲ್ಲಿ ಸರಿಯಲ್ಲ. ನಮ್ಮ ಧರ್ಮವು ಸಮುದ್ರಪ್ರಯಾಣವನ್ನು ನಿಷೇಧಿಸುತ್ತದೆ. ಧರ್ಮ ಕೆಡದಂತೆ ಅಲ್ಲಿ ವಾಸಿಸಲಾಗುವುದಿಲ್ಲವೆಂದು ತಿಳಿದಿದ್ದೇವೆ. ಪಾಶ್ಚಾತ್ಯರೊಡನೆ ತಿಂದು ಕುಡಿಯಲೇ ಬೇಕಾಗಿದೆ ಅಲ್ಲಿ. ಆದುದರಿಂದ ನೀನು ವಿಲಾಯತಿಗೆ ಹೋಗಕೂಡದು," ಎಂದು ಯಜಮಾನನು ಅಪ್ಪಣೆ ಮಾಡಿದನು. ಇದಕ್ಕೆ ಗಾಂಧೀಜಿ, ತಮ್ಮ ಉಚ್ಚವಿದ್ಯಾಭ್ಯಾಸಕ್ಕಾಗಿ ವಿಲಾಯಿತಿಗೆ ಹೋಗಲು ನಿಶ್ಚಯಿಸಿರುವುದರಿಂದಲೂ ತಮ್ಮ ತಾಯಿ ಮತ್ತು ಅಣ್ಣ ಅಪ್ಪಣೆಕೊಟ್ಟಿರುವುದರಿಂದಲೂ ತಾವು ವಿಲಾಯಿತಿಗೆ ಹೋಗಿಯೇ ಹೋಗುತ್ತೇವೆಂದು ಹೇಳಿಬಿಟ್ಟರು. ಇದರಿಂದ ಆ ಯಜಮಾನನಿಗೆ ಕೋಪಬಂದು, "ಈ ಹೊತ್ತಿನಿಂದ ಈ ಹುಡುಗನು ಜಾತಿ ಬಾಹಿರ. ಇವನಿಗೆ ಸಹಾಯಮಾಡಿದವರೂ ಕಳುಹಿಸುವುದಕ್ಕೆ ಬಂದರಿಗೆ ಹೋದವರೂ ದಂಡ ತರಬೇಕಾಗುತ್ತದೆ," ಎಂದು ವಿಧಿಸಿದನು. ಈ ನಿರ್ಧಾರಕ್ಕೆ ಗಾಂಧೀಜಿ ಹೆದರಲಿಲ್ಲ. ಇಂಗ್ಲೆಂಡಿಗೆ ಹೋಗಲು ಸಕಲ ಸಲಕರಣೆಗಳೂ ಸಿದ್ಧವಾದವು. ವಿಲಾಯಿತಿಗೆ ಹೋಗುತ್ತಿದ್ದ ಜೂನಾಗಡದ ವಕೀಲರೊಬ್ಬರ ಜೊತೆಯಲ್ಲಿ ೧೮೮೮ ನೆಯ ಇಸವಿ ಸೆಪ್ಟಂಬರು ೪ ನೆಯ ತಾರೀಖಿನ ದಿನ ಹಡಗುಹತ್ತಿ ಬೊಂಬಾಯಿಯಿಂದ ಹೊರಟರು.

ಗಾಂಧೀಜಿ ಸುಖವಾಗಿ ಇಂಗ್ಲೆಂಡಿಗೆ ಬಂದು ಸೇರಿದರು. ಲಂಡನ್ ನಗರಕ್ಕೆ ಹೋಗಿ ಅಲ್ಲಿ ಒಂದು ಹೋಟೆಲಿನಲ್ಲಿ ಇಳಿದುಕೊಂಡರು. ಅವರು ಇಂಗ್ಲೆಂಡಿನಲ್ಲಿದ್ದ ಹಲವು ಭಾರತೀಯರಿಗೆ ಪರಿಚಯ

ಪತ್ರಗಳನ್ನು ತಂದಿದ್ದರು. ಅವರಲ್ಲಿ ಒಬ್ಬರಾದ ಡಾ|| ಪ್ರಾಣಜೀವನ ಮೆಹತಾರವರು ಬಂದು ಗಾಂಧೀಜಿಯನ್ನು ನೋಡಿ ಐರೋಪ್ಯದೇಶದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿಸಿ ಹೋಟಲಿನಲ್ಲಿದ್ದರೆ ಹೆಚ್ಚು ಖರ್ಚು ತಗಲುವುದೆಂದೂ ಯಾವುದಾದರು ಸಂಸಾರದಲ್ಲಿ ಸೇರಿಕೊಳ್ಳು ವುದು ಮೇಲೆಂದೂ ಹೇಳಿಹೋದರು. ಗಾಂಧೀಜಿಗೂ ಹೋಟಲು ಸರಿದೋರಲಿಲ್ಲ. ಅಲ್ಲದೆ ಅಲ್ಲಿ ಆಹಾರಗಳೊಂದೂ ರುಚಿಸುತ್ತಿರಲಿಲ್ಲ. ತನ್ನೊಡನೆ ಮನೆಯಿಂದ ತಂದ ತಿಂಡಿಯನ್ನೇ ತಿಂದು ದಿನ ತಳ್ಳುತ್ತಿದ್ದರು. ಸ್ವಲ್ಪದಿನಗಳಾದಮೇಲೆ ಬೇರೊಂದೂ ಕೊಠಡಿಯನ್ನು ಬಾಡಿಗೆಗೆ ಗೊತ್ತು ಮಾಡಿ ಅಲ್ಲಿಗೆ ಹೋದರು. ಅಲ್ಲಿಯೂ ಮನಶ್ಶಾಂತಿ ದೊರೆಯಲಿಲ್ಲ. ಅವರಿಗೆ ಸದಾ ತಮ್ಮ ದೇಶ, ಮನೆ, ತಾಯಿ, ಹೆಂಡತಿ ಈ ಎಲ್ಲಾ ನೆನಪು ಬಂದು ಬೇಸರಿಕೆಯಾಗುತ್ತಿತ್ತು. ಹೊಸ ಜನರು, ಹೊಸ ಸಮಾಜ, ಹೊಸ ಆವರಣ ಈ ಮಧ್ಯೆ ಕಾಲತಳ್ಳುವುದು ಬಹು ಕಷ್ಟವಾಗಿ ಕಂಡಿತು. ಡಾ|| ಮೆಹತಾರವರು ಗಾಂಧೀಜಿಯನ್ನು ತಮ್ಮ ಸ್ನೇಹಿತ ರೊಬ್ಬರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಇರಿಸಿದರು. ಆ ಸ್ನೇಹಿತರು ಅವರನ್ನು ಪ್ರೀತಿಯಿಂದ ಕಂಡರು. ಇಂಗ್ಲೀಷರ ರೀತಿನೀತಿಗಳನ್ನು ಹೇಳಿಕೊಟ್ಟರು. ಇಂಗ್ಲೀಷಿನಲ್ಲಿ ಮಾತನಾಡುವುದನ್ನು ಕಲಿಸಿದರು. ಆ ಮನೆಯಲ್ಲೂ ಗಾಂಧೀಜಿಗೆ ಆಹಾರ ರುಚಿಸಲಿಲ್ಲ. ಅವರ ಹಸಿವು ತೀರುವಂತೆಯೇ ಇರಲಿಲ್ಲ. ಇದನ್ನು ನೋಡಿ ಆ ಮನೆಯ ಯಜಮಾನರು ಮಾಂಸಾಹಾರ ತೆಗೆದುಕೊಳ್ಳಬೇಕೆಂದು ಅವರನ್ನು ಒತ್ತಾಯಪಡಿಸಿದರು. ಆದರೆ ಗಾಂಧೀಜಿ ಅದಕ್ಕೆ ಒಪ್ಪಲೇ ಇಲ್ಲ.

ಈ ಮನೆಯು ಲಂಡನ್ ನಗರಕ್ಕೆ ಬಹುದೂರವಾಗಿದ್ದುದರಿಂದ ಡಾ|| ಮೆಹತಾರವರ ಸಲಹೆಯಂತೆ ಗಾಂಧೀಜಿ ಈ ಮನೆಯನ್ನು ಬಿಟ್ಟು ಆಂಗ್ಲೋಇಂಡಿಯನ್ನರೊಬ್ಬರ ಮನೆಯಲ್ಲಿ ಸೇರಿಕೊಂಡರು. ಆ ಮನೆಯ ಯಜಮಾನಿಯು ಅವರನ್ನು ಸರಿಯಾಗಿ ನೋಡಿಕೊಳ್ಳುವಂತೆ

ಭರವಸೆ ಕೊಟ್ಟಳು. ಆದರೇನು, ಅಲ್ಲಿಯೂ ಆಹಾರವು ಒಂದೇ ರುಚಿ. ಅದರ ಜೊತೆಗೆ ಹೆಚ್ಚಿಗೆ ಕೇಳಲು ಲಜ್ಜೆ ಬೇರೆ. ಇದರಿಂದ ಅವರ ಹಸಿವು ತೀರುವಂತಿರಲಿಲ್ಲ. ಇಷ್ಟರಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ಲಂಡನ್ ನಗರದ ಪರಿಚಯವಾಗಿತ್ತು. ಶಾಕಾಹಾರದ ಹೋಟೆಲುಗಳಿಲ್ಲದರೂ ಇವೆಯೆ ಎಂದು ಹುಡುಕಲು ಪ್ರಾರಂಭಿಸಿದರು. ಒಂದು ದಿನ ಶಾಕಾಹಾರದ ಹೋಟೆಲೊಂದು ಸಿಕ್ಕಿತು. ತಾನು ಬಯಸಿದ ಆಟದ ಸಾಮಾನು ಸಿಕ್ಕಲು ಮಗುವಿಗೆ ಸಂತೋಷವಾಗುವಂತೆ ಅವರಿಗೂ ಸಂತೋಷ ವಾಯಿತು. ಅಂದು ಆ ಹೋಟೆಲಿನಲ್ಲಿ ಹೊಟ್ಟೆತುಂಬ ಊಟಮಾಡಿದರು. ಅಲ್ಲಿ ಕೆಲವು ಶಾಕಾಹಾರ ವಾದದ ಪುಸ್ತಕಗಳು ಮಾರಾಟಕ್ಕಿದ್ದವು. ಅವುಗಳಲ್ಲಿ "ಸಾಲ್ಟ್" ಎಂಬಾತನು ಬರೆದ "ಶಾಕಾಹಾರದ ಮಹತ್ವ" ಎಂಬ ಪುಸ್ತಕವನ್ನು ಕೊಂಡು ಓದಿದರು; ಅದು ಅವರ ಮನಸ್ಸನ್ನು ಸೆಳೆಯಿತು. ತಾವು ತಮ್ಮ ತಾಯಿಯ ಮುಂದೆ ಪ್ರತಿಜ್ಞೆಮಾಡಿದ್ದು ಸುದಿನ ವೆಂದುಕೊಂಡರು. ಅಂದಿನವರೆಗೂ ಮಾಂಸಾಹಾರ ಒಳ್ಳೆಯದೆಂದೇ ತಿಳಿದಿದ್ದರು. ಸತ್ಯಕ್ಕಾಗಿ ಮಾತ್ರ, ತನ್ನ ತಾಯಿಗೆ ಮಾತುಕೊಟ್ಟದ್ದು ದಕ್ಕೆ ಮಾತ್ರ ಶಾಕಾಹಾರಿಯಾಗಿದ್ದರು. ಆದರೆ ಅಂದಿನಿಂದ ಮಾಂಸಾಹಾರವು ಮನುಷ್ಯನಿಗೆ ಅವಶ್ಯಕವಾದುದಲ್ಲವೆಂದು ತಿಳಿದು ಮನಃಪೂರ್ವಕವಾಗಿ ಶಾಕಾಹಾರಿಯಾದರು. ಅದರ ತತ್ವವನ್ನು ಇತರರಿಗೂ ಉಪದೇಶಿಸುವುದು ತನ್ನ ಪವಿತ್ರ ಕರ್ತವ್ಯವೆಂದು ನಿರ್ಧರಿಸಿಕೊಂಡರು.

ಸಾತ್ವಿಕಾಹಾರದಲ್ಲಿ ಗಾಂಧೀಜಿಯ ನಂಬಿಕೆ ದಿನೇ ದಿನೇ ಹೆಚ್ಚುತ್ತ ಬಂತು. ಸಾಲ್ಟನ ಪುಸ್ತಕದ ಜೊತೆಗೆ ಶಾಕಾಹಾರದ ವಿಷಯದಲ್ಲಿದ್ದ ಹಲವು ಪುಸ್ತಕಗಳನ್ನು ಓದಿದರು. ಇದರ ಪರಿಣಾಮವಾಗಿ ಆಹಾರದ ವಿಷಯದಲ್ಲಿ ಶೋಧನೆಗಳು ಅವರ ಜೀವನದಲ್ಲಿ ಮುಖ್ಯಸ್ಥಾನವನ್ನು ಹೊಂದಿದವು. ಮೊದಮೊದಲು ಈ ಶೋಧನೆಗಳು ಆರೋಗ್ಯದೃಷ್ಟಿಯಿಂದ ನಡೆಯುತ್ತಿದ್ದವು; ಆಮೇಲೆ ಧಾರ್ಮಿಕ ದೃಷ್ಟಿಯೇ ಮುಖ್ಯವಾಯಿತು.

ಗಾಂಧೀಜಿ ಇಂಗ್ಲೀಷ್ ಸಮಾಜಕ್ಕೆ ತಕ್ಕಂತೆ ಇರಲು ಪ್ರಯತ್ನಿಸಿದರು. ಅಲ್ಲಿ ಸರಿದೋರುವಂತೆ ಬೆಲೆಯಾದ ಉಡುಪುಗಳನ್ನು ಹೊಲಿಸಿಕೊಂಡರು. ಅಂದವಾಗಿ ಬಟ್ಟೆ ತೊಡುವುದನ್ನೂ ಬೈತಲೆ ಬಾಚುವುದನ್ನೂ ಕಲಿತರು. ನರ್ತನಾಭ್ಯಾಸಮಾಡಿದರು. ಸಂಗೀತ ವಾದ್ಯಗಳನ್ನು ಕಲಿಯಲು ಮೊದಲುಮಾಡಿದರು. ಇವುಗಳಿಗಾಗಬೇಕಾದ ಸಕಲ ಸಲಕರಣೆಗಳು ಬಹಳ ದುಡ್ಡನ್ನು ನುಂಗಿದವು. ಈ ವೈಭವ ಹೆಚ್ಚುದಿನ ನಡೆಯಲಿಲ್ಲ. ಅಷ್ಟರಲ್ಲೆ ಅವರು ಎಚ್ಚೆತ್ತರು. ಈ ಶೋಕಿ ಜೋಕಿಗಳೇ ಸಂಸ್ಕೃತಿಯಲ್ಲ ; ಕೃತಕ ಜೀವನವು ಸರಿಯಲ್ಲ ; ಸದ್ವರ್ತನೆಯಿಂದ ನಾಗರಿಕನೆನಿಸಿಕೊಳ್ಳಬೇಕು ಎಂಬುದನ್ನು ತಿಳಿದರು. ನರ್ತನ ಸಂಗೀತಗಳನ್ನೆಲ್ಲಾ ಬಿಟ್ಟುಬಿಟ್ಟರು. ಅದಕ್ಕಾಗಿ ಕೊಂಡಿದ್ದ ಸಾಮಾನುಗಳನ್ನೆಲ್ಲಾ ಮಾರಿಬಿಟ್ಟರು. ಉಡುಪಿನ ವೈಭವ ಮುಂದೆ ಕೊಂಚಕಾಲ ಮಾತ್ರ ನಡೆಯಿತು.

ಇಷ್ಟೆಲ್ಲ ಶೋಕಿಗೆ ಕಾಲಿಟ್ಟಿದ್ದರೂ ಅವರು ಸ್ವೇಚ್ಛಾಚಾರಿಯಾಗಿರದೆ ವಿವೇಕಿಯಾಗಿದ್ದರು. ಪ್ರತಿಯೊಂದು ಕಾಸಿಗೂ ಲೆಕ್ಕವಿಡುತ್ತಿದ್ದರು. ಎಷ್ಟರಮಟ್ಟಿಗೆ ತಾವು ವೆಚ್ಚಮಾಡಬಹುದೆಂಬುದನ್ನು ಮೀರಿಹೋಗುತ್ತಿರಲಿಲ್ಲ. ಮೋಟಾರಿನ ಪ್ರಯಾಣದ ಖರ್ಚು, ಅಂಚೆವೆಚ್ಚ, ವೃತ್ತಾಂತ ಪತ್ರಿಕೆಗಳ ಖರ್ಚು ಇದೆಲ್ಲವನ್ನೂ ಲೆಕ್ಕ ಹಾಕಿ ರಾತ್ರಿ ಮಲಗುವ ಮೊದಲು ಬರೆದಿಡುತ್ತಿದ್ದರು. ಈ ಅಭ್ಯಾಸ ಅವರ ಜೀವನದಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡಿತು. ಅವರು ಕೈಹಾಕಿರುವ ಸಾರ್ವಜನಿಕ ಕಾರ್ಯಗಳಲ್ಲಿ ಲಕ್ಷಾಂತರ ರೂಪಾಯಿಗಳ ಆಡಳಿತಗಳನ್ನು ನಡೆಸಬೇಕಾದ ಸಂದರ್ಭ ಒದಗಿದರೂ ಪ್ರತಿಯೊಂದರಲ್ಲೂ ಕ್ರಮವಾದ ಲೆಕ್ಕವಿಟ್ಟಿದ್ದಾರೆ ; ಮಿತವ್ಯಯಮಾಡಿದ್ದಾರೆ. ಪ್ರತಿಯೊಂದು ಕಾಸೂ ಸರಿಯಾಗಿ ವ್ಯಯವಾಗುವಂತೆ ನೋಡಿಕೊಂಡು ಸಂಸ್ಥೆಯು ಸಾಲಕ್ಕೆ ಬೀಳದಂತೆ ತಮ್ಮ ಕಾರ್ಯವನ್ನು ನಿರ್ವಹಿಸಿದ್ದಾರೆ. “ ಪ್ರತಿಯೊಬ್ಬ ಯುವಕನೂ ಇದನ್ನೇ ಆದರ್ಶವಾಗಿಟ್ಟುಕೊಂಡು ತನಗೆ ದೊರೆತ ಮತ್ತು ತಾನು ವೆಚ್ಚಮಾಡುವ

ಪ್ರತಿಯೊಂದು ಕಾಸಿಗೂ ಲೆಕ್ಕವಿಟ್ಟದ್ದೇ ಆದರೆ ಜೀವನದಲ್ಲಿ ಅವನಿಗೆ ತುಂಬಾ ಅನುಕೂಲವಾಗುತ್ತದೆ."

ತಮ್ಮ ಜೀವನದ ರೀತಿಯಲ್ಲಿ ಒಂದು ಕ್ರಮ ಮತ್ತು ಎಚ್ಚರಿಗೆ ಇಟ್ಟುಕೊಂಡಿದ್ದುದರಿಂದ ಆ ನಿಯಮ ಪರಿಪಾಲನೆಗೋಸ್ಕರ ಮಿತವ್ಯಯ ಮಾಡುವುದು ಆವಶ್ಯಕವೆಂಬುದು ಗಾಂಧೀಜಿಗೆ ಗೊತ್ತಾಯಿತು. ತಮ್ಮ ಖರ್ಚನ್ನು ಕಡಮೆಮಾಡಲು ನಿರ್ಧರಿಸಿದರು. ತಿರುಗಾಡಲು ವಾಹನ ಗಳಿಗೆ ಕೊಡುತ್ತಿದ್ದ ವೆಚ್ಚವನ್ನು ಉಳಿಸಿದರು. ಕುಟುಂಬದಲ್ಲಿ ವಾಸಮಾ ಡುವುದನ್ನು ಬಿಟ್ಟು ಬೇರೆ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ತಾವೆ ಅಡಿಗೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಇದರಿಂದ ಅವರ ಖರ್ಚು ಮೊದಲಾಗುತ್ತಿದ್ದ ಖರ್ಚಿನಲ್ಲಿ ಅರ್ಧಕ್ಕಿಂತಲೂ ಕಡಿಮೆಗೆ ಇಳಿಯಿತು. ಈ ಬಗೆಯ ಮಿತವ್ಯಯದಿಂದ ಅವರ ಜೀವನದಲ್ಲಾದ ಪರಿಣಾಮವನ್ನು ಅವರು ಹೀಗೆ ಹೇಳಿದ್ದಾರೆ. "ಈ ಮಿತವ್ಯಯವು ನನ್ನ ಜೀವನದಲ್ಲಿ ಯಾವ ಬಗೆಯ ಬೇಸರಿಕೆಯನ್ನೂ ಉಂಟುಮಾಡಲಿಲ್ಲ. ಅದಕ್ಕೆ ಬದಲಾಗಿ ಈ ಮಾರ್ಪಾಡು ನನ್ನ ಅಂತರಂಗ ಮತ್ತು ಬಹಿರಂಗ ವ್ಯಾಪಾರಗಳನ್ನು ಒಂದುಗೂಡಿಸಿತು. ಅಲ್ಲದೆ ಸಂಸಾರ ನಡೆಸಲು ತುಂಬಾ ಸಹಾಯಮಾಡಿತು. ನನ್ನ ಜೀವನವು ಸತ್ಯದ ಹತ್ತಿರ ಸಾಗಿತು. ಅದರಿಂದ ನನ್ನ ಆತ್ಮಕ್ಕಾದ ಸಂತಸ ಅಷ್ಟಿಷ್ಟಲ್ಲ."

ಗಾಂಧೀಜಿಯ ಜೀವನದ ರೀತಿಯು ಮಾರ್ಪಡುತ್ತ ಬಂದ ಹಾಗೆಲ್ಲ ಅವರ ಆಹಾರವೂ ಅದರ ಜೊತೆಯಲ್ಲಿಯೇ ಮಾರ್ಪಾಡಾಗುತ್ತ ಬಂತು. ಶಾಕಾಹಾರವು ಧಾರ್ಮಿಕ, ವೈಜ್ಞಾನಿಕ, ವ್ಯಾವಹಾರಿಕ ಮತ್ತು ವೈದ್ಯಶಾಸ್ತ್ರೀಯ ದೃಷ್ಟಿಯಿಂದ ಸರಿಯಾದುದೆಂಬುದು ಅವರಿಗೆ ಮುಂದ ಟ್ಟಾಯಿತು. ಆರ್ಥಿಕ ದೃಷ್ಟಿಯಿಂದ ಶಾಕಾಹಾರವು ಕಡಮೆ ವೆಚ್ಚ ದ್ದೆಂಬುದೂ ಗೊತ್ತಾಯಿತು. ಆಗ ಲಂಡನ್ನಿನಲ್ಲಿ ಶಾಕಾಹಾರಿಗಳ ಸಂಘ ವೊಂದಿತ್ತು. ಗಾಂಧಿಯವರು ಅದರ ಸದಸ್ಯರಾದರು. ಸ್ವಲ್ಪ ದಿನದಲ್ಲಿ

ಅದರ ಕಾರ್ಯನಿರ್ವಾಹಕಮಂಡಲಿಗೂ ಸೇರಿದರು. ಶಾಕಾಹಾರದ ವಿಷಯ ವಾಗಿ ಬರೆದಿದ್ದ ಹಲವು ಒಳ್ಳೆಯ ಪುಸ್ತಕಗಳ ಅಭ್ಯಾಸದ ಜೊತೆಗೆ ಸ್ವಂತ ವಾಗಿ ಶೋಧನೆಗಳನ್ನು ನಡೆಸಲು ಪ್ರಾರಂಭಿಸಿದರು. ಮಿಠಾಯಿ, ಮಸಾಲೆ ಸಾಮಾನುಗಳನ್ನು ತಿನ್ನುವುದನ್ನೂ ಕಾಫಿ ಟೀ ಕುಡಿಯುವುದನ್ನೂ ಬಿಟ್ಟುಬಿಟ್ಟರು.

ಈ ಆಹಾರದ ಶೋಧನೆಯ ಜೊತೆಗೆ ಅವರ ಧರ್ಮಸಾಧನೆಯೂ ನಡೆಯುತ್ತಿತ್ತು. ಇದಕ್ಕೆ ಅನುಕೂಲವಾಗಿ ಹಲವು ಧಾರ್ಮಿಕ ವ್ಯಕ್ತಿಗಳ ಪರಿಚಯ ಅವರಿಗಾಯಿತು. ಅವರೊಡನೆ ಧಾರ್ಮಿಕಗ್ರಂಥಗಳನ್ನು ಅಭ್ಯಾಸ ಮಾಡಿದರು. ಕ್ರೈಸ್ತಧರ್ಮತತ್ವವನ್ನು ಚೆನ್ನಾಗಿ ತಿಳಿದುಕೊಂಡರು. ಭಗವದ್ಗೀತೆಯು ಅಮೂಲ್ಯಗ್ರಂಥವೆಂಬುದು ಅವರಿಗೆ ಗೊತ್ತಾಯಿತು. ಅರ್ನಾಲ್ಡರ "ಏಷ್ಯದ ಜ್ಯೋತಿ" (Light of Asia) ಎಂಬ ಬುದ್ಧ ಚರಿತ್ರೆಯು ಅವರ ಮನವನ್ನು ಸೂರೆಗೊಂಡಿತು.

ಈ ಎಲ್ಲಾ ಸಾಧನೆಗಳ ಜೊತೆಗೆ ತಾವು ವಿಲಾಯಿತಿಗೆ ಬಂದ ಉದ್ದೇಶವಾದ ಬ್ಯಾರಿಸ್ಟರ್ ಪದವಿ ಪಡೆಯಲು ಸಿದ್ಧರಾದರು. ಬ್ಯಾರಿಸ್ಟರಾಗುವುದಕ್ಕೆ ಅಲ್ಲಿ ಟರ್ಮುಗಳನ್ನು ಮುಗಿಸುವುದು ಮತ್ತು ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಈ ಎರಡು ನಿಯಮ. ಟರ್ಮುಗಳನ್ನು ಮುಗಿಸುವುದೆಂದರೆ ಗೊತ್ತಾದಷ್ಟು ಭೋಜನಕೂಟಗಳಲ್ಲಿ ಸೇರುವುದು. ಗಾಂಧೀಜಿ ಇದನ್ನು ಮುಗಿಸಿದರು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದೂ ಆಯಿತು. ೧೮೯೧ ನೆಯ ಇಸವಿ ಜೂನ್ ೧೦ ನೆಯ ತಾರೀಖಿನ ದಿನ ಅವರು ಬ್ಯಾರಿಸ್ಟರಾದರು. ೧೨ ನೆಯ ತಾರೀಖಿನ ದಿನ ಹಿಂದೂಸ್ಥಾನಕ್ಕೆ ಹಿಂತಿರುಗಿದರು.

ಬ್ಯಾರಿಸ್ಟರಾಗಿ ಇಂಗ್ಲಂಡನ್ನು ಬಿಟ್ಟ ಗಾಂಧೀಜಿ ತಾವು ವಕೀಲಿ ವೃತ್ತಿಗೆ ಎಷ್ಟರಮಟ್ಟಿಗೆ ಯೋಗ್ಯರು? ಆವೃತ್ತಿಯನ್ನು ಎಲ್ಲಿ ಹೇಗೆ ಪ್ರಾರಂಭಿಸಬೇಕು? ಅದರಲ್ಲಿ ಜಯಹೊಂದುವುದು ಹೇಗೆ? ಎಂಬೀ ಪ್ರಶ್ನೆ

ಗಳನ್ನೂ ಭಾರತದಲ್ಲಿ ಆಗತ್ಯವಾದ ಸುಧಾರಣೆಗಳನ್ನು ಯಾವ ರೀತಿಯಲ್ಲಿ ತರಬೇಕು ಎಂಬುದನ್ನೂ ಯೋಚಿಸುತ್ತ ಸಮುದ್ರಪ್ರಯಾಣ ಪೂರೈಸಿ ಬೊಂಬಾಯಿಗೆ ಬಂದು ತಲಪಿದರು. ಅವರಣ್ಣ ಬಂದರಿಗೆ ಹೋಗಿ ತಮ್ಮನನ್ನು ಎದುರುಗೊಂಡರು. ತಾಯಿಯನ್ನು ನೋಡಲು ಗಾಂಧೀಜಿ ಬಹು ಕಾತರರಾಗಿದ್ದರು. ಮಗನನ್ನು ಎದುರುಗೊಂಡು ಆಲಂಗಿಸಲು ಆಕೆ ಜೀವಂತಳಾಗಿರಲಿಲ್ಲ. ವಿದೇಶದಲ್ಲಿದ್ದಾಗ ಆ ಸಂಕಟ ತಗಲಬಾರದೆಂದು ಅಣ್ಣ ಆ ಸುದ್ದಿಯನ್ನು ತಮ್ಮನಿಗೆ ತಿಳಿಸಿರಲಿಲ್ಲ. ಈ ವರ್ತಮಾನದಿಂದ ಗಾಂಧೀಜಿ ದುಃಖದ ಹೊಡೆತಕ್ಕೆ ಸಿಕ್ಕಿ ಬಳಲಿದ್ದರು. ಈ ದುಃಖ ವಲ್ಲದೆ ಇನ್ನೂ ಹಲವು ತೊಂದರೆ ಅವರಿಗಾಗಿ ಕಾದಿದ್ದವು. ಅವರು ಸೀಮೆಗೆ ಹೋದ ವಿಷಯದಲ್ಲಿ ಅವರ ಕುಲದಲ್ಲಿ ಹುಟ್ಟಿಕೊಂಡಿದ್ದ ಅಸಮಾಧಾನವು ಇನ್ನೂ ಕೊನೆಗೊಂಡಿರಲಿಲ್ಲ. ಬಂಧುಗಳಲ್ಲಿ ಎರಡು ಪಂಗಡಗಳಾಗಿ ಒಂದು ಪಕ್ಷವು ಅವರನ್ನು ಜಾತಿಗೆ ಸೇರಿಸಿಕೊಂಡಿತು. ಮತ್ತೊಂದು ಪಕ್ಷವು ಬಹಿಷ್ಕಾರ ಹಾಕಿತು. ಗಾಂಧೀಜಿ ಈ ವಿಷಯದಲ್ಲಿ ನಿರ್ಲಕ್ಷ್ಯವಾಗಿದ್ದುಬಿಟ್ಟರು.

ವೃತ್ತಿ ಮತ್ತು ಸಾಧನೆ.

ಗಾಂಧೀಜಿ ಹೈಕೋರ್ಟಿನಲ್ಲಿ ಅನುಭವ ಗಳಿಸಲೆಂದೂ ಕಾನೂನು ಗಳನ್ನು ಚೆನ್ನಾಗಿ ತಿಳಿದುಕೊಂಡು ಮೊಕದ್ದಮೆಗಳೇನಾದರೂ ದೊರೆತರೆ ಅವುಗಳನ್ನು ನಡಸಲೆಂದೂ ಬೊಂಬಾಯಿಯಲ್ಲಿ ನೆಲೆಸಿದರು. ಅವರಿಗೆ ಬೊಂಬಾಯಿಯಲ್ಲಿ ದೊರೆತ ಮೊದಲ ಮೊಕದ್ದಮೆಯ ವಿಷಯ ಸ್ವಾರಸ್ಯ ವಾಗಿದೆ. ಅದು ಮಮಿಬಾಯಿ ಎಂಬಾತನ ಮೊಕದ್ದಮೆ. ಮುಂದೆ ಅವರೇ ಹೇಳಲಿ. "ನಾನು ಸ್ಮಾಲ್‌ಕಾಸ್ ಕೋರ್ಟಿಗೆ ಹೋದುದು ಇದೇ ಮೊದಲು. ನಾನು ಪ್ರತಿವಾದಿಯ ಕಡೆಯ ಲಾಯರು. ಪಾಟಿಸವಾಲು ಮಾಡಲು ಎದ್ದುನಿಂತುಕೊಂಡೆನು. ನನ್ನ ಧೈರ್ಯ ಅಳಿದುಹೋಯಿತು. ತಲೆ ಸುತ್ತತೊಡಗಿತು. ನ್ಯಾಯಸ್ಥಾನವೇ ನನ್ನ ಸುತ್ತಲೂ ತಿರುಗುತ್ತಿರು ವಂತಾಯಿತು. ವಾದಿಗೆ ಪ್ರಶ್ನೆಗಳನ್ನು ಹಾಕಲು ಬಾಯಿಯೇ ಬರಲಿಲ್ಲ. ಇದನ್ನು ನೋಡಿದ ನ್ಯಾಯಾಧೀಶರು ನಕ್ಕಿರಬಹುದು. ಜೊತೆಯ ಲಾಯರುಗಳೆಲ್ಲ ವಿನೋದಗೊಂಡಿರಬಹುದು. ಆದರೆ ಇದಾವುದೂ ನನಗೆ ಕಾಣುವಂತಿರಲಿಲ್ಲಿ. ನಾನು ಸುಮ್ಮನೆ ಕುಳಿತುಬಿಟ್ಟೆನು. ಕಕ್ಷಿಯನ್ನು ಕರೆದು, ನನ್ನಿಂದ ಈ ಮೊಖದ್ದಮೆಯನ್ನು ನಡೆಸಲಾಗುವುದಿಲ್ಲ............ ನನಗೆ ಕೊಟ್ಟಿರುವ ಹಣವನ್ನು ವಾಪಸು ತೆಗೆದುಕೊಳ್ಳಿ, ಎಂದು ಹೇಳಿದನು."

ಬೊಂಬಾಯಿಯಲ್ಲಿ ನಾಲ್ಕೈದು ತಿಂಗಳಿಗಿಂತ ಹೆಚ್ಚುಕಾಲ. ಇರಲು ಗಾಂಧೀಜಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಅಲ್ಲಿ ಅವರಿಗೆ ವರಮಾನವಿಲ್ಲ ದಿದ್ದರೂ ಖರ್ಚು ಹೆಚ್ಚುತ್ತಿತ್ತು. ಆದುದರಿಂದ ನಿರಾಶೆಹೊಂದಿ ರಾಜ ಕೋಟೆಗೆ ಬಂದು ಅಲ್ಲಿ ಸ್ವಂತ ಆಫೀಸು ತೆರೆದರು. ರಾಜಕೋಟೆಯಲ್ಲಿ ಹೆಚ್ಚು ಕೆಲಸ ಸಿಕ್ಕಿತು. ಉತ್ಪತ್ತಿಯೂ ಸಾಕಾದಷ್ಟು ದೊರಕುತ್ತಿತ್ತು. ಅಧಿಕಾರಿಗಳು ಎಷ್ಟು ಕೋಪ ದರ್ಪದಿಂದ ವರ್ತಿಸುತ್ತಾರೆ. ಎಂಬುದಕ್ಕೆ ನಿದರ್ಶನವಾಗಿ ಈ ಸಮಯದಲ್ಲಿ ಒಂದು ವಿಷಯ ನಡೆಯಿತು.

ಗಾಂಧಿಯವರ ಅಣ್ಣ ಪೋರಬಂದರಿನ ದಿವಾನರಾಗಿದ್ದಾಗ ಅಲ್ಲಿನ ರಾಣಾ ಸಾಹೇಬರಿಗೆ ತಪ್ಪು ಸಲಹೆ ಕೊಟ್ಟರೆಂಬ ಆಪಾದನೆಯ ಮೇಲೆ ಆ ಸಂಸ್ಥಾನದ ಪೊಲಿಟಿಕಲ್ ಏಜೆಂಟರು ಅವರ ಮೇಲೆ ಕೆಟ್ಟ ಅಭಿಪ್ರಾಯ ಹೊಂದಿದ್ದರು. ಗಾಂಧೀಜಿ ಇಂಗ್ಲಂಡಿನಲ್ಲಿದ್ದಾಗ ಈ ಇಂಗ್ಲಿಷ್ ಏಜೆಂಟರ ಪರಿಚಯ ಅವರಿಗಿತ್ತು. ಆ ಪರಿಚಯವನ್ನು ಉಪಯೋಗಿಸಿಕೊಂಡು ತಮಗೆ ಶಿಫಾರಸು ಮಾಡಬೇಕೆಂದು ಅಣ್ಣ ಒತ್ತಾಯಮಾಡಲು ಗಾಂಧೀಜಿ ಆ ಏಜೆಂಟರ ಬಳಿಗೆ ಹೋದರು. ತಾವು ಹೇಳಬೇಕೆಂದಿದ್ದುದನ್ನು ಅವರ ಮುಂದೆ ಹೇಳಲು ಪ್ರಾರಂಭಿಸಿದರು. ಅಷ್ಟಕ್ಕೇ ಆ ಅಧಿಕಾರಿ ಕೋಪಗೊಂಡು, "ಅದೊಂದೂ ಈಗ ಬೇಡ, ನಿಮ್ಮಣ್ಣ ಪಿತೂರಿಗಾರ, ಅವರು ಹೇಳಬೇಕೆಂದಿರುವುದನ್ನು ಬರಹ ಮೂಲಕ ತಿಳಿಸಲಿ," ಎಂದರು. ಆದರೂ ಗಾಂಧೀಜಿ "ದಯೆಯಿಟ್ಟು ನಾನು ಹೇಳುವುದನ್ನು ಕೇಳಿ" ಎಂದು ಮಾತು ಮುಂದರಿಸಹೋದರು. ಆ ಅಧಿಕಾರಿ ನ್ಯಾಯ್ಯವಲ್ಲದ ಕೋಪ, ಗರ್ವ, ದರ್ಪದಿಂದ ಗಾಂಧೀಜಿಯನ್ನು ಆಫೀಸು ಜವಾನನಿಂದ ಹೊರಕ್ಕೆ ದಬ್ಬಿಸಿದರು. ಈ ಅವಮಾನವನ್ನು ನುಂಗಲು ಗಾಂಧೀಜಿಗೆ ಕಷ್ಟವಾಯಿತು. ಆದರೆ ಬೇರೆ ಮಾರ್ಗವಿರಲಿಲ್ಲ. ಬ್ರಿಟಿಷ್ ಅಧಿಕಾರಿಗಳ ವಿಷಯದಲ್ಲಿ ಕ್ರಮ ಜರುಗಿಸಲು ಹೋದರೆ ಮತ್ತೆ ಕೇಡಾಗುವುದೆಂದು ಅನುಭವಿಗಳು ತಿಳಿಸಿದರು. ಈ ಪ್ರಸಂಗದಿಂದ ಅಧಿಕಾರಿವರ್ಗದವರಿಂದಾಗುತ್ತಿದ್ದ ಅನ್ಯಾಯಗಳು, ಬಡಜನರು ಅನುಭವಿಸುತ್ತಿದ್ದ ಕಷ್ಟಗಳು, ಗಾಂಧೀಜಿಯ ಕಣ್ಣಿಗೆ ಬಿದ್ದು ಅವರನ್ನು ಬೇಸರಗೊಳಿಸಿದವು.

ಇಷ್ಟರಲ್ಲಿ ಆಫ್ರಿಕದಲ್ಲಿ ವ್ಯಾಪಾರಮಾಡುತ್ತಿದ್ದ ದಾದಾ ಅಬ್ದುಲ್ಲಾ ಕಂಪನಿಯವರು ಅಲ್ಲಿ ನಡೆಸುತ್ತಿದ್ದ ತಮ್ಮದೊಂದು ದೊಡ್ಡ ಮೊಖದ್ದಮೆಯಲ್ಲಿ ತಮ್ಮ ಲಾಯರಿಗೆ ಸಹಾಯಮಾಡಲು ಗಾಂಧೀಜಿಯನ್ನು ಅಲ್ಲಿಗೆ ಕರೆದರು. ಖರ್ಚನ್ನೆಲ್ಲಾ ತಾವೇ ವಹಿಸಿಕೊಂಡು ವರ್ಷಕ್ಕೆ ೧೫೦೫ ರೂಪಾಯಿ ರುಸುಂ ಕೊಡಲು ಒಪ್ಪಿದರು. ಗಾಂಧೀಜಿಗೂ ಹಿಂದೂ

ಸ್ಥಾನವನ್ನು ಬಿಟ್ಟು ಹೊರಗೆ ಹೋಗಬೇಕೆನ್ನಿಸಿತ್ತು. ಜೊತೆಗೆ ಹೊಸ ದೇಶವನ್ನು ನೋಡಬೇಕು, ಹೊಸ ಅನುಭವಗಳನ್ನು ಪಡೆಯಬೇಕು ಎಂಬ ಆಸೆಯೂ ಸೇರಿತು. ಆಫ್ರಿಕಕ್ಕೆ ಹೊರಡಲು ಅನುವಾದರು. ಬೊಂಬಾಯಿಯಲ್ಲಿ ಹಡಗು ಹತ್ತಿದುದೂ ಆಯಿತು. ಕೆಲವು ದಿನಗಳಲ್ಲಿ ದಕ್ಷಿಣ ಆಫ್ರಿಕದಲ್ಲಿ ನೆಟಾಲನ್ನು ತಲಪಿದರು. ಅಬ್ದುಲ್ಲಾ ಕಂಪನಿಯ ಮಾಲಿಕರು ಇವರನ್ನು ಎದುರುಗೊಳ್ಳಲು ಬಂದರಿಗೆ ಬಂದಿದ್ದರು. ಅಲ್ಲಿನ ಬಿಳಿಯ ಜನರು ಭಾರತೀಯರನ್ನು ಹೀನವಾಗಿ ಕಾಣುತ್ತಿದ್ದುದು ಗಾಂಧೀಜಿಗೆ ಆಗಲೇ ಗೋಚರವಾಯಿತು.

ಗಾಂಧೀಜಿ ಆಫ್ರಿಕಕ್ಕೆ ಹೋದಾಗ ಅಲ್ಲಿದ್ದ ಭಾರತೀಯರ ಸ್ಥಿತಿ ಗತಿಗಳು ಹೇಗಿದ್ದುವೆಂಬುದನ್ನು ನೋಡೋಣ. ಅಲ್ಲಿ ನೆಲಸಿದ್ದ ಭಾರತೀಯರನ್ನು ಮೂರು ಪಂಗಡವಾಗಿ ವಿಂಗಡಿಸಬಹುದಾಗಿತ್ತು. ಒಂದು ವರ್ತಕರದು, ಇನ್ನೊಂದು ಗುಮಾಸ್ತರದು, ಮತ್ತೊಂದು ಕೂಲಿಗಾರರದು. ಕೂಲಿಗಾರರೆಂದರೆ ಐದುವರ್ಷ ಅಲ್ಲಿ ಕೆಲಸಮಾಡಲು ಒಪ್ಪಂದ ಮಾಡಿಕೊಂಡು ದುಡಿಯುತ್ತಿದ್ದವರು. ಈ ಮೂರು ಬಗೆಯುವರನ್ನೂ ಅಲ್ಲಿನ ಪರಂಗಿಯುವರು ಕೂಲಿಯುವರೆಂದೇ ಕರೆಯುತ್ತಿದ್ದರು. ಗಾಂಧೀಜಿಯುನ್ನು ಕೂಲಿಯು ಲಾಯರೆಂದು ಕರೆಯುತೊಡಗಿದರು.

ಗಾಂಧೀಜಿ ಆಫ್ರಿಕಕ್ಕೆ ಹೋದ ಎರಡು ಮೂರು ದಿನದಲ್ಲೇ ಹೋರಾಟಕ್ಕಿಳಿಯಬೇಕಾಯಿತು. ಒಂದುದಿನ ಅವರು ಡರ್ಬನಿನ ನ್ಯಾಯಸ್ಥಾನಕ್ಕೆ ಹೋಗಿ ಕುಳಿತುಕೊಂಡರು. ನ್ಯಾಯಾಧಿಪತಿಯು ತಲೆಯಿಂದ ರುಮಾಲು ತೆಗೆದು ಕುಳಿತುಕೊಳ್ಳುವಂತೆ ಇವರಿಗೆ ಹೇಳಿದರು. ಗಾಂಧೀಜಿ ಒಪ್ಪದೆ ಹೊರಗೆ ಬಂದುಬಿಟ್ಟರು. ಅನಂತರ ಅಬ್ದುಲ್ಲಾಶೇಟ್ ಮೊದಲಾದವರೊಡನೆ ಮಾತಾಡಿ ರುಮಾಲು ತೆಗೆಯುವುದು ಭಾರತೀಯರಿಗೆ ಅವಮಾನವಾದಂತೆ ಎಂದೂ ಅದರಿಂದ ಯಾವ

ಸಂದರ್ಭದಲ್ಲೇ ಆಗಲಿ ಗಾಂಧೀಜಿ ರುಮಾಲು ತೆಗೆಯಬಾರದೆಂದೂ ನಿರ್ಧರಿಸಲಾಯಿತು. ಈ ಘಟನೆಯನ್ನು ವಿಮರ್ಶಿಸಿ, ನ್ಯಾಯಸ್ಥಾನಗಳಲ್ಲಿ ಭಾರತೀಯರು ಪೇಟ ಹಾಕಿಕೊಂಡಿರುವದು ತಪ್ಪಲ್ಲವೆಂದು ಗಾಂಧೀಜಿ ವಾದಿಸಿದರು. ಇದನ್ನು ನೋಡಿ ವೃತ್ತಪತ್ರಿಕೆಗಳು 'ಅನಿಷ್ಟದ ಆಗಂತುಕ'ನೆಂದು ಅವರನ್ನು ಬಯ್ದುವು. ಜನರಲ್ಲಿ ಕೆಲವರು ಗಾಂಧೀಜಿಯ ವಾದ ಸರಿ ಎಂದರು. ಹಲವರು ಅವರದು ತಪ್ಪುವರ್ತನೆಯೆಂದು ನಿಂದಿಸಿದರು. ಈ ಪ್ರಸಂಗದಿಂದ ಸಾಮಾನ್ಯವಾಗಿ ಆಫ್ರಿಕದ ಪರಂಗಿಯವರಿಗೆಲ್ಲ ಗಾಂಧೀಜಿ ಗೊತ್ತಾದರು.

ಆಫ್ರಿಕದಲ್ಲಿ ಭಾರತೀಯರಿಗಿದ್ದ ತೊಂದರೆಗಳು ಒಂದರಮೇಲೊಂದಾಗಿ ಗಾಂಧೀಜಿಗೆ ಗೊತ್ತಾಗುತ್ತ ಬಂದವು. ದಾದಾ ಅಬ್ದುಲ್ಲಾ ಶೇಟರ ಮೊಕದ್ದಮೆ ಪ್ರಿಟೋರಿಯದಲ್ಲಿ ನಡೆಯುತ್ತಿತ್ತು. ಅಲ್ಲಿದ್ದ ಅವರ ಲಾಯರಿಂದ ಶೇಟರಾಗಲಿ ಅಥವಾ ಅವರ ಕಡೆಯವರಾಗಲಿ ಮೊಕದ್ದಮೆಗೆ ಸಿದ್ಧ ಮಾಡಿಕೊಂಡು ಬರಬೇಕೆಂದು ಕಾಗದ ಬಂತು. ಗಾಂಧೀಜಿ ಅಲ್ಲಿಗೆ ಹೋಗಬೇಕೆಂದು ಶೇಟರು ಹೇಳಿದರು. ಮೊಕದ್ದಮೆಯ ವಿವರವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಗಾಂಧೀಜಿ ಪ್ರಿಟೋರಿಯಾಕ್ಕೆ ಪ್ರಯಾಣ ಬೆಳಸಲು ಸಿದ್ಧರಾದರು. ಮೊದಲನೆಯ ತರಗತಿಯ ಟಿಕೆಟ್ ಕೊಂಡು ರೈಲುಹತ್ತಿದರು. ರೈಲು ರಾತ್ರಿ ಒಂಬತ್ತು ಗಂಟೆಗೆ ಮ್ಯಾರಿಟ್ಸ್‌ಬರ್ಗ್‌ಗೆ ತಲಪಿತು. ಅಲ್ಲಿ ಪರಂಗಿ ಪ್ರಯಾಣಿಕನೊಬ್ಬನು ಗಾಂಧೀಜಿಯಿದ್ದ ಗಾಡಿಗೆ ಬಂದು ಇವರನ್ನು ನೋಡಿ ಹೊರಗೆ ಹೋಗಿ ರೈಲ್ವೆ ಅಧಿಕಾರಿಗಳಿಬ್ಬರನ್ನು ಕರೆತಂದನು. ಆ ರೈಲ್ವೆ ಅಧಿಕಾರಿಗಳು ಗಾಂಧೀಜಿ ಕೊನೆಯ ಗಾಡಿಗೆ ಹೋಗಬೇಕೆಂದು ಹೇಳಿದರು. ತಾವು ಮೊದಲನೆಯ ತರಗತಿಯ ಟಿಕೆಟ್ ಕೊಂಡಿರುವದರಿಂದ ಆ ಗಾಡಿಯಿಂದ ಹೊರಗೆ ಹೋಗುವುದಿಲ್ಲವೆಂದು ಗಾಂಧೀಜಿ ಉತ್ತರಿಸಿದರು. ಪೋಲೀಸಿನವನು ಬಂದನು. ಅವರ ಸಾಮಾನನ್ನೆಲ್ಲ ಗಾಡಿಯಿಂದ ಹೊರಗೆ ಹಾಕಲಾಯಿತು. ಗಾಂಧೀಜಿಯನ್ನೂ

ಗಾಡಿಯಿಂದ ಹೊರಕ್ಕೆ ತಳ್ಳಿದರು. ಇವರು ಬೇರೆ ಗಾಡಿಗೆ ಹೋಗಲು ಒಪ್ಪಲಿಲ್ಲ. ರೈಲು ಹೊರಟುಹೋಯಿತು. ಗಾಡಿಯಿಂದ ಹೊರಗೆ ಹಾಕಿದ್ದ ತಮ್ಮ ಸಾಮಾನೊಂದನ್ನೂ ಅವರು ತೆಗೆದುಕೊಳ್ಳಲಿಲ್ಲವಾಗಿ ರೈಲ್ವೆಯವರು ಅವುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ವೈಟಿಂಗ್ ರೂಮಿನಲ್ಲಿ ಚಳಿಯಲ್ಲಿ ಹೊದಿಕೆಯಿಲ್ಲದೆ ರಾತ್ರಿಯನ್ನು ಕಳೆಯಲು ಗಾಂಧೀಜಿಗೆ ತುಂಬ ಕಷ್ಟವಾಯಿತು. ತಮ್ಮ ಹಾಸಿಗೆ ಬಟ್ಟೆಗಳನ್ನು ಕೇಳಿ ತೆಗೆದುಕೊಳ್ಳಲು ನಾಚಿಕೆ ಮಾತ್ರವಲ್ಲದೆ ಮತ್ತೆಲ್ಲಿ ಅವಮಾನವಾಗುವುದೋ ಎಂಬ ಹೆದರಿಕೆ ಅವರನ್ನು ಕಾಡಿತು.

ಗಾಂಧೀಜಿ ತಮ್ಮ ಕರ್ತವ್ಯವೇನೆಂದು ಯೋಚಿಸತೊಡಗಿದರು. "ನಾನು ಹಕ್ಕುಗಳಿಗಾಗಿ ಹೊಡೆದಾಡುವುದೇ, ಇಲ್ಲವೆ ಭಾರತಕ್ಕೆ ಹಿಂತಿರುಗಲೆ? ಅಥವಾ ಒದಗುವ ಅವಮಾನಗಳನ್ನೆಲ್ಲ ಲಕ್ಷಿಸದೆ ಪ್ರಿಟೋರಿಯಾಕ್ಕೆ ಹೋಗಿ ಮೊಕದ್ದಮೆ ಮುಗಿದಮೇಲೆ ಹಿಂತಿರುಗಲೆ? ನಾನು ಬಂದ ಕೆಲಸಗಳನ್ನು ಮುಗಿಸದೆ ಹಿಂದೂಸ್ಥಾನಕ್ಕೆ ಓಡಿಹೋಗುವುದು ಹೇಡಿತನ. ಈ ತೊಂದರೆಗಳೆಲ್ಲ ಶಾಶ್ವತವಾದವುಗಳಲ್ಲ. ಇದು ವರ್ಣದ್ವೇಷದ ಮಾರಿಯ ಹೊಡೆತ. ಒದಗುವ ತೊಂದರೆಗಳನ್ನೆಲ್ಲ ಅನುಭವಿಸಿ ಈ ಮಾರಿಯನ್ನು ನಾಶಮಾಡಲು ಪ್ರಯತ್ನಿಸುತ್ತೇನೆ. ಈ ವರ್ಣದ್ವೇಷವು ನಾಶವಾಗಲು ಸಹಾಯವಾಗುವಮಟ್ಟಿಗೆ ಮಾತ್ರ ಅನ್ಯಾಯಕ್ಕೆ ಪರಿಹಾರ ಹೊಂದಲು ಪ್ರಯತ್ನಿಸಬೇಕು." ಈ ನಿರ್ಧಾರಕ್ಕೆ ಬಂದು ಪ್ರಿಟೋರಿಯಾಕ್ಕೆ ಪ್ರಯಾಣ ಬೆಳೆಸಲು ನಿಶ್ಚಯಿಸಿಕೊಂಡರು. ಆ ರಾತ್ರಿ ಕಳೆಯಿತು. ಮ್ಯಾರಿಟ್ಸ್‌ಬರ್ಗಿನ ಭಾರತೀಯ ವರ್ತಕರಿಗೆ ಈ ಸುದ್ದಿ ತಿಳಿಯಿತು. ಅವರು ರೈಲ್ವೆ ನಿಲ್ದಾಣಕ್ಕೆ ಬಂದು ಗಾಂಧೀಜಿಯನ್ನು ನೋಡಿ, ಅವರಿಗಾದ ತೊಂದರೆ ಎಲ್ಲ ಭಾರತೀಯರಿಗೆ ಸಾಮಾನ್ಯವಾಗಿ ಒದಗುವ ತೊಂದರೆಗಳೆಂದು ಸಮಾಧಾನ ಪಡಿಸಿದರು. ಅಷ್ಟರಲ್ಲಿ ರೈಲ್ವೆ ಮೇಲಧಿಕಾರಿಗಳಿಗೆ ಗಾಂಧೀಜಿ ತಂತಿ ಸಮಾಚಾರ ಕಳುಹಿಸಿದ್ದರು. ಈ ಗೋಳು ಮುಂದುವ

ರಿಯುತ್ತಿದ್ದಂತೆಯೇ ಸಂಜೆಯ ರೈಲು ಬಂದಿತು. ಅದರಲ್ಲಿ ಅವರಿಗೊಂದು ಸ್ಥಳ ಗೊತ್ತಾಗಿದ್ದಿತು. ಅದರಲ್ಲಿ ಕುಳಿತು ಚಾರ್ಲ್ಸ್‌ಟೌನಿಗೆ ಹೋದರು.

ಗಾಂಧೀಜಿಗಾಗಿ ಪ್ರಯಾಣದಲ್ಲಿ ಕಾದಿದ್ದ ತೊಂದರೆಗಳಿನ್ನೂ ಮುಗಿದಿರಲಿಲ್ಲ. ಚಾರ್ಲ್ಸ್‌ಟೌನಿಂದ ಜೋಹಾನ್ಸ್‌ಬರ್ಗಿಗೆ ರೈಲಿರಲಿಲ್ಲ. ಅಂಚೆಯ ಬಂಡಿಯಲ್ಲಿ ಅವರಿಗೆ ಸ್ಥಳಕೊಡದಿರಲು ಅದರ ಮೇಲ್ವಿಚಾರಕನು ಪ್ರಯತ್ನಪಟ್ಟನು. ಆದರೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಇತರ ಬಿಳಿಯ ಪ್ರಯಾಣಿಕರೊಡನೆ ಕುಳಿತುಕೊಳ್ಳಲು ಗಾಂಧೀಜಿಗೆ ಅವಕಾಶ ಕೊಡದೆ ಗಾಡಿ ಹೊಡೆಯುವವನ ಪಕ್ಕದಲ್ಲಿ ಸ್ಥಳಕೊಟ್ಟನು. ನಿರ್ವಾಹವಿಲ್ಲದೆ ತಮ್ಮ ಅವಮಾನವನ್ನು ಸಹಿಸಿಕೊಂಡು ಅವರು ಅಲ್ಲಿ ಕುಳಿತುಕೊಂಡರು. ಗಾಡಿ ಸ್ವಲ್ಪದೂರ ಹೋದಮೇಲೆ ಆ ಮೇಲ್ವಿಚಾರಕನಿಗೆ ಸಿಗರೇಟು ಸೇದಬೇಕೆನಿಸಿತು. ತಾನು ಗಾಡಿಹೊಡೆಯುವವನ ಪಕ್ಕದಲ್ಲಿ ಕುಳಿತುಕೊಳ್ಳಲು ಬಯಸಿ ಗಾಂಧೀಜಿ ಕಾಲಿಡುವಲ್ಲಿ ಕುಳಿತುಕೊಳ್ಳುವಂತೆ ಹೇಳಿದನು. ಅವರಿಗೆ ಇದನ್ನು ನೋಡಿ ಸಹಿಸಲಾಗಲಿಲ್ಲ. ಆ ಮೇಲ್ವಿಚಾರಕನಿಗೆ, “ಒಳಗೆ ಸ್ಥಳಕೊಡಬೇಕಾಗಿದ್ದರೂ ನೀವೇ ನನ್ನನ್ನು ಇಲ್ಲಿ ಕೂರಿಸಿದ್ದು; ನಾನು ಆ ಅವಮಾನವನ್ನು ಸಹಿಸಿದ್ದೆನು. ಈಗ ನಾನು ನಿಮ್ಮ ಕಾಲಬಳಿ ಕುಳಿತುಕೊಳ್ಳಬೇಕೆನ್ನುವಿರಿ. ಅದೆಲ್ಲ ಆಗುವುದಿಲ್ಲ. ಬೇಕಾದರೆ ಒಳಗೆ ಕುಳಿತುಕೊಳ್ಳುತ್ತೇನೆ.” ಎಂದು ಹೇಳಿದರು. ಈ ಮಾತುಗಳು ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿ ಆ ಅಧಿಕಾರಿಯು ಗಾಂಧೀಜಿಯ ಕೆನ್ನೆಗೆ ಛಟೀರೆಂದು ಹೊಡೆದು ಅವರ ಕೈಹಿಡಿದು ಎಳೆದನು. ಅವರು ಹತ್ತಿರದಲ್ಲಿದ್ದ ಹಿತ್ತಾಳೆಯ ಕಂಬಿಯನ್ನು ಬಲವಾಗಿ ಹಿಡಿದು ಕೈಮೂಳೆ ಮುರಿದರೂ ಹಿಡಿತವನ್ನು ಬಿಡುವುದಿಲ್ಲವೆಂದು ಮನಸ್ಸು ಮಾಡಿದರು. ಆ ಅಧಿಕಾರಿಗೆ ಕೋಪ ಹೆಚ್ಚಿ ಅವರನ್ನು ಬಯ್ದು ಹೊಡೆದು ಎಳೆಯುತ್ತಲೇ ಇದ್ದನು. ಇತರ ಪ್ರಯಾಣಿಕರು ಈ ನೋಟವನ್ನು ನೋಡುತ್ತಿದ್ದರು. ಗಾಂಧೀಜಿ ತಮ್ಮ ಪಟ್ಟನ್ನು ಬಿಡದೆ ಸಹನೆಯಿಂದ ಹೊಡೆತಗಳಿಗೆಲ್ಲಾ ತಮ್ಮ

ವ್ಯೆಯೊಡ್ಡಿದರು. ಈ ಸಹನೆಯನ್ನು ಕಂಡ ಪ್ರಯಾಣಿಕರಲ್ಲಿ ಕೆಲವರಿಗೆ ಕನಿಕರ ಹುಟ್ಟಿ ಆ ಅಧಿಕಾರಿಗೆ, " ಪಾಪ, ಬಿಟ್ಟುಬಿಡು! ಅವನದೇನೂ ತಪ್ಪಿಲ್ಲ. ಅವನು ಹೇಳುವುದು ಸರಿ. ಅವನು ಅಲ್ಲಿ ಕುಳಿತುಕೊಳ್ಳಬಾರ ದಿದ್ದರೆ ನಮ್ಮೊಡನೆ ಕುಳಿತುಕೊಳ್ಳಲಿ," ಎಂದರು. ಇದರಿಂದ ಅಧಿಕಾರಿಯು ಮುಖಮುರಿದಂತಾಗಿ ಕೈಬಿಟ್ಟು ಹೊಡೆಯುವುದನ್ನು ನಿಲ್ಲಿಸಿ ಕುದುರೆ ಹೊಡೆಯುತ್ತಿದ್ದ ನೀಗ್ರೋವನ್ನು ಕೆಳಗೆ ಕೂರಿಸಿ ತಾನಲ್ಲಿ ಕುಳಿತನು. ಗಾಂಧೀಜಿಗೆ " ಮುಂದೆ ನಿನಗೆ ಸರಿಮಾಡುತ್ತೇನೆ " ಎಂದು ಹೆದರಿಸು ತ್ತಿದ್ದನು. ಇದರಿಂದ ಅವರಿಗೂ ಊರು ಸೇರುತ್ತೇನೆಯೆ ಎನ್ನಿಸಿತು. ಅಂತು ಮತ್ತಾವ ತೊಂದರೆಯೂ ಇಲ್ಲದೆ ಜೋಹಾನ್ಸ್‌ಬರ್ಗನ್ನು ತಲಪಿ ದರು. ಆ ಅಧಿಕಾರಿಯ ಮೇಲೆ ಕಟ್ಟಳೆ ನಡೆಸಬೇಕೆಂಬುದು ಗಾಂಧೀಜಿಗೆ ಇಚ್ಛೆಇರಲಿಲ್ಲವಾಗಿ ಆ ಪ್ರಸಂಗವು ಅಲ್ಲಿಗೇ ಕೊನೆಗಂಡಿತು. ಮೊದಲನೆಯ ತರಗತಿಯ ರೈಲುಗಾಡಿಯಲ್ಲಿ ಕುಳಿತು ಮುಂದಕ್ಕೆ ಹೆಚ್ಚು ತೊಂದರೆಯಿಲ್ಲದೆ ಪ್ರಿಟೋರಿಯವನ್ನು ತಲಪಿದರು.

ಪಿಟ್ರೋರಿಯಾದಲ್ಲಿ ಅವರನ್ನು ಎದುರುಗೊಳ್ಳಲು ಯಾವ ಭಾರತೀ ಯನೂ ಬಂದಿರಲಿಲ್ಲ. ಕಾರಣ, ಅಲ್ಲಿ ಅಬ್ದುಲ್ಲಾಶೇಟರ ಪ್ರತಿಕಕ್ಷಿಗಳಿ ದ್ದುದರಿಂದ ಅವರು ಬರುವ ವಿಷಯವನ್ನು ಅಬ್ದುಲ್ಲಾಶೇಟರು ಯಾರಿಗೂ ತಿಳಿಸಿರಲಿಲ್ಲ. ಶೇಟರ ಲಾಯರೂ ಅನನುಕೂಲದಿಂದ ಯಾರನ್ನೂ ಕಳುಹಿಸಲಾಗಿರಲಿಲ್ಲ. ಗಾಂಧೀಜಿಗೆ ಎಲ್ಲಿಗೆ ಹೋಗಬೇಕೆಂಬುದೇ ತೋಚಲಿಲ್ಲ. ಭಾರತೀಯರನ್ನು ಅಲ್ಲಿ ಯಾವ ಹೋಟೆಲಿನವರೂ ಸೇರಿಸು ತ್ತಿರಲಿಲ್ಲ. ಎಲ್ಲಿ ಇಳಿದುಕೊಳ್ಳುವುದೆಂಬುದು ಒಂದು ಸಮಸ್ಯೆಯಾಯಿತು. ಅಷ್ಟರಲ್ಲಿ ಒಬ್ಬ ನೀಗ್ರೋ ಅವರ ಸಹಾಯಕ್ಕೆ ಬಂದು ಅವರನ್ನು ಒಂದು ಸಣ್ಣ ಹೋಟೆಲಿಗೆ ಕರೆದುಕೊಂಡು ಹೋದನು. ಸದ್ಯಕ್ಕೆ ಅಲ್ಲಿ ಇಳಿದು ಕೊಂಡಿದ್ದು ಮಾರನೆಯದಿನ ಅಬ್ದುಲಾಶೇಟರ ಲಾಯರಾದ ಎ. ಡಬ್ಲ್ಯು. ಬೇಕರ್‌ರವರ ಬಳಿಗೆ ಹೋದರು. ಅವರು ಒಬ್ಬ ಬಡ ಹೆಂಗಸಿನ

ಮನೆಯಲ್ಲಿ ಇವರ ಊಟವಸತಿಯ ಏರ್ಪಾಡು ಮಾಡಿದರು. ಗಾಂಧೀಜಿ ಅಲ್ಲಿ ವಾಸಮಾಡತೊಡಗಿದರು.

ಪ್ರೀಟೋರಿಯದಲ್ಲಿ ಶೇಟ್ ತಯಬ್ ಹಾಜಿ ಖಾ಼ ಮಹಮ್ಮದರು ಭಾರತೀಯರಲ್ಲಿ ಮುಖ್ಯರು. ಅಲ್ಲಿ ಭಾರತೀಯರ ಎಲ್ಲಾ ಸಾರ್ವಜನಿಕ ಕಾರ್ಯಗಳೂ ಇವರ ನೇತೃತ್ವದಲ್ಲಿಯೇ ನಡೆಯುತ್ತಿದ್ದವು. ಗಾಂಧೀಜಿ ಇವರನ್ನು ಗುರುತುಮಾಡಿಕೊಂಡರು. ಪ್ರಿಟೋರಿಯದಲ್ಲಿರುವ ಭಾರತೀಯರೆಲ್ಲರ ಪರಿಚಯವನ್ನು ಹೊಂದಿ ಅವರ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ತನ್ನಿಚ್ಛೆಯನ್ನು ಶೇಟರಿಗೆ ತಿಳಿಸಿದರು. ಅದಕ್ಕೆ ಅವಕಾಶ ಕಲ್ಪಿಸಿಕೊಡುವುದಾಗಿ ಶೇಟರು ಸಂತೋಷದಿಂದ ಒಪ್ಪಿ ಒಂದು ದಿನ ಅಲ್ಲಿದ್ದ ಭಾರತೀಯರನ್ನೆಲ್ಲ ಸಭೆಗೂಡಿಸಿದರು. ಅಲ್ಲಿ ನೆರೆದಿದ್ದವರಲ್ಲಿ ವರ್ತಕರೇ ಹೆಚ್ಚು. ಗಾಂಧೀಜಿ ಟ್ರಾನ್ಸ್‌ವಾಲಿನಲ್ಲಿ ಭಾರತೀಯರ ನಿಜವಾದ ಸ್ಥಿತಿಯನ್ನು ವರ್ಣಿಸಿ ಒಂದು ಭಾಷಣಮಾಡಿದರು. ವ್ಯಾಪಾರದಲ್ಲಿ ಸತ್ಯ ದಿಂದ ನಡೆಯಬೇಕೆಂಬುದೇ ಈ ಭಾಷಣದ ಸಾರ. ಅದು ಸಾಧ್ಯವಿಲ್ಲ ವೆಂದು ವ್ಯಾಪಾರಿಗಳು ಹೇಳುವ ವಾದ ಸರಿಯಾದುದಲ್ಲವೆಂದು ವ್ಯಾಪಾರ ದಲ್ಲಿ ಸತ್ಯವು ಬಹು ಮುಖ್ಯವಾದುದೆಂದೂ ಹೇಳಿ ಕರ್ತವ್ಯಪರರಾಗಿರಬೇ ಕೆಂದು ಎಚ್ಚರಿಸಿದರು. ಪರದೇಶದಲ್ಲಿರುವುದರಿಂದ ಅವರ ಜವಾಬ್ದಾರಿಯು ಹೆಚ್ಚಾಯಿತೆಂದೂ ಆ ಸ್ವಲ್ಪ ಜನರ ನಡತೆಯಿಂದಲೇ ಹಿಂದೂಸ್ಥಾನದ ಜನತೆಯ ಯೋಗ್ಯತೆಯನ್ನು ಅಲ್ಲಿಯವರು ಅಳೆಯುವರೆಂದೂ ತಿಳಿಸಿದರು. ಸುತ್ತಮುತ್ತಲ ಆಂಗ್ಲೇಯರೊಡನೆ ಹೋಲಿಸಿ ನೋಡಿದರೆ ಭಾರತೀಯರ ಜೀವನದ ರೀತಿಯಲ್ಲಿ ಅಚ್ಚುಕಟ್ಟು ಎನ್ನುವುದೇ ಇರಲಿಲ್ಲ. ಈ ವಿಷಯ ವನ್ನು ಅವರ ಗಮನಕ್ಕೆ ತಂದರು. ಹಿಂದೂ, ಮುಸಲ್ಮಾನ್, ಪಾರಸಿ, ಈಸಾಯಿ, ಗುಜರಾತಿ ಇವೇ ಮೊದಲಾದ ತಾರತಮ್ಯಗಳನ್ನು ಮರೆತು ಬಿಡಬೇಕೆಂದು ಅವರನ್ನು ಕೇಳಿಕೊಂಡರು. ಈ ಸಭೆಯಿಂದ ಬಹಳ ಪ್ರಯೋಜನವಾಯಿತು. ಆಫ್ರಿಕದಲ್ಲಿದ್ದ ಭಾರತೀಯರ ಆರ್ಥಿಕ, ಸಾಮಾ

ಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು.

ಪ್ರಿಟೋರಿಯ, ಟ್ರಾನ್ಸ್‌ವಾಲ್, ನೇಟಾಲ್, ಆರೆಂಜ್ ಫ್ರೀಸ್ಟೇಟ್ ಇವುಗಳು ದಕ್ಷಿಣ ಆಫ್ರಿಕದ ರಾಜಕೀಯ ಭಾಗಗಳು. ಆರೆಂಜ್ ಫ್ರೀಸ್ಟೇಟಿನಲ್ಲಿ ೧೮೮೮ ನೆಯ ಇಸವಿಗೆ ಮೊದಲು ಒಂದು ಕಾನೂನ್ನು ಜಾರಿಯಾಗಿತ್ತು. ಆ ಕಾನೂನಿನ ಮೂಲಕ ಅಲ್ಲಿನ ಭಾರತೀಯರ ಹಕ್ಕು ಬಾಧ್ಯತೆಗಳೆಲ್ಲ ಕಿತ್ತುಕೊಳ್ಳಲ್ಪಟ್ಟಿದ್ದುವು. ಭಾರತೀಯರು ಅಲ್ಲಿಯೇ ನೆಲಸಲು ಇಚ್ಛಿಸಿದರೆ ಹೋಟೆಲುಗಳಲ್ಲಿ ಸೇವಕರಾಗಿ ಅಥವಾ ಅಂತಹ ಕೀಳು ಕೆಲಸದಲ್ಲಿ ಮಾತ್ರ ಇರಬೇಕಾಗಿತ್ತು. ಕೂಲಿ ಕರಾರು ಮುಗಿದ ಮೇಲೆ ಅಲ್ಲಿಯೇ ಸ್ವತಂತ್ರರಾಗಿ ನೆಲಸಲು ಅವರಿಗೆ ಅವಕಾಶಕೊಡದಿರಬೇಕೆಂಬ ಇಚ್ಛೆಯಿಂದ ಹಲವು ಕಾನೂನುಗಳು ಜಾರಿಗೆ ತರಲ್ಪಡುತ್ತಿದ್ದವು. ಅಲ್ಲಿದ್ದ ವ್ಯಾಪಾರಿಗಳನ್ನೂ ಕೂಡ ಅಲ್ಪ ಸ್ವಲ್ಪ ನಷ್ಟವನ್ನು ಕಟ್ಟಿಕೊಟ್ಟು ಅಲ್ಲಿಂದ ಓಡಿಸುತ್ತಿದ್ದರು. ಹಾಗೆ ಮಾಡದಂತೆ ಅಲ್ಲಿದ್ದ ವ್ಯಾಪಾರಿಗಳು ಸರಕಾರಕ್ಕೆ ಅರ್ಜಿಹಾಕಿಕೊಂಡರೂ ಪ್ರಯೋಜನವೇನೂ ಆಗಿರಲಿಲ್ಲ. ಅಲ್ಲದೆ ಅನೇಕ ಕಠಿಣ ಕಾಯಿದೆಗಳ ಮೂಲಕ ಭಾರತೀಯರಿಗೆ ಹಲವು ವಿಧವಾದ ತೆರಿಗೆಗಳನ್ನು ಹೊರಿಸಿ ಅವರನ್ನು ನಾನಾರೂಪದಲ್ಲಿ ಕಾಡುತ್ತಿದ್ದರು. ಇಷ್ಟೇ ಅಲ್ಲ. ಭಾರತೀಯರು ಭೂಮಿಯನ್ನು ಕೊಳ್ಳಬೇಕೆಂದು ಇಚ್ಛಿಸಿದರೆ ಗೊತ್ತಾದ ಕೆಲವು ಸ್ಥಳಗಳಲ್ಲಿ ಮಾತ್ರ ಕೊಂಡುಕೊಳ್ಳಬಹುದಾಗಿತ್ತು. ಆದರೂ ಕೂಡ ಭೂಮಿಯಮೇಲೆ ಇವರಿಗೆ ಪೂರ್ಣ ಹಕ್ಕಿರುತ್ತಿರಲಿಲ್ಲ. ಅಲ್ಲದೆ ಅಲ್ಲಿನ ನ್ಯಾಯವಿಧಾಯಕ ಸಭೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರವೂ ಇರಲಿಲ್ಲ. ಅಲ್ಲಿನ ನೀಗ್ರೋ ಮೊದಲಾದ ಕಪ್ಪುಜನರಿಗಾಗಿ ಮಾಡಿದ ಕಾಯಿದೆಗಳನ್ನು ಕೂಡ ಇವರು ಪಾಲಿಸಬೇಕಾಗಿತ್ತು. ಇವುಗಳ ಪ್ರಕಾರ ಭಾರತೀಯರಿಗೆ ಕಾಲುದಾರಿಯಲ್ಲಿ ನಡೆಯುವ ಅಧಿಕಾರವಿರಲಿಲ್ಲ. ರಾತ್ರಿ ಒಂಬತ್ತು ಗಂಟೆಯ ಮೇಲೆ ಅಪ್ಪಣೆ ಚೀಟಿಯಿಲ್ಲದೆ ಹೊರಗೆ ಹೊರಡುವಂತಿರಲಿಲ್ಲ.

ಕಾಲುದಾರಿಯಲ್ಲಿ ನಡೆಯುವುದಕ್ಕೆ ಸಂಬಂಧಪಟ್ಟ ನಿಬಂಧನೆಯಿಂದ ಗಾಂಧೀಜಿ ಒಂದು ಸಲ ತೊಂದರೆಗೀಡಾದರು. ಒಂದು ದಿನ ಅಧ್ಯಕ್ಷರ ಬಂಗಲೆಯ ಮುಂದೆ ಕಾಲುದಾರಿಯಲ್ಲಿ ಹೋಗುತ್ತಿದ್ದರು. ಅಲ್ಲಿ ಪಹರೆಯಿದ್ದ ಸಿಪಾಯಿ ಹೋಗೆಂದು ಕೂಡ ಹೇಳದೆ ಅವರನ್ನು ಹೊಡೆದು ಬೀದಿಗೆ ದೂಡಿದನು. ಕಾರಣವೇನೆಂದು ಗಾಂಧೀಜಿ ವಿಚಾರಿಸುವಷ್ಟರಲ್ಲಿ ಅಲ್ಲಿಯೇ ಹೋಗುತ್ತಿದ್ದ ಅವರ ಮಿತ್ರರಾದ ಕೋಟ್ಸರು "ಗಾಂಧೀ, ನಾನೆಲ್ಲವನ್ನೂ ನೋಡಿದೆನು. ಈ ಸಿಪಾಯಿಯ ಮೇಲೆ ಕಟ್ಟಳೆ ನಡೆಸಿ, ನಾನು ಸಾಕ್ಷಿ ಹೇಳುತ್ತೇನೆ," ಎಂದು ಕೂಗಿದರು. "ನನಗೆ ಉಂಟಾದ ಅನ್ಯಾಯಕ್ಕಾಗಿ ನ್ಯಾಯಸ್ಥಾನಕ್ಕೆ ಹೋಗುವುದಿಲ್ಲವೆಂದು ನಿಯಮ ಮಾಡಿಕೊಂಡಿದ್ದೇನೆ. ಆದುದರಿಂದ ಅವನ ಮೇಲೆ ಕಟ್ಟಳೆ ನಡೆಸುವುದಿಲ್ಲ," ಎಂದರು ಗಾಂಧೀಜಿ.

ತಮ್ಮ ಅನುಭವಕ್ಕೆ ಬಂದ ಘಟನೆಗಳಿಂದ ಅಲ್ಲಿ ನೆಲಸಿದ್ದ ಭಾರತೀಯರ ಹೊಡಬಾಳು ಗಾಂಧೀಜಿಗೆ ಚೆನ್ನಾಗಿ ಮನದಟ್ಟಾಯಿತು. ಅವರ ವಿಷಯದಲ್ಲಿ ಸಹಾನುಭೂತಿಯೂ ಹೆಚ್ಚಿತು. ಈ ತೊಂದರೆಗಳಿಂದ ಭಾರತೀಯರನ್ನು ಪಾರುಮಾಡಲು ತಮ್ಮ ಕೈಯ್ಯಲ್ಲಾದ ಸಾಹಸವನ್ನೆಸಗಲು ನಿರ್ಧರಿಸಿಕೊಂಡರು. ರೈಲ್ವೆ ಪ್ರಯಾಣದಲ್ಲಿ ಭಾರತೀಯರಿಗೆ ಒದಗುತ್ತಿದ್ದ ಕಷ್ಟಗಳನ್ನು ತೋರಿಸಿ ಅವರ ಮೇಲೆ ಹೊರಿಸಿರುವ ನಿಬಂಧನೆಗಳು ಅನ್ಯಾಯವಾದವುಗಳೆಂದು ವಾದಿಸಿ ರೈಲ್ವೆ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸಿದರು. ನಾಜೂಕಾಗಿ ಬಟ್ಟೆಹಾಕಿಕೊಂಡಿರುವ ಭಾರತೀಯರಿಗೆ ಮೇಲ್ತರಗತಿಯ ಟಿಕೆಟ್‌ಗಳನ್ನು ಕೊಡಲಾಗುವುದೆಂದು ಅಧಿಕಾರಿಗಳಿಂದ ಉತ್ತರಬಂತು. ಕಾಲುದಾರಿಯ ಕಾನೂನಿನ ವಿಚಾರವಾಗಿ ಬ್ರಿಟಿಷ್ ಏಜಂಟರೊಡನೆ ಮಾತಾಡಿದರು. ಅಲ್ಲಿಯ ಭಾರತೀಯ ಪ್ರಮುಖರೊಡನೆ ಯೋಚಿಸಿ ಆ ವಿಷಯದಲ್ಲಿ ಒಂದು ಮೊಕದ್ದಮೆ ಹೂಡಬೇಕೆಂದು ಗೊತ್ತುಮಾಡಿದರು. ಭಾರತೀಯರು

ಆಫ್ರಿಕದಲ್ಲಿ ಆತ್ಮಗೌರವ ಉಳಿಸಿಕೊಳ್ಳುವುದು ಅಸಾಧ್ಯವಾಗಿದ್ದುದು ಗಾಂಧೀಜಿಗೆ ಸ್ವಂತ ಅನುಭವದಿಂದ ಗೊತ್ತಾಯಿತು. ಈ ಅನ್ಯಾಯಗಳನ್ನು ಸರಿಪಡಿಸುವ ದಾರಿ ಹುಡುಕಲು ಪ್ರಯತ್ನಿಸಿದರು. ಆದರೆ ಸಧ್ಯಕ್ಕೆ ದಾದಾ ಅಬ್ದುಲ್ಲಾಶೇಟರ ಮೊಕದ್ದಮೆಯು ಅವರ ಮುಖ್ಯ ಕೆಲಸವಾಗಿತ್ತು.

ದಾದಾ ಅಬ್ದುಲ್ಲಾಶೇಟರ ಮೊಕದ್ದಮೆ ಸಾಮಾನ್ಯವಾಗಿರಲಿಲ್ಲ. ಇದು ಸುಮಾರು ಆರು ಲಕ್ಷ ರೂಪಾಯಿಯ ದಾವವಾಗಿದ್ದಿತು. ಗಾಂಧೀಜಿ ಮೊಕದ್ದಮೆಯ ಸಾಮಾನ್ಯ ವಿಷಯಗಳನ್ನು ಚೆನ್ನಾಗಿ ಅರಿತುಕೊಂಡರು. ಮೊಕದ್ದಮೆಗೆ ಎಲ್ಲವನ್ನೂ ಸಿದ್ಧಗೊಳಿಸಿದರು. "ಮೊಕದ್ದಮೆಯು ನಿಜವಾದ ವಿಷಯಗಳ ಆಧಾರದ ಮೇಲೆ ನಿಲ್ಲಬೇಕು. ಸತ್ಯವನ್ನು ಹಿಡಿದು ಮೊಕದ್ದಮೆ ನಡಸಿದರೆ ಕಾನೂನು ಸ್ವಾಭಾವಿಕವಾಗಿ ಸಹಾಯಕವಾಗಿಯೇ ಆಗುತ್ತದೆ. ಈ ಮೊಕದ್ದಮೆಯಲ್ಲಿ ನ್ಯಾಯ ದಾದಾ ಅಬ್ದುಲ್ಲರ ಕಡೆಯಿದ್ದಿತು. ಆದರೂ ಅಲ್ಲಿ ಹೊಡೆದಾಡುತ್ತಿದ್ದವರಿಬ್ಬರೂ ಒಂದೇ ಸ್ಥಳದವರಾಗಿ ಬಂಧುಗಳಾಗಿದ್ದರು. ಈ ವ್ಯಾಜ್ಯವು ಮುಂದುವರಿದಿದ್ದರೆ ಇಬ್ಬರೂ ಅದರಿಂದ ಹಾಳಾಗುತ್ತಿದ್ದರು. ಮೊಕದ್ದಮೆ ಮುಗಿಯಲು ಎಷ್ಟು ಕಾಲ ಬೇಕಾಗಿತ್ತೆಂಬುದು ಯಾರಿಗೂ ಗೊತ್ತಿರಲಿಲ್ಲ. ಕೋರ್ಟಿನಲ್ಲೇ ತೀರ್ಮಾನವಾಗಲು ಬಿಟ್ಟಿದ್ದರೆ ದೀರ್ಘಕಾಲದವರೆಗೂ ವ್ಯವಹಾರ ನಡೆಯಬೇಕಾಗುತ್ತಿತ್ತು. ಅಲ್ಲದೆ ಎರಡು ಪಕ್ಷಕ್ಕೂ ಹಾನಿಕರವಾಗಿ ಪರಿಣಮಿಸುತ್ತಿತ್ತು. ದೊಡ್ಡ ವರ್ತಕರಾದರೂ ಅವರ ವರಮಾನ ವಕೀಲರರುಸುಮಿಗೇ ಸಾಕಾಗುತ್ತಿರಲಿಲ್ಲ. ಅಲ್ಲದೆ ಈ ವ್ಯವಹಾರದ ಚಿಂತೆಯೇ ಇಬ್ಬರ ಕಾಲವನ್ನೆಲ್ಲ ನುಂಗುತ್ತಿತ್ತು. ಅವರ ಮಿಕ್ಕ ಕೆಲಸಗಳಿಗೆ ವೇಳೆಯೇ ಇಲ್ಲದೆ ಅವುಗಳಲ್ಲೆಲ್ಲ ನಷ್ಟಸಂಭವಿಸುತ್ತಿತ್ತು. ಜೊತೆಗೆ ಇಬ್ಬರಲ್ಲೂ ವೈಮನಸ್ಸು ಬಲವಾಗಿ ಬೆಳೆಯುತ್ತಿತ್ತು. ಆದುದರಿಂದ ವಾದಿ ಪ್ರತಿವಾದಿಗಳಿಬ್ಬರಿಗೂ ಕೂಡಲೆ ವ್ಯವಹಾರವು ಮುಗಿದರೆ ಸಾಕೆನ್ನಿಸಿತ್ತು." . . . . . ತಮ್ಮ ತಮ್ಮ ತಂತ್ರಗಳನ್ನು ಹುಡುಕಿ ಕಂಡುಹಿಡಿಯುವುದು ವಕೀಲರ ಕೆಲಸವಾಗಿತ್ತು.

ಗೆದ್ದಪಕ್ಷದವರಿಗಾದರೂ ತಾವು ಮಾಡಿದ ಖರ್ಚೆಲ್ಲಸಿಗುವುದೇ ಇಲ್ಲ. ಕಾನೂನಿನ ಪ್ರಕಾರ ಕೊಡಬೇಕಾದ ರುಸುಮಿಗಿಂತ ವಕೀಲರು ಬಹಳ ಹೆಚ್ಚು ತೆಗೆದುಕೊಳ್ಳುತ್ತಿದ್ದರು." ಇದನ್ನೆಲ್ಲ ನೋಡಿ ಗಾಂಧೀಜಿಗೆ ವಕೀಲಿ ಕೆಲಸದಲ್ಲಿ ಜುಗುಪ್ಸೆ ಹುಟ್ಟಿತು. ಆ ವರ್ತಕರ ವಿಷಯದಲ್ಲಿ ಕನಿಕರ ಮೂಡಿತು. ಎರಡು ಪಕ್ಷದವರಿಗೂ ಮೈತ್ರಿಯನ್ನುಂಟುಮಾಡಬೇಕು, ಇಬ್ಬರು ನೆಂಟರನ್ನೂ ಒಟ್ಟಿಗೆ ಸೇರಿಸಬೇಕು, ಎಂಬುದೇ ಅವರಿಗೆ ಧರ್ಮ ವಾಗಿ ತೋರಿತು. ಎರಡು ಪಕ್ಷದವರಿಗೂ ರಾಜಿಮಾಡಲು ವಿಶ್ವಪ್ರಯತ್ನ ಪಟ್ಟರು. ಕಟ್ಟಕಡೆಗೆ ರಾಜಿಗೆ ಎರಡು ಪಕ್ಷದವರೂ ಒಪ್ಪಿದರು. ಪಂಚಾಯಿ ತರನ್ನು ಗೊತ್ತುಮಾಡಿದುದಾಯಿತು. ಚರ್ಚೆ ನಡೆದು ರಾಜಿಯಾಯಿತು. ಅಬ್ದುಲ್ಲಾಶೇಟರು ಗೆದ್ದರು. ತಯಾಬ್‌ಶೇಟರು ಕಂತುಗಳ ಮೂಲಕ ಹಣವನ್ನು ಕೊಡಲು ಒಪ್ಪಿದರು.

"ಹಾಗೆ ರಾಜಿಯಾದುದರಿಂದ ಇಬ್ಬರಿಗೂ ಸಂತೋಷವಾಯಿತು. ನನ್ನ ಸಂತೋಷಕ್ಕಂತು ಪಾರವೇ ಇರಲಿಲ್ಲ. ಮಾನವರ ಒಳ್ಳೆಯ ಸ್ವಭಾವ ವನ್ನು ಅರಿತು ಅವರ ಹೃದಯವನ್ನು ಸೇರುವುದೇ ವಕೀಲತನದ ನೈಜ ಧರ್ಮವೆಂಬುದನ್ನು ಕಲಿತೆನು. ವೈಷಮ್ಯದಿಂದ ದೂರವಾಗಿರುವ ಎರಡು ಪಕ್ಷಗಳಲ್ಲಿ ಮೈತ್ರಿಯನ್ನು ಹುಟ್ಟಿಸುವುದೇ ವಕೀಲನ ಕರ್ತವ್ಯವೆಂಬುದನ್ನು ಅರಿತೆನು. ನಾನು ವಕೀಲಿ ವೃತ್ತಿಯಲ್ಲಿದ್ದ ಇಪ್ಪತ್ತು ವರ್ಷಗಳಲ್ಲಿ ನನ್ನ ಹೆಚ್ಚು ಕಾಲವು ನೂರಾರು ಮೊಕದ್ದಮೆಗಳನ್ನು ರಾಜಿ ಮಾಡುವುದರಲ್ಲೇ ಕಳೆಯುವಂತಾಗುವ ಮಟ್ಟಿಗೆ ಈ ಅರಿವು ನನ್ನಲ್ಲಿ ಮನೆಮಾಡಿತು. ಇದರಿಂದ ನನಗೆ ಹಣದ ನಷ್ಟವೂ ಇಲ್ಲ. ಇನ್ನಾವ ನಷ್ಟವೂ ಆಗಲಿಲ್ಲ. ನನ್ನ ಆತ್ಮಕ್ಕಂತೂ ತೃಪ್ತಿಯಾಯಿತು." ಇದು ಗಾಂಧೀಜಿಯ ಮಾತು. ಇದೇ ಸಮಯದಲ್ಲಿ ಅವರ ವಕೀಲತನದ ಸವಿನೆನಹನ್ನು ಅವರೇ ಹೇಳಲಿ "ವಕೀಲಿವೃತ್ತಿಯಲ್ಲಿ ನಾನು ಯಾವ ಸಂದರ್ಭದಲ್ಲಿಯೂ ಸುಳ್ಳನ್ನು ಆಶ್ರಯಿಸಲಿಲ್ಲ. ನನ್ನ ವಕೀಲತನದ ಹೆಚ್ಚು ಭಾಗವು ಸಾರ್ವಜನಿಕ

ಹಿತಕ್ಕಾಗಿಯೇ ಇತ್ತು. ಇದಕ್ಕಾಗಿ ನಿಜವಾಗಿ ತಗಲುವ ವೆಚ್ಚಕ್ಕಿಂತ ಹೆಚ್ಚಾಗಿ ಜನರಿಂದ ದುಡ್ಡನ್ನು ತೆಗೆದುಕೊಳ್ಳುತ್ತಿರಲಿಲ್ಲ. ಹಲವು ವೇಳೆ ನನ್ನ ಹಣವನ್ನೇ ಅದಕ್ಕಾಗಿ ವೆಚ್ಚಮಾಡುತ್ತಿದ್ದೆನು . . . ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ವಕೀಲಿ ವೃತ್ತಿಯು ಸುಳ್ಳಿನ ವೃತ್ತಿಯೆಂದು ಕೇಳಿದ್ದೆನು. ಆದರೆ ಸುಳ್ಳುಹೇಳಿ ಹಣವನ್ನಾಗಲಿ ಅಧಿಕಾರವನ್ನಾಗಲಿ ಗಳಿಸಬೇಕೆಂಬ ಉದ್ದೇಶ ನನಗಿರಲಿಲ್ಲವಾದುದರಿಂದ ಈ ನಂಬಿಕೆ ನನ್ನಲ್ಲಿ ಯಾವ ಪ್ರಭಾವವನ್ನೂ ಬೀರಲಿಲ್ಲ.

"ದಕ್ಷಿಣ ಆಫ್ರಿಕದಲ್ಲಿ ಅನೇಕವೇಳೆ ನನ್ನ ನೀತಿಯು ಪರೀಕ್ಷಾ ಸಮಯ ಒದಗಿತು. ನನ್ನ ಎದುರು ಪಕ್ಷದವರು ತಮ್ಮ ಸಾಕ್ಷಿಗಳಿಗೆ ಸುಳ್ಳು ಹೇಳುವಂತೆ ಕಲಿಸಿರುವರೆಂದೂ ನನ್ನ ಕಕ್ಷಿಗಾರನಾಗಲಿ ಅಥವಾ ಅವನ ಸಾಕ್ಷಿಗಳಾಗಲಿ ಸುಳ್ಳುಹೇಳಲು ಅವಕಾಶಕೊಟ್ಟರೆ ನಾವು ವ್ಯವಹಾರದಲ್ಲಿ ಗೆಲ್ಲುವೆವೆಂದೂ ಅನೇಕವೇಳೆ ನನಗೆ ಗೊತ್ತಾಗುತ್ತಿತ್ತು; ಆದರೂ ನಾನು ಎಂದೂ ಹೀಗೆ ಮಾಡಲಿಲ್ಲ. ನನಗೆ ಜ್ಞಾಪಕವಿದೆ: ಒಂದೇ ಒಂದು ಸಾರಿ, ಮೊಕದ್ದಮೆಯು ನಮ್ಮ ಕಡೆ ತೀರ್ಮಾನವಾದ ಮೇಲೆ ನನ್ನ ಕಕ್ಷಿಗಾರನು ಸುಳ್ಳುಹೇಳಿ ನನ್ನನ್ನು ಮೋಸಮಾಡಿರುವನೆಂದು ನನಗೆ ಸಂದೇಹ ಹುಟ್ಟಿತು. ನನ್ನ ಕಕ್ಷಿಗಾರರ ವ್ಯವಹಾರ ಸತ್ಯವಾಗಿದ್ದರೆ ಮಾತ್ರ ನನಗೆ ಜಯಸಿಗಬೇಕೆಂಬುದು ನನ್ನ ಹೃದಯಾಂತರಾಳದ ಹಾರೈಕೆಯಾಗಿತ್ತು. ಮೊಕದ್ದಮೆಯಲ್ಲಿ ಗೆದ್ದರೆ ಹೆಚ್ಚು ರುಸುಂ ಕೊಡಬೇಕೆಂದು ನಾನು ಯಾವಾಗಲಾದರೂ ಗೊತ್ತುಮಾಡಿದ್ದು ನನಗೆ ನೆನಪಿಲ್ಲ. ನನ್ನ ಕಕ್ಷಿಗಾರನು ಗೆಲ್ಲಲಿ ಸೋಲಲಿ ನನಗೆ ನಿಜವಾಗಿ ಬರಬೇಕಾಗಿದ್ದುದಕ್ಕಿಂತ ಹೆಚ್ಚುಕಡಿಮೆಯಿಲ್ಲದ ರುಸುಮನ್ನು ನಿರೀಕ್ಷಿಸುತ್ತಿದ್ದೆನು, ನನ್ನ ಬಳಿಗೆ ಬರುವ ಹೊಸ ಕಕ್ಷಿಗಾರರಿಗೆ, ನಾನು ಸುಳ್ಳು ಕೇಸು ತೆಗೆದುಕೊಳ್ಳುವುದಿಲ್ಲವೆಂಬುದನ್ನೂ ಸಾಕ್ಷಿಗಳಿಗೆ ಸುಳ್ಳುಹೇಳಿಕೊಡುವುದಿಲ್ಲವೆಂಬುದನ್ನೂ ತಿಳಿದುಕೊಳ್ಳಬೇಕೆಂದು ಮೊದಲೇ ಹೇಳಿಬಿಡುತ್ತಿದ್ದೆನು. ಇದರಿಂದ ನಾನು

ಎಂತಹ ಹೆಸರು ಗಳಿಸಿದ್ದೆನೆಂದರೆ ಸುಳ್ಳು ಕೇಸೊಂದೂ ನನ್ನ ಬಳಿಗೆ ಬರುತ್ತಲೇ ಇರಲಲ್ಲ. ನಿಜವಾಗಿಯೂ ನನ್ನ ಕಕ್ಷಿಗಾರರು ತಮ್ಮ ಸತ್ಯವಾದ ವ್ಯವಹಾರಗಳನ್ನೆಲ್ಲ ನನಗಾಗಿ ಇಟ್ಟು ಸಂಶಯಾಸ್ಪದವಾದುವುಗಳನ್ನು ಇತರರಿಗೆ ಕೊಡುತ್ತಿದ್ದರು.

"ಒಂದು ಮೊಕದ್ದಮೆಯು ಕಠಿಣ ಪರೀಕ್ಷೆಯನ್ನು ತಂದೊಡ್ಡಿತು. ಅದು ನನ್ನ ಒಬ್ಬ ಒಳ್ಳೆಯ ಕಕ್ಷಿಗಾರನದಾಗಿತ್ತು. ಅದು ಬಹು ಸಮಸ್ಯೆಗಳನ್ನೊಳಗೊಂಡಿದ್ದ ಲೆಕ್ಕಾಚಾರದ ಮೊಕದ್ದಮೆಯಾಗಿದ್ದು ಬಹುಕಾಲದಿಂದಲೂ ನಡೆದುಬಂದಿತ್ತು. ಹಲವು ನ್ಯಾಯಸ್ಥಾನಗಳಲ್ಲಿ ಭಾಗಭಾಗವಾಗಿ ಅದರ ವಿಚಾರಣೆ ನಡೆದಿತ್ತು. ನ್ಯಾಯಸ್ಥಾನವು ಆ ವ್ಯವಹಾರದ ಲೆಕ್ಕಾಚಾರದ ಭಾಗವನ್ನು ಶಕ್ತರಾದವರಿದ್ದ ಪಂಚಾಯಿತಿಗೆ ಒಪ್ಪಿಸಿದ್ದಿತು. ಅದರ ತೀರ್ಮಾನವು ನಮಗೆ ಹಿತವಾಗಿದ್ದರೂ ಪಂಚಾಯಿತರು ಲೆಕ್ಕಾಚಾರದಲ್ಲಿ ಒಂದು ತಪ್ಪುಮಾಡಿದ್ದರು. ಆ ತಪ್ಪು ಸಣ್ಣದಾದರೂ ಸಾಮಾನ್ಯವಾದುದಾಗಿರಲಿಲ್ಲ. ಜಮಾ ಲೆಕ್ಕದಲ್ಲಿರಬೇಕಾದದ್ದು ಸಾಲದ ಲೆಕ್ಕದಲ್ಲಿ ಗಣಿಸಲ್ಪಟ್ಟಿತ್ತು. ಪ್ರತಿಕಕ್ಷಿಯು ತೀರ್ಮಾನವನ್ನು ಒಪ್ಪದಿದ್ದುದು ಬೇರೆ ಕಾರಣಗಳಿಂದ. ಈ ಮೊಕದ್ದಮೆಯಲ್ಲಿ ನಾನು ಸಹಾಯಕ ಲಾಯರಾಗಿದ್ದೆ. ಹಿರಿಯ ಲಾಯರಿಗೆ ಈ ವಿಷಯ ತಿಳಿದುಬಂದಾಗ ನಮ್ಮ ಕಕ್ಷಿ ಆ ತಪ್ಪಿಗೆ ಹೊಣೆಗಾರನಲ್ಲವೆಂದು ಅವರು ಅಭಿಪ್ರಾಯಪಟ್ಟರು. ಅಲ್ಲದೆ ಯಾವ ಲಾಯರೂ ತನ್ನ ಕಕ್ಷಿಗಾರನಿಗೆ ಅನುಕೂಲವಲ್ಲದುದನ್ನು ಒಪ್ಪಿಕೊಳ್ಳಲಾರನೆಂಬುದು ಅವರ ಖಂಡಿತವಾದ ಅಭಿಪ್ರಾಯ. ಆದರೂ ತಪ್ಪನ್ನು ಒಪ್ಪಿಕೊಳ್ಳಲೇಬೇಕೆಂದು ನಾನು ಹೇಳಿದೆನು.

"ಹಿರಿಯ ಲಾಯರು ಹೇಳಿದರು: 'ಹಾಗಾದರೆ ಕೋರ್ಟು ಸಂಪೂರ್ಣ ತೀರ್ಮಾನವನ್ನೇ ತಳ್ಳಿಹಾಕುವ ಸಂಭವವಿದೆ. ಬುದ್ಧಿವಂತರಾದ ಯಾವ ಲಾಯರೂ ತನ್ನ ಕಕ್ಷಿಗಾರನ ವ್ಯವಹಾರ ಹಾಗಾಗಲು ಬಿಡುವುದಿಲ್ಲ. ಏನಾದರೂ ಆಗಲಿ, ಅಂತಹ ಅಪಾಯಕ್ಕೆ ನಾನು ಒಳಗಾ

ಗುವುದಿಲ್ಲ. ಮೊಕದ್ದಮೆ ಮತ್ತೆ ಮೊದಲಿಂದ ವಿಚಾರಣೆಯಾಗಬೇಕಾಗಿ ಬಂದರೆ ನಮ್ಮ ಕಕ್ಷಿಗಾರನಿಗೆ ವೆಚ್ಚವೆಷ್ಟಾಗುವುದು ಮತ್ತು ಅದರ ಫಲಿತಾಂಶವೇನಾಗುವುದು ಎಂಬುದನ್ನು ಯಾರೂ ಹೇಳಲಾರರು!'

"ಈ ಸಂಭಾಷಣೆಯ ಕಾಲದಲ್ಲಿ ಆ ಕಕ್ಷಿಗಾರನು ಅಲ್ಲೇ ಇದ್ದನು.

"ನಾನು ಹೇಳಿದೆ: 'ನಾವು ಮತ್ತು ನಮ್ಮ ಕಕ್ಷಿಗಾರ ಇಬ್ಬರೂ ತೊಂದರೆಗೆ ಒಳಗಾಗಲೇ ಬೇಕು. ನಾವು ತಪ್ಪನ್ನು ಒಪ್ಪಿಕೊಳ್ಳದಮಾತ್ರಕ್ಕೆ ಕೋರ್ಟು ತಪ್ಪುತೀರ್ಮಾನವನ್ನು ಒಪ್ಪಿಕೊಳ್ಳುವುದೆಂಬ ನಿಶ್ಚಯವೇನು? ಅಲ್ಲದೆ ಈ ಒಪ್ಪಿಗೆಯಿಂದ ಕಕ್ಷಿಗಾರನಿಗೆ ಸ್ವಲ್ಪಕಷ್ಟವಾದರೂ ನಷ್ಟವೇನು?'


"ಹಿರಿಯ ಲಾಯರೆಂದರು: 'ಆದರೆ ನಾವೇಕೆ ಒಪ್ಪಿಕೊಳ್ಳಲೇ ಬೇಕು?'

"ನಾನು ಹೇಳಿದೆ: 'ನ್ಯಾಯಸ್ಥಾನ ಆ ತಪ್ಪನ್ನು ಕಂಡುಹಿಡಿಯು ವುದಿಲ್ಲ, ಅಥವಾ ನಮ್ಮ ಪ್ರತಿಕಕ್ಷಿ ಅದನ್ನು ಗೊತ್ತುಹಿಡಿಯುವುದಿಲ್ಲ ವೆಂದು ತಾನೆ ಏನು ನಿಶ್ಚಯ?'

"'ಸರಿ, ಹಾಗಾದರೆ ನೀವು ಆ ಮೊಕದ್ದಮೆಯಲ್ಲಿ ವಾದಿಸುವಿರೋ? ನಿಮ್ಮ ಇಚ್ಛೆಯಂತೆ ವಾದಿಸಲು ನಾನು ಸಿದ್ಧನಾಗಿಲ್ಲ,' ಎಂದು ಹಿರಿಯ ಲಾಯರು ಕೊನೆಯದಾಗಿ ಹೇಳಿಬಿಟ್ಟರು.

"ನಾನು ವಿನಯದಿಂದ ಹೇಳಿದೆ: ನಿಮಗಿಚ್ಛೆಯಿಲ್ಲದಿದ್ದಲ್ಲಿ ನಮ್ಮ ಕಕ್ಷಿಗಾರನು ಒಪ್ಪಿದರೆ ನಾನು ವಾದಿಸಲು ತಯಾರಾಗಿದ್ದೇನೆ. ಈ ತಪ್ಪು ಒಪ್ಪಿಕೊಳ್ಳಲಾಗದಿದ್ದರೆ ಈ ಮೊಕದ್ದಮೆಯಲ್ಲಿ ನನಗಾವ ಸಂಬಂಧವೂ ಬೇಡ."

"ಹೀಗೆ ಹೇಳಿ ನನ್ನ ಕಕ್ಷಿಗಾರನ ಕಡೆಗೆ ನೋಡಿದೆ. ಅವನು ಸ್ವಲ್ಪ ಮಟ್ಟಿಗೆ ಗಾಬರಿಗೊಂಡನು. ನಾನು ಆ ಮೊಕದ್ದಮೆಯಲ್ಲಿ ಮೊದಲಿನಿಂದಲೂ ಇದ್ದೆ. ಅವನು ನನ್ನನ್ನು ಚೆನ್ನಾಗಿ ತಿಳಿದುಕೊಂಡಿದ್ದನು.



ವಿದ್ಯಾರ್ಥಿಯಾಗಿದ್ದಾಗ



ಬ್ಯಾರಿಷ್ಟರಾಗಿದ್ದಾಗ

ಅಲ್ಲದೆ ನನ್ನನ್ನು ನಂಬಿದ್ದನು. 'ಸರಿ, ಹಾಗಾದರೆ ನೀವು ಆ ತಪ್ಪನ್ನು ಒಪ್ಪಿಕೊಂಡು ಮೊಕದ್ದಮೆಯಲ್ಲಿ ವಾದಿಸಿ. ನಾವು ಮೊಕದ್ದಮೆಯನ್ನು ಕಳೆದುಕೊಳ್ಳಬೇಕಾದರೂ ಚಿಂತೆಯಿಲ್ಲ; ದೇವರು ಸತ್ಯವನ್ನು ಕಾಪಾಡುತ್ತಾನೆ' ಎಂದನು ಅವನು.

"ನನಗೆ ಬಹಳ ಸಂತೋಷವಾಯಿತು. ಅವನು ಹೀಗೆ ಹೇಳುವನೆಂಬುದು ನನಗೆ ಗೊತ್ತಿತ್ತು. ಹಿರಿಯ ಲಾಯರು ನನಲ್ಲಿ ಪರಿತಾಪವನ್ನು ತೋರಿಸಿ ಎಚ್ಚರಿಕೆ ಕೊಟ್ಟರು."

ಗಾಂಧೀಜಿ ಲೆಕ್ಕಾಚಾರದಲ್ಲಿ ಆಗಿದ್ದ ತಪ್ಪನ್ನು ನ್ಯಾಯಸ್ಥಾನದಲ್ಲಿ ಒಪ್ಪಿಕೊಂಡರು. ಮೊಕದ್ದಮೆ ಪುನರ್ವಿಚಾರಣೆಗೆ ಹೋಗಲಿಲ್ಲ. ಆ ತಪ್ಪನ್ನು ತಿದ್ದಿ ಪಂಚಾಯಿತರ ತೀರ್ಮಾನವನ್ನು ನ್ಯಾಯಸ್ಥಾನವು ಒಪ್ಪಿಕೊಂಡಿತು.

"ನನಗೂ ನನ್ನ ಕಕ್ಷಿಗಾರನಿಗೂ ಹಿರಿಯ ಲಾಯರಿಗೂ ಸಂತೋಷವಾಯಿತು. ಸತ್ಯಕ್ಕೆ ಚ್ಯುತಿತಾರದಂತೆ ವಕೀಲರಾಗಿರುವುದು ಅಸಾಧ್ಯವಲ್ಲ ಎನ್ನುವ ನನ್ನ ತತ್ವವು ದೃಢಗೊಂಡಿತು. . . . .

". . . . . ಒಮ್ಮೆ ಜೋಹಾನ್ಸ್‌ಬರ್ಗಿನಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಒಂದು ಮೊಕದ್ದಮೆಯಲ್ಲಿ ವಾದಿಸುತ್ತಿದ್ದಾಗ ಕಕ್ಷಿಯು ನನಗೆ ಮೋಸಮಾಡಿದ್ದಾನೆಂಬುದು ಗೊತ್ತಾಯಿತು. ಸಾಕ್ಷಿ ಹೇಳುವಾಗ ನನಗೆ ಅವನ ತಪ್ಪು ಸ್ಪಷ್ಟ ಗೊತ್ತಾಯಿತು. ಕೂಡಲೆ ವಾದವನ್ನು ನಿಲ್ಲಿಸಿ ಮೊಕದ್ದಮೆಯನ್ನು ವಜಾಮಾಡುವಂತೆ ಮಾಜಿಸ್ಟ್ರೇಟರನ್ನು ಕೇಳಿದೆನು. ಇದನ್ನು ನೋಡಿ ನನ್ನ ಪ್ರತಿಪಕ್ಷದ ಲಾಯರು ಆಶ್ಚರ್ಯಗೊಂಡರು. ಮ್ಯಾಜಿಸ್ಟ್ರೇಟರು ಸಂತೋಷಪಟ್ಟರು. ನಾನು ಸುಳ್ಳು ಮೊಕದ್ದಮೆಯನ್ನು ನಡೆಸುವುದಿಲ್ಲವೆಂದು ಗೊತ್ತಿದ್ದೂ ನನಗೆ ಅಂತಹ ಮೊಕದ್ದಮೆಯನ್ನು ತಂದುಕೊಟ್ಟುದಕ್ಕಾಗಿ ಕಕ್ಷಿಗಾರನನ್ನು ನಿಂದಿಸಿದೆನು. ಅವನು ತನ್ನ

ತಪ್ಪನ್ನು ಒಪ್ಪಿಕೊಂಡನು. ಅಲ್ಲದೆ ಅವನಿಗೆ ವಿರೋಧವಾಗಿ ಮೊಕದ್ದಮೆಯನ್ನು ವಜಾ ಮಾಡುವಂತೆ ಮ್ಯಾಜಿಸ್ಟ್ರೇಟರನ್ನು ಕೇಳಿದ್ದಕ್ಕಾಗಿ ಅವನು ಕೋಪಗೊಳ್ಳಲಿಲ್ಲವೆಂದು ತಿಳಿದುಕೊಂಡಿದ್ದೇನೆ. ಏನಾದರಾಗಲಿ ಈ ಮೊಕದ್ದಮೆಯಲ್ಲಿ ನಾನು ನಡೆದುಕೊಂಡ ರೀತಿಯಿಂದ ನನ್ನ ಉದ್ಯೋಗಕ್ಕೇನೂ ಬಾಧಕವಾಗಲಿಲ್ಲ; ನನ್ನ ಕೆಲಸವಿನ್ನೂ ಸುಲಭವಾಯಿತು. ನನ್ನ ಸತ್ಯಪರಾಯಣತೆಯಿಂದ ಸಹೋದ್ಯೋಗಿಗಳಲ್ಲಿ ನನ್ನ ಯಶಸ್ಸು ಹೆಚ್ಚಿತು. ಅಲ್ಲದೆ ಆ ವರ್ಣದ್ವೇಷದ ಮಧ್ಯೆ ಹಲವು ಮೊಕದ್ದಮೆಗಳಲ್ಲಿ ಅವರ ಪ್ರೀತಿಯನ್ನು ಗಳಿಸಲು ಶಕ್ತನಾದೆನು.

“ನನ್ನ ವಕೀಲಿವೃತಿಯಲ್ಲಿ ನನಗೆ ತಿಳಿಯದುದನ್ನು ನನ್ನ ಕಕ್ಷಿಗಾರರಿಗಾಗಲಿ ಅಥವಾ ಸಹೋದ್ಯೋಗಿಗಾಗಲಿ ಒಪ್ಪಿಕೊಳ್ಳುವುದು ನನ್ನ ಸ್ವಭಾವವಾಗಿತ್ತು. ನನಗೆ ಸಂದೇಹ ಬಂದಾಗ ಬೇರೆ ಲಾಯರಲ್ಲಿ ಯೋಚಿಸುವಂತೆ ಅಥವಾ ಹಿರಿಯ ಲಾಯರ ಸಹಾಯವನ್ನು ಪಡೆಯಲು ನನಗೆ ಅವಕಾಶ ಕೊಡುವಂತೆ ಕಕ್ಷಿಗಾರರಿಗೆ ಹೇಳುತ್ತಿದ್ದೆನು. ಈ ನನ್ನ ಮುಚ್ಚುಮರೆಯಿಲ್ಲದ ನಡತೆ ಕಕ್ಷಿಗಾರನ ಅಪಾರ ಪ್ರೀತಿಯನ್ನೂ ನಂಬಿಕೆಯನ್ನೂ ಗಳಿಸಿಕೊಟ್ಟಿತು. ಹಿರಿಯ ಲಾಯರಲ್ಲಿ ಯೋಚಿಸುವ ಸಂದರ್ಭ ಬಂದಾಗ ಅದಕ್ಕೆ ತಗಲುವ ರುಸುಮುವನ್ನು ತೆರಲು ಅವರು ಸಿದ್ಧರಾಗುತ್ತಿದ್ದರು. ಈ ಪ್ರೀತಿ ಮತ್ತು ನಂಬಿಕೆಯು ನನ್ನ ಸಾರ್ವಜನಿಕ ಕೆಲಸದಲ್ಲಿ ಬಹುಮಟ್ಟಿಗೆ ಸಹಾಯಮಾಡಿತು........ದಕ್ಷಿಣ ಆಫ್ರಿಕದಲ್ಲಿ ನಾನು ವಕೀಲಿವೃತ್ತಿಯನ್ನು ನಡಸಿದುದು ಜನಾಂಗದ ಸೇವೆಗಾಗಿ. ಇದಕ್ಕಾಗಿ ಜನರ ನಂಬಿಕೆಯನ್ನು ಗಳಿಸಲೇ ಬೇಕಾಗಿತ್ತು. ವಕೀಲಿ ವೃತ್ತಿಯ ಮೂಲಕ ನಾನು ಅನೇಕರಿಗೆ ಮಾಡಿಕೊಟ್ಟ ಕೆಲಸದಿಂದ ಉದಾರ ಹೃದಯರಾದ ಭಾರತೀಯರು ಅಗಣಿತವಾಗಿ ಸೇವೆಗೆ ಬಂದರು. ತಮ್ಮ ಹಕ್ಕುಗಳಿಗಾಗಿ ಜೈಲುವಾಸವನ್ನು ಅನುಭವಿಸುವಂತೆ ಅವರಿಗೆ ನಾನು ಹೇಳಿದಾಗ ಅವರಲ್ಲನೇಕರು ಸಂತೋಷದಿಂದ ಅದಕ್ಕೆ ಒಪ್ಪಿದರು. ಅವರು ಅದರ

ನ್ಯಾಯವನ್ನು ತಿಳಿದಿದ್ದುದಕ್ಕಿಂತಲೂ ಹೆಚ್ಚಾಗಿ ಅವರಿಗೆ ನನ್ನಲ್ಲಿದ್ದ ನಂಬಿಕೆ ಮತ್ತು ಪ್ರೀತಿಯೇ ಇದಕ್ಕೆ ಕಾರಣ.

"ಇದನ್ನು ಬರೆಯುತ್ತಿರುವಾಗ ಹಲವು ಸವಿ ನೆನಹುಗಳು ನನ್ನ ಮನಸ್ಸಿಗೆ ಬರುತ್ತವೆ. ಅಂತು ನೂರಾರು ಕಕ್ಷಿಗಾರರು ಗೆಳೆಯರಾದರು. ಸಾರ್ವಜನಿಕ ಸೇವೆಯಲ್ಲಿ ಸಹೋದ್ಯೋಗಿಗಳಾದರು. ಅವರ ಸಹವಾಸವು ತುಂಬ ಕಷ್ಟ ಮತ್ತು ಅಪಾಯಕ್ಕೆ ಒಳಗಾಗಬೇಕಾಗಿದ್ದ ನನ್ನ ಜೀವನವನ್ನು ಉತ್ತಮಗೊಳಿಸಿತು. . . . ."

ಅಬ್ದುಲ್ಲಾ ಶೇಟರ ಮೊಕದ್ದಮೆ ಮುಗಿದುದರಿಂದ ಗಾಂಧೀಜಿ ಆಫ್ರಿಕಾಕ್ಕೆ ಬಂದ ಕೆಲಸ ಮುಗಿಯಿತು. ಆಫ್ರಿಕದಲ್ಲಿದ್ದ ಈ ಕಾಲದಲ್ಲಿ ಅವರಲ್ಲಾದ ಧಾರ್ಮಿಕ ಪ್ರಗತಿಯನ್ನು ನೋಡೋಣ.

ಬೇಕರರು ವಕೀಲರಾದರೂ ಕ್ರೈಸ್ತ ಧರ್ಮೋಪದೇಶಕರಾಗಿದ್ದರು. ಅವರು ಗಾಂಧೀಜಿಗೆ ಅನೇಕ ಮಾನ್ಯ ಕ್ರೈಸ್ತರ ಪರಿಚಯ ಮಾಡಿ ಕೊಟ್ಟರು. ಅವರೆಲ್ಲರೂ ಗಾಂಧೀಜಿ ಈಸಾಯಿ ಧರ್ಮವನ್ನು ಅಧ್ಯಯನ ಮಾಡುವಂತೆ ಹೇಳಿದರು. ಆ ವಿಷಯದ ಅನೇಕ ಪುಸ್ತಕಗಳನ್ನು ಅವರಿಗೆ ಒದಗಿಸಿಕೊಟ್ಟರು. ಈಸಾಯಿಮತಕ್ಕೆ ಸೇರುವಂತೆಯೂ ಸೂಚಿಸಿ ದರು. ಅಂತೆಯೇ ಮುಸಲ್ಮಾನ ಸ್ನೇಹಿತರೂ ಅವರನ್ನು ಇಸ್ಲಾಂ ಮತಕ್ಕೆ ಸೇರುವಂತೆ ಸಲಹೆಕೊಟ್ಟರು. ಗಾಂಧೀಜಿ ಆ ಎರಡು ಧರ್ಮಗಳ ಅನೇಕ ಗ್ರಂಥಗಳನ್ನು ಓದಿ ಮನನಮಾಡಿಕೊಂಡರು. ಆ ಧರ್ಮಗಳನ್ನು ಚೆನ್ನಾಗಿ ತಿಳಿದುಕೊಂಡರು. ಆಮೇಲೂ ಹಿಂದೂ ಧರ್ಮವನ್ನು ಬಿಡಲು ಕಾರಣ ಗಳೇನೂ ಅವರಿಗೆ ತೋರಲಿಲ್ಲ. ಈ ಹಿಂದೂ ಧರ್ಮದಲ್ಲಿ ಜೀವನದ ಉನ್ನತಿಗೆ ಬೇಕಾದುದೆಲ್ಲವೂ ಇದ್ದುದನ್ನು ಅವರು ಅರಿತರು. ಧಾರ್ಮಿಕ ಅಧ್ಯಯನವು ಮುಂದೆ ಸಾಗಿತು. ಇಂಗ್ಲೆಂಡಿನಲ್ಲಿದ್ದ ಎಡ್ವರ್ಡ್ ಮೆಯ್‌-ಲ್ಯಾಂಡ್ ಎಂಬವರ ಪರಿಚಯಮಾಡಿಕೊಂಡು ಅವರಿಗೆ ಧಾರ್ಮಿಕ ವಿಷಯದಲ್ಲಿ ಕಾಗದ ಬರೆದರು. ಅವರು 'ಪವಿತ್ರಮಾರ್ಗ' (The

Perfect Way) ಮತ್ತು ‘ ಬೈಬಲಿನ ನವೀನಾರ್ಥ ’ (The New Interpretation of the Bible) ಎಂಬ ಪುಸ್ತಕಗಳನ್ನು ಕಳುಹಿಸಿ ಕೊಟ್ಟರು. ಗಾಂಧೀಜಿ ಈ ಎರಡು ಪುಸ್ತಕಗಳನ್ನೂ ಅಧ್ಯಯನಮಾಡಿದರು. ಇವು ಹಿಂದೂಮತವನ್ನು ಸಮರ್ಥಿಸಿದಂತೆ ಅವರಿಗೆ ಕಂಡುಬಂತು. ಟಾಲ್ ಸ್ಟಾಯಿಯವರು ಬರೆದ ‘ ಈಶ್ವರನ ಸಾಮ್ರಾಜ್ಯವು ನಿನ್ನ ಹೃದಯದಲ್ಲಿದೆ ’ (The Kingdom of God is Within You) ಎಂಬ ಪುಸ್ತಕವು ಗಾಂಧೀಜಿಯಲ್ಲಿ ಶಾಶ್ವತವಾದ ಪರಿಣಾಮವನ್ನು ಉಂಟುಮಾಡಿತು. ಆ ಗ್ರಂಥದಲ್ಲಿ ಕಂಡುಬಂದ ಸ್ವತಂತ್ರ ಯೋಚನೆ, ನೀತಿ, ಪ್ರೌಢತೆ ಮತ್ತು ಸತ್ಯಪರಾಯಣತೆಯ ಮುಂದೆ ಈಸಾಯಿ ಸ್ನೇಹಿತರು ಕೊಟ್ಟಿದ್ದ ಇತರ ಪುಸ್ತಕಗಳು ಕಳೆಗುಂದಿದವು. ಇದರ ಜೊತೆಗೆ ಭಾರತದಲ್ಲಿದ್ದ ರಾಯಚಂದ ಭಾಯಿಯವರ ಸಲಹೆಯಂತೆ ಹಿಂದೂಮತ ಗ್ರಂಥಗಳನ್ನೂ ಅಧ್ಯಯನ ಮಾಡಿದರು. ಇದೆಲ್ಲದರಿಂದ ಅವರಲ್ಲಿ ಹಿಂದೂಧರ್ಮದ ಮೇಲಿನ ಪ್ರೇಮ ಬೆಳೆಯಿತು, ನಂಬಿಕೆ ದೃಢವಾಯಿತು.

ಇನ್ನು ಮುಂದಿನ ಕತೆ: ಮೊಕದ್ದಮೆಯು ಮುಗಿದುದರಿಂದ ಗಾಂಧೀಜಿ ಹಿಂದೂಸ್ಥಾನಕ್ಕೆ ತಿರುಗಲು ಸನ್ನಾಹಮಾಡಿದರು. ಅಬ್ದುಲ್ಲಾ ಶೇಟರು ಅವರ ಗೌರವಾರ್ಥವಾಗಿ ಹಲವು ಸ್ನೇಹಿತರನ್ನು ಕರೆದು ಅವರಿಗೆ ಒಂದು ಔತಣಕೊಟ್ಟರು. ಆ ಸಮಯದಲ್ಲಿ ಗಾಂಧೀಜಿಯ ದೃಷ್ಟಿಯು ವೃತಪತ್ರಿಕೆಯಲ್ಲಿದ್ದ “ ಭಾರತೀಯರ ಮತಾಧಿಕಾರ ” (Indian Franchise) ಎಂಬ ವಿಷಯದ ಮೇಲೆ ಬಿತ್ತು. ಅಲ್ಲಿನ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರ ಭಾರತೀಯರಿಗೆ ಇಲ್ಲದಂತೆ ಮಾಡುವ ಕಾನೂನು ಆ ಸಭೆಯ ಮುಂದಿತ್ತು. ಅದು ಆ ಲೇಖನದ ವಿಷಯ. ಗಾಂಧೀಜಿ ಅಲ್ಲಿ ಸೇರಿದ್ದವರೊಡನೆ ಈ ಅನ್ಯಾಯದ ವಿಚಾರವನ್ನು ಚರ್ಚಿಸಿದರು. ಈ ವಿಷಯದಲ್ಲಿ ಭಾರತೀಯರ ಪರ ಹೋರಾಡಲು ಅವರು ಇನ್ನು ಒಂದು ತಿಂಗಳಾದರೂ ಆಫ್ರಿಕದಲ್ಲೇ ಉಳಿದುಕೊಳ್ಳಬೇ

ಕೆಂದು ಕೇಳಿಕೊಂಡು ಅವರಿಗೆ ಬೇಕಾದ ಜನ ಧನ ಸಹಾಯವನ್ನು ಒದಗಿಸಿಕೊಡುವುದಾಗಿ ಅಲ್ಲಿ ನೆರೆದಿದ್ದವರು ಹೇಳಿಕೊಂಡರು. ಗಾಂಧೀಜಿ ಅದಕ್ಕೆ ಒಪ್ಪಿದರು. ಹಿಂದೂಸ್ಥಾನಕ್ಕೆ ಹೊರಡುವುದು ಸದ್ಯಕ್ಕೆ ನಿಂತಿತು.

ಭಾರತೀಯರ ಹಕ್ಕನ್ನು ಮುರಿಯುವ ಈ ಕಾನೂನನ್ನು ಎದುರಿಸಲು ಸರ್ವಸನ್ನಾಹ ನಡೆಯಿತು. ಹಾಜಿ ಮಹಮುದ್ ಶೇಟರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕಾನೂನನ್ನು ವಿರೋಧಿಸಬೇಕೆಂದು ನಿರ್ಧಾರವಾಯಿತು. ಸ್ವಯಂಸೇವಕರನ್ನು ಕೂಡಿಸಿದುದಾಯಿತು. ತಮ್ಮನ್ನು ಸಾರ್ವಜನಿಕ ಸೇವೆಗೆ ಕರೆದುದಕ್ಕೆ ಸಂತೋಷಗೊಂಡು ಭಾರತೀಯರೆಲ್ಲ ಸೇವೆಗೆ ನುಗ್ಗಿ ಬಂದರು. ತಮ್ಮ ಪಂಗಡಕ್ಕೆ ಉಂಟಾದ ಆಪತ್ತಿನಲ್ಲಿ ಮೇಲು ಕೀಳು, ಹಿರಿಯ ಕಿರಿಯ, ಯಜಮಾನ ಆಳು, ಹಿಂದೂ ಮುಸಲ್ಮಾನ ಪಾರಸಿ ಕ್ರೈಸ್ತ, ಗುಜರಾತಿ ಮದರಾಸಿ ಸಿಂಧಿ ಇವೇ ಮುಂತಾದ ಭೇದಗಳು ಅಳಿದು ಹೋದವು. ಎಲ್ಲರೂ ಭಾರತಮಾತೆಯ ಪುತ್ರರು, ತಾಯ್ನಾಡಿನ ಸೇವಕರು ಎಂಬ ಸಮಾನಭಾವ ಅವರಲ್ಲಿ ಮೂಡಿತು.

ಕಾನೂನಿನ ಚರ್ಚೆಯನ್ನು ಮುಂದೆ ತಳ್ಳಬೇಕೆಂದು ಧಾರಾಸಭೆ (ನ್ಯಾಯವಿಧಾಯಕಸಭೆ) ಯ ಅಧ್ಯಕ್ಷರಿಗೆ ಅರ್ಜಿಕಳುಹಿಸಿದುದಾಯಿತು. ಅಧ್ಯಕ್ಷರು ಆ ಚರ್ಚೆಯನ್ನು ಎರಡು ದಿವಸದವರೆಗೆ ಮುಂದೆ ತಳ್ಳಿದರು. ಧಾರಾಸಭೆಯ ಮುಂದಿಡಲು ಅರ್ಜಿ ತಯಾರಾಯಿತು. ಸ್ವಯಂಸೇವಕರು ಭರದಿಂದ ದುಡಿದು ಆ ಅಲ್ಪಕಾಲದಲ್ಲೇ ಸಾಧ್ಯವಾದಷ್ಟು ಹೆಚ್ಚು ಭಾರತೀಯರ ಸಹಿ ಶೇಖರಿಸಿದರು. ಅರ್ಜಿಯನ್ನು ಸಭೆಯ ಮುಂದಿಟ್ಟರು. ಆದರೂ ಕಾನೂನು ಧಾರಾಸಭೆಯಲ್ಲಿ ಅನುಮೋದಿಸಲ್ಪಟ್ಟಿತು. ಹೀಗಾಗುವುದೆಂದು ಗಾಂಧೀಜಿಗೂ ಅವರ ಕಡೆಯವರಿಗೂ ಮೊದಲೇ ತಿಳಿದಿತ್ತು. ಆದರೆ ಈ ಪ್ರಯತ್ನದಿಂದ ಕಾನೂನು ರದ್ದಾಗದಿದ್ದರೂ ಈ ಚಳುವಳಿಯು ಅಲ್ಲಿನ ಭಾರತೀಯರಲ್ಲಿ ಒಂದು ಹೊಸ ಚೈತನ್ಯವನ್ನುಂಟು ಮಾಡಿತು. ತಾವೆಲ್ಲರೂ ಒಂದು ಪಂಗಡಕ್ಕೆ ಸೇರಿದವರೆಂದೂ ತಮ್ಮಲ್ಲಿ

ಯಾರೂ ಆ ಸಂಗಡದಿಂದ ಹೊರಗಿನವರಾಗಿರಲು ಸಾಧ್ಯವಿಲ್ಲವೆಂದೂ ತಮ್ಮ ರಾಜಕೀಯ ಹಕ್ಕುಗಳಿಗಾಗಿ ಹೊಡೆದಾಡುವುದು ತಮ್ಮ ಧರ್ಮ ವೆಂದೂ ಅವರು ಮನಗಾಣುವಂತೆ ಮಾಡಿತು.

ಧಾರಾಸಭೆಯು ಕಾನೂನನ್ನು ಒಪ್ಪಿದಮೇಲೆ ಬ್ರಿಟಿಷ್ ಸ್ವಾಸ್ಥ್ಯಗಳ ಸಚಿವರಿಗೆ ಸಾವಿರಾರು ಜನ ಭಾರತೀಯರು ಸಹಿಮಾಡಿದ ಒಂದು ಅರ್ಜಿ ಯನ್ನು ಕಳುಹಿಸಬೇಕೆಂದು ನಿರ್ಧಾರವಾಯಿತು. ಗಾಂಧೀಜಿ ಬುದ್ಧಿವಂತಿಕೆ ಯಿಂದ ಅರ್ಜಿಯನ್ನು ತಯಾರುಮಾಡಿದರು. ಅದಕ್ಕೆ ಹತ್ತುಸಾವಿರ ಜನರ ರುಜು ಹಾಕಿಸಿದುದಾಯಿತು. ಇದಕ್ಕಾಗಿ ಸ್ವಯಂಸೇವಕರ ಪ್ರಯತ್ನವು ಅಷ್ಟಿಷ್ಟಲ್ಲ. ಅರ್ಜಿಯನ್ನು ಇಂಗ್ಲಂಡಿಗೆ ಕಳುಹಿಸಿದರು. ಎಲ್ಲಾ ಪತ್ರಿಕೆಗಳಿಗೂ ಅರ್ಜಿಯ ನಕಲುಗಳನ್ನು ಟಿಪ್ಪಣಿಗಳೊಡನೆ ಪ್ರಕಟಣೆಗೆ ಕೊಟ್ಟುದಾಯಿತು. ಭಾರತದ ಎಲ್ಲಾ ಪತ್ರಿಕೆಗಳೂ ಇಂಗ್ಲಂಡಿನ ಒಂದೆರಡು ಪತ್ರಿಕೆಗಳೂ ಭಾರತೀಯರ ಪರವಾಗಿ ವಾದಿಸಿದವು. ಇದರಿಂದ ಕಾನೂನು ರದ್ದಾಗಬಹುದೆಂಬ ನಂಬಿಕೆ ಹುಟ್ಟಿತು. ಇಷ್ಟೆಲ್ಲ ಆದಮೇಲೂ ಗಾಂಧೀಜಿ ಹಿಂದೂಸ್ಥಾನಕ್ಕೆ ಹಿಂತಿರುಗುವುದು ಅಸಾಧ್ಯ ವಾಯಿತು. ಅಲ್ಲಿನ ಭಾರತೀಯರು ಇನ್ನೂ ಕೊಂಚಕಾಲ ಗಾಂಧೀಜಿ ಅಲ್ಲಿಯೇ ನೆಲಸಬೇಕೆಂದು ಕೇಳಿಕೊಂಡರು. ಅವರು ಭಾರತೀಯರಿಗೆ ಮರ್ಯಾದೆ ತರುವಂತೆ ಬ್ಯಾರಿಸ್ಟರ ಯೋಗ್ಯತೆಗೆ ಸರಿಯಾದ ಜೀವನ ನಡೆ ಸಲು ಅನುಕೂಲವಾಗುವಂತೆ ತಮ್ಮ ತಮ್ಮ ಮೊಕದ್ದಮೆಗಳನ್ನು ಅವರಿಗೇ ಕೊಡಲು ಭಾರತೀಯರು ನಿಶ್ಚಯಿಸಿದರು. ಗಾಂಧೀಜಿ ಒಂದು ವರ್ಷ ಅಲ್ಲೇ ಇರಲು ಒಪ್ಪಿ ನೇಟಾಲಿನಲ್ಲಿ ನೆಲಸಿದರು.

ಸಾರ್ವಜನಿಕ ಸೇವೆ

"ಕುರುಡಿಯಾದರೂ ಕುಶಲಳಾದ, ತಕ್ಕಡಿಯನ್ನು ಸಮನಾಗಿ ಹಿಡಿದುಕೊಂಡಿರುವ, ಹೆಂಗಸಿಗೆ ನ್ಯಾಯಾಧಿದೇವತೆಯನ್ನು ಹೋಲಿಸುವ ಪದ್ಧತಿಯಿದೆ. ಮನುಷ್ಯನ ಹೊರಗಡೆಯ ತೋರಿಕೆಗೆ ಗಮನ ಕೊಡದೆ ಸತ್ಯಕ್ಕನುಸಾರವಾಗಿ ತೀರ್ಪನ್ನು ಕೊಡಬೇಕೆಂಬ ಉದ್ದೇಶದಿಂದಲೇ ವಿಧಿ ಆಕೆಯನ್ನು ಕುರುಡಿಯನ್ನಾಗಿ ಮಾಡಿದೆ. ಆದರೆ ನೇಟಾಲಿನ ವಕೀಲರ ಸಭೆಯು ಅಲ್ಲಿನ ನ್ಯಾಯಸ್ಥಾನವು ಈ ತತ್ವಕ್ಕೆ ವಿರುದ್ಧವಾಗಿ ನಡೆಯುವ ಹಾಗೆ ಮಾಡಲು ಪ್ರಯತ್ನಪಟ್ಟಿತು." ಗಾಂಧೀಜಿ ಆ ನ್ಯಾಯಸ್ಥಾನದ ವಕೀಲರಾಗಿ ಸೇರಬೇಕಾಗಿತ್ತು. ನೇಟಾಲಿನ ಪರಂಗಿ ವಕೀಲರನ್ನು ಆದನ್ನು ವಿರೋಧಿಸಿದರು. ಆದರೆ ಶ್ರೇಷ್ಠ ನ್ಯಾಯಾಧೀಶರು ಆ ವಕೀಲರ ಸಭೆಯ ವಿರೋಧಸೂಚಕ ಅರ್ಜಿಯನ್ನು ನಿರಾಕರಿಸಿ "ನ್ಯಾಯದ ದೃಷ್ಟಿಯಲ್ಲಿ ಕಪ್ಪುಜನರು ಬಿಳಿಯ ಜನರು ಎಂಬ ಭೇದವಿಲ್ಲ; ಗಾಂಧಿಯವರು ವಕೀಲರಾಗಿರಬಹುದು," ಎಂದು ತೀರ್ಪಿತ್ತರು. ಗಾಂಧೀಜಿ ನ್ಯಾಯಸ್ಥಾನದಲ್ಲಿ ಪ್ರಮಾಣ ಮಾಡಿ ವಕೀಲರಾದರು. ಅನಂತರ ನ್ಯಾಯಾಧೀಶರು ಅವರನ್ನು ಕುರಿತು, "ಈಗ ನಿಮ್ಮ ರುಮಾಲನ್ನು ತೆಗೆಯಬೇಕು. ಇತರ ವಕೀಲರು ನ್ಯಾಯಸ್ಥಾನದಲ್ಲಿ ಹಾಕಿಕೊಳ್ಳಬೇಕಾದ ಉಡುಪಿನ ನಿಯಮಗಳನ್ನು ನೀವೂ ಅನುಸರಿಸಬೇಕು" ಎಂದರು. ಗಾಂಧೀಜಿ ಆಗಿನ ಪರಿಸ್ಥಿತಿಯನ್ನು ಅರಿತುಕೊಂಡು, ರುಮಾಲನ್ನು ತೆಗೆಯುವುದಿಲ್ಲವೆಂದು ಡರ್ಬನ್‌ನಲ್ಲಿ ನಿರ್ಧರಿಸಿದ್ದುದಕ್ಕೆ ವಿರುದ್ಧವಾಗಿ ರುಮಾಲನ್ನು ತೆಗೆದರು. ಇದು ಆಗ ಅನಿವಾರ್ಯವಾಗಿತ್ತು.

ಗಾಂಧೀಜಿಗೆ ವಕೀಲಿ ಕೆಲಸ ಪ್ರಧಾನವಾಗಿರಲಿಲ್ಲ. ಅವರು ನೇಟಾಲಿನಲ್ಲಿ ನೆಲಸಿದುದು ಸಾರ್ವಜನಿಕ ಕೆಲಸಗಳಿಗಾಗಿ. ಭಾರತೀಯರ ಹಕ್ಕುಬಾಧ್ಯತೆಯ ವಿಷಯದಲ್ಲಿ ಒಂದೇ ಸಮನಾದ ಚಳುವಳಿ ನಡಸಬೇಕಾಗಿದ್ದಿತು. ಇದಕ್ಕಾಗಿ ಸಾರ್ವಜನಿಕ ಸಂಸ್ಥೆಯೊಂದನ್ನು ಸ್ಥಾಪಿಸ

ಬೇಕೆಂದು ಅವರು ಯೋಚಿಸಿದರು. ಈ ಯೋಚನೆಗೆ ಅವರ ಮಿತ್ರರೆಲ್ಲರೂ ಒಪ್ಪಿದರು. ಒಂದು ಸಭೆ ಸೇರಿತು. ಬಹುಮಂದಿ ನೆರೆದಿದ್ದರು. ಭಾರತದಲ್ಲಿ ನಾಡಿನ ಚೈತನ್ಯವೆಲ್ಲಾ ಕಾಂಗ್ರೆಸ್ ಸಭೆಯಲ್ಲಿದ್ದಿತು. ಅದನ್ನು ನೇಟಾಲಿನಲ್ಲಿ ಪ್ರಸಿದ್ಧಿಪಡಿಸಬೇಕೆಂಬ ಇಚ್ಛೆ ಗಾಂಧೀಜಿಗಿತ್ತು. ಅಲ್ಲಿ ಸ್ಥಾಪಿಸುವ ಸಂಸ್ಥೆಗೆ 'ಕಾಂಗ್ರೆಸ್' ಎಂದು ಹೆಸರಿಡಬೇಕೆಂದು ಸಲಹೆಯಿತ್ತರು. ಇದನ್ನು ಎಲ್ಲರೂ ಒಪ್ಪಿದರು. ೧೮೯೩ ನೆಯ ಇಸವಿ ಮೇ ೨೨ ನೆಯ ದಿನ 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಸ್ಥಾಪಿತವಾಯಿತು.

"ಕಾಂಗ್ರೆಸ್ ಸದಸ್ಯರಾಗಲು ಹಲವರು ಮುಂದೆ ಬಂದು ತಮ್ಮ ಹೆಸರನ್ನು ಕೊಟ್ಟರು. ಆದರೆ ಆಮೇಲೆ ಚಂದಾ ವಸೂಲಿಮಾಡುವುದು ಬಹಳ ಕಷ್ಟವಾಯಿತು. ಆದರೂ ಸಾಲಮಾಡಿದ ಹಣದಿಂದ ಸಾರ್ವಜನಿಕ ಕಾರ್ಯಗಳನ್ನು ನಡಸಬಾರದೆಂಬ ಒಂದು ನಿಯಮವನ್ನು ಪಾಲಿಸಿದೆನು. ಜನರು ವಾಗ್ದಾನಮಾಡಿದರೆ ಉಳಿದ ಎಲ್ಲ ವಿಷಯಗಳಲ್ಲಿಯೂ ನಂಬಬಹುದು. ಆದರೆ ಹಣದ ವಿಚಾರದಲ್ಲಿ ಮಾತ್ರ ಹಾಗಲ್ಲ. ವಾಗ್ದಾನ ಮಾಡಿದ ಹಣವನ್ನು ಜಾಗ್ರತೆಯಾಗಿ ಕೊಟ್ಟಿರುವುದು ಅಪೂರ್ವ. ನೆಟಾಲಿನ ಭಾರತೀಯರೂ ಅದರಂತೆಯೇ ನಡೆದರು. ನೇಟಾಲಿನ ಇಂಡಿಯನ್ ಕಾಂಗ್ರೆಸ್ ತನಲ್ಲಿ ಹಣವಿಲ್ಲದೆ ಯಾವ ಕೆಲಸವನ್ನೂ ಕೈಗೊಳ್ಳುತ್ತಿರಲಿಲ್ಲ. ಆದುದರಿಂದ ಅದು ಯಾವಾಗಲೂ ಸಾಲಮಾಡಿಲ್ಲ. ಜಾಗರೂಕತೆಯಿಂದ ಲೆಕ್ಕವಿಡದ ಸಂಸ್ಥೆ ಅಪಕೀರ್ತಿಗೆ ಈಡಾಗುತ್ತದೆ. ಸರಿಯಾಗಿ ಲೆಕ್ಕವನ್ನು ಇಡದಿದ್ದರೆ ಸತ್ಯಕ್ಕೆ ಸ್ವಲ್ಪವೂ ಕುಂದುಂಟಾಗದಂತೆ ನೋಡಿಕೊಳ್ಳುವುದು ಅಸಾಧ್ಯ." ಇದು ಗಾಂಧೀಜಿಯ ಅನುಭವದ ಮಾತು. ಅವರು ಇದುವರೆಗೆ ನಡಸಿರುವ ಯಾವ ಸಂಸ್ಥೆಯಲ್ಲಾಗಲಿ ಒಂದು ಕಾಸಿಗಾದರೂ ಲೆಕ್ಕ ಸಿಗುತ್ತದೆ.

ಕಾಂಗ್ರೆಸ್ಸಿನ ಚಟುವಟಿಗೆ ಹೆಚ್ಚಿತು. ಜನರು ಎಚ್ಚತ್ತರು. ಆಫ್ರಿಕದಲ್ಲಿ ಭಾರತೀಯರ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಬ್ರಿಟನ್

ಆಫ್ರಿಕ ಮತ್ತು ಭರತಖಂಡಗಳಲ್ಲಿ ಚಳುವಳಿ ನಡೆಸಲು ಸಣ್ಣ ಸಣ್ಣ ಪ್ರಕಟನೆಗಳನ್ನು ಹೊರಡಿಸಲಾಯಿತು. ಇಷ್ಟಾಗಲು ಗಾಂಧೀಜಿಯ ಶ್ರಮ ಅಷ್ಟಿಷ್ಟಲ್ಲ. ಈ ಚಳುವಳಿಯ ಫಲವಾಗಿ ದಕ್ಷಿಣ ಆಫ್ರಿಕದಲ್ಲಿ ಅನೇಕರ ಬೆಂಬಲವೂ ಭರತಖಂಡದಲ್ಲಿ ಎಲ್ಲಾ ಪಕ್ಷದವರ ಸಹಾಯ ಸಹಾನುಭೂತಿಗಳೂ ದೊರೆತವು. ಇದರಿಂದ ಆಫ್ರಿಕದ ಭಾರತೀಯರು ತಮ್ಮ ಭವಿಷ್ಯವನ್ನು ಅರಿತುಕೊಳ್ಳಲು ಶಕ್ತರಾದರು.

ಈಗ ಒಂದು ಪ್ರಸಂಗ ನಡೆಯಿತು. ಡರ್ಬನಿನಲ್ಲಿ ಪ್ರಸಿದ್ಧನಾಗಿದ್ದ ಒಬ್ಬ ಪರಂಗಿಯುವನು ಬಾಲಸುಂದರಂ ಎಂಬ ತನ್ನ ಕರಾರಿನ ಕೂಲಿಯವನನ್ನು ಮುಂದಿನ ಎರಡು ಹಲ್ಲು ಮುರಿದುಹೋಗುವಂತೆ ಹೊಡೆದನು. ಚಿಂದಿ ಬಟ್ಟೆಯುಟ್ಟಿದ್ದ ಆ ಕೂಲಿಯವನು ಬಾಯಲ್ಲಿ ರಕ್ತಸುರಿಸುತ್ತ ಗಾಂಧೀಜೀಯ ಬಳಿಗೆ ಬಂದು ದೂರು ಹೇಳಿದನು. ಗಾಂಧೀಜಿಗೆ ಅವನ ಅವಸ್ಥೆಯನ್ನು ನೋಡಿ ಎದೆ ಕರಗಿತು. ಅವನನ್ನು ಡಾಕ್ಟರೊಬ್ಬರ ಬಳಿಗೆ ಕರೆದುಕೊಂಡುಹೋಗಿ ಸರ್ಟಿಫಿಕೇಟ್ ಪಡೆದು ಮ್ಯಾಜಿಸ್ಟ್ರೇಟರ ಮುಂದೆ ಆ ಯುಜಮಾನನ ಮೇಲೆ ದಾವ ಹಾಕಿದರು. ನ್ಯಾಯಾಧೀಶರು ಆ ಯುಜಮಾನನು ತಪ್ಪಿತಸ್ಥನೆಂದೂ ಅವನು ಆ ಕೂಲಿಯವನನ್ನು ಬೇರೆ ಯುಜಮಾನನಿಗೆ ಬಿಟ್ಟುಕೊಡಲು ಒಪ್ಪಬೇಕೆಂದೂ ತೀರ್ಪಿತ್ತರು. ಗಾಂಧೀಜಿಗೆ ಆ ಯುಜಮಾನನ ಮೇಲೆ ವೈಯಕ್ತಿಕ ದ್ವೇಷವೇನೂ ಇರಲಿಲ್ಲ. ಅವರು ಅವನನ್ನು ನೋಡಿ ಮಾತಾಡಿದರು. ಅವನು ಬಾಲಸುಂದರನನ್ನು ಬಿಟ್ಟುಕೊಡಲು ಒಪ್ಪಿದನು. ತಮ್ಮ ಸ್ನೇಹಿತರೊಬ್ಬರ ಮೂಲಕ ಗಾಂಧೀಜಿ ಬಾಲಸುಂದರನನ್ನು ಮತ್ತೊಬ್ಬ ಯುಜಮಾನನಲ್ಲಿ ಬಿಟ್ಟರು. ಈ ಪ್ರಸಂಗ ಆಫ್ರಿಕದ ಕೂಲಿಕಾರರಲ್ಲೆಲ್ಲಾ ಹಬ್ಬಿ ಗಾಂಧೀಜಿ ತಮ್ಮ ಸ್ನೇಹಿತನೆಂದೂ ಬಂಧುವೆಂದೂ ರಕ್ಷಕನೆಂದೂ ಅವರು ತಿಳಿದುಕೊಂಡರು. ಅವರ ಆಫೀಸಿನಲ್ಲಿ ಯಾವಾಗಲೂ ಜನರು ಮುತ್ತಿಕೊಂಡು ತಮ್ಮ ಕಷ್ಟಸುಖಗಳನ್ನು ಅವರಿಗೆ ಹೇಳಿಕೊಳ್ಳುತ್ತಿದ್ದರು.

ಬಾಲಸುಂದರನ ಕತೆ ನಡೆದ ಸ್ವಲ್ಪ ದಿನದಲ್ಲೇ ಮತ್ತೊಂದು ವಿಷಯ ಒದಗಿತು. ಆಫ್ರಿಕದ ಬಿಳಿಯ ಜನರು ತಮ್ಮ ವ್ಯವಸಾಯಕ್ಕೆ ಅನುಕೂಲವಾಗಲೆಂದು ಇಂಡಿಯಾ ಸರ್ಕಾರದೊಡನೆ ಸಂಧಾನ ನಡೆಸಿ ಭಾರತೀಯ ಕೂಲಿಗಾರರನ್ನು ಐದು ವರ್ಷದ ಕರಾರು ಮಾಡಿಕೊಂಡು ಕರಸಿಕೊಳ್ಳುತ್ತಿದ್ದರು. ಈ ಐದು ವರ್ಷದ ಕರಾರು ಮುಗಿದ ಮೇಲೆ ಭಾರತೀಯರು ಆಫ್ರಿಕದಲ್ಲೇ ಸ್ವತಂತ್ರವಾಗಿ ಭೂಮಿಕಾಣಿಕೆಗಳನ್ನು ಗಳಿಸಬಹುದಾಗಿತ್ತು. ಅವರನ್ನು ಕರಾರಿನಮೇಲೆ ಕರೆಸಿಕೊಂಡಾಗ ಅವರಲ್ಲಿ ಅಡಗಿದ್ದ ಅಮಿತಶಕ್ತಿ ಪರಂಗಿಯವರಿಗೆ ಗೊತ್ತಾಗಿರಲಿಲ್ಲ. ತಮ್ಮ ಕೂಲಿ ಕರಾರು ಮುಗಿದಮೇಲೆ ಭಾರತೀಯರು ಸ್ವತಂತ್ರರಾಗಿ ನೆಲಸಿ ವ್ಯಾಪಾರ ಮತ್ತು ವ್ಯವಸಾಯಗಳಲ್ಲಿ ಪರಂಗಿಯವರನ್ನು ಮೀರಿಸಿದರು. ಇದರಿಂದ ಅಲ್ಲಿನ ಬಿಳಿಯ ವರ್ತಕರೂ ಜಮೀನ್‌ದಾರರೂ ದಿಗಿಲು ಬಿದ್ದರು. ಇದು ಭಾರತೀಯರ ಮೇಲಿನ ದ್ವೇಷದ ಬೀಜವನ್ನು ಬಿತ್ತಿತು. ಇನ್ನೂ ಅನೇಕ ವಿಷಯಗಳು ಈ ದ್ವೇಷದ ಬೆಳವಣಿಗೆಗೆ ಸಹಾಯ ಮಾಡಿದವು. ಇದನ್ನು ಗಾಂಧೀಜಿ ಹೇಳಲಿ: “ಭಾರತೀಯರ ಜೀವನ ರೀತಿಗೂ ಬಿಳಿಯರ ಜೀವನರೀತಿಗೂ ಇರುವ ಭೇದ, ಭಾರತೀಯರ ಸರಳತೆ, ಅಲ್ಪ ಲಾಭದಿಂದ ಇವರಿಗುಂಟಾಗುವ ತೃಪ್ತಿ, ಆರೋಗ್ಯ ಮತ್ತು ನೈರ್ಮಲ್ಯದ ವಿಷಯದಲ್ಲಿ ಇವರು ತೋರಿಸುತ್ತಿದ್ದ ಅಸಡ್ಡೆ, ತಮ್ಮ ಸುತ್ತಮುತ್ತಣ ಪ್ರದೇಶವನ್ನು ಕೊಳೆಯಿಲ್ಲದೆಯೂ ಅಂದವಾಗಿಯೂ ಇಟ್ಟುಕೊಳ್ಳುವುದರಲ್ಲಿನ ಔದಾಸೀನ್ಯ, ಮನೆ ಭದ್ರವಾಗಿ ಚೆನ್ನಾಗಿ ಇರುವಂತೆ ನೋಡಿಕೊಳ್ಳುವುದರಲ್ಲಿ ತೋರಿಸುತ್ತಿದ್ದ ಜಿಪುಣತನ, ಇದರ ಜೊತೆಗೆ ಜಾತಿಭೇದ ಇವೆಲ್ಲವೂ ಸೇರಿ ಈ ದ್ವೇಷದ ಉರಿಯನ್ನು ಹೆಚ್ಚಿಸಿದವು. ಭಾರತೀಯರ ಮತಾಧಿಕಾರವನ್ನು ಕಿತ್ತುಕೊಳ್ಳುವ ಕಾನೂನಿನ ರೂಪದಲ್ಲಿಯೂ ಕರಾರಿನ ಕೂಲಿಗಾರರ ಮೇಲೆ ತೆರಿಗೆಯನ್ನು ಹೊರಿಸುವ ಕಾನೂನಿನ ರೂಪದಲ್ಲಿಯೂ ಈ ದ್ವೇಷ ಕಾಣಿಸಿಕೊಂಡಿತು. ಭಾರತೀಯ ಕೂಲಿಗಾರರನ್ನು ಅವರ

ಕರಾರು ಮುಗಿದೊಡನೆ ಆಫ್ರಿಕದಿಂದ ಹೊರಡಿಸುವುದಕ್ಕಾಗಿ ಕೂಲಿ ಕರಾರು ಮುಗಿದಮೇಲೆ ಅಲ್ಲೇ ಉಳಿಯುವ ಭಾರತೀಯರು ವರ್ಷ ಒಂದಕ್ಕೆ ೩೭೫ ರೂಪಾಯಿ ತಲೆಗಂದಾಯವನ್ನು ಕೊಡಬೇಕೆಂಬ ಕಾನೂನು ತರಲು ಪ್ರಯತ್ನಿಸಿದರು.”

ಈ ತೆರಿಗೆ ಹಾಕುವ ಮೊದಲು ಇಂಡಿಯಾ ಸರಕಾರದ ಅನುಮತಿ ಹೊಂದಲು ದಕ್ಷಿಣ ಆಫ್ರಿಕಾ ಸರಕಾರ ತನ್ನ ಪ್ರತಿನಿಧಿಗಳನ್ನು ಭರತ ಖಂಡಕ್ಕೆ ಕಳಿಸಿಕೊಟ್ಟಿತು. ಆಗ ಲಾರ್ಡ್ ಎಲ್ಗಿನರು ವೈಸರಾಯರಾಗಿದ್ದರು. ನೇಟಾಲ್ ಕಾಂಗ್ರೆಸ್ ಈ ತೆರಿಗೆಗೆ ವಿರೋಧವಾಗಿ ಪ್ರಚಂಡ ಚಳುವಳಿ ಹೂಡಿತು. ಇಂಡಿಯಾ ಸರಕಾರ ತನ್ನ ಭಾರತೀಯ ರಕ್ಷಣೆಯ ಕರ್ತವ್ಯವನ್ನು ಮರೆತು ೩೭೫ ರೂಪಾಯಿ ತೆರಿಗೆಗಲ್ಲದಿದ್ದರೂ ೪೫ ರೂಪಾಯಿ ತೆರಿಗೆಗೆ ಒಪ್ಪಿಗೆ ಕೊಟ್ಟಿತು. ಅಷ್ಟು ಕಡಮೆಯಾದದ್ದೂ ಕಾಂಗ್ರೆಸ್ಸಿನ ಚಳುವಳಿಯಿಂದ.

ಆಫ್ರಿಕದ ಭಾರತೀಯರ ಹಿತದ ಯಾವ ಕೆಲಸಕ್ಕೂ ಗಾಂಧೀಜಿ ದುಡಿಯಬೇಕಾಗಿತ್ತು. ಹೀಗೆ ಅವರು ಜನರ ಸೇವೆಯಲ್ಲಿ ಸಂಪೂರ್ಣವಾಗಿ ಮಗ್ನರಾದರು. ಆತ್ಮಸಾಕ್ಷಾತ್ಕಾರವನ್ನು ಹೊಂದಬೇಕೆನ್ನುವ ಅವರ ಇಚ್ಛೆಯೇ ಇದಕ್ಕೆ ಕಾರಣ. ಸೇವೆಯ ಮೂಲಕವೇ ದೇವರ ಸಾನ್ನಿಧ್ಯವನ್ನು ಪಡೆಯುವುದು ಸಾಧ್ಯವೆಂದು ಅವರಿಗೆ ತೋರಿದುದರಿಂದ ಸೇವಾಧರ್ಮವನ್ನೇ ತಮ್ಮ ಧರ್ಮವಾಗಿ ಮಾಡಿಕೊಂಡರು. ಆಗ ಅವರ ದೃಷ್ಟಿಯಲ್ಲಿ ಸೇವೆಯೆಂದರೆ ಭಾರತದೇಶದ ಸೇವೆಯಾಗಿದ್ದಿತು. ಏಕೆಂದರೆ ಇದು ಅವರು ಕೇಳದೆ ತಾನಾಗಿಯೇ ಅವರ ಜೀವನದಲ್ಲಿ ಪ್ರವೇಶಿಸಿತ್ತು. ಇದು ಅವರ ಸ್ವಭಾವಕ್ಕೆ ಅನುಗುಣವಾಗಿದ್ದಿತು. ಅವರು ಕಾಥೇವಾಡದ ಪಿತೂರಿಗಳಿಂದ ದೂರವಾಗಿರಲು ಮತ್ತು ತಮ್ಮ ಜೀವನ ಸಂಪಾದಿಸಿಕೊಳ್ಳಲು ದಕ್ಷಿಣ ಆಫ್ರಿಕಕ್ಕೆ ಬಂದಿದ್ದರು. ಆದರೆ ಈ ಮೊದಲೇ ಹೇಳಿರುವಂತೆ ಈಶ್ವರನನ್ನು ಅರಸುವುದರಲ್ಲಿಯೂ ಆತ್ಮಸಾಕ್ಷಾತ್ಕಾರವನ್ನು ಸಾಧಿಸು

ವುದರಲ್ಲಿಯೂ ಅವರು ತೊಡಗಿದರು. ವಿಶ್ವಪ್ರೇಮದ ಅಮಿತ ಶಕ್ತಿ ಅವರಿಗೆ ಚೆನ್ನಾಗಿ ಗೊತ್ತಾಗುತ್ತ ಬಂದಿತು. ಈಸಾಯಿ ಮಿತ್ರರ ಸಂಬಂಧ ಅವರಲ್ಲಿ ಧರ್ಮದ ಆಸಕ್ತಿ ಕುಂದದಂತೆ ಇಟ್ಟಿರಲು ಸಹಾಯಮಾಡಿತು.

ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ಬಂದು ಮೂರು ವರ್ಷಗಳಾಗಿದ್ದವು. ಅಲ್ಲಿಯ ಜನರ ಮತ್ತು ದೇಶದ ಪರಿಚಯು ಅವರಿಗೆ ಚೆನ್ನಾಗಿ ಆಯಿತು. ಸಾರ್ವಜನಿಕ ಕೆಲಸಗಳೂ ಹೆಚ್ಚಿದವು. ಅವರ ವಕೀಲಿ ವೃತ್ತಿಯೂ ಸರಿಯಾಗಿ ನಡೆಯುತ್ತಿತ್ತು. ಅಲ್ಲಿನ ಜನರು ಅವರು ಆಫ್ರಿಕದಲ್ಲೇ ನೆಲಸಬೇಕೆಂದು ಅಪೇಕ್ಷಿಸಿದರು. ಗಾಂಧೀಜಿಯೂ ಒಪ್ಪಿದರು. ಆದರೆ ತಮ್ಮ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಬೇಕಾಗಿತ್ತು. ಜೊತೆಗೆ ಭರತಖಂಡಕ್ಕೆ ಬಂದು ಅಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ವಿಷಯದಲ್ಲಿ ಕುತೂಹಲವನ್ನು ಹೆಚ್ಚಿಸಿ ಲೋಕಾಭಿಪ್ರಾಯವನ್ನು ಪಡೆಯಬೇಕೆಂಬ ಯೋಚನೆಯೂ ಸೇರಿತು. ಇದರಿಂದ ನೇಟಾಲ್ ಕಾಂಗ್ರೆಸ್ಸಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಶಕ್ತರಾದವರನ್ನು ನೇಮಿಸಿ ೧೮೯೬ ನೆಯ ಇಸವಿಯ ಮಧ್ಯದಲ್ಲಿ ಮಾತೃಭೂಮಿಗೆ ಹಿಂದಿರುಗಿ ಕಲ್ಕತ್ತೆಯಲ್ಲಿ ಜಹಜು ಇಳಿದರು.

ಕಲ್ಕತ್ತೆಯಿಂದ ಬೊಂಬಾಯಿಗೆ ಹೋಗುತ್ತಾ ಅಲಹಾಬಾದಿನಲ್ಲಿ ಇಳಿದು ಅಲ್ಲಿಯ ಮುಖ್ಯವೃತ್ತಪತ್ರಿಕೆಗಳ ಸಂಪಾದಕರನ್ನು ನೋಡಿ, ದಕ್ಷಿಣ ಆಫ್ರಿಕದ ವಿಷಯದ ಲೇಖನಗಳ ಪ್ರಕಟಣೆಗೆ ಅವರ ಪತ್ರಿಕೆಗಳಲ್ಲಿ ಸ್ಥಳಕೊಟ್ಟು ಅವುಗಳಮೇಲೆ ತಮ್ಮ ಅಭಿಪ್ರಾಯಗಳನ್ನು ಬರೆಯುವಂತೆ, ಕೇಳಿಕೊಂಡರು. ಅದಕ್ಕೆ ಸಂಪಾದಕರೂ ಒಪ್ಪಿದರು. ಅನಂತರ ಬೊಂಬಾಯಿಗೆ ಬಂದು ಅಲ್ಲಿ ಹೆಚ್ಚುಕಾಲ ನಿಲ್ಲದೆ ರಾಜಕೋಟೆಗೆ ಪ್ರಯಾಣಮಾಡಿದರು. ರಾಜಕೋಟೆಯಲ್ಲಿ ಆಫ್ರಿಕದ ಭಾರತೀಯರ ಪರಿಸ್ಥಿತಿಯ ವಿಚಾರವಾಗಿ ಒಂದು ಸಣ್ಣಪುಸ್ತಕವನ್ನು ಬರೆದರು. ಇದರ ರಟ್ಟು ಹಸುರಾಗಿದ್ದುದರಿಂದ ಇದಕ್ಕೆ “ಹಸುರು ಪುಸ್ತಕ” ವೆಂದು ಹೆಸರಾಯಿತು. ಈ

ಪುಸ್ತಕದ ಮೇಲೆ ಅನೇಕ ಪತ್ರಿಕೆಗಳು ಟೀಕೆ ಮಾಡಿದವು. ಈ ಟೀಕೆ 'ರಾಯಿಟರ್' ವೃತ್ತಾಂತಗಳ ಮೂಲಕ ಇಂಗ್ಲೆಂಡಿಗೆ ತಲಪಿ ಅಲ್ಲಿಂದ ಆಫ್ರಿಕಕ್ಕೂ ಹೋಯಿತು.

ದಕ್ಷಿಣ ಆಫ್ರಿಕದ ಭಾರತೀಯರ ವಿಷಯದಲ್ಲಿ ಭರತ ಖಂಡದ ಸಹಾನುಭೂತಿಯನ್ನು ಗಳಿಸುವ ಸಲುವಾಗಿ ಪ್ರಚಾರಕಾರ್ಯವನ್ನು ಕೈಗೊಂಡು ಗಾಂಧೀಜಿ ಬೊಂಬಾಯಿಗೆ ಬಂದರು. ಅಲ್ಲಿ ಪ್ರಖ್ಯಾತರಾಗಿದ್ದ ಸರ್ ಫಿರೋಜ್ ಷಾ ಮೆಹತಾರವರನ್ನು ನೋಡಿದರು. ಅವರ ಸಲಹೆಯಂತೆ ಅಲ್ಲೊಂದು ದೊಡ್ಡ ಸಭೆ ಕೂಡಿತು. ಗಾಂಧೀಜಿ ಆ ಸಭೆಯ ಮುಂದೆ ಮಾತಾಡಿ ಆಫ್ರಿಕದ ಪರಿಸ್ಥಿತಿಯನ್ನು ತಿಳಿಸಿದರು. ಬೊಂಬಾಯಿಯಿಂದ ಪುಣೆಗೆ ಬಂದು ಅಲ್ಲಿ ಲೋಕಮಾನ್ಯ ತಿಲಕರು, ಗೋಖಲೆಯವರು ಮತ್ತು ಭಂಡಾರಕರರು ಮೊದಲಾದವರನ್ನು ನೋಡಿದರು. ಅಲ್ಲಿಯೂ ಸಭೆ ಕೂಡಿ ಭಾಷಣಗಳಾದವು. ಅಲ್ಲಿಂದ ಮದರಾಸಿಗೆ ಬಂದರು. ಅಲ್ಲಾಗಲೇ ಬಾಲಸುಂದರನ ಮೊಕದ್ದಮೆಯ ವಿಷಯ ಜನರಿಗೆ ತಿಳಿದು ಗಾಂಧೀಜಿಯ ಪರಿಚಯವಾಗಿತ್ತು. ಮದ್ರಾಸಿನ ಜನರು ಅವರನ್ನು ಉತ್ಸಾಹದಿಂದಲೂ ಪ್ರೀತಿಯಿಂದಲೂ ಬರಮಾಡಿಕೊಂಡರು. ಅಲ್ಲಿ ಸಾಕಾದಷ್ಟು ಚಳುವಳಿ ನಡೆದಮೇಲೆ ಕಲ್ಕತ್ತೆಗೆ ಪ್ರಯಾಣಬೆಳಸಿದರು. ಹಲವು ಪ್ರಮುಖರನ್ನು ನೋಡಿ ಮಾತಾಡಿದರು. ಅಲ್ಲೊಂದು ಸಭೆ ನಡೆಯುವ ಏರ್ಪಾಡಾಗುತ್ತಿತ್ತು. ಅಷ್ಟರಲ್ಲಿ ಕೂಡಲೇ ಹೊರಟುಬರಬೇಕೆಂದು ಆಫ್ರಿಕದಿಂದ ತಂತಿ ಬಂತು. ಸರಿ, ಕಲ್ಕತ್ತೆಯಿಂದ ರಾಜಕೋಟೆಗೆ ಬಂದು ಭರತಖಂಡದಲ್ಲಿ ಆಗಬೇಕಾಗಿದ್ದ ಕೆಲಸಗಳನ್ನು ಹಾಗೆಹಾಗೆಯೇ ಬಿಟ್ಟು ಮೊದಲು ಹೊರಟ ಜಹಜಿನಲ್ಲಿ ತಮ್ಮ ಹೆಂಡತಿ ಮಕ್ಕಳೊಡನೆ ಆಫ್ರಿಕಕ್ಕೆ ಹೊಟರು.

ಗಾಂಧೀಜಿ ಹೆಂಡತಿಮಕ್ಕಳೊಡನೆ ಸಮುದ್ರಯಾನವನ್ನು ಮಾಡಿದುದು ಇದೇ ಮೊದಲನೆಯ ಸಲ. ಹಡಗು ಇನ್ನೆಲ್ಲೂ ನಿಲ್ಲದೆ ನೇರವಾಗಿ ನೇಟಾಲಿಗೆ ಹೋಗುವುದಿದ್ದಿತು. ನೇಟಾಲು ತಲಪಲು ಹದಿ

ನ್ನೈದು ದಿನಗಳು ಪ್ರಯಾಣಮಾಡಬೇಕಾಗಿತ್ತು. ಇನ್ನು ಮೂರು ನಾಲ್ಕು ದಿವಸದ ಪ್ರಯಾಣ ಉಳಿದಿರುವಾಗ ಸಮುದ್ರದ ಮೇಲೆ ಪ್ರಚಂಡವಾದ ಬಿರುಗಾಳಿಯೆದ್ದು ಬಹುಕಾಲ ಸಮುದ್ರವನ್ನು ಅಲ್ಲೋಲ ಕಲ್ಲೋಲ ಮಾಡಿತು. ಪ್ರಯಾಣಿಕರೆಲ್ಲ ಇನ್ನು ಉಳಿಗಾಲವಿಲ್ಲ ಎಂದು ಭಯಭ್ರಾಂತ ರಾದರು. “ಹಡಗಿನಲ್ಲಿ ಆಗಿನ ದೃಶ್ಯ ಗಂಭೀರವಾಗಿದ್ದಿತು. ಕಷ್ಟಕಾಲದಲ್ಲಿ ಹಡಗಿನಲ್ಲಿದ್ದ ಪ್ರಯಾಣಿಕರೆಲ್ಲ ಒಂದಾದರು. ಮುಸಲ್ಮಾನರು ಹಿಂದು ಗಳು ಈಸಾಯಿಗಳು ಎಲ್ಲರೂ ತಮ್ಮಲ್ಲಿನ ಭೇದ ಭಾವನೆಗಳನ್ನು ಮರೆತು ಒಬ್ಬನೇ ಆದ ಭಗವಂತನ ಸ್ಮರಣೆಗೆತೊಡಗಿದರು. ಹಡಗಿನ ಮುಖ್ಯಾಧಿ ಕಾರಿಯೂ ಆ ಪ್ರಾರ್ಥನೆಯಲ್ಲಿ ಸೇರಿದರು. ಪ್ರತಿಕ್ಷಣದಲ್ಲಿಯೂ ಆಗುತ್ತಿದ್ದ ಸಪ್ಪಳವನ್ನು ಕೇಳಿದರೆ ಹಡಗು ಒಡೆದು ಚೂರುಚೂರಾಗಬಹುದೆನ್ನಿ ಸುತ್ತಿದ್ದಿತು. ಯಾವಾಗಲಾದರೂ ಮಗುಚಿಕೊಳ್ಳಬಹುದೆನ್ನುವ ಮಟ್ಟಿಗೆ ಅದು ಅಲ್ಲಾಡುತ್ತಿತ್ತು. “ದೇವರು ಮಾಡಿದಂತಾಗಲಿ” ಎಂಬ ಉದ್ಗಾರ ಎಲ್ಲರ ಬಾಯಿಯಲ್ಲಿಯೂ ಹೊರಡುತ್ತಿತ್ತು.” ಈ ಚಂಡ ಮಾರುತ, ಗಾಂಧೀಜಿ ಇತರ ಪ್ರಯಾಣಿಕರೊಡನೆ ಆಪ್ತಸಂಬಂಧವನ್ನು ಬೆಳಸುವಂತೆ ಮಾಡಿತು. ಅವರು ಬಿರುಗಾಳಿಯಿಂದ ದಿಗಿಲು ಬೀಳಲಿಲ್ಲ. ಪ್ರಯಾಣಿಕರ ಮಧ್ಯೆ ನಿರ್ಭಯವಾಗಿ ಓಡಾಡುತ್ತ ಅವರನ್ನು ಸಮಾಧಾನ ಪಡಿಸುತ್ತಲೂ ಅವರಿಗೆ ಧೈರ್ಯ ಹೇಳುತ್ತಲೂ ಇದ್ದರು. ಅಂತು ೧೮೯೬ನೆಯ ವರ್ಷದ ಡಿಸೆಂಬರು ೧೯ನೆಯ ದಿನ ಹಡಗು ಸುರಕ್ಷಿತ ವಾಗಿ ಡರ್ಬನ್ ಬಂದರನ್ನು ಸೇರಿತು.

“ಹೀಗೆ ಒಂದು ದಿನ ಕಳೆಯಲು ಮೋಡಗಳು ಚೆದರಿದವು. ಸೂರ್ಯದೇವನು ದರ್ಶನವಿತ್ತನು. ಹಡಗಿನ ಮುಖ್ಯಾಧಿಕಾರಿ ಬಿರುಗಾಳಿ ನಿಂತಿತೆಂದು ತಿಳಿಸಿದರು. ಜನರು ಗೆಲವು ಹೊಂದಿದರು. ಕೂಡಲೇ ಅವರ ಬಾಯಿಯಿಂದ ದೇವರ ಪ್ರಾರ್ಥನೆಯೂ ಮಾಯವಾಯಿತು. ಎಲ್ಲರೂ ಮೊದಲಿನಂತೆ ತಮ್ಮ ತಮ್ಮ ವಿನೋದಗಳಲ್ಲಿ ತೊಡಗಿದರು.


ಸಾವಿನ ಭಯ ಇಲ್ಲವಾಯಿತು ; ಎಲ್ಲೆಲ್ಲೂ ದೈವಭಕ್ತಿ ತುಂಬಿದ್ದ ವಾತಾವರಣ ಮಾಯೆಯ ಮುಸುಕಿನಿಂದ ಮುಚ್ಚಿತು. ಆ ಆಪತ್ತಿನ ಸಮಯದಲ್ಲಿ ದೇವರ ಮಹಿಮೆಯಲ್ಲಿ ಕಾಣಬರುತ್ತಿದ್ದ ಶ್ರದ್ಧೆಯೂ ಭಕ್ತಿಯೂ ಈಗ ಮರೆಯಾದವು.” ಇದು ಕಂಡು ಗಾಂಧೀಜಿಗೆ ವ್ಯಥೆಯಾಯಿತು.

ಬೊಂಬಾಯಿ ರೇವನ್ನು ಬಿಟ್ಟಾಗ ಅಲ್ಲಿ ಪ್ಲೇಗಿದ್ದುದರಿಂದ ಆ ಸೋಂಕುಜಾಡ್ಯದ ಅನುಮಾನದ ಮೇಲೆ ಪ್ರಯಾಣಿಕರನ್ನು ಇಳಿಯುಗೊಡದೆ ರೇವಿನಿಂದ ಹೊರಗೆ ಹಡಗನ್ನು ಐದು ದಿವಸವಿಡಬೇಕೆಂದು ಡಾಕ್ಟರು ತಿಳಿಸಿದರು. ಇದೊಂದು ನೆಪ ಮಾತ್ರ. ಪ್ರಯಾಣಿಕರನ್ನು ಇಳಿಯ ಗೊಡಿಸದಿರಲು ನಿಜವಾದ ಕಾರಣ, ಡರ್ಬನಿನ ನಿವಾಸಿಗಳು ಆ ಹಡಗಿನಲ್ಲಿದ್ದ ಭಾರತೀಯರನ್ನು ಹಿಂದಕ್ಕೆ ಕಳಿಸಬೇಕೆಂದು ಚಳುವಳಿ ಹೂಡಿದ್ದುದು. ಹಡಗಿನ ಮಾಲಿಕರೂ ಅಲ್ಲಿನ ಭಾರತೀಯರೂ ಭಾರತದ ಹಿತೈಷಿಗಳಾದ ಹಲವರು ಆಂಗ್ಲೇಯರೂ ಹಡಗನ್ನು ಬಂದರಿನೊಳಕ್ಕೆ ಬರಮಾಡಿಕೊಂಡು ಪ್ರಯಾಣಿಕರನ್ನು ಇಳಿಸಿಕೊಳ್ಳಲೇಬೇಕೆಂದು ಹಟ ತೊಟ್ಟರು.

ಈ ಪ್ರಕಾರ ಡರ್ಬನಿನಲ್ಲಿ ಅಸಮ ಬಲವುಳ್ಳ ಎರಡು ಪಕ್ಷಗಳಿಗೆ ದ್ವಂದ್ವಯುದ್ಧ ಪ್ರಾರಂಭವಾಯಿತು. ಬಡಪಾಯಿಗಳಾದ ಭಾರತೀಯರು, ಅವರಿಗೆ ನೆರವಾಗಿ ಅವರ ಆಂಗ್ಲಮಿತ್ರರು ಹಲವರು ಒಂದು ಕಡೆ, ಧನಬಲ ಬಾಹುಬಲ ವಿದ್ಯಾಬಲ ಸಂಖ್ಯಾಬಲ ಸಂಪನ್ನರಾದ ಯೂರೋಪಿಯನರು ಮತ್ತೊಂದು ಕಡೆ. ಈ ಬಲಾಢ್ಯಪಕ್ಷಕ್ಕೆ ಸರಕಾರದ ಸಹಾಯ ದೊರಕಿತ್ತು. ಈ ಹೋರಾಟಕ್ಕೆಲ್ಲ ಕಾರಣವಾದ ವ್ಯಕ್ತಿ ಗಾಂಧೀಜಿಯಾಗಿದ್ದರು. ಅವರ ಮೇಲೆ ಆಫ್ರಿಕದ ನಿವಾಸಿಗಳು ಎರಡು ಆರೋಪಣೆಗಳನ್ನು ಹೊರಿಸಿದ್ದರು. ಒಂದು, ಅವರು ಭರತಖಂಡದಲ್ಲಿದ್ದಾಗ ನೇಟಾಲಿನ ನಿವಾಸಿಗಳಾದ ಐರೋಪ್ಯರನ್ನು ತೆಗಳಿದರೆಂದು. ಅವರು ನೇಟಾಲಿನಲ್ಲಿ ಭಾರತೀಯರನ್ನು ತುಂಬಲು ಎರಡು ಹಡಗು ತುಂಬ ಜನರನ್ನು ಕರೆದು ತಂದಿರುವರೆಂಬುದು

ಇನ್ನೊಂದು. ಆದರೆ ಈ ಆರೋಪಣೆಗಳು ಅನ್ಯಾಯವಾಗಿದ್ದವು. ಗಾಂಧಿಜೀ ನಿರ್ದೋಷಿಯಾಗಿದ್ದರು. ಆ ಹಡಗಿನಲ್ಲಿದ್ದ ಜನರಲ್ಲಿ ಯಾರನ್ನೂ ಆಫ್ರಿಕಕ್ಕೆ ಬರಬೇಕೆಂದು ಅವರು ಪ್ರೇರೇಸಿರಲಿಲ್ಲ. ನೇಟಾಲಿನ ಐರೋಪ್ಯರ ವಿಷಯವಾಗಿ ಅವರು ಅಲ್ಲಿದ್ದಾಗ ಹೇಳದೆ ಇದ್ದುದೇನನ್ನೂ ಭರತಖಂಡದಲ್ಲಿ ಹೇಳಿರಲಿಲ್ಲ. ಅಲ್ಲದೆ ಅವರು ಸತ್ಯವನ್ನೇ ಹೇಳಿದ್ದರು.

ಪ್ರಾಣ ಉಳಿಸಿಕೊಳ್ಳಬೇಕೆಂದು ಆಸೆಯಿದ್ದರೆ ತಾವು ಹೇಳಿದಂತೆ ಕೇಳಬೇಕೆಂದು ಡರ್ಬನಿನ ಐರೋಪ್ಯರು ಗಾಂಧೀಜಿಗೂ ಅವರ ಜೊತೆಯ ಪ್ರಯಾಣಿಕರಿಗೂ ಕಟ್ಟಕಡೆಯ ಎಚ್ಚರಿಕೆ ಕೊಟ್ಟರು. ತಮಗೆ ಆ ಬಂದರಿನಲ್ಲಿ ಇಳಿಯುವುದಕ್ಕೆ ಅಧಿಕಾರವಿರುವುದರಿಂದ ಎಷ್ಟೇ ಕಷ್ಟ ಬಂದರೂ ನೇಟಾಲನ್ನು ಪ್ರವೇಶಿಸಲು ದೃಢಮನಸ್ಸುಮಾಡಿರುವುದಾಗಿ ಗಾಂಧೀಜಿ ಪ್ರಯಾಣಿಕರ ಪರ ಉತ್ತರವಿತ್ತರು. ಕಡೆಗೆ ನಿರ್ಬಂಧಿಸಿದ್ದ ಐದು ದಿನಗಳು ಕಳೆಯಲು ಹಡಗು ರೇವಿನೊಳಕ್ಕೆ ಹೋಗಲು ಮತ್ತು ಪ್ರಯಾಣಿಕರು ಭೂಮಿಗೆ ಇಳಿಯಲು ಅಪ್ಪಣೆ ಬಂತು. ಹಡಗು ಬಂದರಿನೊಳಕ್ಕೆ ಬಂತು. ಪ್ರಯಾಣಿಕರು ಇಳಿಯತೊಡಗಿದರು. ಗಾಂಧೀಜಿಯ ಹೆಂಡತಿಮಕ್ಕಳನ್ನು ಸುರಕ್ಷಿತವಾಗಿ ರುಸ್ತುಂಜಿಯವರ ಮನೆಗೆ ಕಳಿಸಿದುದಾಯಿತು. ಗಾಂಧೀಜಿ ಅಬ್ದುಲ್ಲಾ ಕಂಪನಿಯ ಲಾಯರಾದ ಲಾಟನರೊಡನೆ ಹಡಗು ಇಳಿದರು. ಒಡನೆಯೇ ಕೆಲವು ಹುಡುಗರು ಅವರ ಗುರುತು ಹಿಡಿದು 'ಗಾಂಧಿ! ಗಾಂಧಿ!' ಎಂದು ಕೂಗಿದರು. ಗಾಂಧೀಜಿ ಮುಂದೆಹೋದಂತೆ ಜನರು ಸೇರತೊಡಗಿದರು. ಗುಂಪು ಹೆಚ್ಚಾಗುತ್ತ ಬಂದು ಕಡೆಗೆ ಮುಂದೆ ಹೆಜ್ಜೆಯಿಡುವುದೇ ಅಸಾಧ್ಯವಾಯಿತು. ಜನರು ಲಾಟನರನ್ನು ಹಿಡಿದೆಳೆದು ಗಾಂಧೀಜಿಯಿಂದ ದೂರಮಾಡಿದರು. ಅನಂತರ ಗಾಂಧೀಜಿಯ ಮೇಲೆ ಕಲ್ಲುಗಳನ್ನೂ, ಇಟ್ಟಿಗೆಯ ಚೂರುಗಳನ್ನೂ, ಕೊಳೆತ ಮೊಟ್ಟೆಗಳನ್ನೂ ಎಸೆದರು. ಅವರ ರುಮಾಲನ್ನು ಕಿತ್ತುಕೊಂಡರು. ಬೇಕುಬೇಕಾದವರೆಲ್ಲ ಅವರನ್ನು ಹೊಡೆದು ಗುದ್ದಿದರು. ಗಾಂಧೀಜಿ



ಸ್ವಯಂಸೇವಕ



ಗುಜರಾತಿ ಉಡುಪಿನಲ್ಲಿ

ಈ ಏಟನ್ನು ಸಹಿಸಲಾರದೆ ಸಾಕಾಗಿ ಒಂದು ಮನೆಯ ಮುಂದಿನ ಕೈಪಿಡಿಯನ್ನು ಹಿಡಿದು ಉಸಿರು ಹೊಯ್ದುಕೊಳ್ಳಲು ನಿಂತುಕೊಂಡರು. ಆದರೆ ಜನರ ನುಗ್ಗು ಇನ್ನೂ ಹೆಚ್ಚಾಯಿತು. ಹೊಡೆತಗಳು ತಪ್ಪಲಿಲ್ಲ. ಜನರು ಅವರನ್ನು ಅದುಮಿ ಹಿಸುಕಿದರು. ಗಾಂಧೀಜಿಗೆ ಪರಿಚಯವಿದ್ದ ಪೋಲೀಸ್ ಮೇಲ್ವಿಚಾರಕರಾದ ಅಲೆಕ್ಸಾಂಡರರ ಮಡದಿ ಅಲ್ಲಿಯೇ ಹೋಗುತ್ತಿದ್ದು ಗಾಂಧೀಜಿಯ ಪಾಡನ್ನು ನೋಡಿ ತಮ್ಮ ಕೊಡೆಯನ್ನು ಬಿಚ್ಚಿ ಹಿಡಿದು ಅವರ ನೆರವಿಗೆ ಬಂದು ಜನರಿಗೂ ಅವರಿಗೂ ಮಧ್ಯೆ ನಿಂತರು. ಜನರು ಆ ಮಹಿಳೆಗೆ ನೋವಾಗದಂತೆ ಗಾಂಧೀಜಿಯನ್ನು ಹಿಂಸಿಸಲಾಗಲಿಲ್ಲ; ತಮ್ಮ ರೋಷವನ್ನು ನುಂಗುತ್ತ ಹಿಂದೆ ಸರಿಯ ಬೇಕಾಯಿತು. ಅಷ್ಟರಲ್ಲಿ ಗಲಭೆಯ ವರ್ತಮಾನ ತಿಳಿದ ಪೋಲೀಸು ದಳವೊಂದು ಗಾಂಧೀಜಿಯ ಸಹಾಯಕ್ಕೆ ಬಂದಿತು. ಗಾಂಧೀಜಿ ಆ ದಳದ ಆಶ್ರಯದಲ್ಲಿ ಪೋಲೀಸ್ ಠಾಣೆಗೆ ಹೋದರು. ಅಲ್ಲಿಂದ ರುಸ್ತುಂಜಿಯವರ ಮನೆಸೇರಿದರು. ಜನರು ಆ ಮನೆಯನ್ನು ಸುತ್ತುಗಟ್ಟಿದರು. ರಾತ್ರಿ ಯಾಗುತ್ತ ಬಂದರೂ ಅವರು ಚೆದರಲಿಲ್ಲ. "ನಮಗೆ ಗಾಂಧಿ ಬೇಕು" ಎಂದು ದೊಂಬಿ ಮಾಡತೊಡಗಿದರು. ಪೋಲೀಸು ಅಧಿಕಾರಿಗಳು ತಮಾಷೆ ಮಾಡುತ್ತ ಜನರನ್ನು ಹತೋಟಿಯಲ್ಲಿಡಲು ಸಾಹಸಪಡುತ್ತಿದ್ದರು. ಆದರೆ ಅಷ್ಟರಿಂದಲೇ ದೊಂಬಿ ನಿಲ್ಲುವಂತಿರಲಿಲ್ಲವಾಗಿ ಆ ಅಧಿಕಾರಿಗಳು ಗಾಂಧೀಜಿ ಯನ್ನು ಕಂಡು, "ನಿಮ್ಮ ಮಿತ್ರರನ್ನೂ ಅವರ ಸ್ವತ್ತನ್ನೂ ನಿಮ್ಮ ಕುಟುಂಬದವರನ್ನೂ ಉಳಿಸಬೇಕೆಂದಿದ್ದರೆ ನೀವು ವೇಷ ಮರಸಿಕೊಂಡು ಈ ಮನೆಯಿಂದ ತಪ್ಪಿಸಿಕೊಂಡು ಹೋಗಬೇಕು," ಎಂದು ಹೇಳಿದರು. ಗಾಂಧೀಜಿ ಭಾರತೀಯ ಪೋಲೀಸಿನವನ ವೇಷಹಾಕಿಕೊಂಡು ಸಂದಿಬಿದ್ದು ತಲೆಮರಸಿಕೊಂಡರು. ಸೇರಬೇಕಾಗಿದ್ದ ಸ್ಥಳವನ್ನು ಅವರು ಸುರಕ್ಷಿತ ವಾಗಿ ಸೇರಿದ ಸುದ್ದಿ ಬಂದ ಮೇಲೆ ಪೋಲೀಸು ಅಧಿಕಾರಿ ಅವರು ತಪ್ಪಿಸಿ ಕೊಂಡು ಹೋದ ವಿಷಯವನ್ನು ಜನರಿಗೆ ತಿಳಿಸಿದರು. ಆ ವಿಷಯ

ನಿಜವೆಂದು ಗೊತ್ತಾದ ಮೇಲೆ ಜನರು ರೋಷದಿಂದಲೂ ಆಶ್ಚರ್ಯದಿಂದಲೂ ಚೆದರಿದರು.

ಸರಕಾರದವರು ಗಾಂಧೀಜಿಯನ್ನು ಕರಸಿ ಅವರ ಮೇಲೆ ಅತ್ಯಾಚಾರ ನಡಸಿದವರ ಮೇಲೆ ಕಟ್ಟಳೆ ನಡಸಬೇಕೆಂದು ಹೇಳಿದರು. "ನನಗೆ ಯಾರನ್ನೂ ಶಿಕ್ಷೆಗೆ ಗುರಿಮಾಡಬೇಕೆಂಬ ಇಚ್ಛೆಯಿಲ್ಲ. ಸತ್ಯ ಗೊತ್ತಾದ ಮೇಲೆ ತಪ್ಪುಮಾಡಿದವರು ತಮ್ಮ ನಡತೆಗಾಗಿ ವಿಷಾದಪಡುವರೆಂಬುದು ನನಗೆ ಗೊತ್ತು" ಎಂದರು ಗಾಂಧೀಜಿ.

ತನ್ನನ್ನು ಹಿಂಸಿಸಿದವರ ಮೇಲೆ ಕಟ್ಟಳೆ ನಡಸುವುದಕ್ಕೆ ಗಾಂಧೀಜಿ ಒಪ್ಪದಿದ್ದುದರಿಂದ ಒಳ್ಳೆಯ ಪರಿಣಾಮ ಉಂಟಾಯಿತು. ಡರ್ಬನಿನ ಬಿಳಿಯ ಜನರು ತಮ್ಮ ದೊಂಬಿಯ ನಡತೆಗಾಗಿ ಹೇಸಿದರು. ವೃತ್ತಪತ್ರಿಕೆಗಳು ದೊಂಬಿಯ ಜನರನ್ನು ಖಂಡಿಸಿ ಗಾಂಧೀಜಿಯನ್ನು ಹೊಗಳಿದುವು. ಇದರಿಂದ ಅವರ ಕಾರ್ಯಗಳಿಗೆ ಅನುಕೂಲವಾಯಿತು. ಅವರ ವಕೀಲಿ ಕೆಲಸವೂ ಅಭಿವೃದ್ಧಿಹೊಂದಿತು. ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಗೌರವ ಹೆಚ್ಚಿತು.

ಆಫ್ರಿಕದಲ್ಲಿ ಗಾಂಧೀಜಿಯ ವಕೀಲಿವೃತ್ತಿ ಚೆನ್ನಾಗಿ ನಡೆಯಲು ಪ್ರಾರಂಭವಾಯಿತು. ಆದರೆ ಅಷ್ಟರಿಂದ ಮಾತ್ರ ಅವರಿಗೆ ಸಮಾಧಾನವಾಗಲಿಲ್ಲ. ತಮ್ಮ ಜೀವನ ಇನ್ನೂ ಸರಳವಾಗಬೇಕು, ಸುತ್ತಮುತ್ತಲಿನ ಜನರಿಗೆ ಏನಾದರೂ ಸೇವಾಕಾರ್ಯವನ್ನು ಮಾಡಬೇಕು. ಎಂಬ ವಿಚಾರ ಅವರ ಮನಸ್ಸಿನಲ್ಲಿ ಏಳುತ್ತಲೇ ಇತ್ತು. ಸೇವೆ ಅವರಿಗೆ ಆಜನ್ಮವಾಗಿ ಬಂದುದಾಗಿತ್ತು. "ಸೇವೆಯನ್ನು ಪ್ರೀತಿಯಿಂದ ಕೈಗೊಳ್ಳಬೇಕು. ಏಕೆಂದರೆ ಅದನ್ನು ಮಾಡುವುದರಲ್ಲಿ ಸಂತೋಷವಿಲ್ಲದಿದ್ದರೆ ಆ ಕೆಲಸ ನಡೆಯುವುದಿಲ್ಲ. ಆಡಂಬರಕ್ಕಾಗಲಿ ಜನರ ಹೆದರಿಕೆಗಾಗಲಿ ಸೇವಾಕಾರ್ಯವನ್ನು ಕೈಗೊಂಡರೆ ಮನುಷ್ಯರ ಉತ್ಸಾಹ ಕುಗ್ಗುವುದಲ್ಲದೆ ಅವನ ಹೃದಯ ಸಂಕುಚಿತವಾಗುತ್ತದೆ. ಆನಂದವಿಲ್ಲದೆ ಮಾಡಿದ

ಸೇವೆಯಿಂದ ಸೇವೆ ಮಾಡುವವನಿಗಾಗಲಿ ಮಾಡಿಸಿಕೊಂಡವನಿಗಾಗಲಿ ಲಾಭ ಉಂಟಾಗುವುದಿಲ್ಲ. ಆದರೆ ಮನಸ್ಸಿಟ್ಟು ಸಂತೋಷದಿಂದ ಮಾಡಿದ ಸೇವೆಯ ಮುಂದೆ ಐಶ್ವರ್ಯ, ಆದಾಯ ಅಥವಾ ಇನ್ನಾವ ಪ್ರತಿಫಲವಾಗಲಿ ತುಚ್ಛವಾಗಿ ಕಾಣುತ್ತದೆ.” ಈ ತತ್ವದಂತೆ ಸೇವಾಕಾರ್ಯದಲ್ಲಿ ಆಸಕ್ತರಾಗಿ ಡಾ|| ಭೂತರ ಅಧೀನದಲ್ಲೊಂದು ಸಣ್ಣ ವೈದ್ಯಶಾಲೆಯನ್ನು ತೆರೆದು ಬಂದ ರೋಗಿಗಳಿಗೆ ಔಷಧಿಯನ್ನು ಮಾಡಿಕೊಡುವ ಕೆಲಸವನ್ನು ಗಾಂಧಿಯವರೇ ಕೈಗೊಂಡರು.

ಇದರ ಜೊತೆಗೆ ಬ್ರಹ್ಮಚರ್ಯವನ್ನು ಆಚರಿಸಬೇಕೆಂಬ ಆಲೋಚನೆ ಅವರಲ್ಲಿ ಮೂಡಿತು. ಮದುವೆಯಾದಂದಿನಿಂದಲೂ ಏಕಪತ್ನೀವ್ರತ ಅವರ ಹೃದಯದಲ್ಲಿ ನೆಲಸಿದ್ದಿತು. ಕೈಹಿಡಿದ ಹೆಂಡತಿಗೆ ದ್ರೋಹವೆಣಿಸದಿರುವುದು ಸತ್ಯವ್ರತದ ಒಂದು ಅಂಗವೆಂದು ಅವರು ತಿಳಿದಿದ್ದರು. ಈಗ ತನ್ನ ಹೆಂಡತಿಯೊಡನೆ ಕೂಡ ಬ್ರಹ್ಮಚರ್ಯಪಾಲನೆ ಮಾಡಬೇಕೆಂದು ಯೋಚಿಸಿದರು. ಕವಿ ರಾಯಚಂದಭಾಯಿಯವರ ಪ್ರಭಾವ ಈ ಯೋಚನೆಗೆ ಸಹಾಯಮಾಡಿತು. ಮಕ್ಕಳನ್ನು ಪಡೆಯಬೇಕೆಂಬ ಇಚ್ಛೆಯಿದ್ದರೆ ಮಾತ್ರ ಹೆಂಡತಿಯೊಡನೆ ಸೇರುವ ಅಭಿಲಾಷೆಯಿರಬೇಕು ಎಂಬುದನ್ನು ತಿಳಿದರು. ಗಾಂಧಿಯವರಿಗೆ ಇನ್ನು ಮಕ್ಕಳಾಗಬೇಕೆಂಬ ಬಯಕೆ ಇರಲಿಲ್ಲ. ವಿಷಯಾಸಕ್ತಿಗೆ ಅಧೀನರಾಗಿರುವ ವರೆಗೆ ಹೆಂಡತಿಯಲ್ಲಿಟ್ಟಿರುವ ಪ್ರೇಮ ನೈಜವಾದುದಲ್ಲ ಎಂಬುದನ್ನು ಅವರು ಮನಗಂಡರು. ಸಂಯಮದಿಂದಿರಲು ಮನಸ್ಸುಮಾಡಿದರು; ಬಂದ ಅಡಚಣೆಗಳನ್ನು ದಾಟಿ ಮನಸ್ಸಿನ ಚಂಚಲತೆಯನ್ನು ತಡೆದು ಬ್ರಹ್ಮಚರ್ಯ ಸಾಧಕರಾದರು. ಮನಸ್ಸಿನಲ್ಲಿ ಮಾತಿನಲ್ಲಿ ಕೆಲಸದಲ್ಲಿ ಎಲ್ಲಾ ಇಂದ್ರಿಯಗಳನ್ನು ಅಂಕೆಯಲ್ಲಿಡುವ ಶಕ್ತಿಯನ್ನು ಸಾಧಿಸಿ ಪಡೆದರು. ಇದರಿಂದ ಗಾಂಧೀಜಿ ಭೋಗಜೀವನವನ್ನು ತೊರೆದು ಸರಳಜೀವಿಯಾದರು. ತಮ್ಮ ಬಟ್ಟೆಗಳನ್ನು ತಾವೆ ಒಗೆದುಕೊಳ್ಳತೊಡಗಿ ಅಗಸನ

ಆಶ್ರಯದಿಂದ ಬಿಡುಗಡೆಹೊಂದಿದರು. ತಾವೇ ಮುಖಕ್ಷೌರವನ್ನು ಮಾಡಿಕೊಳ್ಳುತ್ತಿದ್ದುದಲ್ಲದೆ ತಲೆಕೂದಲನ್ನೂ ಕತ್ತರಿಸಿಕೊಳ್ಳಲು ತೊಡಗಿದರು. ಪ್ರಾರಂಭದಲ್ಲಿ ಈ ಕೆಲಸಗಳು ನಯವಾಗಿ ಆಗದೆ ಹಲವರು ಹಾಸ್ಯಮಾಡಿದರು. ಆದರೆ ಅದೊಂದಕ್ಕೂ ಈ ಸಾಧಕ ಜಗ್ಗಲಿಲ್ಲ. ಸಾಧನೆಯಿಂದ ಸ್ವಾವಲಂಬನೆಯನ್ನು ಸಂಪೂರ್ಣ ಪಡೆದರು. ಇದರಿಂದ ಅವರ ಜೀವನ ಮೇಲ್ಮೆ ಪಡೆಯಿತು.

ಇಷ್ಟರಲ್ಲಿ ಆಫ್ರಿಕದಲ್ಲಿ ಬೋಅರ್ ಯುದ್ಧ ತೊಡಗಿತು. ವಲಸೆ ಹೋಗಿ ಅಲ್ಲಿ ನೆಲಸಿದ ಹಾಲೆಂಡ್ ದೇಶದ ಜನರಿಗೆ ಬೋಅರ್ ಎಂದು ಹೆಸರು. ಅವರಿಗೂ ಆಂಗ್ಲೇಯರಿಗೂ ಆದ ಯುದ್ಧಕ್ಕೆ ಬೋಅರ್ ಯುದ್ಧವೆಂದು ಹೆಸರು. ಗಾಂಧೀಜಿ ಸಾಧ್ಯವಾದಷ್ಟು ಹೆಚ್ಚು ಮಿತ್ರರನ್ನು ಸೇರಿಸಿ ಯುದ್ಧದಲ್ಲಿ ಗಾಯಹೊಂದಿದವರಿಗೆ ಸೇವೆ ಮಾಡುವದಕ್ಕಾಗಿ ಒಂದು ದಳವನ್ನು ಏರ್ಪಡಿಸಿದರು. ಈ ದಳದ ಸೇವೆಯನ್ನು ಸರಕಾರದವರು ಅಂಗೀಕರಿಸಿದರು. ಭಾರತೀಯರ ಸೇವೆಯನ್ನು ಎಲ್ಲರೂ ಬಹುವಾಗಿ ಹೊಗಳಿದರು. ವೃತ್ತಪತ್ರಿಕೆಗಳಂತೂ ಮನಸಾರ ಪ್ರಶಂಸೆ ಮಾಡಿದವು.

ಸಮಾಜದಲ್ಲಿ ಹಾನಿತರುವ ಮತ್ತು ಉಪಯೋಗವಿಲ್ಲದ ನೀತಿಯನ್ನಾಗಲಿ ರೂಢಿಯನ್ನಾಗಲಿ ಗಾಂಧೀಜಿ ಸಹಿಸರು. ಜನರ ದೋಷಗಳನ್ನು ಮುಚ್ಚಿಡುವುದು ಅವರ ಸಹನೆಗೆ ಮೀರಿದ್ದು. ಜನರು ಮೊದಲು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳದೆ ಹೆಚ್ಚು ಅಧಿಕಾರಗಳಿಗೆ ಹೊಡೆದಾಡುವುದು ಅವರಿಗೆ ಸರಿದೋರುವುದಿಲ್ಲ. “ಭಾರತೀಯರು ಸೋಮಾರಿಗಳು; ಅವರು ತಮ್ಮ ಮನೆ ಬಾಗಿಲುಗಳನ್ನು ಸ್ವಚ್ಛವಾಗಿಟ್ಟುಕೊಂಡಿರುವುದಿಲ್ಲ; ಕೊಳಕು ಜನ” ಎಂಬ ದೂರು ಆಫ್ರಿಕದಲ್ಲಿ ಆಗಾಗ ಕೇಳಬರುತ್ತಿದ್ದಿತು. ಗಾಂಧೀಜಿ ನೇಟಾಲಿನಲ್ಲಿ ನೆಲಸಿದಂದಿನಿಂದ ದಕ್ಷಿಣ ಆಫ್ರಿಕದಲ್ಲಿ ವಾಸಿಸುತ್ತಿದ್ದ ಭಾರತೀಯರಲ್ಲಿದ್ದ ಈ ಕಳಂಕವನ್ನು ನಿವಾರಿಸುವ ಕೆಲಸವನ್ನು

ಕೈಗೊಂಡಿದ್ದರು. ಮುಂದಾಳುಗಳು ತಮ್ಮ ಮನೆಗಳಲ್ಲಿ ಸುಧಾರಣೆಯನ್ನು ತಂದಿದ್ದರು.

ಡರ್ಬನಿನಲ್ಲಿ ಗಂಟು ಬೇನೆ ಹರಡುವುದೆಂಬ ಹೆದರಿಕೆಯುಂಟಾಯಿತು. ಆಗ ಗಾಂಧೀಜಿ ತಮ್ಮ ಅನುಯಾಯಿಗಳೊಡನೆ ಮನೆಮನೆಗೂ ಹೋಗಿ ಅಲ್ಲಿನ ಅಚ್ಚುಕಟ್ಟನ್ನು ಪರೀಕ್ಷಿಸತೊಡಗಿದರು. ಅಲ್ಲಿನ ಪೌರಸಭೆ ಅವರ ಕೆಲಸವನ್ನು ಹೊಗಳಿತು. ಅವರ ಸಹಕಾರದಿಂದ ಪೌರಸಭೆಯ ಕೆಲಸ ಸುಗಮವಾಯಿತು. ಪೌರಸಭೆಯವರ ಸಹಕಾರದಿಂದ ಭಾರತೀಯರ ಕಷ್ಟಗಳೂ ಕಡಮೆಯಾದವು. ಏಕೆಂದರೆ ಸಾಮಾನ್ಯವಾಗಿ ಅಧಿಕಾರಿಗಳು ಪ್ಲೇಗು ಮುಂತಾದ ಅಂಟುಜಾಡ್ಯಗಳ ಉಪದ್ರವಗಳು ಹುಟ್ಟಿದಾಗ ಮಾತ್ರ ಮಿತಿಮೀರಿ ಆತುರಪಟ್ಟು ದಾರಿಗೆ ಬರದ ಜನರ ಮೇಲೆ ಕೋಪಗೊಂಡು ಅವರನ್ನು ಕ್ರೂರವಾಗಿ ದಂಡಿಸುತ್ತಾರೆ. ಭಾರತೀಯರು ತಾವಾಗಿಯೇ ಕಷ್ಟಪಟ್ಟು ನೈರ್ಮಲ್ಯ ರಕ್ಷಣೆಯ ಕಾರ್ಯವನ್ನು ಕೈಗೊಂಡುದರಿಂದ ಅಂತಹ ಕಷ್ಟದಿಂದ ತಪ್ಪಿಸಿಕೊಂಡರು. ಗಾಂಧೀಜಿ ಶುಚಿಕಾರ್ಯವನ್ನು ಕೈಗೊಂಡು ಜನರು ಶುಚಿಯಾಗಿರಬೇಕೆಂದು ಹೇಳಿದಾಗ ಕೆಲವರು ಔದಾಸೀನ್ಯ ತೋರಿಸಿದರು. ಕೆಲವರು ಅವರನ್ನು ಅವಮಾನಪಡಿಸಿದರು. ತಮ್ಮ ಸುತ್ತಮುತ್ತಣ ಸ್ಥಳಗಳನ್ನು ಶುಚಿಯಾಗಿಡುವುದೆಂದರೆ ಅವರಿಗೆ ಏನೋ ಒಂದು ಹೊರೆಯಂತೆ ಕಾಣುತ್ತಿದ್ದಿತು. ಅವರಿಂದ ಕೆಲಸಮಾಡಿಸ ಬೇಕಾದರೆ ಮಿತಿಯಿಲ್ಲದ ತಾಳ್ಮೆಯಿರಬೇಕೆಂಬುದು ಗಾಂಧಿಯವರಿಗೆ ಗೊತ್ತಾಯಿತು. ಸುಧಾರಕರು ಮಾತ್ರ ಸುಧಾರಣೆಯಾಗಬೇಕೆಂದು ಬಯಸುವರು. ಜನರೂ ಅದೇ ವಿಧವಾದ ಆಸಕ್ತಿ ತೋರಿಸುವುದಿಲ್ಲ. ಸುಧಾರಣೆಯ ಕೆಲಸವನ್ನು ಕೈಗೊಂಡಾಗ ಸಮಾಜದಿಂದ ವಿರೋಧವನ್ನೂ ತಿರಸ್ಕಾರವನ್ನೂ ಕಡೆಗೆ ಹಿಂಸೆಯನ್ನೂ ಅನುಭವಿಸಲು ಸಿದ್ಧನಾಗಿ ಸುಧಾರಕನು ಕಾರ್ಯರಂಗಕ್ಕಿಳಿಯಬೇಕು. ಸುಧಾರಣೆ ತನ್ನ

ಪ್ರಾಣಕ್ಕಿಂತ ಪ್ರಿಯವಾದುದೆಂದು ಅವನು ಎಣಿಸುವಾಗ ಅದು ಒಂದು ಅನಿಷ್ಟವೆಂದು ಸಮಾಜವೆಣಿಸಬಹುದು.

ಗಾಂಧೀಜಿ ಕೈಗೊಂಡ ನೈರ್ಮಲ್ಯಚಳುವಳಿಯ ಫಲವಾಗಿ ಅಲ್ಲಿನ ಭಾರತೀಯರು ತಮ್ಮ ಮನೆಬಾಗಿಲುಗಳನ್ನು ಸ್ವಚ್ಛವಾಗಿಟ್ಟುಕೊಂಡಿರುವುದರ ಆವಶ್ಯಕತೆಯನ್ನು ತಕ್ಕಮಟ್ಟಿಗೆ ತಿಳಿದುಕೊಂಡರು. ಅಧಿಕಾರಿಗಳಿಗೆ ಗಾಂಧೀಜಿಯಲ್ಲಿ ಮನ್ನಣೆ ಹೆಚ್ಚಿತು. ಇದರ ಜೊತೆಗೆ ಭಾರತೀಯರು ತಮ್ಮ ತಾಯ್ನಾಡಿನ ವಿಷಯದಲ್ಲಿ ತಮ್ಮ ಧರ್ಮವನ್ನರಿಯುವಂತಾದರು. ಭಾರತೀಯರು ಹಣವನ್ನು ಗಳಿಸಲು ದಕ್ಷಿಣ ಆಫ್ರಿಕಕ್ಕೆ ಹೋಗಿದ್ದರು. ತಮ್ಮ ಬಡ ತಾಯ್ನಾಡಿನ ಆಪತ್ಕಾಲದಲ್ಲಿ ತಮ್ಮ ಸಂಪಾದನೆಯಲ್ಲಿ ಕೊಂಚವನ್ನಾದರೂ ಸಹಾಯ. ಕಳಿಸಬೇಕಾದುದು ತಮ್ಮ ಕರ್ತವ್ಯವೆಂದು ಅವರು ಅರಿತುಕೊಂಡರು. ೧೮೯೭ ನೆಯ ಇಸವಿಯಲ್ಲಿಯೂ ೧೮೯೯ ನೆಯ ಇಸವಿಯಲ್ಲಿಯೂ ಭರತಖಂಡದಲ್ಲಿ ಘೋರ ಕ್ಷಾಮಗಳೊದಗಿದವು. ಈ ಸಮಯಗಳಲ್ಲಿ ಆಫ್ರಿಕದಿಂದ ಭಾರತೀಯರು ಹೆಚ್ಚು ಧನಸಹಾಯವನ್ನು ಕಳಿಸಿದರು. ಆಗ ಅಲ್ಲಿನ ಹಲವರು ಯೂರೋಪಿಯನ್ನರೂ ಸಹಾಯಮಾಡಿದರು.

ದಕ್ಷಿಣ ಆಫ್ರಿಕದಲ್ಲಿ ಹೀಗೆಲ್ಲ ಸೇವೆಮಾಡುತ್ತಿರುವಾಗ ಗಾಂಧೀಜಿಗೆ ಸತ್ಯದ ಮಹತ್ವ ಹೆಚ್ಚು ಹೆಚ್ಚಾಗಿ ಅರಿವಾಗುತ್ತ ಬಂತು. “ಸತ್ಯ ವಿಶಾಲವಾಗಿ ಬೆಳೆದ ಒಂದು ವೃಕ್ಷದಂತೆ. ಅದನ್ನು ಹೆಚ್ಚಾಗಿ ಪೋಷಿಸಿದಂತೆಲ್ಲಾ ಅದು ಹೆಚ್ಚಾಗಿ ಫಲಿಸುತ್ತದೆ. ಸತ್ಯದ ಗಣಿಯಲ್ಲಿ ಆಳವಾಗಿ ಅಗೆದಷ್ಟೂ ಅಮೂಲ್ಯವಾದ ರತ್ನಗಳು ಕೈಸೇರಿ ಸೇವೆಗೆ ಎಲ್ಲಾ ಅವಕಾಶ ಮತ್ತು ಅನುಕೂಲಗಳು ದೊರಕುತ್ತವೆ.” ದಕ್ಷಿಣ ಆಫ್ರಿಕದಲ್ಲಿ ತಾವು ಸದ್ಯದಲ್ಲಿ ಮಾಡಬೇಕೆಂದಿದ್ದ ಕೆಲಸಗಳು ಮುಗಿಯಲು ಗಾಂಧೀಜಿ ಸ್ವದೇಶಕ್ಕೆ ಹಿಂತಿರುಗಿ ಅಲ್ಲಿ ತಾಯ್ನಾಡಿನ ಸೇವೆಯನ್ನು ಕೈಗೊಳ್ಳಬೇಕೆಂದು ನಿರ್ಧರಿಸಿದರು. ಅಲ್ಲದೆ ಭಾರತದಲ್ಲಿದ್ದ ಮಿತ್ರರು ಅವರನ್ನು ತಾಯ್ನಾಡಿಗೆ ಹಿಂದಿರುಗಬೇಕೆಂದು ಒತ್ತಾಯಮಾಡಿದರು. ಅವಶ್ಯಬಿದ್ದರೆ ಮತ್ತೆ

ಬರುವುದಾಗಿ ಆಫ್ರಿಕದಲ್ಲಿನ ಮಿತ್ರರಿಗೆ ಮಾತುಕೊಟ್ಟು ಗಾಂಧೀಜಿ ಭರತಖಂಡಕ್ಕೆ ಹೊರಡಲು ಅನುವಾದರು.

ನೇಟಾಲಿನ ಭಾರತೀಯರು ಮತ್ತು ಮಿತ್ರರಾದ ಐರೋಪ್ಯರು ಗಾಂಧೀಜಿಯನ್ನು ಬೀಳ್ಕೊಡಲು ಸತ್ಕಾರಕೂಟಗಳನ್ನು ಏರ್ಪಡಿಸಿದರು. ಸಾವಿರಾರು ರೂಪಾಯಿ ಬಾಳುವ ಆಭರಣಗಳನ್ನು ಅವರಿಗೆ ಉಡುಗೊರೆಯಾಗಿ ಅರ್ಪಿಸಿದರು. ಅವುಗಳಲ್ಲಿ ಚಿನ್ನದ ಮತ್ತು ವಜ್ರದ ಒಡವೆಗಳಿದ್ದವು. ಈ ಬಹುಮಾನಗಳು ಬಹು ಹೆಚ್ಚಾಗಿ ಬಂದ ರಾತ್ರಿ ಗಾಂಧೀಜಿಗೆ ನಿದ್ರೆಯೇ ಬರಲಿಲ್ಲ. "ಈ ಬಹುಮಾನಗಳನ್ನು ಸ್ವೀಕರಿಸಲು ನನಗೆ ಅಧಿಕಾರವೆಲ್ಲಿಯದು ? ಇವನ್ನೆಲ್ಲ ಸ್ವೀಕರಿಸಿದರೆ ನಾನು ಪ್ರತಿಫಲವಿಲ್ಲದೆ ಜನರಿಗೆ ಸೇವೆ ಮಾಡುತ್ತಿರುವೆನೆಂದು ನನ್ನ ಮನಸ್ಸನ್ನು ಒಪ್ಪಿಸುವುದು ಹೇಗೆ ?" ಈ ಎಲ್ಲಾ ವಿಷಯಗಳು ತಲೆಗೆ ಹತ್ತಿ ಅವರನ್ನು ಚಿಂತೆಗೊಳಪಡಿಸಿದವು. ಕೊನೆಗೆ ತಾವು ಆ ಪದಾರ್ಥಗಳನ್ನು ಇಟ್ಟುಕೊಳ್ಳಕೂಡದೆಂದು ನಿಶ್ಚಯಿಸಿದರು. ಜನರ ಸಲುವಾಗಿ ಆ ಬಹುಮಾನ ವಸ್ತುಗಳನ್ನೆಲ್ಲಾ ಇಟ್ಟುಕೊಂಡಿರುವುದಕ್ಕಾಗಿ ಪಾರ್ಸಿ ರುಸ್ತುಂಜಿ ಮೊದಲಾದವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿ ಜನರಿಗಾಗಿಯೇ ಆ ಆಭರಣಗಳನ್ನೆಲ್ಲ ಹಿಂದಕ್ಕೆ ಕೊಟ್ಟುಬಿಡಲು ನಿರ್ಧರಿಸಿದರು. ಬೆಳಗಾಗುತ್ತಲೆ ತನ್ನ ಹೆಂಡತಿ ಮಕ್ಕಳನ್ನು ತಮ್ಮ ಈ ಆಲೋಚನೆಗೆ ಒಪ್ಪುವಂತೆ ಮಾಡಿದರು. ಒಂದು ಧರ್ಮದರ್ಶಿ ಪತ್ರವನ್ನು ಬರೆದು ಆ ಸ್ವತ್ತುಗಳನ್ನು ತಮ್ಮ ಅಥವಾ ಧರ್ಮದರ್ಶಿಗಳ ಇಷ್ಟಾನುಸಾರವಾಗಿ ಸಾರ್ವಜನಿಕ ಕಾರ್ಯಗಳಲ್ಲಿ ಸಮಯ ಒದಗಿದಾಗ ಉಪಯೋಗಿಸಬೇಕೆಂದು ಬ್ಯಾಂಕಿನಲ್ಲಿ ಇಡಿಸಿದರು. ಈ ಕೆಲಸವೆಲ್ಲ ಮುಗಿದಮೇಲೆ ಗಾಂಧೀಜಿ ಸಂಸಾರದೊಡನೆ ಹೊರಟು ಭಾರತವನ್ನು ತಲಪಿದರು.

ಗಾಂಧೀಜಿ ಭರತಖಂಡವನ್ನು ತಲಪಿದಮೇಲೆ ಸ್ವಲ್ಪಕಾಲವನ್ನು ದೇಶಪರ್ಯಟನೆಯಲ್ಲಿ ಕಳೆದರು. ಆ ವರ್ಷ (೧೯೦೧) ಅಖಿಲ ಭಾರತ

ಕಾಂಗ್ರೆಸ್ ಸಭೆ ಕಲಿಕತ್ತೆಯಲ್ಲಿ ನಡೆಯಲಿತ್ತು. ಅವರು ಆ ಸಭೆಗೆ ಹೋದರು. ಇದೇ ಇವರು ಮೊದಲು ಹೋದ ಕಾಂಗ್ರೆಸ್ ಸಭೆ. ಆ ಸಭೆಯಲ್ಲಿ ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಸ್ಥಿತಿಯಮೇಲೆ ಒಂದು ನಿಲುವಳಿ ತರಬೇಕೆಂದು ಅವರಿಗೆ ಆಸೆಯಿತ್ತು. ಅದಕ್ಕಾಗಿ ಸಿದ್ಧತೆಗಳನ್ನೆಲ್ಲ ಮಾಡಿಕೊಂಡಿದ್ದರು.

"ಆ ಸಭೆಯ ಏರ್ಪಾಡು ಅಷ್ಟು ಚೆನ್ನಾಗಿರಲಿಲ್ಲ. ಸ್ವಯಂಸೇವಕರಲ್ಲಿ ಯಾವ ಶಿಸ್ತೂ ಇರಲಿಲ್ಲ. ಒಬ್ಬನಿಗೆ ಒಂದು ಕೆಲಸವನ್ನು ಒಪ್ಪಿಸಿದರೆ ಅವನು ಇನ್ನೊಬ್ಬನಿಗೆ, ಇನ್ನೊಬ್ಬನು ಮತ್ತೊಬ್ಬನಿಗೆ ಆ ಕೆಲಸವನ್ನು ಒಪ್ಪಿಸುತ್ತಿದ್ದನು. ಅವರಿಗೆ ಸರಿಯಾದ ಶಿಕ್ಷಣವಿರಲಿಲ್ಲ. ಪ್ರತಿನಿಧಿಗಳೂ ಸ್ವಯಂಸೇವಕರಂತೆಯೇ ವರ್ತಿಸುತ್ತಿದ್ದರು. ತಮ್ಮ ಕೈಯಿಂದ ಏನನ್ನೂ ಮಾಡುತ್ತಿರಲಿಲ್ಲ. ಹಗಲೆಲ್ಲ ಸ್ವಯಂಸೇವಕರಿಗೆ ಅಪ್ಪಣೆಮಾಡುತ್ತ ಅವರನ್ನು ಕಾಡುತ್ತಿದ್ದರು. ಅಲ್ಲದೆ ಆಚಾರಕ್ಕೆ ತಕ್ಕಂತೆ ವಿಧವಿಧದ ಅಡಿಗೆ ಮನೆಗಳ ಏರ್ಪಾಡು ಬೇರೆ. ಎಲ್ಲೆಲ್ಲಿಯೂ ಕೊಳಕೂ ಕೊಚ್ಚೆಯೂ ತುಂಬಿರುತ್ತಿತ್ತು. ಕಕ್ಕಸುಗಳು ಕೆಲವೇ ಇದ್ದು ಅವುಗಳ ದುರ್ಗಂಧವನ್ನು ನೆನಸಿಕೊಂಡರೆ ಮೈ ಜುಮ್ಮೆನ್ನುವಂತಿತ್ತು. ಇಷ್ಟಲ್ಲದೆ ಕೆಲವು ಪ್ರತಿನಿಧಿಗಳು ತಮ್ಮ ಬಿಡಾರದ ಹೊರ ಪಡಸಾಲೆಯನ್ನೇ ರಾತ್ರಿಯಹೊತ್ತು ಬಹಿರ್ದೇಶಕ್ಕಾಗಿ ಉಪಯೋಗಿಸುತ್ತಿದ್ದರು. ಇದೆಲ್ಲವನ್ನು ನೋಡಿ ಗಾಂಧೀಜಿಗೆ ತಾವೇನಾದರೂ ಕೆಲಸವನ್ನು ಕೈಗೊಂಡು ಅಚ್ಚುಕಟ್ಟಾಗಿ ಮಾಡಬೇಕೆನಿಸಿತು. ಸಭೆಯ ಕಾರ್ಯದರ್ಶಿಗಳ ಬಳಿಗೆಹೋಗಿ ಏನಾದರೂ ಕೆಲಸ ಕೊಡಬೇಕೆಂದು ಕೇಳಿದರು. ಕಾರ್ಯದರ್ಶಿ ಇವರನ್ನು ಗುಮಾಸ್ತನಾಗಿ ತೆಗೆದುಕೊಂಡರು. ಆ ಕೆಲಸದಲ್ಲಿ ಗಾಂಧೀಜಿ ತೋರಿಸಿದ ಕಾರ್ಯತತ್ಪರತೆ ಮತ್ತು ಚಟುವಟಿಕೆ ಅಲ್ಲಿ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಈ ಕೆಲಸವನ್ನು ಕೈಗೊಂಡುದರಿಂದ ಸಭೆಯ ಅನೇಕ ವಿಷಯಗಳು ಗಾಂಧೀಜಿಗೆ ಮುಂದಟ್ಟಾದವು.

ಕಾಂಗ್ರೆಸ್ ಮಹಾಸಭೆಯಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯ ಮೇಲೆ ಗಾಂಧೀಜಿ ಮಂಡಿಸಿದ್ದ ಠರಾವೊಂದು ಸಭೆಯ ಸರ್ವಾನುಮತ ಪಡೆಯಿತು. ಮಹಾಸಭೆ ಈ ವಿಷಯವನ್ನು ಒಪ್ಪಿದುದರಿಂದ ಅಖಿಲ ಭಾರತದ ಸ್ವೀಕಾರಮುದ್ರೆ ಬಿದ್ದಂತಾಯಿತು.

ಮಹಾಸಭೆ ಮುಗಿದಮೇಲೆ ಗಾಂಧೀಜಿ ಗೋಖಲೆಯವರೊಡನೆ ಕಲ್ಕತ್ತೆಯಲ್ಲೇ ಉಳಿದರು. ಅಲ್ಲಿ ಅನೇಕ ದೊಡ್ಡ ಮನುಷ್ಯರನ್ನು ನೋಡಿ ದಕ್ಷಿಣ ಆಫ್ರಿಕದ ಭಾರತೀಯರ ವಿಷಯವನ್ನು ವಿವರಿಸಿದರು. ಅನೇಕ ಧರ್ಮಜೀವಿಗಳನ್ನು ನೋಡಿ ಮಾತಾಡಿದರು. ರಾಜಕೀಯ ವಿಚಾರದಲ್ಲಂತೂ ಗೋಖಲೆಯವರ ಸಹವಾಸದಿಂದಲೇ ಬೇಕಾದಷ್ಟು ತಿಳಿದುಕೊಂಡರು. ಅಲ್ಲಿಂದ ಬರ್ಮಾದೇಶಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಂಡು ಬಂದರು. ಕಲ್ಕತ್ತೆಯಲ್ಲಿ ಮಾಡಬೇಕಾದ ಕೆಲಸ ಮುಗಿಯಲು ಗೋಖಲೆಯವರಿಂದ ಬೀಳ್ಕೊಂಡು ಅಲ್ಲಿಂದ ಹೊರಟರು.

ರೈಲಿನಲ್ಲಿ ಮೂರನೆಯ ತರಗತಿಯ ಗಾಡಿಯಲ್ಲೇ ಪ್ರಯಾಣ ಮಾಡಬೇಕೆಂದು ಮನಸ್ಸುಮಾಡಿದ್ದುದರಿಂದ ಆ ಗಾಡಿಯಲ್ಲೇ ಹೊರಟರು. "ಮೂರನೆಯ ತರಗತಿಯ ಪ್ರಯಾಣಿಕರನ್ನು ರೈಲ್ವೆ ಅಧಿಕಾರಿಗಳು ಕುರಿಗಳಂತೆ ಭಾವಿಸುತ್ತಾರೆ. ಆ ಗಾಡಿಗಳಲ್ಲಿಯೂ ಅಲ್ಲಿಯ ಕಕ್ಕಸುಗಳಲ್ಲಿಯೂ ಹೊಲಸು ತುಂಬಿರುತ್ತದೆ. ಮಿಕ್ಕೆಲ್ಲ ಬಗೆಯ ಏರ್ಪಾಡುಗಳೂ ಅಸೌಕರ್ಯದವು. ಪ್ರಯಾಣಿಕರ ಅನುಕೂಲದ ವಿಷಯದಲ್ಲಿ ರೈಲ್ವೆ ಆಡಳಿತಗಾರರ ಅಸಡ್ಡೆಯ ಜೊತೆಗೆ ಪ್ರಯಾಣಿಕರ ಕೊಳಕು ಪದ್ಧತಿಗಳೂ ಇತರರ ವಿಷಯದಲ್ಲಿ ಅವರ ಅಶ್ರದ್ಧೆಯೂ ಸೇರಿ ಶುಚಿವಂತರಾದವರಿಗೆ ಮೂರನೆಯ ತರಗತಿಯ ಪ್ರಯಾಣ ಪ್ರಾಯಶ್ಚಿತ್ತದಂತಾಗಿರುತ್ತದೆ. ಸುತ್ತಮುತ್ತ ಇರುವವರ ಸುಖದುಃಖವನ್ನು ಸ್ವಲ್ಪವೂ ಯೋಚಿಸದೆ ಗಾಡಿಯಲ್ಲಿ ಕಸಕಡ್ಡಿಯನ್ನು ಹಾಕುವುದು, ಮನಸ್ಸುಬಂದಾಗ ಬೀಡಿ ಚುಟ್ಟ ಸೇದುವುದು, ಎಲೆ ಹೊಗೆಸೊಪ್ಪನ್ನು ಅಗಿದು ಇತರರ ಮುಖಕ್ಕೆ ತುಂತುರಾಗಿ ಬೀಳು

ವಂತೆ ಗಾಳಿಯಲ್ಲಿ ಉಗುಳುವುದು, ಕೂಗುವುದು, ಕಿರಿಚುವುದು, ಕೆಟ್ಟ ಕೆಟ್ಟ ಮಾತುಗಳನ್ನಾಡುವುದು ಇವು ಪ್ರಯಾಣಿಕರ ಸಾಮಾನ್ಯ ದುರಭ್ಯಾಸಗಳಲ್ಲಿ ಕೆಲವು. ಇಂತಹ ಕೆಟ್ಟ ಪದ್ಧತಿಗೆ ಒಂದೇ ಮದ್ದು. ಅದೇನೆಂದರೆ ಸುಶಿಕ್ಷಿತರಾದ ಜನರು ಮೂರನೆಯ ತರಗತಿಯ ಗಾಡಿಗಳಲ್ಲೇ ಪ್ರಯಾಣ ಮಾಡಬೇಕು. ಇತರ ಪ್ರಯಾಣಿಕರ ಕೆಟ್ಟ ಪದ್ಧತಿಗಳನ್ನು ತಿದ್ದಬೇಕು."

ಮೂರನೆಯ ತರಗತಿಯ ಗಾಡಿಯಲ್ಲಿ ಒದಗುವ ತೊಂದರೆಗಳನ್ನೆಲ್ಲ ಸಹಿಸಿಕೊಂಡು ಪ್ರಯಾಣಮಾಡಿ ಗಾಂಧೀಜಿ ಕಾಶಿಯಲ್ಲಿ ರೈಲು ಇಳಿದರು. ಸ್ನಾನ ಪೂಜೆಗಳನ್ನು ಮುಗಿಸಿಕೊಂಡು ವಿಶ್ವನಾಥ ದೇವಾಲಯಕ್ಕೆ ಹೋದರು. ಅಲ್ಲಿಯ ಸ್ಥಿತಿಯನ್ನು ನೋಡಿ ಅವರಿಗೆ ವ್ಯಸನವಾಯಿತು. "ದೇವಸ್ಥಾನಕ್ಕೆ ಹೋಗುವ ದಾರಿ ಬಹು ಇಕ್ಕಟ್ಟಾಗಿ ಗಲಾಟೆಯಿಂದ ಕೂಡಿತ್ತು. ಅಲ್ಲಿ ಶಾಂತ ವಾತಾವರಣವೇ ಇರಲಿಲ್ಲ. ಯಾತ್ರಿಕರ ಮತ್ತು ವ್ಯಾಪಾರಗಾರರ ಗದ್ದಲವಂತೂ ಸಂತೆಯನ್ನು ಮೀರಿಸಿತ್ತು. ಪವಿತ್ರ ವಾತಾವರಣದಲ್ಲಿ ಭಗವಂತನ ಚಿಂತನೆಯನ್ನು ಮಾಡಲು ಬಯಸಿ ಬಂದವನಿಗೆ ಅಲ್ಲಿ ಅದು ದುರ್ಲಭವಾಗಿತ್ತು. ದೇವಾಲಯ ಮತ್ತು ಅದರ ಅಕ್ಕಪಕ್ಕಗಳಲ್ಲಿ ನಿರ್ಮಲವಾದ ಮಧುರವಾದ ಶಾಂತಿಯುತವಾದ ವಾತಾವರಣವಿರುವಂತೆ ನೋಡಿಕೊಳ್ಳುವುದು ದೇವಸ್ಥಾನದ ವ್ಯವಸ್ಥಾಪಕರ ಕರ್ತವ್ಯ. ಆದರೆ ಇದಕ್ಕೆ ಬದಲಾಗಿ ಅಲ್ಲಿ ಯುಕ್ತಿವಂತರಾದ ವ್ಯಾಪಾರಿಗಳು ಮಿಠಾಯಿಗಳನ್ನೂ ಹೊಸ ಹೊಸ ಬಗೆಯ ಆಟದ ಸಾಮಾನುಗಳನ್ನೂ ಮಾರುತ್ತಿದ್ದುದು ಕಣ್ಣಿಗೆ ಬಿತ್ತು. ಗುಡಿಯ ಒಳಗೆ ಬರುತ್ತಲೆ ಬಾಗಿಲಿನ ಎದುರಿಗೆ ಸರಿಯಾಗಿ ನಾರುತ್ತ ಬಿದ್ದಿದ್ದ ಕೊಳೆತ ಹೂವಿನ ರಾಶಿ ಕಾಣಿಸಿತು. ಒಳಗಡೆ ಸುಂದರವಾದ ಅಮೃತಶಿಲೆ ಹಾಸಿತ್ತು. ಆದರೆ ಯಾರೊ ಕಲೆಯ ಗಂಧವಿಲ್ಲದ ಅಂಧಶ್ರದ್ಧೆಯ ಭಕ್ತರು ಅದರಲ್ಲಿ ರೂಪಾಯಿಗಳನ್ನು ಮೆಟ್ಟಿದ್ದರು. ಅವು ಕೊಳೆಗೆ ಒಳ್ಳೆಯ ಆಸರೆಯಾಗಿದ್ದವು. ನಾನು ಜ್ಞಾನವ್ಯಾಪಿಯ ಬಳಿಗೆ ಹೋದೆನು. ಅಲ್ಲಿ ನಾನು ದೇವರನ್ನು ಅರಸಿದೆನು.

ಆದರೆ ಆತನು ದೊರೆಯಲಿಲ್ಲ. ಇದರಿಂದ ನಾನು ಒಳಗೊಳಗೆ ಕುದಿಯುತ್ತಿದ್ದೆನು. ವಿಗ್ರಹದ ಸುತ್ತಮುತ್ತ ಕೂಡ ಕೊಳೆ ಕಾಣಿಸಿತು." ಅಲ್ಲಿ ದಕ್ಷಿಣೆಯನ್ನು ಅರ್ಪಿಸುವುದಕ್ಕೆ ಗಾಂಧೀಜಿ ಮನಸ್ಸು ಬರಲಿಲ್ಲ. ದಕ್ಷಿಣೆ ಬೇಡಿದ ಪಂಡಾಜಿಯೊಬ್ಬನಿಗೆ ಮೂರು ಕಾಸನ್ನು ಕೊಟ್ಟರು. ಪಂಡನ ಮುಖದಲ್ಲಿ ಕೋಪ ಉಕ್ಕಿ ಹರಿಯಿತು. ಅವನು ಆ ಕಾಲಾಣೆಯನ್ನು ಎಸೆದುಬಿಟ್ಟು, ನಿನಗೆ ನರಕಪ್ರಾಪ್ತಿಯಾಗುತ್ತದೆ. ಎಂದು ಮೊದಲಾಗಿ ಬೈದನು. ಗಾಂಧೀಜಿ ಶಾಂತರಾಗಿದ್ದು "ಸ್ವಾಮಿ, ನನಗಾಗಬೇಕಾದುದು ಆಗಿಯೇ ಆಗುತ್ತದೆ. ಆದರೆ ನಿಮ್ಮಂಥವರ ಬಾಯಿಂದ ಈ ಮಾತು ಹೊರಡಬಾರದು. ನಿಮಗೆ ಬೇಕಾದರೆ ಈ ಕಾಸು ತೆಗೆದುಕೊಳ್ಳಿ; ಇಲ್ಲದಿದ್ದರೆ ಅದೂ ಸಿಗುವುದಿಲ್ಲ" ಎಂದು ಹೇಳಿದರು. ಪಂಡನು ಗೊಣಗಿ ಕಾಸನ್ನು ತೆಗೆದುಕೊಂಡನು.

ಗಾಂಧೀಜಿ ಕಾಶಿಯಿಂದ ಹೊರಟು ಆಗ್ರಾ ಜಯಪುರಗಳಲ್ಲಿ ಒಂದೊಂದು ದಿನ ನಿಂತು ರಾಜಕೋಟೆಗೆ ಬಂದು ಸೇರಿದರು. ಅಲ್ಲಿ ಸ್ವಲ್ಪ ದಿನವಿದ್ದು ಬೊಂಬಾಯಿಗೆ ಬಂದು ವಕೀಲರಾಗಿ ನೆಲಸಿದರು. ಅಲ್ಲಿ ವಕೀಲಿ ಕೆಲಸವು ಚೆನ್ನಾಗಿ ನಡೆಯಿತು. ಜೊತೆಗೆ ಸಾರ್ವಜನಿಕ ಸೇವೆಯೂ ಬೇಕಾದಷ್ಟಿತ್ತು. ಅಷ್ಟರಲ್ಲಿಯೇ "ಬ್ರಿಟಿಷ್ ನೆಲಸೆಗಳ ಕಾರ್ಯದರ್ಶಿಗಳಾದ ಚೇಂಬರ್‌ಲೇನರು ಇಲ್ಲಿಗೆ ಬರುವವರಿದ್ದಾರೆ; ಕೂಡಲೆ ಹೊರಟು ಬನ್ನಿ" ಎಂದು ಆಫ್ರಿಕದಿಂದ ಅನಿರೀಕ್ಷಿತ ತಂತಿ ವರ್ತಮಾನ ಬಂತು. ಹೆಂಡತಿ ಮಕ್ಕಳು ಬೊಂಬಾಯಿಯಲ್ಲಿಯೇ ಇರಲು ಏರ್ಪಾಟುಮಾಡಿ ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ತೆರಳಿದರು.

ಮತ್ತೆ ದಕ್ಷಿಣ ಆಫ್ರಿಕದಲ್ಲಿ

ದಕ್ಷಿಣ ಆಫ್ರಿಕ ಸೇರಿದ ಕೂಡಲೆ ಗಾಂಧೀಜಿಗಾಗಿ ಕಾದಿದ್ದ ಕೆಲಸಗಳು ಗಂಟುಬಿದ್ದವು. ಭಾರತೀಯರ ಪ್ರತಿನಿಧಿಗಳು ಚೇಂಬರ್ಲೇನ ರನ್ನು ನೋಡಲು ದಿನ ಗೊತ್ತಾಗಿದ್ದಿತು. ಅವರಿಗೆ ಅರ್ಪಿಸಬೇಕಾದ ಅರ್ಜಿಯನ್ನು ಸಿದ್ಧಪಡಿಸಿಕೊಂಡು ಗಾಂಧೀಜಿ ಮಿಕ್ಕ ಪ್ರತಿನಿಧಿಗಳೊಡನೆ ಚೇಂಬರ್ಲೇನರನ್ನು ನೋಡಲು ಹೋದರು.

ಚೇಂಬರ್ಲೇನರು ಆಫ್ರಿಕಕ್ಕೆ ಬಂದಿದ್ದದ್ದು ಅಲ್ಲಿಂದ ಮೂರೂವರೆ ಕೋಟಿ ಪೌಂಡ್‌ಗಳನ್ನು ಸಹಾಯ ಪಡೆದುಹೋಗುವ ಸಲುವಾಗಿ ಮತ್ತು ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಲ್ಲಿನ ಆಂಗ್ಲೇಯರ ಮತ್ತು ಬೋಅರರ ಸಹಾನುಭೂತಿಯನ್ನು ಗಳಿಸುವ ಸಲುವಾಗಿ. ಆದುದರಿಂದ ಭಾರತೀಯರಿಗೆ ಅನುಕೂಲವಾಗಿ ಅಲ್ಲಿನ ಸರಕಾರದ ಅಥವಾ ಜನರ ಮೇಲೆ ಯಾವ ಟೀಕೆಯನ್ನಾಗಲಿ ಸಲಹೆಯನ್ನಾಗಲಿ ಮಾಡಲು ಅವರು ಮನಸ್ಸು ಮಾಡಲಿಲ್ಲ. ಈ ನೆಲಸೆಗಳ ಮೇಲೆ ಸಾಮ್ರಾಜ್ಯ ಸರ್ಕಾರಕ್ಕೆ ಹೆಸರಿಗೆ ಮಾತ್ರ ಅಧಿಕಾರವಿದೆ. ನಿಮ್ಮ ತೊಂದರೆಗಳು ನಿಜವಿರಬಹುದು. ಅವುಗಳ ನಿವಾರಣೆಗೆ ನನ್ನ ಕೈಲಾದುದನ್ನು ಮಾಡುತ್ತೇನೆ. ಆದರೆ ನೀವು ಇಲ್ಲಿ ಐರೋಪ್ಯರ ಮಧ್ಯೆ ಬಾಳಬೇಕೆಂದರೆ ಆದಷ್ಟು ಅವರ ಪ್ರೀತಿ ಸಂಪಾದಿಸಬೇಕು" ಎಂದು ಭಾರತೀಯ ಪ್ರತಿನಿಧಿಗಳಿಗೆ ಸಪ್ಪೆ ಸಮಾಧಾನ ಹೇಳಿಬಿಟ್ಟರು. ಇದರಿಂದ ಗಾಂಧೀಜಿ ಮತ್ತು ಇತರ ಪ್ರತಿನಿಧಿಗಳಿಗೆ ನಿರಾಶೆಯಾಯಿತು. ಚೇಂಬರ್ಲೇನರು ನೇಟಾಲಿನಿಂದ ಟ್ರಾನ್ಸ್‌ವಾಲಿಗೆ ಹೋದರು. ಅಲ್ಲಿಯು ಭಾರತೀಯರ ಪರವಾಗಿಯೂ ಗಾಂಧೀಜಿ ಮಾತಾಡಬೇಕಾಗಿತ್ತು. ಬೋಅರ್ ಯುದ್ಧವಾದಮೇಲೆ ಟ್ರಾನ್ಸ್‌ವಾಲಿಗೆ ಅಪ್ಪಣೆ ಪಡೆದವರಿಗೆ ಮಾತ್ರ ಪ್ರವೇಶವಿತ್ತು. ಈ ಅಪ್ಪಣೆ ಚೀಟಿ ಕೊಡುವ ಆಫೀಸುಗಳಲ್ಲಿ ನೀತಿಗೆಟ್ಟು ಲಂಚಕೊಡದೆ ಅಪ್ಪಣೆ ಚೀಟಿ ಪಡೆಯುುವದು ಸಾಧ್ಯವಿರಲಿಲ್ಲ.

ಅದರಲ್ಲೂ ಭಾರತೀಯರು ಹೆಚ್ಚು ಸುಲಿಗೆಗೆ ತುತ್ತಾಗಿದ್ದರು. ಗಾಂಧೀಜಿಗೆ ಅಲ್ಲಿನ ಪೋಲೀಸ್ ಅಧಿಕಾರಿಯ ಸ್ನೇಹವಿದ್ದುದರಿಂದ ಸುಲಭವಾಗಿ ಅಪ್ಪಣೆ ಚೀಟಿ ದೊರಕಿತು. ಅದನ್ನು ಪಡೆದು ಪ್ರಿಟೋರಿಯಾಕ್ಕೆ ಹೋದರು. ಚೇಂಬರ್ಲೇನರನ್ನು ನೋಡುವ ಸಲುವಾಗಿ ಎಲ್ಲವೂ ಸಿದ್ಧವಾಯಿತು. ಭೇಟಿಗೆ ಹೋಗುವ ಭಾರತೀಯ ಪ್ರತಿನಿಧಿಗಳ ಹೆಸರುಗಳನ್ನು ಸಂಬಂಧಪಟ್ಟ ಅಧಿಕಾರಿಗೆ ಕಳಿಸಲಾಯಿತು. ಗಾಂಧೀಜಿ ಮತ್ತೆ ಚೇಂಬರ್ಲೇನರನ್ನು ನೋಡದಂತೆ ತಡೆಯಬೇಕೆಂದು ಅಲ್ಲಿನ ಸರಕಾರ ಹವಣಿಸಿತು. ಇವರಾಗಲೆ ಒಮ್ಮೆ ಚೇಂಬರ್ಲೇನರನ್ನು ನೋಡಿರುವದರಿಂದ ಮತ್ತೆ ನೋಡಬೇಕಾಗಿಲ್ಲವೆಂದು ಪ್ರತಿನಿಧಿಗಳ ಹೆಸರಿನ ಪಟ್ಟಿಯಿಂದ ಅವರ ಹೆಸರನ್ನು ತೆಗೆದುಹಾಕಲಾಯಿತು. ಮಿಕ್ಕ ಪ್ರತಿನಿಧಿಗಳೇ ಚೇಂಬರ್ಲೇನರನ್ನು ನೋಡಿದರು. ಅದರಿಂದ ನೇಟಾಲಿನ ಭಾರತೀಯರಿಗೆ ದೊರೆತ ಫಲಕ್ಕಿಂತ ಹೆಚ್ಚೇನೂ ದೊರೆಯಲಿಲ್ಲ.

ಗಾಂಧೀಜಿ ಭಾರತದಿಂದ ಬ್ರಿಟಿಷ್ ನೆಲಸೆಗಳ ಕಾರ್ಯದರ್ಶಿಯವರನ್ನು ನೋಡಿ ಆಫ್ರಿಕದಲ್ಲಿನ ಭಾರತೀಯರ ಕುಂದುಕೊರತೆಗಳನ್ನು ಅವರ ಮುಂದಿಡಲು ಭರತಖಂಡದಿಂದ ಆಫ್ರಿಕಕ್ಕೆ ಹೋಗಿದ್ದರು. ಆ ಕೆಲಸವಾಯಿತು. ಆದರೆ ಅವರು ಕೂಡಲೆ ಭಾರತಕ್ಕೆ ಹಿಂತಿರುಗಲು ಮನಸ್ಸುಮಾಡಲಿಲ್ಲ. ಪಕ್ಷಪಾತದಿಂದ ಕೂಡಿದ್ದ ದಕ್ಷಿಣ ಆಫ್ರಿಕದ ಸರಕಾರದ ಆಡಳಿತದಲ್ಲಿ ಭಾರತೀಯರು ಬಳಲಿ ಬೆಂಡಾಗಿ ಹೋಗಿದ್ದರು. ಅಷ್ಟೇ ಅಲ್ಲದೆ ಸುಲಿಗೆ ಮಾಡಿ ಅವರನ್ನು ದಕ್ಷಿಣ ಆಫ್ರಿಕದಿಂದಲೇ ಓಡಿಸುವ ಏರ್ಪಾಡು ನಡೆಯುತ್ತಿತ್ತು. ಪ್ರತಿದಿನವೂ ಹಲವು ವಿಧವಾದ ಅಪಮಾನಕ್ಕೂ ನಷ್ಟಕ್ಕೂ ಭಾರತೀಯರು ಈಡಾಗುತ್ತಿದ್ದರು. ಅವರ ಸ್ಥಿತಿ ದಿನೇದಿನೇ ಕೆಡುತ್ತಾ ಹೋಗುತ್ತಿತ್ತು. ಆದುದರಿಂದ ಈ ಎಲ್ಲಾ ಅನ್ಯಾಯಗಳನ್ನೂ ಎದುರಿಸಿ ನ್ಯಾಯವನ್ನು ಪಡೆಯಲು ದಕ್ಷಿಣ ಆಫ್ರಿಕದಲ್ಲೇ ಇನ್ನೂ ಕೊಂಚದಿನ ಉಳಿಯಲು ಗಾಂಧೀಜಿ ನಿಶ್ಚಯಿಸಿದರು. ವಕೀಲಿ

ಕೆಲಸದ ಸನ್ನದು ಪಡೆದು ಟ್ರಾನ್ಸ್‌ವಾಲಿನ ಜೊಹಾನ್ಸ್‌ಬರ್ಗಿನಲ್ಲಿ ತಮ್ಮ ಆಫೀಸನ್ನು ತೆರೆದರು.

ಬೋಅರ್ ಯುದ್ಧವಾದ ಮೇಲೆ ಆಯಾಯ ದೇಶದವರ ರಕ್ಷಣೆಗೆಂದು ಆಯಾದೇಶದ ಇಲಾಖೆಗಳು ಸ್ಥಾಪಿತವಾಗಿದ್ದವು. ಏಷ್ಯನರನ್ನು ರಕ್ಷಿಸುವ ಸಲುವಾಗಿ 'ಏಷ್ಯಾಟಿಕ್' ಇಲಾಖೆಯೊಂದಿತ್ತು. ಆ ಇಲಾಖೆಯ ಅಧಿಕಾರಿಗಳು ಏಷಿಯದ ನಿವಾಸಿಗಳಾದ ಚೀಣರು ಭಾರತೀಯರು ಮುಂತಾದವರನ್ನು ಸುಲಿಗೆ ಮಾಡುತ್ತಿದ್ದರು. ದೇಶದ ಒಳಗಡೆ ತಮ್ಮ ಆಸ್ತಿಪಾಸ್ತಿಗಳಿದ್ದು ಅಲ್ಲಿ ನೆಲಸಲು ಹಕ್ಕಿದ್ದವರನ್ನು ಏನಾದರೂ ನೆಪದಿಂದ ದೇಶದೊಳಕ್ಕೆ ಬಿಡುತ್ತಿರಲಿಲ್ಲ. ನೂರಾರು ಪೌಂಡುಗಳ ಲಂಚ ತೆಗೆದುಕೊಂಡು ಯಾವ ಹಕ್ಕೂ ಇಲ್ಲದವರನ್ನು ಕಳ್ಳತನದಿಂದ ಒಳಕ್ಕೆ ಬಿಡುತ್ತಿದ್ದರು. ಈ ಅನ್ಯಾಯದ ರುಜುವಾತಿಗೆ ಬೇಕಾದ ವಿಷಯಗಳನ್ನೆಲ್ಲಾ ಒದಗಿಸಿಕೊಂಡು ಗಾಂಧೀಜಿ ಪೋಲೀಸ್ ಕಮಿಷನರಿಗೆ ಅರ್ಜಿಕೊಟ್ಟರು. ಆ ಅಧಿಕಾರಿ ನ್ಯಾಯವಾದಿಯಾಗಿದ್ದರು. ಅವರು ನಿಜಾಂಶವನ್ನು ತಿಳಿದು ಅಪರಾಧಿಗಳಾದ ಅಧಿಕಾರಿಗಳನ್ನು ದಸ್ತಗಿರಿಮಾಡಿ ನ್ಯಾಯಸ್ಥಾನದ ಮುಂದೆ ತಂದರು. ಅಪರಾಧಿಗಳ ವಿಚಾರಣೆಯಾಯಿತು. ಆಫ್ರಿಕದಲ್ಲಿ ಪರಂಗಿ ಅಧಿಕಾರಿಗಳು ಕಪ್ಪುಜನರ ವಿಷಯದಲ್ಲಿ ಅಪರಾಧಮಾಡಿದ್ದನ್ನು ನ್ಯಾಯಸ್ಥಾನವಾದರೂ ಒಪ್ಪಿಕೊಳ್ಳುವಂತೆ ಮಾಡುವುದು ಸುಲಭವಾಗಿರಲಿಲ್ಲ. ದೊಡ್ಡ ಅಪರಾಧವೆಂಬುದಕ್ಕೆ ಸಾಕಾದಷ್ಟು ರುಜುವಾತುಗಳಿದ್ದರೂ ಅಪರಾಧಿಗಳಲ್ಲವೆಂದು ಅವರನ್ನು ನ್ಯಾಯಸ್ಥಾನ ಬಿಡುಗಡೆ ಮಾಡಿತು. ಆದರೆ ಅವರ ತಪ್ಪು ಎಲ್ಲರಿಗೂ ತಿಳಿಯುವಷ್ಟು ಸ್ಪಷ್ಟವಾಗಿತ್ತು. ಆದುದರಿಂದ ಅಪರಾಧಿಗಳನ್ನು ಬಿಡುಗಡೆಮಾಡಿದರೂ ಸರ್ಕಾರದವರು ಅವರನ್ನು ಮತ್ತೆ ಕೆಲಸದಲ್ಲಿಟ್ಟುಕೊಳ್ಳಲಿಲ್ಲ; ಕೆಲಸದಿಂದ ವಜಾಮಾಡಿದರು. ಈ ಪ್ರಸಂಗದಿಂದ ಭಾರತೀಯರಿಗೆ ಧೈರ್ಯ ಬಂತು. ಗಾಂಧೀಜಿಯ ಖ್ಯಾತಿ ಹೆಚ್ಚಿತು. ಅವರ ವಕೀಲಿತನ ವೃದ್ಧಿಯಾಯಿತು. 'ಏಷ್ಯಾಟಿಕ್'

ಇಲಾಖೆಯ ಅಧಿಕಾರಿಗಳ ನಡತೆ ಸ್ವಲ್ಪ ಉತ್ತಮವಾಯಿತು. ಭಾರತೀಯರು ಸ್ವಲ್ಪಮಟ್ಟಿಗೆ ಲಂಚಕೋರತನದ ಆಘಾತದಿಂದ ಪಾರಾದರು.

ಇಷ್ಟಾದರೂ ಐರೋಪ್ಯರ ಮತ್ತು ಭಾರತೀಯರ ಮಧ್ಯೆ ದಿನ ದಿನವೂ ಹೊಸ ಹೊಸ ಸಮಸ್ಯೆಗಳು ಮೂಡುತ್ತಿದ್ದವು. ಈ ತೊಡಕುಗಳೂ ಅವುಗಳ ಪರಿಹಾರಮಾರ್ಗವೂ ಜನರಿಗೆ ಸರಿಯಾದ ರೀತಿಯಲ್ಲಿ ಗೋಚರವಾಗ ಬೇಕಾದ ಅವಶ್ಯಕತೆಯಿತ್ತು. ಇದಕ್ಕಾಗಿ 'ಇಂಡಿಯನ್ ಒಪಿನಿಯನ್' (ಭಾರತೀಯ ಅಭಿಪ್ರಾಯ) ಎಂಬ ವಾರಪತ್ರಿಕೆ ೧೯೦೪ ರಲ್ಲಿ ಹೊರಟಿತು. ಆ ಪತ್ರಿಕೆಯ ಸಂಪಾದಕರು ಗಾಂಧೀಜಿ ಅಲ್ಲದಿದ್ದರೂ ಅದು ನಡೆಯು ವುದಕ್ಕೆ ಅವರೇ ಜವಾಬ್ದಾರರಾಗಿದ್ದರು. ಅದಕ್ಕಾಗಿ ಅವರು ಬೇಕಾದಷ್ಟು ಹಣವೆಚ್ಚಮಾಡುತ್ತಿದ್ದುದಲ್ಲದೆ ತೊಡಕಾದ ಸಮಸ್ಯೆಗಳನ್ನು ಕುರಿತು ಲೇಖನಗಳನ್ನು ಬರೆಯುವವರೂ ಸಂಪಾದಕೀಯ ಬರೆಯುವವರೂ ಗಾಂಧೀಜಿಯೇ ಆಗಿದ್ದರು. ಈ ಪತ್ರಿಕೆ ಸಮಸ್ಯೆಯನ್ನು ಚೆನ್ನಾಗಿ ವಿವರಿಸಿ ಅನೇಕ ಐರೋಪ್ಯರ ಸಹಾನುಭೂತಿಯನ್ನು ಗಳಿಸಿ ಭಾರತೀಯರಿಗೆ ಅಪಾರ ಸೇವೆ ಸಲ್ಲಿಸಿತು. 'ಹರಿಜನ' ಪತ್ರಿಕೆ ನಡೆದಂತೆಯೇ 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಚಿಕೆಗಳೂ ಗಾಂಧೀಜಿಯ ಲೇಖನವಿಲ್ಲದೆ ಹೊರಡುತ್ತಿರಲಿಲ್ಲ. ಅವರು ತಮ್ಮ ಅಂತರಂಗವನ್ನೆಲ್ಲಾ ಆ ಪತ್ರಿಕೆಯ ಮೂಲಕ ದೇಶದ ಮುಂದೆ ಹೇಳಿಕೊಳ್ಳುತ್ತಿದ್ದರು. ಮುಂದೆ ಒದಗಲಿದ್ದ ಸತ್ಯಾಗ್ರಹದ ದೂರದೃಷ್ಟಿಯಿಂದ ಸತ್ಯಾಗ್ರಹವೆಂದರೇನು ಮತ್ತು ಅದನ್ನು ಆಚರಿಸುವ ಬಗೆ ಹೇಗೆ ಇದನ್ನೆಲ್ಲಾ ಆ ಪತ್ರಿಕೆಯಲ್ಲಿ ವಿವರಿಸಿ ತಿಳಿಸಿದರು. ಆಫ್ರಿಕದ ಸತ್ಯಾಗ್ರಹ ಯಶಸ್ವಿಯಾಗಲು ಬಹು ಮಟ್ಟಿಗೆ ಈ ಪತ್ರಿಕೆ ಸಹಾಯಮಾಡಿತು. ಸತ್ಯಾಗ್ರಹಯುದ್ಧದ ಮತ್ತು ಆಫ್ರಿಕದಲ್ಲಿನ ಭಾರತೀಯರ ಪರಿಸ್ಥಿತಿಯ ನಿಜವಾದ ವಿವರಕ್ಕೆ ವಾಚಕರು ಈ ಪತ್ರಿಕೆಯನ್ನೇ ಎದುರುನೋಡುತ್ತಿದ್ದರು.

" ಅತ್ಯುಪಯುಕ್ತವಾದ ಸಮಾಜಸೇವೆ ಮಾಡುತ್ತಿರುವ ಸಂಗಡಿಗಳ ಜನರನ್ನು ನಾವು ಹಿಂದುಗಳು ಅಸ್ಪೃಶ್ಯರೆಂದೆಣಿಸಿ ಅವರನ್ನು ನಮ್ಮಿಂದ ದೂರದಲ್ಲಿಟ್ಟಿದ್ದೇವೆ. ಅವರು ವಾಸಿಸುವ ಸ್ಥಳಕ್ಕೆ ' ಹೊಲಗೇರಿ 'ಯೆಂದು ಕರೆಯುತ್ತೇವೆ. ಹೀಗೆಯೇ ಯೂರೋಪಿನಲ್ಲಿ ಕ್ರಿಸ್ತಮತ ಪ್ರಬಲವಾದಾಗ ಯೆಹೂದ್ಯರ ಕುಲದವರನ್ನು ಅಸ್ಪೃಶ್ಯರೆಂದೆಣಿಸುತ್ತಿದ್ದರು. ಅವರ ವಾಸಸ್ಥಳವನ್ನು ' ಘೆಟ್ಟೊ ' ಎಂಬ ಹೀನವಾದ ಹೆಸರಿನಿಂದ ಕರೆಯುತ್ತಿದ್ದರು. ಇದರಂತೆಯೇ ದಕ್ಷಿಣ ಆಫ್ರಿಕದಲ್ಲಿ ಪರಂಗಿಯುವರು ಭಾರತೀಯರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಪುರಾತನಕಾಲದಲ್ಲಿ ಯೆಹೂದ್ಯರು ತಾವೇ ದೇವರ ಜನಾಂಗವೆಂದೂ ಇತರರು ಹೀನವರ್ಗದವರೆಂದೂ ಭಾವಿಸಿದ್ದರು. ಇದರ ಫಲವಾಗಿ ಅವರ ಪೀಳಿಗೆ ವಿಚಿತ್ರವೂ ಅನ್ಯಾಯವೂ ಆದ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಅದೇ ರೀತಿಯಲ್ಲಿ ಹಿಂದುಗಳು ತಾವು ಆರ್ಯರು ಅಥವಾ ಸಂಸ್ಕೃತರೆಂದು ಹೇಳಿಕೊಳ್ಳುತ್ತ ತಮ್ಮ ಜನಾಂಗದ ಒಂದು ಗುಂಪಿನ ಬಂಧುಗಳನ್ನು ಅನಾರ್ಯರು ಅಥವಾ ಅಸ್ಪೃಶ್ಯರು ಎಂದು ಎಣಿಸುತ್ತ ಬಂದಿದ್ದಾರೆ. ಇವರು ಮಾಡಿದ ಅನ್ಯಾಯದ ಫಲವನ್ನು ದಕ್ಷಿಣ ಆಫ್ರಿಕದ ಭಾರತೀಯರೆಲ್ಲರೂ—ಮುಸಲ್ಮಾನರೂ ಪಾರ್ಸಿಗಳೂ ಸೇರಿ—ಅನುಭವಿಸಬೇಕಾಯಿತು. ಅಲ್ಲಿ ಭಾರತೀಯರೆಲ್ಲ ಕೂಲಿಯುವರೆಂದೆನಿಸಿಕೊಂಡು ಅಪಡ್ಡೆಗೆ ಗುರಿಯಾಗಿದ್ದಾರೆ. ನಾವು ಹರಿಜನರನ್ನು ಹೇಗೆ ಕಾಣುವೆವೋ ಹಾಗೆಯೇ ಅಲ್ಲಿ ಬಿಳಿಯರು ಈ ಕೂಲಿಯುವರನ್ನು ಕಾಣುತ್ತಾರೆ. "

ಜೋಹಾನ್ಸ್‌ಬರ್ಗಿನಲ್ಲಿ ಭಾರತೀಯರ ವಾಸಸ್ಥಳ ಬೇರೆಯಾಗಿದ್ದಿತು. ಅಲ್ಲಿನ ಪೌರಸಭೆಯವರ ಅಕ್ಷಮ್ಯವಾದ ಉಪೇಕ್ಷೆಯೂ ಅಲ್ಲಿ ನೆಲಸಿದ್ದ ಭಾರತೀಯರ ಅಜ್ಞಾನವೂ ಒಟ್ಟುಗೂಡಿ ಆ ಭಾರತೀಯರ ವಸತಿ ಅಶುಚಿಯಾಗಿತ್ತು. ಪೌರಸಭೆ ಆ ವಸತಿಯನ್ನು ಉತ್ತಮಗೊಳಿಸುವುದಕ್ಕೆ ಬದಲಾಗಿ ತನ್ನ ಅಲಕ್ಷ್ಯದಿಂದ ಉಂಟಾದ ಹೊಲಸನ್ನೇ

ನೆಪಮಾಡಿಕೊಂಡು ಆ ವಸತಿಯನ್ನು ನಾಶಮಾಡಲು ಹವಣಿಸಿ ಅದಕ್ಕಾಗಿ ನ್ಯಾಯವಿಧಾಯಕ ಸಭೆಯ ಅನುಮತಿಯನ್ನು ಪಡೆದು ಅಲ್ಲಿ ನೆಲಸಿದ್ದ ಭಾರತೀಯರನ್ನು ಓಡಿಸಲು ಪ್ರಾರಂಭಿಸಿತು.

ವಸತಿಯಲ್ಲಿದ್ದ ತಮ್ಮ ತಮ್ಮ ಜಾಗದ ಬೆಲೆಯನ್ನು ಪೌರಸಭೆಯಿಂದ ಪಡೆಯುವ ಹಕ್ಕು ಭಾರತೀಯರಿಗಿದ್ದಿತು. ತನಗೆ ಲಭಿಸಿದ ಜಾಗದ ಪ್ರತಿಫಲ ಅನ್ಯಾಯವಾಗಿ ಕಡಮೆಯಾಗಿದ್ದಲ್ಲಿ ಅದರ ತೀರ್ಮಾನಕ್ಕಾಗಿ ಮಾಲಿಕನು ನ್ಯಾಯಸ್ಥಾನಕ್ಕೆ ಹೋಗಬಹುದಾಗಿತ್ತು. ನ್ಯಾಯಸ್ಥಾನದ ತೀರ್ಮಾನದಿಂದ ಮಾಲಿಕನಿಗೆ ಬರಬೇಕಾಗಿದ್ದ ಹಣ ಪೌರಸಭೆಯವರ ತೀರ್ಮಾನದ ಮೊತ್ತಕ್ಕಿಂತ ಹೆಚ್ಚಾದರೆ ಆ ವ್ಯವಹಾರಕ್ಕಾಗಿ ಅವನಿಗೆ ತಗುಲಿದ ವೆಚ್ಚವನ್ನೂ ಪೌರಸಭೆಯವರೇ ತೆರಬೇಕಾಗಿದ್ದಿತು. ಹೀಗೆ ಖಾತೆದಾರರಲ್ಲಿ ಹೆಚ್ಚುಜನರು ಗಾಂಧೀಜಿಗೆ ತಮ್ಮ ವಕಾಲತ್ತನ್ನು ಕೊಟ್ಟರು. ಗಾಂಧೀಜಿ ನಡಸಿದ ಸುಮಾರು ಎಪ್ಪತ್ತು ಇಂತಹ ಮೊಕದ್ದಮೆಗಳಲ್ಲಿ ಒಂದರಲ್ಲಿ ಮಾತ್ರ ಕಕ್ಷಿಗೆ ಸೋಲಾಯಿತು. ಈ ವ್ಯವಹಾರಗಳಿಂದ ಗಾಂಧೀಜಿಗೆ ಅಲ್ಲಿನ ಭಾರತೀಯರೊಡನೆ ಹೆಚ್ಚು ಸಂಬಂಧ ಬೆಳೆಯಿತು. ಅವರು ಜನರ ವಕೀಲರಾಗಿರುವುದಕ್ಕಿಂತ ಹೆಚ್ಚಾಗಿ ಅವರ ಬಂಧುವಂತಿದ್ದು ಅವರ ದುಃಖಸಂಕಟಗಳಲ್ಲಿ ಭಾಗಿಯಾಗಿದ್ದರು. ಎಲ್ಲರೂ ಇವರನ್ನು "ಅಣ್ಣ" ಎಂದೇ ಕರೆಯುತ್ತಿದ್ದರು.

ಪೌರಸಭೆ ವಸತಿಯನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಂಡೊಡನೆಯೇ ಭಾರತೀಯರನ್ನು ಅಲ್ಲಿಂದ ಹೊರಡಿಸಲಾಗಲಿಲ್ಲ. ಏಕೆಂದರೆ ಅವರು ವಾಸಿಸಲು ಬೇರೆ ಸ್ಥಳವಿನ್ನೂ ಏರ್ಪಾಡಾಗಿರಲಿಲ್ಲ. ಇಷ್ಟರಲ್ಲಿ ಆ ವಸತಿಯಲ್ಲಿ ಪ್ಲೇಗುಮಾರಿ ಕಾಣಿಸಿಕೊಂಡಿತು. ಒಂದೇ ದಿನ ಇಪ್ಪತ್ತು ಮೂರು ಮಂದಿಗೆ ಕಾಯಿಲೆ ತಾಗಿತು. ಇದರಿಂದ ಎಲ್ಲರೂ ಗಾಬರಿಗೊಂಡರು. ಗಾಂಧೀಜಿ ಮತ್ತು ಅವರ ಸ್ನೇಹಿತರು ರೋಗಿಗಳಿಗೆ ಶುಶ್ರೂಷೆ ಮಾಡುವುದರಲ್ಲೂ ಜನರಿಗೆ ಧೈರ್ಯ ಹೇಳುವುದರಲ್ಲೂ ಪಟ್ಟ ಶ್ರಮ

ಅಷ್ಟಿಷ್ಟಲ್ಲ. ಪೌರಸಭೆಯುವರೂ ಇವರ ಸಹಾಯಕ್ಕೆ ಬಂದರು. ಜನರೆಲ್ಲರನ್ನೂ ಆ ವಸತಿಯಿಂದ ಬಿಡಿಸಿ ಹದಿಮೂರು ಮೈಲಿ ದೂರದಲ್ಲಿದ್ದ ಎತ್ತರವಾದ ಪ್ರದೇಶಕ್ಕೆ ಕರೆದೊಯ್ಯಲಾಯಿತು. ಧನ ಧಾನ್ಯಗಳನ್ನೂ ಸುರಕ್ಷಿತವಾಗಿ ಹೊರಗೆ ತೆಗೆದುಕೊಂಡಮೇಲೆ ವಸತಿಗೆ ಬೆಂಕಿ ಇಟ್ಟರು. ಇದರಿಂದ ಪ್ಲೇಗು ಹರಡಲು ತಡೆಯಾಯಿತು.

ವಕೀಲನ ಕೆಲಸಕ್ಕೂ ನಾಯಿಂದನ ಕೆಲಸಕ್ಕೂ ಇರುವ ಬೆಲೆ ಯೊಂದೆ. ಏಕೆಂದರೆ ಶ್ರಮಪಟ್ಟು ಜೀವನವನ್ನು ಸಂಪಾದಿಸುವವರೆಲ್ಲರಿಗೂ ಸಮನಾದ ಅಧಿಕಾರವಿದೆ. ಶ್ರಮಜೀವನವೇ, ಎಂದರೆ ಹೊಲ ಉಳುವವರ, ದುಡುಮೆಗಾರರ ಜೀವನವೇ ಯೋಗ್ಯವಾದ ಜೀವನ. ಸರಳಜೀವನ ಕ್ರಮ ಅಭ್ಯಾಸವಾಗಬೇಕು. ಎಲ್ಲರ ಒಳ್ಳಿತೇ ತನ್ನ ಒಳ್ಳಿತು. ಈ ಯೋಚನೆ ರಸ್ಕಿನ್ನರ "ಅನ್ ಟು ದಿಸ್ ಲಾಸ್ಟ್" (ಸರ್ವೋದಯ) ಎಂಬ ಪುಸ್ತಕವನ್ನು ಓದಿದಮೇಲೆ ಗಾಂಧೀಜಿಯ ಮನಸ್ಸಿಗೆ ಬಂದು ಊರಿಗೆ ದೂರದಲ್ಲಿ ಫೀನಿಕ್ಸ್ ಎಂಬ ಸ್ಥಳದಲ್ಲಿ ಆಶ್ರಮವೊಂದನ್ನು ತೆರೆದು ಅಲ್ಲಿಗೆ "ಇಂಡಿಯನ್ ಒಪಿನಿಯನ್" ಪತ್ರಿಕೆಯ ಆಫೀಸನ್ನೂ ಮುದ್ರಣಾಲಯ ವನ್ನೂ ಸಾಗಿಸಿದರು. ಮುದ್ರಣಾಲಯದಲ್ಲಿ ಕೆಲಸ ಮಾಡುವವರು ಜೀವನಕ್ಕೆ ಸಾಕಾಗುವಷ್ಟು ಸಂಬಳವನ್ನು ಮಾತ್ರ ತೆಗೆದುಕೊಳ್ಳಬೇಕೆಂದೂ ಮಿಕ್ಕವರೆಲ್ಲರೂ ವ್ಯವಸಾಯಮಾಡಿ ಜೀವನಕ್ಕೆ ಸಂಪಾದಿಸಬೇಕೆಂದೂ ನಿಯಮ ಮಾಡಲಾಯಿತು. ಇಷ್ಟರಲ್ಲಿ ಅನೇಕ ಐರೋಪ್ಯರು ಗಾಂಧೀಜಿಯ ಕೆಲಸಕಾರ್ಯಗಳಲ್ಲಿ ಅವರ ಸಹಾಯಕ್ಕೆ ಬಂದರು. ಅವರ ಸಾರ್ವಜನಿಕ ಸೇವಾವಲಯ ದಿನೇ ದಿನೇ ವಿಸ್ತರಿಸುತ್ತಾ ಹೋಯಿತು.

ಇಷ್ಟುಹೊತ್ತಿಗೆ ಗಾಂಧೀಜಿ ಹಿಂದೂಸ್ಥಾನದಿಂದ ಬಂದು ಒಂದು ವರ್ಷವಾಗಿ ಹೋಗಿತ್ತು. ಅಲ್ಲದೆ ಸದ್ಯದಲ್ಲೇ ಹಿಂತಿರುಗುವ ಹಾಗೂ ಇರಲಿಲ್ಲ. ಆದುದರಿಂದ ತಮ್ಮ ಹೆಂಡತಿ ಮಕ್ಕಳನ್ನು ಹಿಂದೂಸ್ಥಾನದಿಂದ ಕರಸಿಕೊಂಡು ಮತ್ತೆ ಸಂಸಾರ ಹೂಡಿದರು. ಈ ಸಾರಿ ಸಂಸಾರಜೀವನ

ಮೊದಲಿನಂತಲ್ಲದೆ ಬಹು ಸರಳವಾಗಿತ್ತು. ಅಂಗಡಿಯಲ್ಲಿ ರೊಟ್ಟಿಯನ್ನು ಕೊಳ್ಳುವ ಬದಲು ಮನೆಯಲ್ಲೇ ರೊಟ್ಟಿಗಳನ್ನು ಸ್ವತಃ ತಯಾರುಮಾಡಿ ಕೊಳ್ಳುತ್ತಿದ್ದರು. ಬೀಸುವ ಕಲ್ಲನ್ನಿಟ್ಟುಕೊಂಡು ಗಾಂಧೀಜಿ ಮತ್ತು ಅವರ ಮಕ್ಕಳು ಹಿಟ್ಟು ಬೀಸಿಕೊಳ್ಳುತ್ತಿದ್ದರು. ಕಕ್ಕಸು ಮೊದಲಾದುವುಗಳನ್ನು ಕೂಡ ತಾವೇ ಚೊಕ್ಕಟ ಮಾಡಿಕೊಳ್ಳುತ್ತಿದ್ದರು.

ಇಷ್ಟರಲ್ಲಿ ಜೂಲು ಜನರೆಂಬ ಮೂಲನಿವಾಸಿಗಳು ತಮ್ಮ ಮೇಲೆ ಸರ್ಕಾರದವರು ಅನ್ಯಾಯವಾಗಿ ಹೇರಿದ್ದ ತೆರಿಗೆಯ ಸಲುವಾಗಿ ಪ್ರತಿಭಟಿಸಿದರು. ತಮ್ಮ ಕೈಯ ತೀಟೆ ತೀರಿಸಿಕೊಳ್ಳಲು ಸೈನಿಕರಿಗೆ ಅಷ್ಟೇ ಸಾಕಾಗಿತ್ತು. ಆ ಪ್ರತಿಭಟನೆಯನ್ನು ದಂಗೆಯೆಂದು ಕರೆದು ತಮ್ಮ ಒರಟುತನವನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಿಕೊಂಡು ಆ ಬಡಪಾಯಿ ಜೂಲು ಜನರನ್ನು ಬೇಟೆಯಾಡಲು ಪ್ರಾರಂಭಿಸಿದರು. ಸೇವಾತತ್ಪರರಾದ ಗಾಂಧೀಜಿ ತಮ್ಮ ಹೆಂಡತಿ ಮಕ್ಕಳನ್ನು ಫೀನಿಕ್ಸ್ ಆಶ್ರಮಕ್ಕೆ ಕಳಿಸಿ ಕೊಟ್ಟು ತಾವು ಹಲವರು ಅನುಯಾಯಿಯುಗಳೊಡನೆ ಸೇವಾದಳ ವೊಂದನ್ನು ಏರ್ಪಡಿಸಿಕೊಂಡು ಸೈನಿಕರ ಗುಂಡಿನೇಟಿನಿಂದ ನೊಂದ ಬಡಪಾಯಿ ಜನರಿಗೆ ಸೇವೆಸಲ್ಲಿಸಲು ಬಲಿಸ್ಥಾನಕ್ಕೆ ತೆರಳಿದರು. ಇವರ ಸೇವೆಯಿಂದ ಆ ಜನರಿಗೆ ತುಂಬಾ ಅನುಕೂಲವಾಯಿತು. ಇಲ್ಲದಿದ್ದರೆ ನೊಂದವರು ಕೊಳೆತು ಸಾಯಬೇಕಾಗುತ್ತಿತ್ತು. ಈ ದಂಗೆಯಲ್ಲಿ ಸೇವಾಕಾರ್ಯವನ್ನು ಕೈಗೊಂಡುದರಿಂದ ಗಾಂಧೀಜಿಗೆ ಅನೇಕ ಹೊಸ ಅನುಭವಗಳುಂಟಾದವು; ಯುದ್ಧದ ಭಯಂಕರ ಸ್ವರೂಪ ಚೆನ್ನಾಗಿ ಮನದಟ್ಟಾಯಿತು. ಸೇವಾಕಾರ್ಯದ ಅನಂತ ಶ್ರೇಣಿಗಳನ್ನು ಅವರು ಕಂಡರು. ಸೇವಾಕಾರ್ಯ ಸುಗಮವಾಗಿ ನಡೆಯಬೇಕಾದರೆ ಆಜೀವ ಬ್ರಹ್ಮಚರ್ಯವ್ರತವನ್ನು ಕೈಗೊಳ್ಳಬೇಕೆಂದು ನಿಶ್ಚಯಿಸಿಕೊಂಡರು. ಜೂಲು ದಂಗೆ ನಿಂತಂತಾಯಿತು. ಸೇವಾದಳದ ಬಿಡುಗಡೆಯೂ ಆಯಿತು.

ಸತ್ಯಾಗ್ರಹ ಪ್ರಾರಂಭ

ಗಾಂಧೀಜಿಯ ಬ್ರಹ್ಮಚರ್ಯ ಮತ್ತು ಸತ್ಯಾಗ್ರಹ ಸಾಧನೆ ಹಿರಿದು. ಮನೋವಾಕ್ಕಾಯಗಳಲ್ಲಿ ಬ್ರಹ್ಮಚರ್ಯವನ್ನಾಚರಿಸಲು ಅವರು ಆತುರರಾಗಿದ್ದರು. ಬ್ಯಾರಿಸ್ಟರಾಗಲು ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗಲೆ ಶಾಕಾಹಾರ ಸುಧಾರಣೆಯನ್ನು ಕೈಗೊಂಡಿದ್ದರು. ಈಗ ಆ ಸುಧಾರಣೆ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆದುಬಂದಿತ್ತು. ಹಿಂದಿನ ಬದಲಾವಣೆಗಳಾದರೋ ಆರೋಗ್ಯ ದೃಷ್ಟಿಯಿಂದಾಗಿದ್ದವು. ಆದರೆ ಈಗಿನ ಪ್ರಯೋಗಗಳು ಧಾರ್ಮಿಕ ದೃಷ್ಟಿಯಿಂದ ಕೈಗೊಂಡುವುಗಳಾಗಿದ್ದವು. ಜೊತೆಗೆ ಕಾಯಿಲೆಗಳಿಗೆ ಪ್ರಕೃತಿ ಮತ್ತು ಜಲಚಿಕಿತ್ಸೆಯೇ ಸರಿಯಾದ ಮದ್ದು ಎಂಬ ನಂಬಿಕೆ ಬಲವಾಯಿತು. ಎಂತಹ ಕಷ್ಟದೆಸೆಯಲ್ಲೂ ಕೂಡ ಈ ಪ್ರಯೋಗಗಳು ತಡೆಯಿಲ್ಲದೆ ನಡೆದವು. ಒಂದು ಸಾರಿ ತಮ್ಮ ಮಗ ಮಣಿಲಾಲನು ವಿಷಮಶೀತಜ್ವರಕ್ಕೆ ಈಡಾಗಿ ಕಷ್ಟದೆಸೆಯಲ್ಲಿದ್ದಾಗ ಕೂಡ ಈ ಚಿಕಿತ್ಸೆಯನ್ನೇ ಮಾಡಿದರು. ಹುಡುಗನಿಗೆ ಕಾಯಿಲೆ ವಾಸಿಯಾಯಿತು. ಒಮ್ಮೆ ಕಸ್ತೂರಿಬಾಯಿಯವರಿಗೆ ಬಂದ ಕಾಯಿಲೆ ವಿಷಮಸ್ಥಿತಿಗೇರಿತು. ವೈದ್ಯರು ಹೇಳಿದಂತೆ ದನದ ಮಾಂಸದ ಕಷಾಯ ಕೊಡಲು ಗಾಂಧೀಜಿ ಒಪ್ಪದೆ ತಮ್ಮದೇ ಆದ ಜಲ ಮತ್ತು ಆಹಾರ ಚಿಕಿತ್ಸೆಯಿಂದಲೇ ರೋಗಿಯನ್ನು ಉಪಚರಿಸಿದರು. ರೋಗಿಗೆ ಗುಣವಾಯಿತು. ಇದರಿಂದಲೂ ಇನ್ನೂ ಅನೇಕ ಪ್ರಯೋಗಗಳಿಂದಲೂ ಗಾಂಧೀಜಿಗೆ ನೀರಿನ ಮತ್ತು ಮಣ್ಣಿನ ಚಿಕಿತ್ಸೆಗಳಲ್ಲೂ ಪ್ರಕೃತಿ ಮತ್ತು ಆಹಾರ ಚಿಕಿತ್ಸೆಯಲ್ಲೂ ಹೆಚ್ಚಿನ ನಂಬಿಕೆ ಉಂಟಾಯಿತು.

ಬ್ರಹ್ಮಚರ್ಯ ಸಾಧನೆಗಾಗಿ ಸುಧಾರಣೆಗಳು ಹೆಚ್ಚಿದವು. ಉಪ್ಪು, ಮಸಾಲೆ ಮತ್ತು ಬೇಳೆಯ ತ್ಯಾಗ ಹಾಲಿನ ತ್ಯಾಗ ಇವೆಲ್ಲ ಸುಧಾರಣೆಗಳು ನಡೆದವು. ಹೀಗೆ ಗಾಂಧೀಜಿ ತಮ್ಮ ರುಚಿ ಇಚ್ಛೆಗಳಮೇಲೆ ಸತ್ಯಾಗ್ರಹ ಹೂಡಿದರು. ಇದೇ ಅವರ ಜೀವನದಲ್ಲಿ ಸತ್ಯಾಗ್ರಹದ ಪ್ರಾರಂಭ. ಇಷ್ಟು ತ್ಯಾಗ ಮಾತ್ರ ಅವರನ್ನು ತೃಪ್ತಿಪಡಿಸಲಿಲ್ಲ. ಶೋಧನೆ ಮುಂದೆ

ಮುಂದೆ ನಡೆಯುತ್ತಲೇ ಹೋಯಿತು. ಕೊನೆ ಕೊನೆಗೆ ಕೇವಲ ಹಣ್ಣನ್ನು ತಿನ್ನುವುದರಿಂದಲೇ ಜೀವನವನ್ನು ನಡಸಬೇಕೆಂದೂ ಆ ಹಣ್ಣುಗಳೂ ಆದಷ್ಟು ಮಟ್ಟಿಗೆ ಅಗ್ಗವಾದವುಗಳಾಗಿರಬೇಕೆಂದೂ ನಿಶ್ಚಯಿಸಿ ಹಾಗೆ ಮಾಡಲು ಪ್ರಾರಂಭಿಸಿದರು. ಹಾಲನ್ನೂ ದ್ವಿದಳ ಧಾನ್ಯಗಳನ್ನೂ ಬಿಟ್ಟು ಬಿಟ್ಟು ಕೇವಲ ಹಣ್ಣಿನ ಆಹಾರವನ್ನು ತೆಗೆದುಕೊಳ್ಳುವ ಪ್ರಯೋಗ ಮೊದಲುಮಾಡಿ ಜೊತೆಯಲ್ಲಿಯೇ ಸಂಯಮಸಾಧನೆಗಾಗಿ ಉಪವಾಸ ಗಳನ್ನು ಪ್ರಾರಂಭಿಸಿದರು. ಈ ಎಲ್ಲಾ ಸುಧಾರಣೆಗಳಿಂದ ಗಾಂಧೀಜಿ ಆರೋಗ್ಯ ದೃಷ್ಟಿಯಿಂದಲೂ ನೈತಿಕ ದೃಷ್ಟಿಯಿಂದಲೂ ಹೆಚ್ಚು ಲಾಭ ವನ್ನು ಹೊಂದಿದರು.

ಜೂಲು ದಂಗೆ ಮುಗಿದ ಕೆಲವು ದಿನಗಳ ಮೇಲೆ ಗೋಖಲೆ ಯವರು ದಕ್ಷಿಣ ಆಫ್ರಿಕಕ್ಕೆ ಹೋದರು. ಅಲ್ಲಿ ತಮ್ಮ ಕೂಲಿ ಕರಾರು ಮುಗಿದ ಮೇಲೆ ಅಲ್ಲಿಯೇ ನೆಲಸುವ ಪ್ರತಿಯೊಬ್ಬ ಭಾರತೀಯರ ಮೇಲೂ ೪೫ ರೂಪಾಯಿಯ ತಲೆಗಂದಾಯವನ್ನು ಹೇರಿದ್ದರಷ್ಟೆ. ಆ ಅನಿಷ್ಟವನ್ನು ತೊಡೆದುಹಾಕಿಸುವ ಸಲುವಾಗಿಯೇ ಗೋಖಲೆಯವರು ಹೋದದ್ದು. ಆ ವಿಷಯದಲ್ಲಿ ಮಾತುಕತೆ ನಡೆದಮೇಲೆ ಅಲ್ಲಿನ ಸರಕಾರ ದವರು ಆ ತಲೆಗಂದಾಯವನ್ನು ತೆಗೆದುಹಾಕುವರೆಂಬ ನಂಬಿಕೆಯಿಂದ ಗೋಖಲೆಯವರು ಸ್ವದೇಶಕ್ಕೆ ಹಿಂತಿರುಗಿದರು. ಆದರೆ ದಕ್ಷಿಣ ಆಫ್ರಿಕದ ಸಂಯುಕ್ತಸರಕಾರ ಆ ನಂಬಿಕೆಗೆ ದ್ರೋಹವೆಣಿಸಿತು. ಆ ತಲೆಗಂದಾಯ ತೆಗೆದುಹಾಕಲಾಗುವುದಿಲ್ಲವೆಂದು ಹೇಳಿ ಭಾರತದ ಪ್ರತಿನಿಧಿ ಗೋಖಲೆ ಯವರನ್ನೂ ಆ ಮೂಲಕ ಭಾರತ ಭೂಮಿಯನ್ನೂ ಅವಮಾನಗೊಳಿಸಿತು.

ಈ ಅವಮಾನವನ್ನು ಸಹಿಸುವುದು ಗಾಂಧೀಜಿಗೆ ಸಾಧ್ಯವಾಗಲಿಲ್ಲ. ತಲೆಗಂದಾಯವನ್ನು ವಜಾಮಾಡುವವರೆಗೆ ಸತ್ಯಾಗ್ರಹ ಹೂಡುವುದೇ ಸರಿಯೆಂದು ಮನಗಂಡರು. ಅವರ ಅನುಯಾಯಿಗಳೂ ಇದಕ್ಕೆ ಒಪ್ಪಿದರು. ಈ ಸತ್ಯಾಗ್ರಹಕ್ಕೆ ಮೊದಮೊದಲು ಹೆಂಗಸರನ್ನು ಸೇರಿಸಿಕೊಳ್ಳುವ

ಯೋಚನೆಯಿರಲಿಲ್ಲ. ಪರದೇಶದಲ್ಲಿ ಸೋದರಿಯರನ್ನು ಜೈಲುವಾಸಕ್ಕೆ ಕಳುಹಿಸುವುದು ಅಷ್ಟು ಕ್ಷೇಮಕರವಲ್ಲವೆಂಬುದು ಅದಕ್ಕೆ ಕಾರಣ. ಆದರೆ ಹೆಂಗಸರೂ ಸತ್ಯಾಗ್ರಹಕ್ಕೆ ಸೇರುವ ಸನ್ನಿವೇಶ ಅನಿವಾರ್ಯವಾಗಿ ಒದಗಿಬಂತು. ಕ್ರೈಸ್ತಸಮಾಜದ ರೀತಿಯಂತೆ ರಿಜಸ್ಟರ್ ಮಾಡದೆ ಆದ ಮದುವೆಗಳು ನ್ಯಾಯಬದ್ಧವಲ್ಲವೆಂಬ ಕಾನೂನೊಂದನ್ನು ಸರಕಾರ ಜಾರಿಗೆ ತಂದಿತು. ಇದರಿಂದ ಹಿಂದೂ ಇಸ್ಲಾಂ ಮತ್ತು ಜೊರಾಸ್ಟ್ರಿಯನ್ ಸಮಾಜ ಧರ್ಮಗಳಂತೆ ಆದ ಮದುವೆಗಳೆಲ್ಲ ನ್ಯಾಯಬದ್ಧವಲ್ಲದವು, ಆದವು. ಇದರಿಂದ ಭಾರತದ ಹೆಂಗಸರು ನ್ಯಾಯವಾದ ಹೆಂಡತಿಯರಾಗಿರದೆ ಸೂಳೆಯರಂತಾದರು. ಅವರಲ್ಲಿ ಹುಟ್ಟಿದ ಮಕ್ಕಳಿಗೆ ತಮ್ಮ ತಂದೆಯ ಆಸ್ತಿಯಮೇಲೆ ಹಕ್ಕುತಪ್ಪಿತು. ಗಾಂಧೀಜಿ ತಮ್ಮ ಸ್ವಾಭಾವಿಕ ರೀತಿಯನ್ನು ಅನುಸರಿಸಿ ಈ ವಿಷಯದಲ್ಲಿ ಸರ್ಕಾರದೊಡನೆ ಪತ್ರವ್ಯವಹಾರ ನಡಸಿದರು. ಭಾರತೀಯರು ಈ ಕಾನೂನಿಗೆ ಒಳಗಾಗದಂತೆ ಮಾಡಬೇಕೆಂದು ಕೇಳಿದರು. ಆದರೆ ಸರಕಾರ ಅವರ ಬೇಡಿಕೆಗೆ ಕಿವಿಗೊಡಲಿಲ್ಲ. ಈ ಅನ್ಯಾಯದಿಂದ ಪಾರಾಗಲು ಸತ್ಯಾಗ್ರಹವೇ ಭಾರತೀಯರ ಆಯುಧವಾಗಿತ್ತು. ಈ ಸಂದರ್ಭದಲ್ಲಿ ಸತ್ಯಾಗ್ರಹಕ್ಕೆ ಹೆಂಗಸರಿಗೂ ಆಹ್ವಾನಸಿಕ್ಕಿತು. ಸತ್ಯಾಗ್ರಹದಲ್ಲಿ ಅನುಭವಿಸಬೇಕಾದ ಕಷ್ಟಪರಂಪರೆಗಳನ್ನು ಗಾಂಧೀಜಿ ಅವರಿಗೆ ವಿವರಿಸಿ ಹೇಳಿದರು. ಆದರೆ ಆ ವೀರರಮಣಿಯರು ಅದಾವುದಕ್ಕೂ ಹೆದರಲಿಲ್ಲ. ಸತ್ಯಾಗ್ರಹದ ಪ್ರಾರಂಭೋತ್ಸವವನ್ನು ಅವರೇ ನೆರವೇರಿಸಿದರು. ಇವರು ಜೈಲಿಗೆ ಸೇರಲು ಸತ್ಯಾಗ್ರಹ ಹೂಡಿದರು. ಇವರ ಮೊದಲ ಪ್ರಯತ್ನ ಫಲಕಾರಿಯಾಗಲಿಲ್ಲ. ಸರಕಾರದ ಅಪ್ಪಣೆಯಿಲ್ಲದೆ ಟ್ರಾನ್ಸ್ವಾಲಿಗೆ ಪ್ರವೇಶಿಸಿದರು. ಅವರ ದಸ್ತಗಿರಿಯಾಗಲಿಲ್ಲ. ಅಪ್ಪಣೆಯಿಲ್ಲದೆ ಬೀದಿಬೀದಿಯಲ್ಲಿ ತಿರುಗಿ ವ್ಯಾಪಾರಮಾಡಿದರು. ಆದರೂ ಪೋಲೀಸರು ಅದನ್ನು ಲಕ್ಷಿಸಲಿಲ್ಲ. ನ್ಯೂಕ್ಯಾಸ್ಲ್ಗೆ ಹೋಗಿ ಅಲ್ಲಿನ ಕಲ್ಲಿದ್ದಲಗಣಿಗಳಲ್ಲಿ ಕೆಲಸಮಾಡುತ್ತಿದ್ದ ಕೂಲಿಗಾರರು ಮುಷ್ಕರ ಹಿಡಿಯುವಂತೆ

ಬೋಧಿಸಲು ಏರ್ಪಾಡಾಯಿತು. ಆ ಏರ್ಪಾಡಿನಂತೆಯೇ ಅವರು ನ್ಯೂಕ್ಯಾಸ್ಲ್‌ಗೆ ಹೋಗಿ ಅಲ್ಲಿನ ಕೂಲಿಗಾರರನ್ನು ಮುಷ್ಕರಮಾಡುವಂತೆ ಎತ್ತಿಕಟ್ಟಿದರು. ೪೫ ರೂಪಾಯಿಯ ತಲೆಗಂದಾಯದ ಅನ್ಯಾಯ ಆ ಗಣಿಗಳ ಕೂಲಿಗಾರರ ಮನಸ್ಸು ಹಿಡಿಯಿತು. ಅವರೆಲ್ಲರೂ ಮುಷ್ಕರ ಹಿಡಿದರು. ಈ ಸಂದರ್ಭದಲ್ಲಿ ಆ ಚಳುವಳಿ ನಡಸುತ್ತಿದ್ದ ಸ್ತ್ರೀಯರ ವಿಷಯದಲ್ಲಿ ಸರಕಾರ ಮೊದಲಿನಂತೆ ನಿರ್ಲಕ್ಷವಾಗಿರಲಾಗಲಿಲ್ಲ. ಅವರೆಲ್ಲರನ್ನೂ ದಸ್ತಗಿರಿಮಾಡಿ ಶಿಕ್ಷೆವಿಧಿಸಿ ಬಂಧನದಲ್ಲಿಟ್ಟರು. ಗಾಂಧೀಜಿ ಈ ವಿಷಯ ತಿಳಿದು ಮುಂದಿನ ಏರ್ಪಾಡಿಗಾಗಿ ಕೂಡಲೆ ಆ ಸ್ಥಳಕ್ಕೆ ಹೋದರು. ಈ ಪ್ರಸಂಗ ಆಫ್ರಿಕದಲ್ಲೆಲ್ಲ ಗೊಂದಲವನ್ನೆಬ್ಬಿಸಿತು.

ಸತ್ಯಾಗ್ರಹ ಹೂಡಿ ಬಂಧನಕ್ಕೊಳಗಾಗಿದ್ದ ಸೋದರಿಯರು ತಾಯ್ನಾಡಿನ ಸೇವೆಗಾಗಿ ಜೈಲಿನ ವಿಚಿತ್ರ ಹಿಂಸೆಗಳನ್ನು ಧೈರ್ಯಗುಂದದೆ ಅನುಭವಿಸಿದರು. "ನ್ಯಾಯಸೂತ್ರದ ಪೂರ್ಣ ಪರಿಚಯವಿಲ್ಲದ ಈ ಸೋದರಿಯರ ತ್ಯಾಗ ಪರಿಶುದ್ಧವಾದುದು. ಅದರಲ್ಲನೇಕರಿಗೆ ದೇಶದ ಪರಿಜ್ಞಾನವಿರಲಿಲ್ಲ. ಅವರ ದೇಶಾಭಿಮಾನಕ್ಕೆ ಶ್ರದ್ಧೆಯೇ ಆಧಾರವಾಗಿತ್ತು. ಅವರಲ್ಲಿ ಕೆಲವರಿಗೆ ಪತ್ರಿಕೆಯೋದುವಷ್ಟು ಅಕ್ಷರಜ್ಞಾನವಿರಲಿಲ್ಲ. ಆದರೆ ಆಫ್ರಿಕದಲ್ಲಿ ಭಾರತೀಯರ ಘನತೆಗೆ ಕುಂದುತರುವ ಕ್ರೂರ ಉದ್ದೇಶ ಅವರಿಗೆ ಗೊತ್ತಾಗಿತ್ತು. ಕಾರಾಗೃಹವಾಸ ಅವರ ಹೃದಯ ವೇದನೆಯ ಮತ್ತು ಪ್ರಾರ್ಥನೆಯ ಸ್ವರೂಪವಾಗಿತ್ತು. ಅದು ನಿಜವಾಗಿಯೂ ಅತ್ಯಂತ ಪರಿಶುದ್ಧವಾದ ಸೇವೆ. ಅಂತಃಕರಣದ ಅಂತಹ ಪ್ರಾರ್ಥನೆ ದೇವರಿಗೆ ಮೆಚ್ಚಿಗೆಯದು. ಅದು ಪವಿತ್ರವಾಗಿರುವ ವರೆಗೆ ತ್ಯಾಗಕ್ಕೆ ಫಲವಿದ್ದೇ ಇದೆ. ಮನುಷ್ಯನಲ್ಲಿ ಭಕ್ತಿಯಿರಬೇಕೆಂಬುದು ಭಗವಂತನ ಆಸೆ. ಸ್ವಾರ್ಥಬುದ್ಧಿಯಿಲ್ಲದೆ ಅರ್ಪಿಸಿದ ಭಕ್ತಿಗೆ ನೂರ್ಮಡಿ ಪ್ರತಿಫಲ ದೊರೆಯುವುದು. ವಿನೀತನಾದ, ಫಲಾಪೇಕ್ಷೆಯಿಲ್ಲದ ಕುಚೇಲನ ಒಂದು ಹಿಡಿ ಅವಲಕ್ಕಿಯ ಅರ್ಪಣೆ ಅವನ ಜೀವನದ ಬಡತನವನ್ನು

ನೀಗಿಸಿತು. ಸತ್ಯಾಗ್ರಹಿಗಳನೇಕರ ಬಂಧನ ಫಲಕಾರಿಯಾಗದೆ ಹೋಗ ಬಹುದು. ಆದರೆ ಒಂದೇ ಒಂದು ವ್ಯಕ್ತಿಯಾದರೂ ಭಕ್ತಿಯುತವಾದ ತ್ಯಾಗ ಮತ್ತು ಸೇವೆಯನ್ನು ಅರ್ಪಿಸಿದರೆ ಅದು ಎಂದೆಂದಿಗೂ ನಿರರ್ಥಕ ವಾಗಲಾರದು. ದಕ್ಷಿಣ ಆಫ್ರಿಕದಲ್ಲಿ ಯಾರ ತ್ಯಾಗ ಫಲಕಾರಿಯಾಯಿತು ಎನ್ನುವುದು ಕಷ್ಟ. ಆದರೆ ವಲ್ಲಿಯಮ್ಮ ಮತ್ತು ಇತರ ಹಲವರು ಸೋದರಿಯರ ತ್ಯಾಗಕ್ಕೆ ಫಲ ದೊರೆಯಿತು.

"ಅಸಂಖ್ಯಾತ ವ್ಯಕ್ತಿಗಳು ದೇಶಕ್ಕಾಗಿ ಜನತೆಗಾಗಿ ಸೇವೆ ಸಲ್ಲಿಸು ವುದರಲ್ಲಿ ತಮ್ಮ ಜೀವನವನ್ನು ಸವೆದಿದ್ದಾರೆ, ಸವೆಯುತ್ತಿದ್ದಾರೆ. ಅವರಲ್ಲಿ ಯಾರ ತ್ಯಾಗ ಮತ್ತು ಸೇವೆ ಪರಿಶುದ್ಧವಾದುದು ಎಂಬುದು ಯಾರಿಗೂ ಗೊತ್ತಾಗದಿರಬಹುದು. ಆದರೆ ಅಂತಹ ಪವಿತ್ರವಾದ ಸೇವೆಯಿಂದಲೇ ಕಾರ್ಯದಲ್ಲಿ ಜಯ ಸಿಕ್ಕಿದೆ. ಒಬ್ಬನ ಪರಿಶುದ್ಧವಾದ ಸೇವೆಯೊಂದೇ ಧ್ಯೇಯಸಾಧನೆಗೆ ಸಾಕೆಂಬುದನ್ನು ಸತ್ಯಾಗ್ರಹಿಗಳು ಮನಗಾಣಲಿ. ಪ್ರಪಂಚ ಸಿದ್ಧವಾದ ಸತ್ಯದ ಆಧಾರದ ಮೇಲೆ ನಿಂತಿದೆ. ಅಸತ್ಯ ಎಂದರೆ ನಾಸ್ತಿಕತೆಯಾಗುತ್ತದೆ. ಸತ್ಯ ಅಂದರೆ ಆಸ್ತಿಕತೆ. ನಾಸ್ತಿಕತೆಗೆ ಜಯ ವೆಂಬುದನ್ನು ಊಹಿಸಲೂ ಆಗದು. ಸತ್ಯ ಆಸ್ತಿಕವಾದುದರಿಂದ ಅದು ಎಂದಿಗೂ ಹಾಳಾಗದು. ಇದೇ ಚ್ಯುತಿಯಿಲ್ಲದ ಆಶ್ರಯವನ್ನು ಹೊಂದಿ ರುವ ಸತ್ಯಾಗ್ರಹ ತತ್ವ."

ಆಫ್ರಿಕದಲ್ಲಿ ಹೆಂಗಸರ ಬಂಧನ ಅಲ್ಲಿನ ಭಾರತೀಯ ಕೂಲಿ ಗಾರರಲ್ಲೆಲ್ಲ ಒಂದು ಬಗೆಯ ಕಳವಳನ್ನುಂಟುಮಾಡಿತು. ಅವರೆಲ್ಲರೂ ತಮ್ಮ ಕೆಲಸದ ಆಯುಧಗಳನ್ನೆಲ್ಲಾ ಕೆಳಗಿಟ್ಟು ಗುಂಪುಗುಂಪಾಗಿ ನಗರ ವನ್ನು ಪ್ರವೇಶಿಸಿದರು. ಈ ಕೂಲಿಗಾರರೆಲ್ಲ ಗಣಿಗಳ ಮಾಲಿಕರ ಆಶ್ರಯ ದಲ್ಲಿದ್ದರು. ಕೂಲಿಗಾರರಿಗಾಗಿ ಮಾಲಿಕರು ವಾಸಸ್ಥಳ, ದೀಪ, ನೀರು ಇವುಗಳ ಏರ್ಪಾಡಿಟ್ಟಿದ್ದರು. ಮುಷ್ಕರ ಪ್ರಾರಂಭವಾಗಲು ಮಾಲಿಕರು ಈ ಅನುಕೂಲಗಳೆಲ್ಲವನ್ನು ತಪ್ಪಿಸಿ ಕೂಲಿಗಾರರಿಗೆಲ್ಲ ತೊಂದರೆ

ಕೊಟ್ಟರು. ಎಷ್ಟು ತೊಂದರೆಯಾದರೂ ತಮಗೆ ಜಯ ಸಿಕ್ಕುವ ವರೆಗೆ ಕೆಲಸಕ್ಕೆ ಹೋಗುವುದಿಲ್ಲವೆಂದು ಕೂಲಿಗಾರರು ದೃಢಸಂಕಲ್ಪ ಮಾಡಿದರು. ಅವರ ತಂಡ ನೂರರಗಟ್ಟಲೆ ಬೆಳೆಯುತ್ತಿತ್ತು. ಇವರೆಲ್ಲರಿಗೂ ಆಕಾಶವೇ ಚಾವಣಿಯಾಯಿತು. ನ್ಯೂಕ್ಯಾಸಲಿನ ವರ್ತಕರು ಅಷ್ಟು ಜನ ಮುಷ್ಕರಗಾರರಿಗೂ ಅಡಿಗೆ ಸಾಮಾನನ್ನು ಒದಗಿಸಿದರು. ಜೈಲಿಗೆ ಹೋಗಲು ಸಿದ್ಧರಾಗಿಲ್ಲದಿದ್ದವರು ಸತ್ಯಾಗ್ರಹದ ಅವಶ್ಯಕತೆಯನ್ನು ಅರಿತು ಆ ಕೆಲಸದಲ್ಲಿ ತಮ್ಮ ಕೈಲಾದ ಸಹಾಯವನ್ನೆಲ್ಲಾ ಮಾಡಿದರು. ಯಾವ ಭಾರತೀಯನಾದರೂ ಆಫ್ರಿಕದಲ್ಲಿ ಸ್ವತಂತ್ರನಾಗಿ ಬಾಳಲು ಅನುವಾಗಲೆಂದೇ ಆ ಸತ್ಯಾಗ್ರಹವನ್ನು ಹೂಡಿದೆ; ಅದಕ್ಕೆ ಅಡ್ಡಿತರುವ ೪೫ ರೂಪಾಯಿಯ ತಲೆಗಂದಾಯವನ್ನು ಸರ್ಕಾರದವರು ತೆಗೆದುಹಾಕುವ ವರೆಗೆ ಮುಷ್ಕರ ನಿಲ್ಲಕೂಡದು, ಎಂದು ಗಾಂಧೀಜಿ ಮುಷ್ಕರಕಾರರಿಗೆ ಬೋಧಿಸಿದರು. ಕೂಲಿಗಾರರು ಅವರ ಮಾತಿನಂತೆ ನಡೆಯಲು ಸಿದ್ಧರಾಗಿದ್ದರು. ಸಾವಿರಗಟ್ಟಲೆ ಜನರು ಕೆಲಸವಿಲ್ಲದೆ ಒಂದೆಡೆ ಇರುವುದೆಂದರೆ ಸಾಧ್ಯವಿಲ್ಲದ ಮಾತು. ಅದರಿಂದ ಗಾಂಧೀಜಿ ಈ ಮುಷ್ಕರಕಾರರನ್ನೆಲ್ಲ ಟ್ರಾನ್ಸ್‌ವಾಲಿಗೆ ಕರೆದುಕೊಂಡು ಹೋಗಿ ಜೈಲಿಗೆ ಸೇರುವಂತೆ ಮಾಡಲು ಯೋಚಿಸಿದರು. ಗುಂಪು ನಡೆದುಕೊಂಡು ಟ್ರಾನ್ಸ್‌ವಾಲಿಗೆ ಪ್ರಯಾಣಬೆಳೆಸಿತು. ಈ ಪ್ರಯಾಣದಲ್ಲಿ ಒದಗಿದ ತೊಂದರೆಗಳನ್ನೆಲ್ಲ ಆ ಸತ್ಯಾಗ್ರಹಿಗಳು ಹಸನ್ಮುಖರಾಗಿ ಅನುಭವಿಸಿದರು. ಆಗ ನಡೆದ ಘಟನೆಗಳಲ್ಲಿ ಒಂದೆರಡಿವು:

"ಮುಷ್ಕರ ಅದರ ಉನ್ನತಿಯನ್ನೇರಿತು. ಹೆಂಗಸರು ಗಂಡಸರೆಲ್ಲ ಪ್ರಯಾಣಪಟ್ಟಿದ್ದರು. ಇವರಲ್ಲಿ ಇಬ್ಬರು ಹೆಂಗಸರಿಗೆ ಹಸುಗೂಸುಗಳಿದ್ದವು. ಒಂದು ಮಗು ಆ ಪ್ರಯಾಣದಿಂದ ಬಳಲಿ ಸತ್ತುಹೋಯಿತು. ಮತ್ತೊಬ್ಬ ತಾಯಿ ನದಿಯನ್ನು ದಾಟುತ್ತಿದ್ದಾಗ ಮಗು ಕಂಕುಳಿಂದ ಕುಸಿದುಬಿದ್ದು ಮುಳುಗಿಹೋಯಿತು. ಆದರೆ ಆ ವೀರಮಾತೆಯರು ಹಿಂದಿರುಗಲು ನಿರಾಕರಿಸಿದರು. ಅವರಲ್ಲಿ ಒಬ್ಬಾಕೆ ಹೇಳಿದಳು 'ನಾವು ಸತ್ತವರಿಗಾಗಿ

ಏಕೆ ಅಳಬೇಕು? ಎಷ್ಟು ದುಃಖಿಸಿದರೂ ಅವರು ಮತ್ತೆ ನಮಗೆ ದೊರೆಯರು. ಬದುಕಿರುವವರಿಗಾಗಿ ನಾವೀಗ ದುಡಿಯಬೇಕಾಗಿದೆ."

ಶಾಂತಿ ಸೈನ್ಯ ಹೊರಟು ಟ್ರಾನ್ಸ್‌ವಾಲಿಗೆ ಹತ್ತಿರ ಹತ್ತಿರ ಬಂತು. ಟ್ರಾನ್ಸ್‌ವಾಲನ್ನು ಹೊಕ್ಕುದಾಯಿತು.. ಆದರೂ ದಸ್ತಗಿರಿಗಳಾಗಲಿಲ್ಲ. ಮುಂದೆಯೂ ದಸ್ತಗಿರಿಯಾಗದಿದ್ದಲ್ಲಿ ಟಾಲ್‌ಸ್ಟಾಯಿ ಆಶ್ರಮವನ್ನು ಸೇರಿ ಅಲ್ಲಿ ಕೆಲಸಮಾಡಿಕೊಂಡು ಜೀವನ ಸಾಗಿಸಬೇಕೆಂದು ನಿರ್ಧಾರವಾಯಿತು. ಒಂದು ರಾತ್ರಿ ಸತ್ಯಾಗ್ರಹಿಗಳೆಲ್ಲರೂ ನಿದ್ರೆಹೋಗಿದ್ದರು. ಗಾಂಧೀಜಿ ತಮ್ಮ ಕೆಲಸವನ್ನು ಮುಗಿಸಿ ಇನ್ನೇನು ಮಲಗಬೇಕು, ಅಷ್ಟರಲ್ಲಿ ಒಬ್ಬ ಪೋಲೀಸು ಅಧಿಕಾರಿ ಅವರ ಬಳಿಗೆ ಬಂದು ಅವರನ್ನು ದಸ್ತಗಿರಿಮಾಡಲು ಬಂದಿರುವುದಾಗಿ ತಿಳಿಸಿದನು. ಪಿ. ಕೆ. ನಾಯರು ಒಬ್ಬರನ್ನು ಮಾತ್ರ ಎಚ್ಚರಗೊಳಿಸಿ ಗಾಂಧೀಜಿ ತಮ್ಮ ದಸ್ತಗಿರಿಯ ವಿಷಯವನ್ನು ತಿಳಿಸಿ ಬೆಳಗಿನ ವರೆಗೆ ಯಾರನ್ನೂ ಎಚ್ಚರಗೊಳಿಸಬಾರದೆಂದೂ ಯಾರಿಗೂ ಆ ವಿಷಯವನ್ನು ತಿಳಿಸದಿರಬೇಕೆಂದೂ ಸೂರ್ಯೋದಯಕ್ಕೆ ಮೊದಲು ಮತ್ತೆ ಪ್ರಯಾಣಾರಂಭಮಾಡಿ ಆ ದಿನದ ಪ್ರಯಾಣ ಮುಗಿದು ಊಟಕ್ಕೆ ನಿಂತಾಗ ಜನರಿಗೆ ದಸ್ತಗಿರಿಯ ವಿಷಯವನ್ನು ತಿಳಿಸಬೇಕೆಂದೂ ಹೇಳಿ ಪೋಲೀಸು ಅಧಿಕಾರಿಯೊಡನೆ ಹೋದರು. ಗಾಂಧೀಜಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಕರೆದುಕೊಂಡು ಹೋದರು. ಅಲ್ಲಿ ೫೦ ಪೌಂಡುಗಳ ಜಾಮೀನಿನ ಮೇಲೆ ಅವರ ಬಿಡುಗಡೆಯಾಯಿತು. ಅವರು ಅಲ್ಲಿಂದ ಮೋಟಾರಿನಲ್ಲಿ ಪ್ರಯಾಣಮಾಡಿ ಸತ್ಯಾಗ್ರಹಿಗಳನ್ನು ಮತ್ತೆ ಸೇರಿದರು. ಸತ್ಯಾಗ್ರಹಿಗಳ ಪ್ರಯಾಣ ಮುಂದುವರಿಯಿತು. ಆದರೆ ಸರಕಾರ ಗಾಂಧೀಜಿಯನ್ನು ಹೊರಗಡೆ ಬಿಡಲಿಲ್ಲ. ಕೂಡಲೆ ಮತ್ತೆ ಅವರ ದಸ್ತಗಿರಿಯಾಯಿತು. ಅವರ ಜೊತೆಗಾರರನೇಕರ ದಸ್ತಗಿರಿಯೂ ಆಯಿತು. ಭಾರತೀಯರು ನೋಡಲಾಗದ ದೂರಸ್ಥಳದಲ್ಲಿ ಗಾಂಧೀಜಿಯನ್ನು ಸೆರೆಯಲ್ಲಿಡಲಾಯಿತು.

" ನೇಟಾಲಿನ ಭಾರತೀಯ ಕೂಲಿಗಾರರು ಸಾಕಾದಷ್ಟು ಎಚ್ಚತ್ತಿದ್ದರು. ಪ್ರಪಂಚದ ಯಾವಶಕ್ತಿಯೂ ಅವರನ್ನು ತಡೆಯುವಂತಿರಲಿಲ್ಲ. ಅಕ್ಕಸಾಲೆ ಚಿನ್ನವನ್ನು ಒರೆಗಲ್ಲಿಗೆ ಉಜ್ಜಿ ನೋಡುತ್ತಾನೆ. ಆದರೂ ಅದರ ಶುದ್ಧತೆಯಲ್ಲಿ ಅವನಿಗೆ ತೃಪ್ತಿತೋರದಿದ್ದರೆ ಅದನ್ನು ಬೆಂಕಿಯಲ್ಲಿ ಕಾಯಿಸಿ ಕಶ್ಮಲವೆಲ್ಲವೂ ಹಾರಿಹೋಗಿ ಶುದ್ಧ ಚಿನ್ನಮಾತ್ರ ಉಳಿದುಕೊಳ್ಳುವಂತೆ ಚಮ್ಮಟಿಗೆಯಿಂದ ಬಡಿಯುತ್ತಾನೆ. ದಕ್ಷಿಣ ಆಫ್ರಿಕದ ಭಾರತೀಯರು ಇಂತಹ ಪರೀಕ್ಷೆಗಳನ್ನು ದಾಟಿದರು. ಪಡಬಾರದ ಕಷ್ಟಗಳನ್ನು ಅನುಭವಿಸಿದರು. ಸತ್ಯಾಗ್ರಹಿಗಳನ್ನು ರೈಲಿನಲ್ಲಿ ತುಂಬಿ ಮಧ್ಯದಲ್ಲಿ ಅವರಿಗೆ ಆಹಾರವನ್ನು ಕೊಡದೆ ನೇಟಾಲಿಗೆ ಕೊಂಡುಹೋದರು. ಅವರನ್ನು ಕಾರಾಗೃಹಕ್ಕೆ ಕಳಿಸಿದರು. ಆದರೆ ಇದರಿಂದ ಸರಕಾರಕ್ಕೆ ಖರ್ಚು ಹೆಚ್ಚಾಯಿತಲ್ಲದೆ ಸಾವಿರಗಟ್ಟಲೆ ಸತ್ಯಾಗ್ರಹಿಗಳನ್ನು ಬಂಧನದಲ್ಲಿಡುವುದು ಕಷ್ಟವಾಯಿತು. ಜೊತೆಗೆ ಗಣಿಗಳೆಲ್ಲ ಮುಚ್ಚಬೇಕಾಗಿ ಬಂತು. ಹೀಗೆ ಅದೆಷ್ಟುದಿನ ನಡೆದಿದ್ದರೂ ಸರಕಾರ ತನ್ನಷ್ಟಕ್ಕೆ ತಾನೆ ಭಾರತೀಯರ ಮೇಲೆ ಹೇರಿದ್ದ ತಲೆಗಂದಾಯವನ್ನು ವಜಾಮಾಡಬೇಕಾಗುತ್ತಿತ್ತು. ಆದುದರಿಂದ ಸರಕಾರದವರು ಹೊಸ ರೀತಿಯನ್ನು ಕಂಡು ಹಿಡಿದರು. ಗಣಿಗಳಿದ್ದ ಸ್ಥಳಗಳನ್ನೇ ಜೈಲುಗಳೆಂದು ಕರೆದರು. ಸುತ್ತಲು ಕಬ್ಬಿಣದ ಜಾಲಂದರಗಳನ್ನು ಬಳಸಿ ಕಟ್ಟಿದರು. ಒಳಗೆ ಸತ್ಯಾಗ್ರಹಿಗಳನ್ನೆಲ್ಲಾ ತುಂಬಿದರು. ಗಣಿಗಳ ಮಾಲಿಕರ ಕೆಲಸಗಾರರನ್ನೇ ವಾರ್ಡರುಗಳಾಗಿ ನೇಮಿಸಿದರು. ಈ ಏರ್ಪಾಡಿನಿಂದ ಗಣಿಗಳ ಕೆಲಸ ಮತ್ತೆ ಪ್ರಾರಂಭವಾಯಿತು. ಆದರೆ ಇದು ಬಹುಕಾಲ ನಡೆಯಲಿಲ್ಲ. ಸತ್ಯಾಗ್ರಹಿಗಳು ತಾವು ಕೆಲಸಮಾಡುವುದಿಲ್ಲವೆಂದು ಪುರಸ್ಕಾರ ಹಿಡಿದರು. ಅದಕ್ಕಾಗಿ ಚಡಿಯ ಏಟುಗಳನ್ನೂ ಬೂಟ್ಸ್‌ಕಾಲಿನ ಒತ್ತುಗಳನ್ನೂ ಬಯ್ಗುಳನ್ನೂ ಶಾಂತಿಯಿಂದ ಸ್ವೀಕರಿಸಿದರು."

ಈ ವರ್ತಮಾನ ಭರತಖಂಡಕ್ಕೂ ತಲಪಿತು. ದೇಶವೇ ಕುದಿಗೊಂಡಿತು. ಆಗ ವೈಸ್‌ರಾಯ್‌ರವರಾಗಿದ್ದ ಲಾರ್ಡ್ ಹಾರ್ಡಿಂಗರು

ದಕ್ಷಿಣ ಆಫ್ರಿಕದ ಸಂಯುಕ್ತ ಸರಕಾರದ ನೀತಿಯನ್ನು ಖಂಡಿಸಿದರು. ಇದು ಆಫ್ರಿಕದಲ್ಲಿ ಇಂಗ್ಲೆಂಡಿನಲ್ಲಿಯೂ ಒಂದು ಪರಿಣಾಮವನ್ನುಂಟು ಮಾಡಿತು. ಈ ಚಳುವಳಿಯಿಂದ ದಕ್ಷಿಣ ಆಫ್ರಿಕದಲ್ಲಿದ್ದ ಎಲ್ಲಾ ಬಗೆಯ ಭಾರತಿಯ ಕೂಲಿಗಾರರೂ ಎಚ್ಚೆತ್ತರು. ಅವರೆಲ್ಲರೂ ಮುಷ್ಕರಕ್ಕೆ ಪ್ರಾರಂಭಿಸಿದರು. ಮುಷ್ಕರಕಾರರೆಲ್ಲರೂ ಒಟ್ಟಿಗೆ ಸೇರಿದರೆ ಅರುವತ್ತು ಸಾವಿರದಷ್ಟಾಗುತ್ತಿದ್ದರು. ಇದನ್ನು ನೋಡಿದ ಸರಕಾರದ ಕಣ್ಣು ಕೆಂಪಾಯಿತು. ಅದು ರಕ್ತಕ್ಕಾಗಿ ದಾಹಗೊಂಡ ಯುದ್ಧ ಸೈನಿಕರು ಮುಷ್ಕರಕಾರರನ್ನು ಬೇಟೆಯಾಡಿ ತಂದು ಕೆಲಸಮಾಡಿಸುವ ಏರ್ಪಾಡಿಟ್ಟರು. ಎಲ್ಲಿಯಾದರೂ ಒಂದು ಸಣ್ಣ ಗಲಾಟೆಯಾದರೂ ಗುಂಡು ಹಾರಿಸಿ ಜನರನ್ನು ಸುಡುವುದೇ ಮೊದಲನೆಯ ಕೆಲಸವಾಯಿತು. ಸತ್ಯಾಗ್ರಹದ ನಾಯಕರನ್ನೆಲ್ಲಾ ಬಂಧನದಲ್ಲಿಟ್ಟರು. ಆದರೂ ಭಾರತೀಯರು ಎದೆಗುಂದಲಿಲ್ಲ. ಸತ್ಯಾಗ್ರಹ ಯಶಸ್ವಿಯಾಗಿ ನಡೆಯುತ್ತಲೇ ಇತ್ತು.

ಈ ಎಲ್ಲಾ ಹಾವಳಿಯ ಸುದ್ದಿಯೂ ಭಾರತಕ್ಕೆ ಮುಟ್ಟಿತು. ಗೋಖಲೆಯವರು ದೀನಬಂಧು ಸಿ. ಎಫ್. ಆಂಡ್ರೂಸ್‌ರವರನ್ನು ಸತ್ಯಾಗ್ರಹಿಗಳ ಸಹಾಯಕ್ಕೆಂದು ಆಫ್ರಿಕಾಕ್ಕೆ ಕಳಿಸಿದರು. ಅವರು ಅಲ್ಲಿಗೆ ಹೋಗಿ ತಲಪುವಷ್ಟರಲ್ಲಿ ಅಲ್ಲಿನ ಸರಕಾರ ತನ್ನ ಸೋಲನ್ನು ಒಪ್ಪಿಕೊಂಡು ಗಾಂಧೀಜಿ ಮೊದಲಾದ ನಾಯಕರ ಬಿಡುಗಡೆ ಮಾಡಿ ಸಂಧಾನದ ಪ್ರಯತ್ನಕ್ಕೆ ಯತ್ನಿಸಿತ್ತು. ಆದರಿನ್ನೂ ಸಮರ ಮುಗಿದಿರಲಿಲ್ಲ.

ಇಷ್ಟರಲ್ಲಿ ಭಾರತೀಯರ ಅದೃಷ್ಟದಿಂದ ಸಂಯುಕ್ತ ರೈಲ್ವೆಯ ಯೂರೋಪಿಯನ್ ಕೆಲಸಗಾರರ ಮುಷ್ಕರ ಬೇರೆ ಪ್ರಾರಂಭವಾಯಿತು. ಆ ಮುಷ್ಕರ ಭಾರತೀಯರ ಸತ್ಯಾಗ್ರಹದಂತಲ್ಲದೆ ರಕ್ತದಾಹದಿಂದ ಕೂಡಿತ್ತು. ಇದರೊಡನೆ ಭಾರತೀಯರ ಮುಷ್ಕರವನ್ನು ಹೋಲಿಸುವುದಾದರೆ ಸೈತಾನನೊಡನೆ ದೇವತೆಯನ್ನು ಹೋಲಿಸಿದಂತಿತ್ತು. ಇದನ್ನು

ನೋಡಿ ಸರ್ಕಾರ ನಾಚಿ ತನ್ನ ತಪ್ಪನ್ನು ಒಪ್ಪಿಕೊಂಡಿತು. ಭಾರತೀಯರ ಶ್ರಮ ಸಾರ್ಥಕವಾಯಿತು. ಅವರ ಸತ್ಯಾಗ್ರಹಕ್ಕೆ ಜಯ ಲಭಿಸಿತು.

ಇಷ್ಟಾದ ಮೇಲೆ ಟಾಲ್‌ಸ್ಟಾಯ್ ಫಾರಂ ಆಶ್ರಮದ ವಿಷಯವನ್ನು ಕೊಂಚ ತಿಳಿಯುವುದು ಆವಶ್ಯಕ. ಸತ್ಯಾಗ್ರಹ ಕದನದಲ್ಲಿ ಭಾಗವಹಿಸಿ ಸೆರೆಮನೆಗೆ ಹೋದವರ ಕುಟುಂಬಗಳು ಒಟ್ಟಾಗಿದ್ದು ಸರಳ ಜೀವನ ನಡಸಲು ಅನುಕೂಲವಾಗುವಂತೆ ಟ್ರಾನ್ಸ್‌ವಾಲಿನಲ್ಲಿ ಕಾಲಿನ್‌ಬಾಕರು ಕೊಟ್ಟ ನೂರಾರು ಎಕರೆ ಜಮೀನಿನಲ್ಲಿ ಗಾಂಧೀಜಿ ಈ ಆಶ್ರಮವನ್ನು ಸ್ಥಾಪಿಸಿದರು. ಈ ಆಶ್ರಮದ ಬಾಲಕ ಬಾಲಕಿಯರಿಗೆ ವಿದ್ಯಾಭ್ಯಾಸ ಕೊಡಲು ಏನಾದರೂ ವ್ಯವಸ್ಥೆ ಮಾಡುವುದು ಅವಶ್ಯವೆಂದು ಗಾಂಧಿಯವರಿಗೆ ಕಂಡುಬಂತು. ಅಲ್ಲಿ ಹಿಂದು, ಮುಸಲ್ಮಾನ, ಪಾರಸಿ, ಈಸಾಯಿ ಹೀಗೆ ಎಲ್ಲ ಮತದ ಮಕ್ಕಳಿದ್ದರು. ಆ ಆಶ್ರಮದಲ್ಲಿ ಗಾಂಧೀಜಿಗೆ ಕುಟುಂಬದಲ್ಲಿ ತಂದೆಗಿರುವ ಸ್ಥಾನವಿತ್ತು. ಆದುದರಿಂದ ಅಲ್ಲಿಯ ಮಕ್ಕಳಿಗೆಲ್ಲ ನೈತಿಕ ಮತ್ತು ಸಾಹಿತ್ಯ ಶಿಕ್ಷಣ ಕೊಡಲು ಯೋಚಿಸಿ ತಾವೇ ಆ ಕೆಲಸವನ್ನು ಕೈಗೊಂಡರು. ಶರೀರ ವ್ಯಾಯಾಮ ಅಕ್ಷರಭ್ಯಾಸದ ಸಂಗಡಲೇ ನಡೆಯುವ ಏರ್ಪಾಡಾಯಿತು. ಇದು ಮಕ್ಕಳ ದಿನಚರಿಯಲ್ಲಿಯೇ ಒದಗುತ್ತಿದ್ದಿತು. ಏಕೆಂದರೆ ಆಶ್ರಮದಲ್ಲಿ ಕೆಲಸಕ್ಕೆಂದೇ ಸೇವಕರಾರೂ ಇರಲಿಲ್ಲ. ಅಡಿಗೆ ಮೊದಲುಗೊಂಡು ಕಕ್ಕಸು ಬಳಿಯುವವರೆಗೂ ಕೆಲಸಗಳನ್ನೆಲ್ಲಾ ಆಶ್ರಮವಾಸಿಗಳೇ ಮಾಡುತ್ತಿದ್ದರು. ನೋಡಿಕೊಳ್ಳುವುದಕ್ಕೆ ಬೇಕಾದಷ್ಟು ಹಣ್ಣಿನ ಗಿಡಗಳಿದ್ದವು. ಮಾಡುವುದಕ್ಕೆ ಸಾಕಾದಷ್ಟು ತೋಟದ ಕೆಲಸವೂ ಇರುತ್ತಿದ್ದಿತು. ಇದರ ಜೊತೆಗೆ ಎಕ್ಕಡ ಹೊಲೆಯುವುದು ಮೊದಲಾದ ಕೆಲಸಗಳನ್ನು ಕಲಿಸಿ ಔದ್ಯೋಗಿಕ ಶಿಕ್ಷಣವೂ ದೊರೆಯುವ ಏರ್ಪಾಡಾಯಿತು. ಮಕ್ಕಳ ಶಾರೀರಕ ಮತ್ತು ಮಾನಸಿಕ ಶಿಕ್ಷಣಗಳಿಗಿಂತಲೂ ಅವರ ಆಧ್ಯಾತ್ಮಿಕ ಶಿಕ್ಷಣ ಚೆನ್ನಾಗಿ ನಡೆಯಿತು. ಹೀಗೆ ಗಾಂಧೀಜಿ ನಿಜವಾಗಿಯೂ ಆಶ್ರಮದ ಮಕ್ಕಳೆಲ್ಲರ

ಶಿಕ್ಷಕರೂ ಪೋಷಕರೂ ಆಶ್ರಮವಾಸಿಗಳ ನಾಯಕರೂ ಆದರು. ಆಶ್ರಮದಲ್ಲಿ ಯಾರಾದರೂ ನೀತಿಗೆ ವಿರುದ್ಧವಾಗಿ ನಡೆದರೆ ಅದರ ಪ್ರಾಯಶ್ಚಿತ್ತಕ್ಕೆ ತಾವು ಉಪವಾಸಮಾಡಲು ಪ್ರಾರಂಭಿಸಿದರು.

ಮಹಾತ್ಮರ ಸತ್ಯಶೋಧನೆಯಲ್ಲಿ ಅವರ ಹೆಂಡತಿ ಕಸ್ತೂರ ಬಾ ಅವರು ಬಹುಮಟ್ಟಿಗೆ ನೆರವಿತ್ತರು. ಆಧುನಿಕ ಶಿಕ್ಷಣವಿಲ್ಲದಿದ್ದರೂ ತಮ್ಮ ಪತಿಯ ಇಂಗಿತವನ್ನರಿತು ಅನುಸರಿಸಿ ನಡೆಯುವ ಹಿಂದೂ ಸ್ತ್ರೀತ್ವ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅವರು ಸರಳ ಸ್ವಭಾವದವರು. ಸ್ವಾತಂತ್ರ್ಯಪ್ರಿಯೆಯಾಗಿದ್ದು ಹಿಡಿದ ಕೆಲಸವನ್ನು ಸಾಧಿಸುವ ದೃಢ ಸಂಕಲ್ಪವುಳ್ಳವರು. ಎಂತಹ ಕಾರ್ಯವನ್ನಾದರೂ ನಿರ್ವಹಿಸುವ ಶಕ್ತಿ ಅವರಿಗಿತ್ತು. ಜೊತೆಗೆ ಕಷ್ಟಸಹಿಷ್ಣು. ಒಮ್ಮೆ ಅವರು ಆಫ್ರಿಕದಲ್ಲಿದ್ದಾಗ ಕಾಯಿಲೆ ಬಿದ್ದರು. ಶಸ್ತ್ರಚಿಕಿತ್ಸೆಯಾಗಬೇಕಾಗಿ ಬಂತು. ಜ್ಞಾನ ತಪ್ಪಿಸಲು ಕ್ಲೋರೋಫಾರಂ ತೆಗೆದುಕೊಳ್ಳದೆ ಶಸ್ತ್ರಚಿಕಿತ್ಸೆಯಾಯಿತು. ಅದರಿಂದಾದ ನೋವನ್ನು ಧೈರ್ಯದಿಂದ ಸಹಿಸಿಕೊಂಡರು.

ಕಸ್ತೂರ ಬಾ ಅವರು ಆಚಾರವಂತರು. ಎಂತಹ ಕಠಿನಪ್ರಸಂಗ ದಲ್ಲಾದರೂ ಆಚಾರಕ್ಕೆ ತಪ್ಪಿ ನಡೆಯಲಾರರು. ಒಂದು ಉದಾಹರಣೆ ಕೊಡಬಹುದು. ಡರ್ಬನ್ನಿನಲ್ಲಿ ಶಸ್ತ್ರಚಿಕಿತ್ಸೆಯಾದ ಮೇಲೆ ಅವರು ನಿಶ್ಶಕ್ತರಾದರು. ಅವರನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಅವರಿಗೆ ದನದ ಮಾಂಸದ ಕಷಾಯವನ್ನು ಕೊಡಬೇಕೆಂದು ಗಾಂಧೀಜಿಯ ಒಪ್ಪಿಗೆ ಕೇಳಿದರು. ಗಾಂಧೀಜಿ ಅದಕ್ಕೆ ಒಪ್ಪಲಿಲ್ಲ. ಆದರೂ ಕಸ್ತೂರ ಬಾ ಅವರು ಒಪ್ಪಿದರೆ ಆಗಲಿ ಎಂದು, ಈ ವರ್ತಮಾನವನ್ನು ಅವರಿಗೆ ತಿಳಿಸಿದರು. ಅದಕ್ಕವರು “ನಾನು ದನದ ಮಾಂಸದ ಕಷಾಯ ತೆಗೆದುಕೊಳ್ಳುವುದಿಲ್ಲ. ಮನುಷ್ಯಜನ್ಮ ಅಪರೂಪ; ಅಂತಹ ಕೆಟ್ಟ ಕೆಲಸದಿಂದ ದೇಹವನ್ನು ಅಪವಿತ್ರ ಮಾಡಿಕೊಳ್ಳುವುದಕ್ಕಿಂತ ನಿಮ್ಮ ತೋಳುಗಳಮೇಲೆ ಸಾಯುತ್ತೇನೆ” ಎಂದರು. ಕೊನೆಗೂ ಅವರು ಆ

ಕಷಾಯವನ್ನು ತೆಗೆದುಕೊಳ್ಳಲಿಲ್ಲ. ಅವರಿಗೆ ಚಿಕಿತ್ಸೆ ಮಾಡುತ್ತಿದ್ದ ವೈದ್ಯರು "ಹಾಗಾದರೆ ನಾನು ಚಿಕಿತ್ಸೆಯನ್ನು ಮುಂದುವರಿಸಲಾರೆ" ಎಂದುಬಿಟ್ಟರು. ಕಸ್ತೂರ ಬಾ ಪತಿ ನಂಬಿ ನಡಸುತ್ತಿದ್ದ ಜಲಚಿಕಿತ್ಸೆಯನ್ನು ಹೊಂದಲು ಸತಿ ಸಿದ್ಧರಾದರು. ಆ ಚಿಕಿತ್ಸೆ ಪಡೆದು ಕಸ್ತೂರ ಬಾ ಅವರು ಆರೋಗ್ಯ ಪಡೆದರು.

ಗಂಡಹೆಂಡಿರ ಮಧ್ಯೆ ಬರಬಹುದಾದ ಅಸಮಾಧಾನಗಳು ಗಾಂಧೀಜಿ ಕಸ್ತೂರ ಬಾ ಅವರ ಮಧ್ಯೆ ಹುಟ್ಟಿದಾಗ ಬೇಗನೆ ಒಬ್ಬರನ್ನೊಬ್ಬರು ಅರಿತುಕೊಂಡು ಶಾಂತತೆಯಿಂದ ಒಂದಾಗುತ್ತಿದ್ದರು ಎಂಬುದಕ್ಕೆ ಒಂದು ಉದಾಹರಣೆ: ಗಾಂಧೀಜಿ ಆಫ್ರಿಕದಲ್ಲಿದ್ದಾಗ ಅವರ ಗುಮಾಸ್ತರು ಅವರೊಡನೆಯೇ ವಾಸಿಸುತ್ತಿದ್ದರು. ಅವರಲ್ಲಿ ಎಲ್ಲಾ ಮತದವರಿದ್ದರು. ಗುಮಾಸ್ತರು ವಾಸಿಸುತ್ತಿದ್ದ ಕೊಟಡಿಗಳಲ್ಲಿದ್ದ ಮೂತ್ರವಿಸರ್ಜನೆಯ ಪಾತ್ರೆಗಳನ್ನು ಅವರವರೇ ಚೊಕ್ಕಟಮಾಡುತ್ತಿದ್ದರು. ಮಿಕ್ಕವರ ಕೊಟಡಿಯ ಪಾತ್ರೆಗಳನ್ನು ಗಾಂಧೀಜಿ ಮತ್ತು ಕಸ್ತೂರ ಬಾ ಅವರು ನೋಡಿಕೊಳ್ಳುತ್ತಿದ್ದರು. ಕ್ರೈಸ್ತ ಗುಮಾಸ್ತರೊಬ್ಬರು ಹೊಸದಾಗಿ ಬಂದರು. ಪಂಚಮನಾಗಿದ್ದ ಆ ಗುಮಾಸ್ತರು ಮೂತ್ರವಿಸರ್ಜನೆಗಾಗಿ ಉಪಯೋಗಿಸಿದ ಪಾತ್ರೆಯನ್ನು ತಾವಾಗಲಿ ಗಂಡನಾಗಲಿ ಚೊಕ್ಕಟ ಮಾಡುವುದೆಂದರೆ ಅವರಿಗೆ ಸಹಿಸದ ಮಾತಾಯಿತು. ಅವರು ಕೋಪದಿಂದ ಕಣ್ಣು ಕೆಂಪಗೆ ಮಾಡಿಕೊಂಡು ಕಂಬನಿ ಉದುರಿಸುತ್ತ ಆ ಪಾತ್ರೆಯನ್ನು ಹೊರಗೆ ತಂದರು. ಮುಂದೆ ಗಾಂಧೀಜಿಯೇ ಹೇಳಲಿ: "ನಾನು ಕ್ರೂರಿ ದಯಾಳುವಾದ ಗಂಡನಾಗಿದ್ದೆ. ನಾನು ಆಕೆಯ ಶಿಕ್ಷಕನೆಂದು ತಿಳಿದುಕೊಂಡು ಮೂಢಪ್ರೇಮದಿಂದ ಆಕೆಗೆ ಹಿಂಸೆ ಕೊಟ್ಟೆ. ಆಕೆ ಪಾತ್ರೆಯನ್ನು ಶುಚಿಮಾಡುವುದರಿಂದ ಮಾತ್ರ ನನಗೆ ತೃಪ್ತಿಯಿರಲಿಲ್ಲ. ಅದನ್ನು ಸಂತೋಷದಿಂದ ಮಾಡಬೇಕೆಂದು ಬಯಸಿದೆ. ಗಟ್ಟಿ ಧ್ವನಿಯಲ್ಲಿ ಹೇಳಿದೆ--'ಈ ಬಗೆಯ ಹುಚ್ಚಾಟವನ್ನು ನನ್ನ ಮನೆಯಲ್ಲಿ ಸಹಿಸಲಾರೆ.'"

“ ‘ ನಿಮ್ಮ ಮನೆಯನ್ನು ನೀವೆ ಇಟ್ಟುಕೊಳ್ಳಿ. ನನ್ನನ್ನು ಕಳಿಸಿಬಿಡಿ ಎಂದು ಕೂಗಿದಳು. ನನ್ನನ್ನು ನಾನು ಮರೆತೆ. ನನ್ನಲ್ಲಿದ್ದ ದಯೆಯೆಲ್ಲ ಒಣಗಿಹೋಯಿತು. ಆ ಬಡ ಹೆಂಗಸಿನ ಕೈಹಿಡಿದು ಎಳೆದು ಹೊರಗೆ ತಳ್ಳಲು ಎದುರಿಗಿದ್ದ ಬಾಗಿಲನ್ನು ತೆರೆಯಲು ಹೋದೆ. ಕಣ್ಣೀರು ಆಕೆಯ ಕೆನ್ನೆಯ ಮೇಲೆ ಉಕ್ಕಿಹರಿಯುತ್ತಿತ್ತು. ‘ ನಿಮಗೇನು ನಾಚಿಕೆಯಾಗುವುದಿಲ್ಲವೇ ? ಇಷ್ಟರ ಮಟ್ಟಿಗೆ ನಿಮ್ಮನ್ನು ನೀವು ಮರೆಯಬಹುದೆ? ಇಲ್ಲಿ ನನಗೆ ಆಶ್ರಯ ಕೊಡಲು ತೌರಾಗಲಿ ನೆಂಟರಿಷ್ಟರಾಗಲಿ ಇಲ್ಲ. ನಾನು ಎಲ್ಲಿ ಹೋಗಲಿ ? ನಿಮ್ಮ ಹೆಂಡತಿಯಾದ್ದರಿಂದ ನಾನು ನಿಮ್ಮ ಬಂದಿಯಾಗಿ ಒತ್ತಗಳನ್ನು ತಿನ್ನಬೇಕೆಂದು ಯೋಚಿಸುವಿರಾ ? ದೇವರಾಣೆ ಬಾಗಿಲು ಮುಚ್ಚಿ ಸರಿಯಾಗಿ ನಡೆದುಕೊಳ್ಳಿ ; ನಮ್ಮ ಈ ಬಡಿದಾಟವನ್ನು ಯಾರೂ ನೋಡದಿರಲಿ ’ ಎಂದಳು.

“ ನಾನು ಧೈರ್ಯವನ್ನು ತೋರಿಸಿಕೊಂಡೆ. ಆದರೆ ನಿಜವಾಗಿ ನನಗೆ ನಾಚಿಕೆಯಾಯಿತು. ಬಾಗಿಲನ್ನು ಮುಚ್ಚಿದೆ. ನನ್ನ ಹೆಂಡತಿ ನನ್ನನ್ನು ಬಿಡಲಾರದವಳಾಗಿದ್ದರೆ ನಾನೂ ಅವಳನ್ನು ಬಿಡಲಾರದವನಾಗಿದ್ದೆ. ನಮ್ಮಲ್ಲಿ ಬೇಕಾದಷ್ಟು ಮನಸ್ತಾಪಗಳು ಹುಟ್ಟಿದರೂ ಕೊನೆಯಲ್ಲಿ ಶಾಂತಿಯಿಂದ ಒಂದಾಗುತ್ತಿದ್ದೆವು. ಹೆಂಡತಿ ತನ್ನ ಅಸಮಾನವಾದ ಕಷ್ಟ ಸಹಿಷ್ಣುತೆಯಿಂದ ಯಾವಾಗಲೂ ಜಯಶಾಲಿಯಾಗಿದ್ದಾಳೆ.

“ . . . . ನಾನೀಗ ನನ್ನ ಹೆಂಡತಿಯ ಶಿಕ್ಷಕನಾಗಿಲ್ಲ. ಆಕೆ ಇಷ್ಟಪಟ್ಟರೆ, ನಾನು ಹಿಂದೆ ಅವಳ ವಿಷಯದಲ್ಲಿ ಕ್ರೂರವಾಗಿದ್ದಂತೆ ಈಗ ಆಕೆ ನನ್ನ ವಿಷಯದಲ್ಲಿರಬಲ್ಲಳು. ನಾವಿಬ್ಬರೂ ನಮ್ಮೊಳಗಿನ ಅನೇಕ ವಿಷಮಘಟನೆಗಳಲ್ಲಿ ಜಯಶೀಲರಾದ ಸ್ನೇಹಿತರು. ಈಗ ಒಬ್ಬರು ಇನ್ನೊಬ್ಬರ ಕಾಮಪಾತ್ರವಲ್ಲ. ಆಕೆ ನನ್ನ ಕಾಯಿಲೆಗಳಲ್ಲಿ ಪ್ರೀತಿಯಿಂದ, ಪ್ರತಿಫಲಾಪೇಕ್ಷೆಯಿಲ್ಲದೆ ನೋಡಿಕೊಂಡಿದ್ದಾಳೆ.



ಕಸ್ತೂರ ಬಾ



ದೇಶಸೇವೆಗಾಗಿ ಜೈಲಿಗೆ ಹೋಗುವುದರಲ್ಲಾಗಲಿ ಕಷ್ಟಗಳನ್ನು ಅನುಭವಿಸುವುದರಲ್ಲಾಗಲಿ ಕಸ್ತೂರ ಬಾ ಅವರು ಯಾವಾಗಲು ಮುಂದು. ಆಫ್ರಿಕದ ಸತ್ಯಾಗ್ರಹದ ಸಮಯದಲ್ಲಿ ಜೈಲುವಾಸಕ್ಕೆ. ತಾವೇ ಮುಂದೆ ಬಂದರು. ಅಲ್ಲದೆ ಭಾರತದ ಸ್ವಾತಂತ್ರ್ಯಸಂಗ್ರಾಮದಲ್ಲಿ ಹಲವು ಸಾರಿ ಜೈಲುವಾಸವನ್ನು ಅನುಭವಿಸಿದರು. ಕೊನೆಗೂ ಅವರು ಭಾರತ ಸ್ವಾತಂತ್ರ್ಯದ ಕೊನೆಯ ಹೋರಾಟದ ಸಮಯದಲ್ಲಿ (೧೯೪೪) ತಮ್ಮ ೭೪ ನೆಯ ವಯಸ್ಸಿನಲ್ಲಿ ಜೈಲಿನಲ್ಲೇ ಕಾಲವಾದರು. ಇಂಥವರ ನಿಸ್ಸೀಮ ಸೇವೆಯಿಂದಲೇ ಸತ್ಯಕ್ಕೆ ಜಯ ಲಭಿಸಿತು.

ಭಾರತೀಯ ಸತೀತ್ವಕ್ಕೆ ಅನುಸಾರವಾಗಿಯೇ ಕಸ್ತೂರ ಬಾ ಅವರು ತಮ್ಮ ಪತಿಯ ದಾರಿಯನ್ನು ಅನುಸರಿಸುವುದೇ ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದು ನಡೆದರು. "ನನ್ನ ಪತಿಯನ್ನು ಅನುಸರಿಸಿ ನಾನು ಕೃತಾರ್ಥಳಾಗುತ್ತೇನೆ" ಇದು ಅವರ ನಂಬಿಕೆ.

ಇನ್ನು ಜಯ ಲಭಿಸಿ ಸತ್ಯಾಗ್ರಹ ಕದನ ಮುಗಿದನಂತರದ ವಿಷಯ. ಗಾಂಧೀಜಿ ಇಂಗ್ಲೆಂಡಿನ ಮೂಲಕ ಸ್ವದೇಶಕ್ಕೆ ಹಿಂತಿರುಗ ಬೇಕೆಂದು ಆಗ ಲಂಡನಿನಲ್ಲಿದ್ದ ಗೋಖಲೆಯವರಿಂದ ಕಾಗದ ಬಂತು. ಅವರು ತಮ್ಮ ಸಂಸಾರದೊಡನೆ ಇಂಗ್ಲೆಂಡಿಗೆ ಹೋದರು. ಇದಕ್ಕೆ ಎರಡು ಮೂರು ದಿವಸದ ಮೊದಲು ಮಹಾಯುದ್ಧ ಪ್ರಾರಂಭವಾಗಿತ್ತು. ತಮ್ಮನ್ನು ಅಧೋಗತಿಗೆ ಸೆಳೆಯುತ್ತಿರುವ ಬ್ರಿಟಿಷರಿಗೆ ಈ ಯುದ್ಧದಲ್ಲಿ ಸಹಾಯಮಾಡಕೂಡದೆಂಬ ಭಾವನೆ ಭಾರತೀಯರಲ್ಲಿ ಮೂಡಿತ್ತು. ಅಲ್ಲದೆ ಈ ಯುದ್ಧವೆಂಬ ಕೊಲೆಪಾತಕತನಕ್ಕೆ ಯಾವ ವಿಧದಲ್ಲೇ ಆಗಲಿ ಸಹಾಯಮಾಡುವುದು ಸರಿಯಲ್ಲ ಎಂಬ ಅಹಿಂಸಾವಾದಿಗಳ ವಾದ ಬೇರೆ ಅಲ್ಲಲ್ಲೇ ಕೇಳಿಬರುತ್ತಿತ್ತು. ಆದರೂ ಗಾಂಧೀಜಿ ಬ್ರಿಟಿಷರಿಗೆ ಕಷ್ಟಕಾಲದಲ್ಲಿ ಸೇವೆ ಮಾಡುವುದರಿಂದಲೇ ಭಾರತದ ಸ್ವಾತಂತ್ರ್ಯಗಳಿಸಲು ದಾರಿಮಾಡ ಬಹುದೆಂದು ಯೋಚಿಸಿದರು. ಆಗ ಅವರು ಬ್ರಿಟಿಷರಲ್ಲಿ ಇಟ್ಟಿದ್ದ ರಾಜ

ಭಕ್ತಿಯ ವಿಷಯವನ್ನು ಅವರೇ ಹೇಳಿದ್ದಾರೆ. "ಬ್ರಿಟಿಷರ ಪ್ರಭುತ್ವದಲ್ಲಿ ನಾನು ಇಟ್ಟಿದ್ದಂತಹ ರಾಜಭಕ್ತಿಯನ್ನು ಇನ್ನಾರೂ ಇಟ್ಟಿರಲಿಲ್ಲವೆಂದು ಹೇಳಬಹುದು. ಈ ನನ್ನ ರಾಜನಿಷ್ಠೆಗೆ ಸತ್ಯದಲ್ಲಿ ನನಗಿದ್ದ ಪ್ರೇಮವೇ ಮೂಲವಾಗಿದ್ದಿತೆಂದು ನನಗೆ ಈಗ ಗೊತ್ತಾಗುತ್ತದೆ. ರಾಜನಿಷ್ಠೆಯನ್ನು ಯಾವ ಗುಣವನ್ನೇ ಆಗಲಿ ಕಪಟದಿಂದ ತೋರಸಿಕೊಳ್ಳುವುದು ನನಗೆ ಯಾವಾಗಲೂ ಸಾಧ್ಯವಾಗಲಿಲ್ಲ. ನನಗೆ ಬ್ರಿಟಿಷರ ಆಡಳಿತದಲ್ಲಿ ದೋಷಗಳು ಕಾಣುತ್ತಿರಲಿಲ್ಲವೆಂದಲ್ಲ. ನನ್ನ ಜೀವಮಾನದಲ್ಲಿ ಯಾವಾಗಲೂ ಈ ರಾಜಭಕ್ತಿಯಿಂದ ಸ್ವಪ್ರಯೋಜನವನ್ನು ಸಾಧಿಸಿಲ್ಲ; ಅದರ ಮೂಲಕ ಸ್ವಕಾರ್ಯವನ್ನು ಕೈಗೂಡಿಸಲೆಳಸಲಿಲ್ಲ. ರಾಜನಿಷ್ಠೆಯಿಂದಿರುವುದು ನನ್ನ ಕರ್ತವ್ಯವೆಂದರಿತು ಅದರಿಂದ ಪ್ರತಿಫಲವನ್ನು ನಿರೀಕ್ಷಿಸದೆ ಆ ಕರ್ತವ್ಯವನ್ನು ನೆರವೇರಿಸುತ್ತಿದ್ದೆನು." ಈ ಭಾವನೆಯ ಜೊತೆಗೆ ಯುದ್ಧದಲ್ಲಿ ನೊಂದ ಬಡಪಾಯಿಗಳನ್ನು ಸತ್ಕರಿಸುವುದು ಧರ್ಮವೆಂದೇ ಅವರು ಅರಿತರು. ಸೇವಾದಳವೊಂದನ್ನು ಕೂಡಿಸಿದರು. ಅಷ್ಟರಲ್ಲಿ ಕಾಯಿಲೆ ಬಂದುದರಿಂದ ಅವರು ಯುದ್ಧರಂಗಕ್ಕೆ ಹೋಗದಿದ್ದರೂ ಅವರ ದಳದವರು ಅಲ್ಲಿಗೆ ಹೋಗಿ ಸೇವೆ ಸಲ್ಲಿಸಿದರು.

ಗಾಂಧೀಜಿಗೆ ಎದೆ ಮತ್ತು ಪಕ್ಕೆ ಶೂಲೆ ಹೆಚ್ಚಾಯಿತು. ಆಗಲೂ ಅವರು ಆಹಾರ ವಿಷಯಕವಾದ ಪ್ರಯೋಗಗಳನ್ನು ನಡಸುತ್ತಿದ್ದರು. ನೆಲಗಡಲೆ, ಬಾಳೆಕಾಯಿ, ಬಾಳೆಹಣ್ಣು, ನಿಂಬೆಹಣ್ಣು, ಆಲಿವ್ ಎಣ್ಣೆ, ಚಪ್ಪರಬದನೆ ಇವನ್ನು ಆಹಾರವಾಗಿ ತೆಗೆದುಕೊಳ್ಳುತ್ತಿದ್ದರು. ಹಾಲು, ಧಾನ್ಯ, ಬೇಳೆ ಮೊದಲಾದುವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದರು. ಡಾ|| ಜೀವರಾಜ ಮೆಹತಾರವರು ಔಷಧಿ ಕೊಡುತ್ತಿದ್ದರು. ಅವರೂ ಗೋಖಲೆಯವರೂ ಗಾಂಧೀಜಿ ಸುಧಾರಿಸಿದ ಆಹಾರವನ್ನು ಬಿಟ್ಟು ಬೇರೆ ಆಹಾರವನ್ನು ತೆಗೆದುಕೊಳ್ಳುವಂತೆ ಹೇಳಿದರು. ಅದರೂ ಗಾಂಧೀಜಿ ಬದಲಾಯಿಸಲಿಲ್ಲ. ಕಾಯಿಲೆ ಹೆಚ್ಚು ಗುಣ

ಮುಖ ಕಾಣದಿರಲು ಅವರು ಭರತಖಂಡಕ್ಕೆ ಹೋಗಬೇಕೆಂದು ವೈದ್ಯರು ಸಲಹೆ ಕೊಟ್ಟರು. ಆ ಸಲಹೆಗೆ ಒಪ್ಪಿ ಗಾಂಧೀಜಿ ಇಂಗ್ಲಂಡನ್ನು ಬಿಟ್ಟು ಇಂಡಿಯಾಕ್ಕೆ ಬಂದರು. ಇವರು ಭರತಖಂಡವನ್ನು ಬಿಟ್ಟು ಹತ್ತು ವರ್ಷಗಳಾಗಿದ್ದವು. ಇವರಿಗಿಂತ ಮೊದಲೇ ಭರತಖಂಡಕ್ಕೆ ಹಿಂತಿರುಗಿದ್ದ ಗೋಖಲೆಯವರು ಬೊಂಬಾಯಿಯಲ್ಲಿ ಗಾಂಧೀಜಿಯನ್ನು ವಿಜೃಂಭಣೆಯಿಂದ ಸ್ವಾಗತಿಸಲು ಸಕಲ ಏರ್ಪಾಡನ್ನೂ ಮಾಡಿದ್ದರು. "ಭಾರತದ ಆದರ್ಶಪುರುಷರಾದ ಗಾಂಧೀಜಿ ತಮ್ಮ ಜೀವನದಲ್ಲಿ ಸಂನ್ಯಾಸದ ಅತ್ಯುತ್ತಮ ಆದರ್ಶವನ್ನು ಸಾಧಿಸಿದ್ದಾರೆ. ಪ್ರಪಂಚವನ್ನು ಮಾತ್ರವಲ್ಲದೆ ತನ್ನನ್ನು ಸಹ ದೇಶಸೇವೆಗಾಗಿ ತ್ಯಾಗಮಾಡಿದ್ದಾರೆ. ಸೇವೆಯ ಉದ್ದೇಶಗಳೆರಡು. ಮೊದಲನೆಯದು ತಿಳಿವಳಿಕೆಗಾಗಿ ಮಾಡುವ ಸೇವೆ. ಅದನ್ನು ಮಾಡುವವನು ತನ್ನ ಬೆಳವಣಿಗೆಯಲ್ಲಿ, ಜ್ಞಾನಾಭಿವೃದ್ಧಿಯಲ್ಲಿ ಹಿರಿಯರ ಅನುಗ್ರಹ ಸಹಕಾರ ಸಹಾಯಗಳನ್ನು ಬಯಸುತ್ತಾನೆ. ಈ ಬಗೆಯ ಸೇವೆ ಅಯಾಚಿತವಾದದ್ದು, ಕಡ್ಡಾಯದ್ದು. ಈ ಸೇವಾಬುದ್ಧಿ ಕ್ರಮೇಣ ಅಭಿವೃದ್ಧಿಹೊಂದಿದಾಗ ಜೀವನಾನುಭವ, ಧೈರ್ಯ, ಚಾತುರ್ಯ, ಚೈತನ್ಯಗಳನ್ನು ಗಳಿಸಿಕೊಂಡಾಗ ಇವೆಲ್ಲವೂ ಸೇರಿ ಮನುಷ್ಯನು ಸತ್ಪುರುಷನಾಗುತ್ತಾನೆ. ಆಗ ಅವನಿಗೆ ಹೊರಗಣ ಪ್ರಪಂಚದ ಆಸರೆ ಬೇಕಾಗುವುದಿಲ್ಲ. ಪ್ರಪಂಚದಲ್ಲಿ ಕಲಿಯಬೇಕಾಗಿರುವುದೆಲ್ಲ ಅವನ ಹಸ್ತಗತವಾಗಿರುತ್ತದೆ. ಆಗ ಅವನು ಎರಡನೆಯ ಬಗೆಯ ಐಚ್ಛಿಕ ಸೇವೆಗಾಗಿ ಜೀವನವನ್ನು ಧಾರೆಯರೆಯುತ್ತಾನೆ. ಆ ಸೇವೆ ಅವನ ಸುತ್ತುಮುತ್ತಿನ ಜನರನ್ನು ಅವನ ಮಟ್ಟಕ್ಕೆ ಏರಿಸುತ್ತದೆ. ಸಹಾಯಾಪೇಕ್ಷಿಗಳಾದವರಿಗೆ ಸಹಾಯ ನೀಡುತ್ತದೆ. ಅದು ಅತ್ಯುಚ್ಚ ಸಂನ್ಯಾಸದ ಧ್ಯೇಯ. ಅಂತಹ ಸಂನ್ಯಾಸಿ ಜನತೆಯ ಸೇವಕ; ಈ ಬಗೆಯ ಸೇವೆಯೇ ಗಾಂಧೀಜಿ ಕೈಕೊಂಡಿರುವುದು. ಇದೇ ಹಿಂದುಗಳ ಆದರ್ಶ ಜೀವನ; ಅದನ್ನು ಗಾಂಧೀಜಿ ಸಾಧಿಸಿದ್ದಾರೆ. ಅವರ ಜೀವನದಲ್ಲಿ ಮನುಷ್ಯತ್ವದ ಸರ್ವ

ಸದ್ಗುಣಗಳೂ ರೂಪವೆತ್ತಿವೆ. ಅಂತಹ ಮನುಷ್ಯನನ್ನೇ ನಾವಿಂದು ಗೌರವಿಸುತ್ತಿರುವುದು.” ಹೀಗೆ ಹೇಳಿದ ಆನೀಬೆಸಂಟರು ಕೆಲವು ವರ್ಷಗಳ ಮೇಲೆ ಗಾಂಧೀಜಿಯನ್ನು ಮಹಾತ್ಮರೆಂದು ಕರೆದರು. ಭಾರತಭೂಮಿ ಅವರಲ್ಲಿದ್ದ ಮಾಹಾತ್ಮ್ಯವನ್ನಾಗಲೇ ಕಾಣುತ್ತಿತ್ತು. ಮಹಾತ್ಮನಾದ ಈ ತನ್ನ ಪ್ರಿಯಪುತ್ರನನ್ನು ಭರತಖಂಡ ಆನಂದದಿಂದ ಸ್ವಾಗತಿಸಿತು.

ಭರತಖಂಡದಲ್ಲಿ

ಮಹಾತ್ಮರು ಬೊಂಬಾಯಿಯಲ್ಲಿ ಸ್ವಲ್ಪದಿನವಿದ್ದು ಪುಣೆಗೆ ಹೋದರು. ಅಲ್ಲಿ ಗೋಖಲೆಯವರೂ ಅವರ ಭಾರತಸೇವಕಸಂಘದ (Servants of India Society) ಸದಸ್ಯರೂ ಅವರನ್ನು ಅತ್ಯಾದರದಿಂದ ಕಂಡರು. ಪುಣೆಯಿಂದ ತನ್ನ ಬಂಧುಗಳನ್ನು ನೋಡಲು ರಾಜಕೋಟೆಗೆ ಪ್ರಯಾಣ ಬೆಳಸಿದರು. ಅಲ್ಲಾಗಲೇ ಸಾರ್ವಜನಿಕ ಕೆಲಸಗಳು ಅವರಿಗಾಗಿ ಕಾದು ಕುಳಿತಿದ್ದವು. ಕಾಥೇವಾಡದ ಜನರು ವೀರಟ್‌ಗ್ರಾಮದ ಸುಂಕದ ಕಟ್ಟೆಯ ತೊಂದರೆಯನ್ನು ಅನುಭವಿಸುತ್ತಿದ್ದರು. ಗಾಂಧೀಜಿ ಆ ತೊಂದರೆಯ ವಿಷಯವನ್ನು ತಿಳಿದುಕೊಂಡರು. ಇವರು ಇಂಗ್ಲಂಡಿನಿಂದ ಬೊಂಬಾಯಿಗೆ ಬಂದಾಗ ಅಲ್ಲಿನ ಗೌರ್ನರರಾಗಿದ್ದ ಲಾರ್ಡ್ ವಿಲ್ಲಿಂಗ್‌ಡನ್ನರು ಇವರನ್ನು ಬರಮಾಡಿಕೊಂಡು ಮಾತಾಡಿದ್ದರು. ಆಗ ಅವರು ಏನು ಕೆಲಸಬಿದ್ದರೂ ಗಾಂಧೀಜಿ ತನ್ನಲ್ಲಿಗೆ ಬರಬಹುದೆಂದು ಹೇಳಿದ್ದರು. ಆದುದರಿಂದ ಅವರು ಸುಂಕದ ಕಟ್ಟೆಯ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ಒಟ್ಟುಗೂಡಿಸಿ ಜನರ ದೂರಿಗೆ ಆಧಾರವಿದೆಯೆಂದು ಭರವಸೆಯುಂಟಾದ ಮೇಲೆ ಬೊಂಬಾಯಿ ಸರಕಾರದೊಡನೆ ಪತ್ರವ್ಯವಹಾರ ನಡಸಿದರು. ಗೌರ್ನರವರ ಆಪ್ತಕಾರ್ಯದರ್ಶಿಗಳನ್ನು ಕಂಡು ಮಾತಾಡಿದುದಲ್ಲದೆ ಗೌರ್ನರವರನ್ನೂ ನೋಡಿ ವಿಷಯವನ್ನು ವಿವರಿಸಿದರು. ಆದರೆ ಅದರಿಂದ ಹೆಚ್ಚು ಪ್ರಯೋಜನವೇನೂ ಆಗಲಿಲ್ಲ. ಆ ಸುಂಕದ ಕಟ್ಟೆಯ ಆಡಳಿತ ತಮ್ಮ ಕೈಯಲ್ಲಿಲ್ಲವೆಂದೂ ಇಂಡಿಯಾ ಸರಕಾರದೊಡನೆ ವ್ಯವಹಾರ ನಡಸಬೇಕೆಂದೂ ಹೇಳಿಬಿಟ್ಟರು. ಗಾಂಧೀಜಿ ಹಾಗೆಯೇ ಮಾಡಿದರೂ ಪರಿಣಾಮವೇನೂ ಆಗಲಿಲ್ಲ. ಕಾಗದಗಳಿಗೆ ಉತ್ತರವೇ ಬರಲಿಲ್ಲ. ಮಹಾತ್ಮರು ವೈಸರಾಯರನ್ನು ಕಂಡು ಮಾತಾಡಿದಾಗ ಮಾತ್ರ ಈ ಸುಂಕದಕಟ್ಟೆ ವಜಾ ಆಗಿ ಜನರಿಗೆ ತೊಂದರೆ ತಪ್ಪಿತು. ಈ ಘಟನೆಯೇ ಹಿಂದೂಸ್ಥಾನದಲ್ಲಿ ಸತ್ಯಾಗ್ರಹದ ಉದಯವೆಂದು ಹೇಳ

ಬಹುದು. ಹೇಗೆಂದರೆ ಅವರು ಪ್ರಾಂತಿಕ ಸರಕಾರದೊಡನೆಯೂ ಇಂಡಿಯಾ ಸರಕಾರದೊಡನೆಯೂ ಸುಂಕದ ಕಟ್ಟೆಯ ವಿಷಯ ವ್ಯವಹಾರ ನಡಸಿದರೂ ಪ್ರಯೋಜನವಾಗದುದನ್ನು ಕಂಡು ಕಾಥೇವಾಡದಲ್ಲಿ ಭಾಷಣಮಾಡುತ್ತ, ತಮ್ಮ ನ್ಯಾಯವಾದ ಹಕ್ಕನ್ನು ಸಂಪಾದಿಸಲು ಮತ್ತು ತಮ್ಮ ಕುಂದು ಕೊರತೆಗಳಿಗೆ ಸರಕಾರದವರು ಕಣ್ಮುಚ್ಚಿರುವಾಗ ಅವರನ್ನು ಎಚ್ಚರಿಸಿ ಅವುಗಳ ನಿವಾರಣೆ ಪಡೆಯಲು ಸತ್ಯಾಗ್ರಹದ ಆವಶ್ಯಕತೆಯಿದೆ ಎಂದು ಹೇಳಿದರು. ಇವರು ಬೊಂಬಾಯಿ ಸರಕಾರದ ಕಾರ್ಯದರ್ಶಿಯವರನ್ನು ನೋಡಲು ಹೋದಾಗ ಅವರು ಕಾಥೇವಾಡದಲ್ಲಿ ಸತ್ಯಾಗ್ರಹದ ವಿಷಯದಲ್ಲಿ ಮಾತಾಡಿದುದರ ವರದಿಯಮೇಲೆ ಟೀಕೆಮಾಡುತ್ತ ಕಾರ್ಯದರ್ಶಿಗಳು "ಸತ್ಯಾಗ್ರಹವೆಂದು ಪ್ರಬಲವಾದ ಸರಕಾರವನ್ನು ಹೆದರಿಸಿದ್ದೀರಿ. ಇದಕ್ಕೆಲ್ಲ ಸರಕಾರ ಜಗ್ಗುವುದೆಂದು ಎಣಿಸಿದ್ದೀರಾ?" ಎಂದು ಕೇಳಿದರು. ಗಾಂಧಿಯವರು "ಇದು ಬೆದರಿಕೆಯಲ್ಲ, ಪ್ರಜಾಶಿಕ್ಷಣದ ರೀತಿ. ತಮ್ಮ ಕಷ್ಟಗಳನ್ನು ದೂರಮಾಡಿಕೊಳ್ಳುವುದಕ್ಕಾಗಿ ನ್ಯಾಯವಾದ ಉಪಾಯಗಳ ಆಶ್ರಯ ಹೊಂದುವಂತೆ ಜನರಿಗೆ ತಿಳಿಯಹೇಳುವುದು ನನ್ನಂಥವರ ಧರ್ಮ. ಪ್ರಜಾಸ್ವಾತಂತ್ರ್ಯವನ್ನು ಸಂಪಾದಿಸಲು ಬಯಸುವ ಜನಾಂಗ ಅದನ್ನು ಸಾಧಿಸುವ ಎಲ್ಲಾ ಮಾರ್ಗಗಳನ್ನೂ ಉಪಾಯಗಳನ್ನೂ ಅರಿತಿರಬೇಕು. ಸಾಧಾರಣವಾಗಿ ಈ ಉಪಾಯಗಳಲ್ಲಿ ಪಶುಬಲವೇ ಹೀನೋಪಾಯವಾಗಿರುತ್ತದೆ. ಸತ್ಯಾಗ್ರಹವಾದರೋ ಶುದ್ಧವೂ ಅಹಿಂಸಾತ್ಮಕವೂ ಆದ ಉಪಾಯ. ಅದರ ಉಪಯೋಗವನ್ನೂ ರೀತಿನೀತಿಗಳನ್ನೂ ಜನರಿಗೆ ವಿಶದಪಡಿಸುವುದು ನನ್ನ ಕರ್ತವ್ಯವೆಂದು ಎಣಿಸುತ್ತೇನೆ. ಬ್ರಿಟಿಷ್ ಸರಕಾರ ಪ್ರಬಲವಾದುದೆಂಬುದರಲ್ಲಿ ನನಗೇನೂ ಸಂಶಯವಿಲ್ಲ. ಆದರೆ ಸತ್ಯಾಗ್ರಹ ಸಮಸ್ತ ಸಂಕಟಗಳಿಗೂ ದಿವ್ಯವಾದ ಔಷಧವೆಂದು ನನ್ನ ದೃಢವಾದ ನಂಬಿಕೆ" ಎಂದು ಉತ್ತರಕೊಟ್ಟರು. ಕಾರ್ಯದರ್ಶಿಗಳು "ನೋಡೋಣ" ಎಂದರು.

ಭರತಖಂಡದಲ್ಲಿ ಗಾಂಧೀಜಿ ಕೈಗೊಳ್ಳಬಹುದಾದ ಸಾರ್ವಜನಿಕ ಕೆಲಸಗಳು ಬೇಕಾದಷ್ಟಿದ್ದವು. ಇವುಗಳಲ್ಲಿ ಯಾವ ಕೆಲಸಕ್ಕಾಗಲಿ ಹೊರಡುವ ಮೊದಲು ದೇಶದ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳುವ ಸಲುವಾಗಿ ಮತ್ತು ನಾನಾಸಂಸ್ಥೆಗಳ ಅನುಭವ ಸಂಪಾದಿಸಲೋಸುಗ ಅವರು ದೇಶಸಂಚಾರವನ್ನು ಕೈಗೊಂಡರು. ಮೊದಲು ರವೀಂದ್ರನಾಥ ಠಾಕೂರರ ಶಾಂತಿನಿಕೇತನಕ್ಕೆ ಹೋದರು. ಅಷ್ಟರಲ್ಲಾಗಲೆ ಆಫ್ರಿಕದ ಫೀನಿಕ್ಸ್ ಆಶ್ರಮದಿಂದ ಗಾಂಧೀಜಿಯ ಎಲ್ಲಾ ಕೆಲಸಗಳಲ್ಲಿಯೂ ಅವರ ಬಲಗೈಯಂತಿದ್ದ ಮಗನಲಾಲ ಗಾಂಧೀಜಿಯ ಮುಂದಾಳುತನದಲ್ಲಿ ಒಂದು ಸೇವಾದಳ ಬಂದು ಅಲ್ಲಿ ಸ್ಥಾಪಿತವಾಗಿತ್ತು. ಶಾಂತಿನಿಕೇತನದ ಅಧ್ಯಾಪಕರೂ ವಿದ್ಯಾರ್ಥಿಗಳೂ ಮಹಾತ್ಮರನ್ನು ಪ್ರೀತಿಯಿಂದ ಕಂಡರು. ಅವರ ಸ್ವಾಗತದಲ್ಲಿ ಸರಳತೆಯೂ ಕಲಾಕೌಶಲ್ಯವೂ ಪ್ರೇಮವೂ ಒಂದುಗೂಡಿದ್ದವು. ಗಾಂಧೀಜಿ ತಮ್ಮ ಸ್ವಭಾವದಂತೆ ಕೊಂಚಕಾಲದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೊಡನೆ ಕಲೆತು ಸ್ವಾವಲಂಬನೆಯ ವಿಚಾರವಾಗಿ ಚರ್ಚಿಸಿದರು. ಅಲ್ಲಿ ತಮ್ಮ ಆಹಾರವನ್ನು ತಾವೇ ಸಿದ್ಧಪಡಿಸಿಕೊಳ್ಳುವುದಾದರೆ ಆರೋಗ್ಯದೃಷ್ಟಿಯಿಂದಲೂ ಆಧ್ಯಾತ್ಮಿಕದೃಷ್ಟಿಯಿಂದಲೂ ಆಹಾರ ನಿಯಮವನ್ನು ಸಾಧಿಸುವುದು ಶಿಕ್ಷಕರಿಗೆ ಶಕ್ಯವಾಗುವುದೆಂದು ಸಲಹೆಕೊಟ್ಟರು. ಈ ಹೊಸ ಅನುಭವ ಪಡೆಯಲು ಅಧ್ಯಾಪಕರೂ ವಿದ್ಯಾರ್ಥಿಗಳೂ ಒಪ್ಪಿದರು. ಕವಿವರ್ಯರು “ ಸ್ವರಾಜ್ಯಸಾಧನೆಯ ಬೀಜ ಈ ಪ್ರಯತ್ನದಲ್ಲಿಯೇ ಇದೆ ” ಎಂದು ಈ ಏರ್ಪಾಡಿಗೆ ತಮ್ಮ ಸಮ್ಮತಿಯನ್ನು ಸೂಚಿಸಿದರು. ತರಕಾರಿ ಹಚ್ಚುವುದಕ್ಕೆ ಒಂದು ಪಂಗಡ, ಕಾಳನ್ನು ತೊಳೆಯುವುದಕ್ಕೆ ಇನ್ನೊಂದು ಪಂಗಡ, ಅಡಿಗೆಯ ಮನೆಯನ್ನೂ ಅದರ ಸುತ್ತಮುತ್ತಣ ಸ್ಥಳವನ್ನೂ ಅಚ್ಚುಕಟ್ಟಾಗಿಡಲು ಮತ್ತೊಂದು ಪಂಗಡ, ಈ ರೀತಿ ಏರ್ಪಾಡಾಯಿತು.

ಗಾಂಧೀಜಿ ಶಾಂತಿನಿಕೇತನದಲ್ಲಿ ಒಂದು ವಾರ ಕಳೆಯುವಷ್ಟರಲ್ಲೆ ಗೋಖಲೆಯವರು ಕಾಲವಾದರೆಂದು ಪುಣೆಯಿಂದ ತಂತಿ ಸುದ್ದಿ ಬಂತು. ಶಾಂತಿನಿಕೇತನ ಗೋಖಲೆಯವರ ಮರಣಕ್ಕಾಗಿಯೂ ಆ ಮರಣದಿಂದ ದೇಶಕ್ಕಾದ ನಷ್ಟಕ್ಕಾಗಿಯೂ ಅಪಾರದುಃಖದಲ್ಲಿ ಮುಳುಗಿತು. ಮಹಾತ್ಮರು ಕೂಡಲೆ ಪುಣೆಗೆ ಹೊರಟರು. ರೈಲಿನ ಮೂರನೆಯ ತರಗತಿಯ ಗಾಡಿಗಳಲ್ಲೇ ಪ್ರಯಾಣಮಾಡುವ ಪದ್ಧತಿ ಇದ್ದುದರಿಂದ ಆ ವರ್ಗದ ಪ್ರಯಾಣಿಕರ ವಿಷಯದಲ್ಲಿ ರೈಲ್ವೆ ಅಧಿಕಾರಿಗಳು ತೋರುವ ನಿರಂಕುಶ ವರ್ತನೆಯಿಂದಲೂ ಪ್ರಯಾಣಿಕರ ಅಜ್ಞಾನ ಒರಟುತನ ಕೊಳಕಿನ ಪದ್ಧತಿಗಗಳು ಮತ್ತು ಸ್ವಾರ್ಥಪರತೆ ಇವುಗಳಿಂದಲೂ ಒದಗುವ ತೊಂದರೆಗಳನ್ನೆಲ್ಲಾ ಅನುಭವಿಸಿಕೊಂಡು ಪುಣೆಯನ್ನು ತಲಪಿದರು. ಗೋಖಲೆಯವರ ಶ್ರಾದ್ಧಕ್ರಿಯೆಗಳೆಲ್ಲ ಮುಗಿದವು. ಅವರಲ್ಲಿ ತಮಗಿದ್ದ ಭಕ್ತಿಯ ಸಲುವಾಗಿ ಅವರ ಭಾರತಸೇವಕಸಂಘಕ್ಕೆ ಸದಸ್ಯರಾಗಲು ಪ್ರಯತ್ನಪಟ್ಟರು. ಆದರೆ ಇವರ ಅಭಿಪ್ರಾಯಕ್ಕೂ ಸಂಘದ ಮೂಲ ಧ್ಯೇಯಕ್ಕೂ ಭಿನ್ನಾಭಿಪ್ರಾಯವಿದ್ದುದರಿಂದ ಇವರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಲು ಸಂಘದ ಹಲವು ಸದಸ್ಯರು ಒಪ್ಪಲಿಲ್ಲ. ಆದುದರಿಂದ ಗಾಂಧೀಜಿ ಅದಕ್ಕೆ ಸೇರವುದೇ ಬೇಡವೆಂದು ಬಿಟ್ಟುಬಿಟ್ಟರು.

ಪುಣೆಯಲ್ಲಿ ಕೆಲಸಕಾರ್ಯಗಳೆಲ್ಲ ಮುಗಿದುವು. ಅಷ್ಟರಲ್ಲಿ ಹನ್ನೆರಡುವರ್ಷಕೊಮ್ಮೆ ಹರಿದ್ವಾರದಲ್ಲಿ ನಡೆಯುವ ಕುಂಭಮೇಳ ಆ ವರ್ಷ (೧೯೧೫) ನಡೆಯುವುದರಲ್ಲಿತ್ತು. ಆ ಮೇಳಕ್ಕಾಗಿಯೇ ಅಲ್ಲದಿದ್ದರೂ ಮಹಾತ್ಮಾ ಸ್ವಾಮಿ ಶ್ರದ್ಧಾನಂದರನ್ನು ನೋಡುವ ಸಲುವಾಗಿ ಹರಿದ್ವಾರಕ್ಕೆ ಹೋಗಲು ನಿಶ್ಚಯಿಸಿದರು. ಸ್ವಾಮಿ ಶ್ರದ್ಧಾನಂದರು ತಾವು ಸ್ಥಾಪಿಸಿದ ಗುರುಕುಲಾಶ್ರಮದಲ್ಲಿದ್ದರು. ಪುಣೆಯಿಂದ ಕಲ್ಕತ್ತೆಯ ಮಾರ್ಗವಾಗಿ ರಂಗೂನಿಗೆ ಹೋಗಿ ಅಲ್ಲಿಂದ ಹಿಂತಿರುಗಿ ಹರಿದ್ವಾರಕ್ಕೆ ಹೋದರು. ಅಷ್ಟರಲ್ಲಿ ಅಲ್ಲಿಗೆ ತಮ್ಮ ದಳದೊಡನೆ ಬಂದಿದ್ದ ಮಗನಲಾಲ ಗಾಂಧೀಜಿ ಆ ಮೇಳದಲ್ಲಿ

ಜನರು ಉಪಯೋಗಿಸುತ್ತಿದ್ದ ಕಕ್ಕಸುಗಳ ಅಚ್ಚುಕಟ್ಟು ಮೊದಲಾದ ನೈರ್ಮಲ್ಯದ ಕೆಲಸಗಳನ್ನು ಕೈಗೊಂಡರು. ಗಾಂಧೀಜಿ ಆ ಜಾತ್ರೆಯಲ್ಲಿ ಜನರ ನಡತೆಯನ್ನು ನೋಡಿ ವಿಷಾದಿಸಿದರು. ಅಲ್ಲಿ ಸಾಧುಗಳು ತಂಡ ತಂಡವಾಗಿ ಇಳಿದಿದ್ದರು. ಅವರು ಸುಖಜೀವನವನ್ನು ಅನುಭವಿಸ ಲೋಸುಗವೇ ಜನ್ಮವೆತ್ತಿದ್ದಂತೆ ತೋರುತ್ತಿತ್ತು. ಅನೇಕರು ಮೋಸಮಾಡಿ ಅಲ್ಲಿ ನೆರೆದಿದ್ದ ಜನರಿಂದ ಹಣ ಸುಲಿಯಲು ಹಲವು ಆಟಗಳನ್ನು ಕಟ್ಟಿದ್ದರು. ಐದು ಕಾಲಿನ ಹಸುವಿದ್ದುದು ಅವುಗಳಲ್ಲೊಂದು. ಆ ಬಡಪ್ರಾಣಿ ಕ್ರೂರಿಗಳ ಆಸೆಗೆ ಬಲಿಯಾಗಿತ್ತು. ಐದನೆಯ ಕಾಲು ಒಂದು ಜೀವಂತ ಕರುವಿನ ಕಾಲು ಕತ್ತರಿಸಿ ಈ ಹಸುವಿನ ಚಪ್ಪೆಗೆ ಅಂಟಿಸಿದ್ದುದರಿಂದಾಗಿತ್ತು. ಈ ಕಾರ್ಯವನ್ನು ಅರಿಯದ ಜನರು ಐದು ಕಾಲಿನ ಆಕಳು ಪವಿತ್ರವಾದುದೆಂಬ ಮೋಸದ ಬಲೆಗೆ ಬಿದ್ದು ದಕ್ಷಿಣೆಯನ್ನು ತೆರುತ್ತಿದ್ದರು.

ಪವಿತ್ರತೆಯನ್ನರಸಿಕೊಂಡು ಬರಬೇಕಾಗಿರುವ ಈ ಯಾತ್ರಾಸ್ಥಳಗಳೂ ಕೂಡ ಮೋಸ ಠಕ್ಕುಗಳಿಂದ ತುಂಬಿರುವುದನ್ನು ನೋಡಿಯೂ ಜನರ ಅಂಧಶ್ರದ್ಧೆ ಮತ್ತು ಅಜ್ಞಾನವನ್ನು ಕಂಡೂ ಗಾಂಧೀಜಿಗೆ ಬಹು ದುಃಖವಾಯಿತು. ಸಮಾಜದ ಈ ಅವ್ಯವಸ್ಥೆಯನ್ನು ನೋಡಿ ಇತರರ ಪಾಪಕ್ಕಾಗಿ ತಾವು ಪ್ರಾಯಶ್ಚಿತ್ತ ಮಾಡಿಕೊಳ್ಳುವ ಅವರ ಸಹಜಶೀಲ ಕೆರಳಿತು. ಅಲ್ಲಿ ಹರಡಿದ್ದ ಪಾಪಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಯಾವುದಾದರೊಂದು ತ್ಯಾಗವ್ರತವನ್ನು ಕೈಗೊಂಡು ಅಂತಃಶುದ್ಧಿಮಾಡಿಕೊಳ್ಳಬೇಕೆಂದು ನಿಶ್ಚಯಿಸಿದರು. ಅದರ ಜೊತೆಗೆ ತಾವು ಹೋದೆಡೆ ತಮ್ಮ ಸತ್ಕಾರಕಾಂಕ್ಷಿಗಳಾದ ಜನರು ಪಡುವ ಕಷ್ಟಗಳನ್ನು ತಪ್ಪಿಸಬೇಕೆಂಬುದೂ ಹೊಳೆಯಿತು. ಈ ಕಾರಣಗಳಿಂದ ತಾವು ಭಾರತ ದೇಶದಲ್ಲಿದ್ದಾಗ ಇಪ್ಪತ್ತನಾಲ್ಕು ತಾಸಿನಲ್ಲಿ ಐದು ಪದಾರ್ಥಗಳಿಗಿಂತ ಹೆಚ್ಚಾಗಿ ತಿನ್ನುವುದಿಲ್ಲವೆಂದೂ ರಾತ್ರಿ ಹೊತ್ತು ಊಟಮಾಡುವುದಿಲ್ಲವೆಂದೂ ವ್ರತ ಹಿಡಿದರು. ಯಾವ ಕಾರಣಕ್ಕೂ ಈ ಕ್ರಮವನ್ನು ಮೀರಕೂಡದೆಂದು ನಿಶ್ಚಯಿಸಿದರು.

ಇದರಿಂದ ಅವರು ಅನೇಕ ವೇಳೆ ಕಠಿಣಪರೀಕ್ಷೆಗೆ ಒಳಗಾದರು. ಆದರೆ ಯಾವ ಅಡ್ಡಿಯೂ ವ್ರತನಿಯಮಕ್ಕೆ ಭಂಗತರಲಿಲ್ಲ. ಇದರಿಂದ ಅವರಿಗೆ ಅನುಕೂಲ ಹೆಚ್ಚಾಯಿತು.

ಗಾಂಧೀಜಿ ಹರಿದ್ವಾರದಿಂದ ಶಾಂತವಾತಾವರಣದಲ್ಲಿದ್ದ ಗುರುಕುಲಕ್ಕೆ ಹೋದರು. ಅಲ್ಲಿ ಭೀಮಕಾಯರಾದ ಮಹಾತ್ಮಾ ಸ್ವಾಮಿ ಶ್ರದ್ಧಾನಂದರನ್ನು ನೋಡಿ ಅವರ ಪ್ರೇಮದಲ್ಲಿ ಮುಳುಗಿ ಶಾಂತಚಿತ್ತರಾದರು. ಅಲ್ಲಿ ಹಲವು ದಿನಗಳಿದ್ದು ಸ್ವಾಮಿಜಿಯವರ ಸಹವಾಸವನ್ನು ಬಿಡಲಾರದೆ ಬಿಟ್ಟು ಹೃಷೀಕೇಶಕ್ಕೆ ಸ್ವಲ್ಪ ದೂರದಲ್ಲಿ ಪ್ರಸಿದ್ಧವಾಗಿರುವ 'ಲಕ್ಷ್ಮಣಜೂಲ' ತೂಗುಸೇತುವೆ ಇರುವ ಸ್ಥಳವನ್ನು ನೋಡಲು ಕಾಲುನಡಗೆಯಲ್ಲಿಯೇ ಹೋದರು. ಅಲ್ಲಿಂದ ಮುಂದೆ ಸಿಗುವ ಸ್ವರ್ಗಾಶ್ರಮಗಳನ್ನು ನೋಡಿಕೊಂಡು ಹಿಂತಿರುಗಿದರು.

ಮಹಾತ್ಮಾ ಗಾಂಧೀಜಿಗೆ ಆಶ್ರಮವೊಂದನ್ನು ಸ್ಥಾಪಿಸಬೇಕೆಂಬ ಇಚ್ಛೆಯಿದ್ದಿತು. ಸ್ವಾಮಿ ಶ್ರದ್ಧಾನಂದರು ಅವರು ಗುರುಕುಲಾಶ್ರಮದಲ್ಲೇ ನೆಲಸಬೇಕೆಂದರು. ರಾಜಕೋಟೆಯವರು ತಮ್ಮ ಪ್ರಾಂತ್ಯದಲ್ಲೇ ಆಶ್ರಮ ತೆರೆಯಬೇಕೆಂದರು. ಇನ್ನು ಹಲವು ಕಡೆಯವರು ತಮ್ಮ ತಮ್ಮ ಪ್ರಾಂತಗಳಲ್ಲಿ ಗಾಂಧೀಜಿ ನೆಲಸಬೇಕೆಂದು ಬಯಸಿದರು. ಆದರೆ ಗಾಂಧೀಜಿಗೆ ಅಹಮದಾಬಾದು ಸರಿದೋರಿತು. ಅಲ್ಲಿ ಆಶ್ರಮವೊಂದನ್ನು ತೆರೆದು ಅದಕ್ಕೆ ಸತ್ಯಾಗ್ರಹಾಶ್ರಮ ಎಂದು ಹೆಸರಿಟ್ಟರು. ಅನೇಕರು ಈ ಕಾರ್ಯದಲ್ಲಿ ಗಾಂಧೀಜಿಗೆ ಬೆಂಬಲವಿತ್ತರು. ಆ ಆಶ್ರಮದ ಆಡಳಿತಕ್ಕೆ ನಿಯಮಾವಳಿಯೊಂದು ತಯಾರಾಯಿತು. ಈ ಆಶ್ರಮ ಮೊದಲು ಬಾಡಿಗೆಯ ಮನೆಯಲ್ಲಿ ಪ್ರಾರಂಭವಾಯಿತು. ಆಫ್ರಿಕದಲ್ಲಿಯಂತೆಯೇ ಇಲ್ಲಿಯೂ ಆಶ್ರಮದ ವ್ಯವಸ್ಥೆಯನ್ನು ಮಗನಲಾಲ ಗಾಂಧಿ ವಹಿಸಿಕೊಂಡರು. ಆಶ್ರಮ ಸ್ಥಾಪಿತವಾದ ಕೆಲವು ತಿಂಗಳೊಳಗಾಗಿಯೇ ಆಶ್ರಮವಾಸಿಗಳ ಪರೀಕ್ಷಾಸಮಯ ಒದಗಿತು. "ಹರಿಜನ ಕುಟುಂಬವೊಂದು ನಿಮ್ಮ

ಆಶ್ರಮ ಸೇರಲು ಬಯಸುತ್ತದೆ. ಅವರನ್ನು ಸೇರಿಸಿಕೊಳ್ಳುವಿರಾ?" ಎಂದು ಶ್ರೀ ಅಮೃತಲಾಲ ಥಕ್ಕರರಿಂದ ಒಂದು ಕಾಗದ ಬಂತು. ಗಾಂಧೀಜಿಗೆ ಸ್ವಲ್ಪ ಗಾಬರಿಯಾಯಿತು. ಆದರೂ "ಅವರು ಆಶ್ರಮದ ನಿಯಮವನ್ನು ಪಾಲಿಸುವುದಾದರೆ ಸೇರಿಸಿಕೊಳ್ಳುತ್ತೇವೆ" ಎಂದು ಉತ್ತರಕೊಟ್ಟರು. ದುಧಾಭಾಯಿ, ಅವರ ಹೆಂಡತಿ ದಾನೀಬಹೆನ್ ಮತ್ತು ಆಗತಾನೆ ಓಡಾಡಲು ಪ್ರಾರಂಭಿಸಿದ್ದ ಆವರ ಮಗು ಲಕ್ಷ್ಮಿ ಇವರೇ ಈ ಕುಟುಂಬಕ್ಕೆ ಸೇರಿದವರು. ಅವರು ಆಶ್ರಮದ ನಿಯಮಗಳನ್ನು ಪಾಲಿಸಲು ಒಪ್ಪಿದರು. ಅವರನ್ನು ಆಶ್ರಮಕ್ಕೆ ಸೇರಿಸಿಕೊಂಡುದಾಯಿತು. ಆದರೆ ಇದರಿಂದ ಆಶ್ರಮಕ್ಕೆ ನೆರವೀಯುತ್ತಿದ್ದವರಲ್ಲಿ ಅಸಮಾಧಾನ ಉಂಟಾಯಿತು. ಜೊತೆಗೆ ಇನ್ನೂ ಹಲವು ತೊಂದರೆಗಳು ಒದಗಿದವು. ನೀರುಸೇದುವ ಬಾವಿ ಮನೆಯ ಯಜಮಾನರ ಅಧೀನದಲ್ಲೇ ಇದ್ದಿತು. ಆಶ್ರಮದವರು ಬಾವಿಯಿಂದ ನೀರು ತೆಗೆದುಕೊಳ್ಳುವಾಗ ಬಿಂದಿಗೆಯಿಂದ ನೀರು ತೊಟ್ಟಿಕ್ಕಿ ತನಗೆ ಮೈಲಿಗೆಯಾಗುವುದೆಂದು ಆ ಯಜಮಾನರ ಆಳು ಆಕ್ಷೇಪಿಸಿ ಬೈಯುವುದಕ್ಕೂ ದುಧಾಭಾಯಿಯನ್ನು ಹಿಂಸಿಸುವುದಕ್ಕೂ ಪ್ರಾರಂಭಿಸಿದನು. ಅದನ್ನು ಸಹಿಸಿಕೊಂಡಿರಬೇಕೆಂದೂ ನೀರು ತೆಗೆದುಕೊಳ್ಳುವುದನ್ನು ಬಿಡಕೂಡದೆಂದೂ ಗಾಂಧೀಜಿ ಆಶ್ರಮವಾಸಿಗಳಿಗೆ ತಿಳಿಸಿದರು. ತನ್ನ ಬೈಗುಳನ್ನು ಆಶ್ರಮವಾಸಿಗಳು ಸಹಿಸಿಕೊಂಡು ತೆಪ್ಪನಿರುವುದನ್ನು ನೋಡಿ ಆ ಆಳು ನಾಚಿಕೊಂಡು ಆ ತಂಟೆಗೆ ಹೋಗುವುದನ್ನೇ ಬಿಟ್ಟುಬಿಟ್ಟನು. ಇದೊಂದೇ ತೊಂದರೆಯಲ್ಲ. ಧನ ಸಹಾಯ ಬೇರೆ ನಿಂತುಹೋಯಿತು. ಜೊತೆಗೆ ಬಹಿಷ್ಕಾರ ಹಾಕುವ ವರ್ತಮಾನ ಬೇರೆ ಗೊತ್ತಾಯಿತು. ಆದರೆ ಆಶ್ರಮವಾಸಿಗಳು ಇದೆಲ್ಲಕ್ಕೂ ತಯಾರಾಗಿದ್ದರು. ಜನರು ತಮ್ಮ ಮೇಲೆ ಬಹಿಷ್ಕಾರ ಹಾಕಿ ಎಲ್ಲಾ ಅನುಕೂಲಗಳನ್ನು ತಪ್ಪಿಸಿದರೂ ತಾವು ಅಹಮದಾಬಾದನ್ನು ಬಿಡುವುದಿಲ್ಲವೆಂದೂ ಕಡೆಗೆ ಹೊಲಗೇರಿಯಲ್ಲಿ ವಾಸಿಸುತ್ತ ಮೈದುಡಿತದಿಂದ ಆಶ್ರಮ ನಡಸಬೇಕೆಂದೂ ಮಹಾತ್ಮರು ದೃಢಮನಸ್ಸು ಮಾಡಿದರು.

ಪರಿಸ್ಥಿತಿ ಮಿತಿಮೀರಿತು. ಮಗನಲಾಲ ಗಾಂಧಿ "ಬರುವ ತಿಂಗಳು ಆಶ್ರಮದ ವೆಚ್ಚಕ್ಕೆ ನಮ್ಮಲ್ಲಿ ಹಣವಿಲ್ಲ" ಎಂದು ಗಾಂಧೀಜಿಗೆ ತಿಳಿಸಿದರು. ಗಾಂಧೀಜಿ ಶಾಂತರಾಗಿಯೇ "ಹಾಗಾದರೆ ಹೊಲಗೇರಿಗೆ ಹೋಗಿ ದುಡಿದು ಜೀವಿಸೋಣ" ಎಂದರು. ಈ ರೀತಿಯ ಪರೀಕ್ಷೆಗೆ ಒಳಗಾಗಿದ್ದುದು ಇದು ಮೊದಲನೆಯ ಸಲವಲ್ಲ. ಇಂತಹ ಸಂದರ್ಭಗಳಲೆಲ್ಲಾ ಭಗವಂತನು ಅವರಿಗೆ ನೆರವಿತ್ತಿದ್ದಾನೆ. ಈ ಸಾರಿಯಾದರೂ ಅವರಿಗೆ ದೇವರ ಸಹಾಯದಲ್ಲಿ ನಂಬಿಗೆಯಿತ್ತು. ಒಂದು ದಿನ ಬೆಳಗ್ಗೆ ಒಬ್ಬ ಹುಡುಗನು ಗಾಂಧೀಜಿಯ ಬಳಿಗೆ ಬಂದು ಶೇಟರೊಬ್ಬರು ಅವರನ್ನು ನೋಡಲು ಬಂದಿದ್ದಾರೆ ಎಂದು ತಿಳಿಸಿದನು. ಗಾಂಧೀಜಿ ಹೊರಗೆ ಹೋಗಿ ಶೇಟರನ್ನು ನೋಡಿದರು. "ನಾನು ಈ ಆಶ್ರಮಕ್ಕೆ ಸ್ವಲ್ಪ ಸಹಾಯಮಾಡಬೇಕೆಂದಿದ್ದೇನೆ. ಅದನ್ನು ನೀವು ತೆಗೆದುಕೊಳ್ಳುವಿರೇನು?" ಎಂದರು ಶೇಟರು. "ದುಡ್ಡಿಲ್ಲದೆ ಈಗ ಕಂಗಾಲುಗೆಟ್ಟಿದ್ದೇನೆ; ಅಗತ್ಯವಾಗಿ ತೆಗೆದುಕೊಳ್ಳುತ್ತೇನೆ" ಎಂದು ಗಾಂಧೀಜಿ ಉತ್ತರವಿತ್ತರು. ನಾಳೆ ಇಷ್ಟು ಹೊತ್ತಿಗೆ ಮತ್ತೆ ಬರುತ್ತೇನೆಂದು ಹೇಳಿ ಶೇಟರು ಹೋದರು. ಹೇಳಿದ್ದ ಹೊತ್ತಿಗೆ ಸರಿಯಾಗಿ ಅವರು ಆಶ್ರಮಕ್ಕೆ ಬಂದರು. ಅವರ ಬರವನ್ನು ತಿಳಿದು ಗಾಂಧೀಜಿ ಅವರ ಮೋಟಾರು ಬಳಿಗೆ ಹೋದರು. ಶೇಟರು ಹದಿಮೂರು ಸಾವಿರ ರೂಪಾಯಿಗಳ ನೋಟುಗಳನ್ನು ಗಾಂಧೀಜಿಯ ಕೈಯಲ್ಲಿತ್ತು ಹೋದರು. ಈ ಸಹಾಯ ಬಂದುದರಿಂದ ಆಶ್ರಮ ಆರ್ಥಿಕ ದುಃಸ್ಥಿತಿಯಿಂದ ಪಾರಾದಂತಾಯಿತು.

ಹೊರಗಡೆಯಲ್ಲಿ ಅಸಮಾಧಾನವಿದ್ದಂತೆಯೇ ಅಸ್ಪೃಶ್ಯರನ್ನು ಭೇದವಿಲ್ಲದೆ ಆಶ್ರಮಕ್ಕೆ ಸೇರಿಸಿಕೊಂಡುದರಿಂದ ಆಶ್ರಮವಾಸಿಗಳಾದ ಕೆಲವು ಹೆಂಗಸರಲ್ಲಿಯೂ ಅಸಮಧಾನ ಮೂಡಿತು. ಆದರೆ ಅದು ಸ್ವಲ್ಪದರಲ್ಲಿಯೇ ಸರಿಹೋಯಿತು. ಹರಿಜನರ ಈ ಕುಟುಂಬವನ್ನು ಆಶ್ರಮಕ್ಕೆ ಸೇರಿಸಿಕೊಂಡುದರಿಂದ ಆಶ್ರಮವಾಸಿಗಳಿಗೆ ಒಳ್ಳೆಯ ಶಿಕ್ಷಣ ದೊರೆತುದರ

ಜೊತೆಗೆ ಆಶ್ರಮದಲ್ಲಿ ಅಸ್ಪೃಶ್ಯತೆಗೆ ಎಡೆಯಿಲ್ಲವೆಂದು ಪ್ರಪಂಚಕ್ಕೆ ಸಾರಿದಂತಾಯಿತು. ಕ್ರಮೇಣ ಆಶ್ರಮದಲ್ಲಿ ರೀತಿನೀತಿಗಳೆಲ್ಲ ಸರಿಹೋದವು. ಕಾರ್ಯಕ್ರಮಗಳು ಸರಳವಾದವು.

ಆಶ್ರಮದ ಸ್ಥಿತಿ ಸರಿಹೋದ ಮೇಲೆ ಗಾಂಧೀಜಿ ಆಫ್ರಿಕದ ಕರಾರು ಕೂಲಿಗಾರರ ವಿಷಯದ ಸಮಸ್ಯೆಯನ್ನು ಬಿಡಿಸಲು ಅನುವಾದರು. ಆಫ್ರಿಕದಲ್ಲಿ ಕರಾರು ಕೂಲಿಗಾರರೆಂದರೆ ಐದು ವರ್ಷ ಅಥವಾ ಅದಕ್ಕೆ ಕಡಮೆ ಕಾಲ ಕೆಲಸಮಾಡುವೆವೆಂದು ಒಪ್ಪಿ ಭರತಖಂಡದಿಂದ ಹೋದವರು. ೧೯೧೭ ರಲ್ಲಿ ಭಾರತಭೂಷಣ ಪಂಡಿತ ಮದನಮೋಹನ ಮಾಳವೀಯಜಿ ಕರಾರುಕೂಲಿ ಪದ್ಧತಿಯನ್ನು ತೆಗೆದುಬಿಡಬೇಕೆಂಬುದಾಗಿ ಕೇಂದ್ರ ಕಾಯಿದೆ ಮಂಡಲಿಯಲ್ಲಿ ಒಂದು ಗೊತ್ತುವಳಿಯನ್ನು ತರಲು, ಅದರ ಚರ್ಚೆಗೆ ವೈಸರಾಯರು ಅವಕಾಶ ಕೊಡಲಿಲ್ಲ. ಆದುದರಿಂದ ಅಖಿಲಭಾರತದಲ್ಲಿ ಚಳವಳಿಯನ್ನು ಹೂಡಬೇಕೆಂದು ಮಹಾತ್ಮರು ನಿಶ್ಚಯಿಸಿಕೊಂಡರು. ಈ ಚಳವಳಿ ಆರಂಭಿಸುವುದಕ್ಕೆ ಮೊದಲು ಆಗಿನ ವೈಸ್‌ರಾಯರನ್ನು ಕಾಣುವುದು ಉಚಿತವೆಂದೆಣಿಸಿ ಗಾಂಧೀಜಿ ಅವರನ್ನು ಕಂಡು ವಿಷಯ ತಿಳಿಸಿದರು. ವೈಸ್‌ರಾಯರೂ ಒಪ್ಪಿ ಸಾಧ್ಯವಾದಷ್ಟು ಸಹಾಯಮಾಡುವುದಾಗಿ ಹೇಳಿದರು. ಗಾಂಧೀಜಿ ಬೊಂಬಾಯಿಗೆ ಬಂದು ಅಲ್ಲಿಂದಲೇ ತಮ್ಮ ಚಳವಳಿಯನ್ನು ಪ್ರಾರಂಭಿಸಿದರು. 'ನಾಗರಿಕರ ಸಂಘ'ದ ಆಶ್ರಯದಲ್ಲಿ ಒಂದು ಸಭೆಗೂಡಿತು. ಆ ಸಭೆ ಆ ವರ್ಷದ ಜುಲೈ ಮೂವತ್ತೊಂದನೆಯ ತಾರೀಖಿನೊಳಗಾಗಿ ಕರಾರುಕೂಲಿ ಪದ್ಧತಿಯನ್ನು ತೊಡೆದುಹಾಕಬೇಕೆಂದು ನಿರ್ಣಯಮಾಡಿತು. ಗಾಂಧೀಜಿ ಕರಾಚಿ, ಕಲ್ಕತ್ತೆ ಮುಂತಾದ ಅನೇಕ ಸ್ಥಳಗಳಿಗೆ ಹೋದರು. ಈ ಎಲ್ಲಾ ಕಡೆಗಳಲ್ಲಿಯೂ ದೊಡ್ಡ ಸಭೆಗಳು ಕೂಡಿದವು. ಎಲ್ಲೆಡೆಯಲ್ಲಿಯೂ ಉತ್ಸಾಹ ತುಂಬಿ ತುಳುಕಾಡುತ್ತಿದ್ದಿತು. ಭರತಖಂಡದಲ್ಲೆಲ್ಲಾ ಇದೇ ಅರ್ಥದ ಗೊತ್ತುವಳಿಗಳನ್ನು ಸಭೆಗಳು ಅಂಗೀಕರಿಸಿದವು.

ಇಷ್ಟರಲ್ಲಿ ಮತ್ತೊಂದು ವಿಷಯ ಒದಗಿತು. ಚಂಪಾರಣ್ಯದಲ್ಲಿ (ಬೀಹಾರು ಪ್ರಾಂತ್ಯ) ರೈತರು ತಮ್ಮ ಜಮೀನ್ದಾರನಿಗಾಗಿ ಭೂಮಿಯ ಶೇಕಡ ೧೫ ಭಾಗದಲ್ಲಿ ನೀಲಿಯನ್ನು ಬೆಳೆಯಲೇಬೇಕೆಂದು ಕಾನೂನಿನ ವಿಧಿಯಿತ್ತು. ಗಾಂಧೀಜಿ ಲಕನೋವಿಗೆ ಹೋಗಿದ್ದಾಗ ಈ ರೈತರ ಸಂಕಟ ಅವರಿಗೆ ಗೊತ್ತಾಯಿತು. ರಾಜಕುಮಾರ ಶುಕ್ಲ ಎಂಬವರು ಕಷ್ಟಕ್ಕೆ ಸಿಲುಕಿದ್ದ ರೈತರಲ್ಲೊಬ್ಬರು. ಗಾಂಧೀಜಿ ಚಂಪಾರಣ್ಯಕ್ಕೆ ಬಂದು ಸಂಕಟ ಪರಿಹಾರಮಾರ್ಗವನ್ನು ತೋರಿಸಬೇಕೆಂದು ಅವರು ಬೇಡಿದರು. ಗಾಂಧೀಜಿ ಒಪ್ಪಿ ಚಂಪಾರಣ್ಯಕ್ಕೆ ಹೋದರು. ಅಲ್ಲಿನ ಹಲವು ವಕೀಲರು ಇವರ ಸಹಾಯಕ್ಕೆ ಬಂದರು. ಆಗಲೇ ರಾಜೇಂದ್ರಬಾಬುಗಳೂ ಆಚಾರ್ಯ ಕೃಪಲಾನಿಯವರೂ ಅವರ ನೆರವಿಗೆ ಬಂದುದು. ಜಮೀನ್ದಾರರ ಸಂಘದ ಅಧಿಕಾರಿಗಳನ್ನೂ ಪ್ರಾಂತ್ಯಾಧಿಕಾರಿಗಳನ್ನೂ ನೋಡಿ ರೈತರ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಗಾಂಧೀಜಿ ಪ್ರಯತ್ನಪಟ್ಟರು. ಆದರೆ ಆ ಅಧಿಕಾರಿಗಳು ಇವರಿಗೆ ಹಾಗೆ ಮಾಡಲು ಅಧಿಕಾರವಿಲ್ಲವೆಂದು ಹೇಳಿದರು. ಅನಂತರ ಗಾಂಧೀಜಿ ತಾವು ಕೈಗೊಳ್ಳಬೇಕಾದ ಮುಂದಿನ ಕೆಲಸವನ್ನು ಯೋಚಿಸುತ್ತಿರುವಲ್ಲಿ ಅವರು ಆ ಪ್ರಾಂತ್ಯವನ್ನು ಬಿಡಬೇಕೆಂದು ಪೋಲೀಸ್ ಅಧಿಕಾರಿಗಳಿಂದ ಅಪ್ಪಣೆ ಬಂತು. “ನಾನು ಇಲ್ಲಿನ ರೈತರ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ವರೆಗೂ ಹೊರೆಗೆ ಹೊರಡುವುದಿಲ್ಲ” ಎಂದು ಅವರು ಹೇಳಿಬಿಟ್ಟರು. ಆಜ್ಞೆಯನ್ನು ಮುರಿದರೆಂದು ಪೋಲೀಸರು ಅವರ ಮೇಲೆ ಮೊಕದ್ದಮೆ ಹೂಡಿದರು. ಈ ವಿಷಯ ದೇಶದಲ್ಲೆಲ್ಲಾ ಹರಡಿ ರೈತರಲ್ಲಿ ಉತ್ಸಾಹವನ್ನೂ ಆಸಕ್ತಿಯನ್ನೂ ಹುಟ್ಟಿಸಿತು. ವಿಚಾರಣೆ ಪ್ರಾರಂಭವಾಯಿತು. ಆ ಸಮಯದಲ್ಲಿ ಗಾಂಧೀಜಿ ಹೀಗೆಂದು ಒಂದು ಹೇಳಿಕೆಯನಿ ್ತತ್ತರು:

“ನನ್ನ ವಿನಯಪೂರ್ವಕವಾದ ಅಭಿಪ್ರಾಯವೇನೆಂದರೆ, ಇದು ಪ್ರಾಂತಿಕ ಸರಕಾರಕ್ಕೂ ನನಗೂ ಇರುವ ಭಿನ್ನಾಭಿಪ್ರಾಯ. ನಾನು ಈ ದೇಶವನ್ನು

ಪ್ರವೇಶಿಸುವುದರ ಉದ್ದೇಶ ಜನಸೇವೆ ಮತ್ತು ರಾಷ್ಟ್ರಸೇವೆ. ಇದನ್ನು ನಾನು ಕೈಕೊಂಡಿರುವುದು ರೈತರ ನಿರ್ಬಂಧಪೂರ್ವಕವಾದ ಆಮಂತ್ರಣದ ಮೇಲೆ. ಇಲ್ಲಿಗೆ ಬಂದು ಸಹಾಯಮಾಡುವಂತೆ ಅವರು ಕೇಳಿಕೊಂಡಿದ್ದಾರೆ. ನೀಲಿಯತೋಟದ ಮಾಲಿಕರು ಅವರನ್ನು ಸರಿಯಾಗಿ ಕಾಣುತ್ತಿಲ್ಲವೆಂದು ಅವರು ಹೇಳುತ್ತಾರೆ. ಈ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಂಡ ಹೊರತು ನಾನು ಯಾವ ಬಗೆಯ ಸಹಾಯವನ್ನೂ ನೀಡುವಂತಿಲ್ಲ. ಆದುದರಿಂದ ಸಾಧ್ಯವಾದರೆ ಸರಕಾರದ ಮತ್ತು ತೋಟಗಾರರ ಸಹಾಯದಿಂದ ವಿಷಯವನ್ನು ಅರಿಯಲು ನಾನಿಲ್ಲಿ ಬಂದಿದ್ದೇನೆ. ಇನ್ನಾವ ದುರುದ್ದೇಶದಿಂದಲೂ ಬಂದಿಲ್ಲ. ನಾನು ಬಂದಿರುವುದರಿಂದ ಸಾರ್ವಜನಿಕ ಅಶಾಂತಿಯಾಗಲಿ ಜೀವ ನಷ್ಟವಾಗಲಿ ಆಗುವುದೆಂಬುದನ್ನು ನಾನು ನಂಬಲಾರೆ. ಈ ವಿಷಯಗಳಲ್ಲಿ ನನಗೆ ಸಾಕಷ್ಟು ಅನುಭವವಿದೆಯೆಂದು ಹೇಳಬಲ್ಲೆ. ಆದರೆ ಸರಕಾರ ಬೇರೆ ರೀತಿ ತಿಳಿದುಕೊಂಡಿದೆ. ಅವರ ಕಷ್ಟ ನನಗೆ ಗೊತ್ತಿದೆ. ಅವರಿಗೆ ದೊರೆತ ತಿಳಿವಳಿಕೆಯ ಮೇರೆಗೆ ಅವರು ನಡೆಯಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ವಿನೀತಪೌರನಾಗಿದ್ದುಕೊಂಡು ನಾನು ಸರಕಾರದ ಅಪ್ಪಣೆಯನ್ನು ಪಾಲಿಸುವುದು ನನ್ನ ಪ್ರಥಮ ಕರ್ತವ್ಯವಾಗಿತ್ತು. ಯಾರಿಗೋಸ್ಕರ ನಾನು ಬಂದೆನೋ ಅವರಿಗೆ ಕೇಡನ್ನೆಣಿಸದೆ ಸರಕಾರದ ಆಜ್ಞೆಯನ್ನು ರಕ್ಷಿಸುವುದು ಅಸಾಧ್ಯವಾಯಿತು. ಈ ಪರಿಸ್ಥಿತಿಯಲ್ಲಿ ಅವರೊಂದಿಗೆ ಇದ್ದೇ ನಾನು ಅವರ ಸೇವೆ ಸಲ್ಲಿಸುವುದು ಸಾಧ್ಯ. ಆದುದರಿಂದ ಮನಃಪೂರ್ವಕವಾಗಿ ನಾನು ಹಿಂದೆ ಸರಿಯಲಾರದೆ ಹೋದೆ. ಈ ಎರಡು ಕರ್ತವ್ಯಗಳ ಮಧ್ಯೆ ತೊಳಲುತ್ತಿರುವ ನನ್ನನ್ನು ಜನರಿಂದ ಬೇರ್ಪಡಿಸಿದ ಜವಾಬ್ದಾರಿಯನ್ನು ಸರಕಾರದ ಮೇಲೆ ಹೊರಿಸಬೇಕಾಗಿದೆ. ಹಿಂದೂದೇಶದ ಸಾರ್ವಜನಿಕ ಜೀವನದಲ್ಲಿ ನನ್ನಂತಹ ಸ್ಥಿತಿಯಲ್ಲಿರುವವನು ಬೇರೆಯವರಿಗೆ ಮೇಲ್ಪಂಕ್ತಿಯಾಗಿರುವುದರಲ್ಲಿ ಬಹಳ ಜಾಗರೂಕನಾಗಿರಬೇಕೆಂದು ನನಗೆ ಚೆನ್ನಾಗಿ ಗೊತ್ತು. ನಾವಿರುವ ಜಟಿಲ

ವಾದ ರಾಜಕೀಯ ವಾತಾವರಣದಲ್ಲಿ ಆತ್ಮಗೌರವವುಳ್ಳ ಪ್ರತಿಯೊಬ್ಬನೂ ನಾನೀಗ ಇರುವ ಪರಿಸ್ಥಿತಿಯಲ್ಲಿರುವಾಗ ಅನುಸರಿಸಬೇಕಾದ ಸುರಕ್ಷಿತವಾದ ಮತ್ತು ಯೋಗ್ಯವಾದ ದಾರಿಯೆಂದರೆ ನಾನು ನಿಶ್ಚಯಿಸಿದಂತೆ ಮಾಡುವುದೇ. ಎಂದರೆ ಕಾನೂನನ್ನು ವಿರೋಧಿಸಿದುದರಿಂದುಂಟಾಗುವ ಫಲವನ್ನು ಅನುಭವಿಸುವುದು. ನಾನು ಈ ಹೇಳಿಕೆಯನ್ನು ಹೊರಡಿಸುತ್ತಿರುವುದು ನನಗೆ ವಿಧಿಸಬಹುದಾದ ದಂಡವನ್ನು ಕಡಮೆಮಾಡಿಸಿಕೊಳ್ಳುವ ಆಕಾಂಕ್ಷೆಯಿಂದಲ್ಲ. ನನ್ನಮೇಲೆ ಹಾಕಿರುವ ಆಜ್ಞೆಯನ್ನು ನಿರಾಕರಿಸುತ್ತಿರುವುದು ಸರಕಾರದ ವಿಷಯದಲ್ಲಿ ಅಗೌರವದಿಂದಲ್ಲ. ಆದರೆ ನಮ್ಮ ಜೀವನದಲ್ಲಿ ಅದಕ್ಕಿಂತಲೂ ಹೆಚ್ಚು ಶಕ್ತಿಯುತವಾದ ನಿಯಮಪಾಲನೆಗಾಗಿ, ಆತ್ಮವಾಣಿಯನ್ನುಉದ್ಧರಿಸುವ ಸಲುವಾಗಿ ಸರಕಾರದ ಅಪ್ಪಣೆಯನ್ನು ಮೀರುತ್ತಿದ್ದೇನೆ.”

ಮ್ಯಾಜಿಸ್ಟ್ರೇಟರು ತೀರ್ಪನ್ನು ಕೊಡಲು ಬೇರೊಂದು ದಿನವನ್ನು ಗೊತ್ತುಮಾಡಿದರು. ಆ ದಿನ ಬರುವುದರೊಳಗಾಗಿ ಆ ಮೊಕದ್ದಮೆಯನ್ನು ವಜಾ ಮಾಡಿರುವುದಾಗಿ ಮ್ಯಾಜಿಸ್ಟ್ರೇಟರಿಂದ ಗಾಂಧೀಜಿಗೆ ಕಾಗದ ಬಂತು. ಜೊತೆಗೆ ಅವರು ರೈತರ ಪರಿಸ್ಥಿತಿಯನ್ನು ಅರಿತುಕೊಳ್ಳಲು ಯಾವ ಅಡ್ಡಿಯೂ ಇಲ್ಲವೆಂದೂ ಆ ವಿಷಯದಲ್ಲಿ ಅಧಿಕಾರಿಗಳಿಂದ ಯಾವ ಸಹಾಯ ಬೇಕಾದರೂ ದೊರೆಯುವುದೆಂದೂ ಜಿಲ್ಲಾಧಿಕಾರಿಗಳು ಅವರಿಗೆ ಕಾಗದ ಬರೆದರು. ಇಷ್ಟು ಬೇಗನೆ ಇಂತಹ ಒಳ್ಳೆಯ ಪರಿಸ್ಥಿತಿ ಉಂಟಾಗುವುದೆಂದು ಯಾರೂ ಭಾವಿಸಿರಲಿಲ್ಲ.

ಗಾಂಧೀಜಿ ಜಿಲ್ಲಾಧಿಕಾರಿಗಳನ್ನು ಹೋಗಿ ನೋಡಿದರು. ನ್ಯಾಯಪರರಾದ ಆ ಅಧಿಕಾರಿಗಳು ಸಾಧ್ಯವಾದ ಅನುಕೂಲಗಳನ್ನೆಲ್ಲಾ ಒದಗಿಸಿ ಕೊಡುವುದಾಗಿ ಮಾತುಕೊಟ್ಟರು. ಹೀಗೆ ಸರ್ಕಾರದವರು ಗಾಂಧೀಜಿ ಅಲ್ಲಿರುವುದಕ್ಕೆ ಅಡ್ಡಿ ಮಾಡದೆ ಅವರ ಕೆಲಸದಲ್ಲಿ ಸಹಾಯವನ್ನಿತ್ತುದರಿಂದ ಅಲ್ಲಿನ ಜಮೀನ್ದಾರರು ಕೋಪಕೊಂಡರು. ಗಾಂಧೀಜಿಗೆ ವ್ಯತಿರಿಕ್ತವಾಗಿ ಅತಿ ವಿಷಮವಾದ ಚಳವಳಿಯನ್ನು




ಪ್ರತಿನಿಧಿ
Copy Right.
N. Kulkarni

ಹೂಡಿದರು. ಗಾಂಧೀಜಿಯವರ ಮತ್ತು ಅವರ ಜೊತೆಯ ಕೆಲಸಗಾರರ ವಿಷಯದಲ್ಲಿ ಸುಳ್ಳು ಸುದ್ದಿಗಳನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದರು. ಆದರೆ ಮಹಾತ್ಮರು ಅತ್ಯಂತ ಎಚ್ಚರಿಕೆಯಿಂದಿದ್ದುದರಿಂದಲೂ ಕೇವಲ ಸಣ್ಣ ವಿಚಾರವನ್ನು ಮೊದಲುಗೊಂಡು ಎಲ್ಲಾ ವಿಷಯಗಳಲ್ಲಿಯೂ ಸತ್ಯವನ್ನೇ ಸಾಧಿಸಿದುದರಿಂದಲೂ ಅವರ ಮೇಲೆ ಎಸೆದ ಸರ್ಪಬಾಣಗಳು ನಿರರ್ಥಕವಾದವು. ಎದುರು ಪಕ್ಷದವರ ನಿಂದೆ ಗಾಂಧೀಜಿಯವರಲ್ಲಿಯೂ ಅವರ ಪಕ್ಷದವರಲ್ಲಿಯೂ ಜನರ ಮರ್ಯಾದೆಯನ್ನು ಇನ್ನೂ ಹೆಚ್ಚಿಸಿತು.

ಮಹಾತ್ಮರ ಕೇಂದ್ರ ಕಾರ್ಯಸ್ಥಾನವಾಗಿದ್ದ ಮೋತಿಹಾರಿನಲ್ಲಿ ಕೆಲಸಗಳನ್ನು ಸುವ್ಯವಸ್ಥಿತವಾಗಿ ನಡೆಸಲು ಒಂದು ಕಚೇರಿಯನ್ನು ತೆರೆಯಬೇಕಾಯಿತು. ಆ ಊರಿನಲ್ಲಿ ಅವರಿಗೆ ಮನೆ ಬಾಡಿಗೆಗೆ ಕೊಡಲೂ ಜನ ಹೆದರುತ್ತಿದ್ದರು. ಅಲ್ಲಿನ ಸಾರ್ವಜನಿಕ ಜೀವನದ ಜೀವಾಳವಾಗಿದ್ದ ವ್ರಜಕಿಶೋರ ಬಾಬುಗಳ ಸಾಹಸದಿಂದ ಒಂದು ಮನೆ ಸಿಕ್ಕಿತು. ಅಲ್ಲಿ ಕೆಲಸ ಕಾರ್ಯಗಳು ಪ್ರಾರಂಭವಾದವು. ಈ ಕೆಲಸಕ್ಕೆ ಅಲ್ಪ ಸ್ವಲ್ಪ ಹಣ ಬೇಕಾಗಿತ್ತು. ರೈತರಿಂದ ಹಣ ತೆಗೆದುಕೊಳ್ಳಬಾರದೆಂದೂ ಹೊರಗಡೆಯಿಂದ ಈ ಸಹಾಯ ಪಡೆಯಬೇಕೆಂಬುದೂ ಗಾಂಧೀಜಿಯ ನಿಶ್ಚಯ. ಆದುದರಿಂದ ವ್ರಜಕಿಶೋರ ಬಾಬುಗಳೂ ಅವರ ವಕೀಲ ಮಿತ್ರರೂ ಹಣ ಸಹಾಯ ಮಾಡಿದರು. ಕೆಲಸಗಾರರ ಕಾಲವೂ ವೆಚ್ಚವೂ ಉಳಿಯುವಂತೆ ಮಾಡಲು ಎಲ್ಲರಿಗೂ ಒಂದೇ ಕಡೆ ಊಟ ವಸತಿಗಳ ಏರ್ಪಾಡು ಮಾಡಲಾಯಿತು.

ರೈತರ ಹೇಳಿಕೆಯನ್ನು ತೆಗೆದುಕೊಳ್ಳಲು ಪ್ರಾರಂಭವಾಯಿತು. ಅವರ ತಂಡತಂಡವೇ ಹೇಳಿಕೆ ಕೊಡಲು ಬರುತ್ತಿತ್ತು. ಸ್ವಯಂಸೇವಕರು ರಾತ್ರಿಯವರೆಗೆ ದುಡಿದರೂ ಅವರಿಗೆ ಬಿಡುವಾಗುತ್ತಿರಲಿಲ್ಲ. ಹೇಳಿಕೆ ಕೊಡಲು ಬಂದ ರೈತರನೇಕರು ಅದಕ್ಕೆ ಅವಕಾಶ ಸಿಕ್ಕದೆ ಹಿಂದಕ್ಕೆ ಹೋಗುತ್ತಿದ್ದರು. ಈ ಸಮಯದಲ್ಲೇ ಜನರಿಗೆ ಒಂದು ಬಗೆಯ

ಯೋಗ್ಯ ಶಿಕ್ಷಣ ಕೊಡಬೇಕೆಂಬ ಯೋಚನೆ ಮಹಾತ್ಮರಿಗೆ ಹೊಳೆಯಿತು. ರೈತರ ಅಜ್ಞಾನ ಕರುಣಾಜನಕವಾಗಿದ್ದಿತು. ಅವರು ತಮ್ಮ ಮಕ್ಕಳನ್ನು ಎಚ್ಚರಿಕೆ ತೆಗೆದುಕೊಳ್ಳದೆ ಅಲೆಯುವುದಕ್ಕೆ ಬಿಡುತ್ತಿದ್ದರು. ಇಲ್ಲದಿದ್ದರೆ ಅರ್ಧಾಣೆಗಾಗಿ ಬೆಳಗಿನಿಂದ ಸಂಜೆಯುವರೆಗೂ ನೀಲಿಯ ತೋಟಗಳಲ್ಲಿ ಕೆಲಸ ಮಾಡಲು ಅಟ್ಟುತ್ತಿದ್ದರು. ಆ ಕಾಲದಲ್ಲಿ ಕೂಲಿ ಹೆಚ್ಚೆಂದರೆ ದಿನ ಒಂದಕ್ಕೆ ಗಂಡಸಿಗೆ ಎರಡೂವರೆ ಆಣೆ, ಹೆಂಗಸಿಗೆ ಒಂದೂವರೆ ಆಣೆ, ಮಕ್ಕಳಿಗೆ ಒಂಬತ್ತು ಕಾಸು ಅಥವಾ ಅರ್ಧಾಣೆ. ನಾಲ್ಕಾಣೆ ಸಂಪಾದಿಸುವವನು ಅತ್ಯಂತ ಅದೃಷ್ಟಶಾಲಿ. ಗಾಂಧೀಜಿ ಅವರ ಜೊತೆಗಾರರ ಸಲಹೆಯನ್ನು ತೆಗೆದುಕೊಂಡು ಆರು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂದು ನಿಶ್ಚಯಿಸಿದರು. ಗ್ರಾಮಸ್ಥರು ಶಿಕ್ಷಕರಿಗೆ ಆಹಾರವನ್ನೂ ವಾಸಸ್ಥಳವನ್ನೂ ಒದಗಿಸಿಕೊಡಬೇಕೆಂದೂ ಇತರ ವೆಚ್ಚಗಳನ್ನು ತಾವು ಹೊರುವುದಾಗಿಯೂ ಗ್ರಾಮಸ್ಥರೊಡನೆ ಗೊತ್ತುಮಾಡಿಕೊಂಡರು. ಶಿಕ್ಷಕರನ್ನು ಒದಗಿಸುವುದು ಒಂದು ಸಮಸ್ಯೆಯಾಗಿದ್ದಿತು. ಅಲ್ಪ ವೇತನಕ್ಕಾಗಿ ಅಥವಾ ಸಂಬಳವೇ ಇಲ್ಲದೆ ಕೆಲಸ ಮಾಡುವ ಶಿಕ್ಷಕರು ಅಲ್ಲಿಯೇ ಸಿಕ್ಕುವುದು ಕಷ್ಟವಾಗಿದ್ದಿತು. ಸಾಮಾನ್ಯ ಶಿಕ್ಷಕರ ಕೈಗೆ ಮಕ್ಕಳನ್ನು ಒಪ್ಪಿಸುವುದನ್ನು ಯಾವಾಗಲೂ ಮಹಾತ್ಮರು ಒಪ್ಪುತ್ತಿರಲಿಲ್ಲ. ಅವರಿಗೆ ಶಿಕ್ಷಕರ ಸಾಹಿತ್ಯಪ್ರವೀಣತೆಗಿಂತ ಚಾರಿತ್ರಸಂಪನ್ನತೆ ಬಹು ಮುಖ್ಯವಾಗಿದ್ದಿತು. ಆದುದರಿಂದ ಶಿಕ್ಷಣ ಕಾರ್ಯಕ್ಕೋಸ್ಕರ ಸ್ವಯಂ ಸೇವಕರು ಬೇಕೆಂದು ಸಾರ್ವಜನಿಕ ಬಿನ್ನಹವೊಂದನ್ನು ಪ್ರಕಟಿಸಿದರು. ಕೂಡಲೆ ಬೇಕಾದಷ್ಟು ಜನ ಹೆಂಗಸರೂ ಗಂಡಸರೂ ಕೆಲಸಕ್ಕೆ ಬಂದರು. ಮಹಾದೇವ ದೇಸಾಯಿಯವರು ತಮ್ಮ ಹೆಂಡತಿಯೊಡನೆ ಹೋಗಿ ಗಾಂಧೀಜಿಯೊಡನೆ ನೆಲಸಿದರು. ಶಿಕ್ಷಣಕಾರ್ಯ ಪ್ರಾರಂಭವಾಯಿತು. ಆದರೆ ಪ್ರಾಥಮಿಕ ವಿದ್ಯಾಭ್ಯಾಸವೊಂದೇ ಆ ಹಳ್ಳಿಗೆ ಸಾಕಾಗಿರಲಿಲ್ಲ. ಹಳ್ಳಿಗಳು ಅಶುಚಿಯಾಗಿದ್ದು ಬೀದಿಗಳೆಲ್ಲ ಹೊಲಸುಗಟ್ಟಿದ್ದವು. ಬಾವಿಗಳ

ಸುತ್ತಲೂ ಕೊಳಕು ತುಂಬಿ ನಾರುತ್ತಿತ್ತು. ಮನೆಗಳ ಅಂಗಳಗಳು ಸಹಿಸಲಾರದಷ್ಟು ಹೊಲಸಾಗಿದ್ದವು. ಮೊದಲು ದೊಡ್ಡವರಿಗೆ ಶುಚಿತ್ವ ವನ್ನು ಕಲಿಸಬೇಕಾಗಿತ್ತು. ಜನರೆಲ್ಲ ಕಜ್ಜಿ ತುರಿ ಗಾಯ ಮೊದಲಾದ ಚರ್ಮರೋಗಗಳಿಗೆ ತುತ್ತಾಗಿದ್ದರು. ಇದರಿಂದ ಸಾಧ್ಯವಾದಷ್ಟು ಗ್ರಾಮನೈರ್ಮಲ್ಯದ ಕೆಲಸಗಳನ್ನು ಕೈಕೊಳ್ಳಬೇಕೆಂದೂ ಜನರ ಜೀವನದ ಪ್ರತಿಯೊಂದು ಭಾಗವನ್ನೂ ಸರಿಪಡಿಸಬೇಕೆಂದೂ ಗಾಂಧೀಜಿ ನಿಶ್ಚಯಿ ಸಿದರು. ಈ ಕೆಲಸಕ್ಕೆ ವೈದ್ಯರೊಬ್ಬರು ಬೇಕಾಗಿದ್ದರು. ಡಾ|| ದೇವ್‌ರವರು ಸಹಾಯಕ್ಕೆ ಬಂದರು. ಪ್ರತಿಯೊಂದು ಶಾಲೆಯ ಆಡಳಿತವನ್ನು ಸಾಧ್ಯವಾದ ಮಟ್ಟಿಗೆ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸಿಗೆ ವಹಿಸಿದರು. ಈ ಸ್ವಯಂಸೇವಕರು ಔಷಧೋಪಚಾರದ ಮತ್ತು ಗ್ರಾಮನೈರ್ಮಲ್ಯದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗಿದ್ದಿತು. ಸ್ತ್ರೀವರ್ಗಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಹೆಂಗಸರೇ ನೋಡಿಕೊಳ್ಳುತ್ತಿದ್ದರು. ಗ್ರಾಮನೈರ್ಮಲ್ಯದ ಕೆಲಸ ಕಷ್ಟವಾಗಿದ್ದಿತು. ಜನರು ತಮ್ಮ ಕೆಲಸಗಳನ್ನು ತಾವೇ ಮಾಡಿ ಕೊಳ್ಳಲು ಸಿದ್ಧರಾಗಿರಲಿಲ್ಲ. ಆದರೆ ಡಾ|| ದೇವ್‌ರವರೂ ಸ್ವಯಂಸೇವಕರೂ ಎದೆಗೆಡಲಿಲ್ಲ. ತಾವೇ ಬೀದಿಗಳನ್ನೂ ಅಂಗಳಗಳನ್ನೂ ಗುಡಿಸಿದರು. ಬಾವಿಗಳನ್ನು ಶುದ್ಧಮಾಡಿದರು. ಸುತ್ತಮುತ್ತಲಿನ ಗುಂಡಿಗಳನ್ನು ಮುಚ್ಚಿದರು. ಗ್ರಾಮಸ್ಥರು ತಮ್ಮಲ್ಲಿಯೇ ಸ್ವಯಂಸೇವಕರನ್ನು ಏರ್ಪಡಿಸಿ ಕೊಳ್ಳುವಂತೆ ಮೃದುವರ್ತನೆಯಿಂದ ಜನರನ್ನು ಒಲಿಸಿಕೊಂಡರು. ರೈತರು ಗೋರಕ್ಷಣೆಯನ್ನು ಸರಿಯಾಗಿ ನಡಸುವಂತೆ ಮಾಡಿದರು. ಈರೀತಿಯಾಗಿ ಸ್ವಯಂಸೇವಕರು ತಮ್ಮ ಶಾಲೆಗಳು, ಗ್ರಾಮನೈರ್ಮಲ್ಯದ ವ್ಯವಸ್ಥೆ, ಔಷಧೋಪಚಾರ ಇವುಗಳಿಂದ ಹಳ್ಳಿಯ ಜನರ ವಿಶ್ವಾಸವನ್ನೂ ಮನ್ನಣೆ ಯನ್ನೂ ಸಂಪಾದಿಸಿ ಅವರಮೇಲೆ ಸತ್ಪ್ರಭಾವವನ್ನು ಬೀರಲು ಶಕ್ತರಾದರು.

ಹೀಗೆ ಸಮಾಜ ಸೇವೆಯ ಕೆಲಸ ಒಂದು ಕಡೆ ನಡೆಯುತ್ತಿರಲು ಇನ್ನೊಂದು ಕಡೆ ರೈತರ ದುಃಖವಿಷಯವಾದ ಹೇಳಿಕೆಗಳನ್ನು ತೆಗೆದು

ಕೊಳ್ಳುವ ಕಾರ್ಯವೂ ಸುಗಮವಾಗಿ ನಡೆಯುತ್ತಿತ್ತು. ಕೊನೆಗೆ ಇದೆಲ್ಲ ಕೆಲಸಗಳಿಗೂ ಫಲದೊರೆಯಿತು. ಆ ಪ್ರಾಂತ್ಯದ ಗವರ್ನರಾಗಿದ್ದ ಸರ್ ಎಡ್ವರ್ಡ್ ಗಯ್ಟರ್ ಅವರು ರೈತರ ಕಷ್ಟಪರಿಹಾರಕ್ಕಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸುವುದಾಗಿ ಒಪ್ಪಿ ಆ ಸಮಿತಿಯಲ್ಲಿ ಗಾಂಧೀಜಿಯವರೂ ಸದಸ್ಯರಾಗಿರಬೇಕೆಂದು ಆಹ್ವಾನವಿತ್ತು ಅವರಿಗೆ ಹೇಳಿಕಳಿಸಿದರು. ವಿಚಾರಣಾ ಸಮಿತಿಯು ರಚನೆಯಾಯಿತು. ವಿಚಾರಣೆಯೂ ಮುಗಿಯಿತು. ಸಮಿತಿ ರೈತರ ಪಕ್ಷವಾಗಿ ತೀರ್ಮಾನಿಸಿ ಜಮೀನ್ದಾರರು ರೈತರಿಂದ ಸುಲಿಯುತ್ತಿದ್ದ ತೆರಿಗೆಯಲ್ಲಿ ಒಂದು ಭಾಗವನ್ನು ಹಿಂದಕ್ಕೆ ಕೊಟ್ಟುಬಿಡಬೇಕೆಂದೂ ರೈತರು ತಾವು ವ್ಯವಸಾಯ ಮಾಡುತ್ತಿದ್ದ ಭೂಮಿಯ ಶೇಕಡ ೧೫ ರಷ್ಟರಲ್ಲಿ ನೀಲಿಯನ್ನು ಬೆಳೆಯಲೇಬೇಕಾಗಿದ್ದ "ತೀನ್ ಕಠಿಯಾ" ಪದ್ಧತಿಯನ್ನು ಕಾನೂನಿನ ಮೂಲಕ ವಜಾ ಮಾಡಬೇಕೆಂದೂ ಸರ್ವಸಮ್ಮತಿಯಿಂದ ಸೂಚಿಸಿತು. ಈ ಸಮಿತಿಯ ಸೂಚನೆಗೆ ಅನುಸಾರವಾಗಿ ರಚಿತವಾದ ರೈತರ ಕಾನೂನು ಸರ್ಕಾರದಿಂದ ಅಂಗೀಕೃತವಾಯಿತು. ಒಳ್ಳೆಯ ರೀತಿಯಲ್ಲಿ ನ್ಯಾಯ ದೊರೆಯಲು ಗವರ್ನರ್ ಆಗಿದ್ದ ಸರ್ ಎಡ್ವರ್ಡ್ ಗಯ್ಟರ್ ಅವರು ಬಹುಮಟ್ಟಿಗೆ ಕಾರಣರಾದರು. ಶತಮಾನಗಳಿಂದ ವಾಡಿಕೆಯಾಗಿ ಬಂದಿದ್ದು ಎಂದೆಂದಿಗೂ ತಪ್ಪದೆಂಬ ನಂಬಿಕೆ ಹುಟ್ಟಿಸಿದ್ದ ಈ ಅನ್ಯಾಯದ ಪದ್ಧತಿ ಈ ರೀತಿಯಾಗಿ ಹಾಳಾಯಿತು. ಅದರ ಜೊತೆಗೆ ಜಮೀನ್ದಾರರ ದಬ್ಬಾಳಿಕೆಯೂ ಕೊನೆಗಂಡಿತು. ಅಂದಿನವರೆಗೂ ತುಳಿತಕ್ಕೆ ಸಿಕ್ಕಿದ್ದ ರೈತರು ತಲೆಯೆತ್ತಿಕೊಂಡರು.

ಚಂಪಾರಣ್ಯದ ಕೆಲಸವಿನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿಯೇ ಖೇಡಾಜಿಲ್ಲೆಯಲ್ಲಿ ಮಳೆ ಬೀಳದೆ ಬೆಳೆಯಿಲ್ಲದೆ ಕ್ಷಾಮವೊದಗಿ ರೈತರು ಕಂದಾಯಕೊಡಲು ಅಶಕ್ತರಾಗಿರುವರೆಂದೂ ಅಲ್ಲಿಗೆ ಬಂದು ಅವರಿಗೆ ದಾರಿ ತೋರಿಸಬೇಕೆಂದೂ ಗಾಂಧೀಜಿಗೆ ಅಲ್ಲಿಂದ ಕಾಗದ ಬಂತು. ಅದರಂತೆಯೇ

ಅಹಮದಾಬಾದಿನಲ್ಲಿ ಕೂಲಿಗಾರರ ಪರಿಸ್ಥಿತಿಯನ್ನು ತಿಳಿಸಿ ಕೂಲಿಯನ್ನು ಹೆಚ್ಚಿಸಬೇಕಾಗಿರುವ ಚಳುವಳಿಯಲ್ಲಿ ಮಾರ್ಗದರ್ಶಿಯಾಗಲು ಅವರಿಗೆ ಕರೆಬಂತು. ಗಾಂಧೀಜಿ ಚಂಪಾರಣ್ಯವನ್ನು ಬಿಟ್ಟು ಅಹಮದಾಬಾದಿಗೆ ಬಂದು ಕೂಲಿಗಾರರ ಸಮಸ್ಯೆಯಲ್ಲಿ ತೊಡಗಿದರು. ಆಗಲೇ ವಲ್ಲಭಭಾಯಿ ಪಟೇಲರು ಗಾಂಧೀಜಿಯ ಸಹಾಯಕ್ಕೆ ಬಂದುದು. ಗಾಂಧೀಜಿ ಗಿರಣಿ ಮಾಲಿಕರೊಡನೆ ಮಾತಾಡಿ ವ್ಯಾಜ್ಯವನ್ನು ಪಂಚಾಯಿತರ ತೀರ್ಮಾನಕ್ಕೆ ಒಪ್ಪಿಸಬೇಕೆಂದು ಅವರನ್ನು ಬೇಡಿದರು. ಆದರೆ ಮಾಲಿಕರು ಅದಕ್ಕೆ ಒಪ್ಪಲಿಲ್ಲ. ಆದುದರಿಂದ ಅಹಿಂಸಾಮಾರ್ಗದಲ್ಲಿ ದೃಢಮನಸ್ಸಿನಿಂದ ಮುಷ್ಕರ ಹಿಡಿಯಿರಿ ಎಂದು ಕೆಲಸಗಾರರಿಗೆ ಸಲಹೆಕೊಟ್ಟರು. ಇಷ್ಟರಲ್ಲಿ ಸತ್ಯಾಗ್ರಹಾಶ್ರಮ ಪಟ್ಟಣದಿಂದ ದೂರವಾಗಿ ಸಬರಮತಿ ನದಿಯ ದಡದಲ್ಲಿ ಸಬರಮತಿ ಜೈಲಿಗೆ ಹತ್ತಿರದಲ್ಲಿದ್ದ ವಿಶಾಲವಾದ ಪ್ರದೇಶಕ್ಕೆ ಸಾಗಿತ್ತು. ಅಲ್ಲಿಯೇ ಮುಷ್ಕರಕಾರರು ಪ್ರತಿನಿತ್ಯವೂ ಸಭೆಸೇರಿ ಮುಂದೆ ಅನುಸರಿಸ ಬೇಕಾದ ನೀತಿಯನ್ನು ಚರ್ಚಿಸುತ್ತಿದ್ದರು. ಗಿರಣಿಯ ಮಾಲಿಕರೂ ಪಟ್ಟುಹಿಡಿದು ಮುಷ್ಕರಕ್ಕೆ ಬಗ್ಗದೆ ಇದ್ದರು. ಕೂಲಿಗಾರರ ಉತ್ಸಾಹ ಕಡಮೆಯಾಗುತ್ತ ಬಂತು. ಮುಷ್ಕರಕಾರರು ತಾವು ಮುಷ್ಕರಹಿಡಿಯುವ ಪ್ರಾರಂಭದಲ್ಲಿ ಭರವಸೆಕೊಟ್ಟಿದ್ದುದಕ್ಕೆ ತಪ್ಪಿ ದೃಢತೆಯನ್ನು ಕಳೆದುಕೊಳ್ಳು ತ್ತಿದ್ದರು. ಇದು ಮಹಾತ್ಮರಿಗೆ ಗೊತ್ತಾಯಿತು. “ ಮುಷ್ಕರ ಹಿಡಿದಿರು ವವರೆಲ್ಲ ಎಚ್ಚತ್ತು ಒಟ್ಟುಗೂಡಿ ಯಾವುದಾದರೊಂದು ತೀರ್ಮಾನವಾಗುವ ವರೆಗೂ ಅಥವಾ ಅವರು ಗಿರಣಿಗಳನ್ನು ಬಿಟ್ಟು ಬರುವವರೆಗೂ ಮುಷ್ಕರ ವನ್ನು ನಡಸದಿದ್ದರೆ ನಾನು ಆಹಾರವನ್ನು ತೆಗೆದುಕೊಳ್ಳುವುದಿಲ್ಲ ” ಎಂದು ಸಭೆಗೆ ತಿಳಿಸಿದರು. ಇದನ್ನು ಕೇಳಿದ ಕೂಲಿಗಾರರಿಗೆ ಸಿಡಿಲುಬಡಿದಂ ತಾಯಿತು. ಮುಷ್ಕರಕಾರರಲ್ಲಿ ಮತ್ತೆ ಉತ್ಸಾಹ ಮತ್ತು ಚೇತನ ಮೂಡಿತು. ಮತ್ತೆ ಮುಷ್ಕರ ಯಶಸ್ವಿಯಾಗಿ ನಡೆಯಲು ಪ್ರಾರಂಭ ವಾಯಿತು. ಗಾಂಧೀಜಿ ಕೂಲಿಗಾರರ ತಪ್ಪಿಗಾಗಿ ಮಾತ್ರ ಉಪವಾಸವ್ರತ

ಹಿಡಿದಿದ್ದರು. ಆದರಿಂದ ಗಿರಣಿಯ ಮಾಲಿಕರ ಮೇಲೆ ಯಾವ ಪರಿಣಾಮ ವಾದರೂ ಆಗಬೇಕೆಂದು ಅವರು ಎಣಿಸಿರಲಿಲ್ಲ. ಆದರೆ ಪರಿಣಾಮವಾಗದೆ ಇರಲಿಲ್ಲ. ಮಾಲಿಕರ ಅಂತಃಕರಣ ಕರಗಿ ಈ ವ್ಯಾಜ್ಯವನ್ನು ಪರಿಹರಿಸಲು ಪಂಚಾಯಿತಿಗೆ ಒಪ್ಪಿಸಿದರು. ಮುಷ್ಕರ ನಿಂತಿತು. ಮಹಾತ್ಮರು ಅಷ್ಟರಲ್ಲಿ ಮೂರು ದಿನ ಮಾತ್ರ ಉಪವಾಸ ಮಾಡಿದ್ದರು. ಈರೀತಿಯಾಗಿ ಮುಷ್ಕರ ಪ್ರಾರಂಭವಾದ ಇಪ್ಪತ್ತೊಂದು ದಿವಸದಲ್ಲಿ ಕೂಲಿಗಾರರ ಬೇಡಿಕೆಗೆ ಮನ್ನಣೆ ದೊರೆತು ವ್ಯವಹಾರ ಕೊನೆಗಂಡಿತು.

ಆದರೆ ಗಾಂಧೀಜಿಗೆ ಸ್ವಲ್ಪವೂ ವಿರಾಮ ಸಿಗಲಿಲ್ಲ. ಅಹಮದಾಬಾದಿನ ಗಿರಣಿಯ ಕೂಲಿಗಾರರ ಮುಷ್ಕರ ಮುಗಿಯುವುದಕ್ಕಿಲ್ಲ, ಅಷ್ಟರಲ್ಲಿಯೇ ಅವರು ಖೇಡಾ ಸತ್ಯಾಗ್ರಹಕದನಕ್ಕೆ ನುಗ್ಗಬೇಕಾಯಿತು. ಖೇಡಾ ಜಿಲ್ಲೆಯ ರೈತರು ಕೇಳುವುದು ನ್ಯಾಯವಾಗಿತ್ತು. ಸರ್ಕಾರದವರು ಅದನ್ನು ಒಪ್ಪಿಕೊಳ್ಳಬೇಕಾಗಿತ್ತು. ಭೂಗಂದಾಯದ ನಿಯಮಗಳ ಪ್ರಕಾರ ರೂಪಾಯಿಗೆ ನಾಲ್ಕಾಣೆ ಪಾಲಿಗಿಂತ ಕಡಮೆ ಬೆಳೆಯಾದರೆ ಆ ವರ್ಷದ ಭೂಗಂದಾಯವನ್ನು ವಸೂಲ್ಮಾಡುವುದನ್ನು ನಿಲ್ಲಿಸಬೇಕೆಂದು ರೈತರು ಕೇಳಬಹುದಾಗಿತು. ಸರ್ಕಾರದವರು ತಮ್ಮ ಪಹಣಿ ಲೆಕ್ಕದ ಪ್ರಕಾರ ಬೆಳೆ ನಾಲ್ಕಾಣೆಗಿಂತ ಹೆಚ್ಚೆಂದು ಹೇಳುತ್ತಿದ್ದರು. ರೈತರು ನಾಲ್ಕಾಣೆಗಿಂತ ಕಡಮೆ ಬೆಳೆಯೆಂದು ವಾದಿಸುತ್ತಿದ್ದರು. ಇದನ್ನು ವಿಮರ್ಶಿಸಿ ನೋಡಲು ಪಂಚಾಯಿತರನ್ನು ನೇಮಿಸಬೇಕೆಂದು ಜನರು ಸರ್ಕಾರದವರನ್ನು ಪ್ರಾರ್ಥಿಸಿದರು. ಸರ್ಕಾರದವರು ಜನರ ಮಾತನ್ನು ಲಕ್ಷ್ಯಮಾಡದೆ ಪಂಚಾಯಿತರನ್ನು ನೇಮಿಸುವುದು ವಿರುದ್ಧಪದ್ಧತಿಯೆಂದು ಉತ್ತರವಿತ್ತರು. ಅರ್ಜಿಗಳಿಂದಲೂ ಅರಿಕೆಗಳಿಂದಲೂ ಯಾವ ಪ್ರಯೋಜನವೂ ಆಗಲಿಲ್ಲ. ಕಟ್ಟಕಡೆಗೆ ಗಾಂಧೀಜಿ ಸತ್ಯಾಗ್ರಹ ಹೂಡುವಂತೆ ರೈತರಿಗೆ ಹೇಳಿದರು. ಖೇಡದ ಸ್ವಯಂಸೇವಕರಲ್ಲದೆ ವಲ್ಲಭಭಾಯಿ ಪಟೇಲರು ಮಹದೇವ ದೇಸಾಯಿಯವರು ಶಂಕರಲಾಲ್ ಬ್ಯಾಂಕರ್ ಅವರು ಮತ್ತು

ಅನುಸೂಯಾಬಾಯಿಯವರು ಚಳವಳಿಗೆ ಸೇರಿದರು. ಶ್ರೀ ವಲ್ಲಭಭಾಯಿ ಪಟೇಲರು ಉತ್ತಮವಾಗಿ ನಡೆಯುತ್ತಿದ್ದ ತಮ್ಮ ವಕೀಲಿವೃತ್ತಿಯನ್ನು ಬಿಟ್ಟಿದ್ದು ಆಗಲೇ. ಇವರೆಲ್ಲರೂ ನಡಿಯಾದಿನ ಅನಾಥಾಶ್ರಮದಲ್ಲಿ ತಮ್ಮ ಕಾರ್ಯಕೇಂದ್ರವನ್ನು ಮಾಡಿಕೊಂಡರು. ಸತ್ಯಾಗ್ರಹಿಗಳು ಮುಂದಿರುವ ಶಪಥ ಪತ್ರಕ್ಕೆ ಒಪ್ಪಿ ಸಹಿ ಹಾಕಿದರು.

"ನಮ್ಮ ಹಳ್ಳಿಗಳಲ್ಲಿ ನಾಲ್ಕಾಣೆಗಿಂತ ಕಡಮೆ ಬೆಳೆಯಾಗಿರುವುದರಿಂದ ಮುಂದಿನ ವರ್ಷದ ವರೆಗೆ ಕಂದಾಯ ವಸೂಲಿಯನ್ನು ನಿಲ್ಲಿಸಬೇಕೆಂದು ಸರಕಾರದವರನ್ನು ಪ್ರಾರ್ಥಿಸಿಕೊಂಡೆವು. ಆದರೆ ಸರಕಾರ ನಮ್ಮ ಬೇಡಿಕೆಗೆ ಕಿವಿಗೊಡಲಿಲ್ಲ. ಆದುದರಿಂದ ನಾವಾಗಿಯೇ ಕಂದಾಯವನ್ನು ಸರ್ಕಾರಕ್ಕೆ ಸಲ್ಲಿಸುವುದಿಲ್ಲವೆಂದು ದೃಢವಾಗಿ ಹೇಳುತ್ತೇವೆ. ಸರಕಾರ ಇಚ್ಛೆಪಟ್ಟ ಯಾವಬಗೆಯ ಕಾರ್ಯಕ್ರಮವನ್ನಾದರೂ ತೆಗೆದುಕೊಳ್ಳಬಹುದು. ನಾವು ಕಂದಾಯವನ್ನು ಕೊಡದಿದ್ದುದರಿಂದೊದಗುವ ಫಲವನ್ನು ಅನುಭವಿಸಲು ಸಿದ್ಧರಿದ್ದೇವೆ. ಕಂದಾಯ ಕೊಟ್ಟು ನಿಜವಾದ ಸ್ಥಿತಿಯನ್ನು ಸುಳ್ಳುಮಾಡುವುದಕ್ಕಿಂತಲೂ ಅಥವಾ ಸ್ವಾಭಿಮಾನವನ್ನು ಕಳೆದುಕೊಳ್ಳುವುದಕ್ಕಿಂತಲೂ ನಮ್ಮ ಜಮೀನುಗಳನ್ನು ಸರ್ಕಾರದವರು ವಶಪಡಿಸಿಕೊಳ್ಳಲು ಬಿಡುತ್ತೇವೆ. ಇಡೀ ಜಿಲ್ಲೆಯಲ್ಲಿ ಸರ್ಕಾರ ಕಂದಾಯದ ಎರಡನೆಯ ಕಂತಿನ ವಸೂಲಿಯನ್ನು ನಿಲ್ಲಿಸಲು ಒಪ್ಪಿದರೆ ನಮ್ಮಲ್ಲಿ ಕಂದಾಯ ತೆರಲು ಶಕ್ತಿಯಿರುವವರು ನಾವು ಕೊಡಬಹುದಾದ ಮೊಬಲಗನ್ನು ಕೊಟ್ಟುಬಿಡುತ್ತೇವೆ. ಕೊಡಲು ಶಕ್ತಿಯಿರುವವರೂ ಕಂದಾಯ ಕೊಡದಿರಲು ಕಾರಣವೇನೆಂದರೆ, ಅವರು ಕೊಡುವುದಾದರೆ ಬಡರೈತರು ಹೆದರಿ ತಮ್ಮ ಪಾತ್ರೆಪದಾರ್ಥಗಳನ್ನು ಮಾರಿ ಅಥವಾ ಸಾಲಮಾಡಿ ಕಂದಾಯ ತೆತ್ತು ಕಷ್ಟಸಂಕಟಗಳನ್ನು ಅನುಭವಿಸುವರೆಂಬುದು. ಈ ಸ್ಥಿತಿಯಲ್ಲಿ ಆ ಬಡ ರೈತರ ಸಲುವಾಗಿ ಕಂದಾಯ ತೆರಲು ಶಕ್ತಿಯಿರುವವರೂ ತಮ್ಮ ಕಂದಾಯವನ್ನು ನಿಲ್ಲಿಸುವುದು ಅವರ ಕರ್ತವ್ಯವೆಂದು ತಿಳಿದು

ಕೊಂಡಿದ್ದೇವೆ.'' ಈ ಹೇಳಿಕೆಯನ್ನು ಕೊಟ್ಟು ಎಲ್ಲ ರೈತರೂ ಕರನಿರಾಕರಣ ಸತ್ಯಾಗ್ರಹ ಹೂಡಿದರು.

ಸರ್ಕಾರದವರು ಇದೊಂದನ್ನೂ ಲೆಕ್ಕಿಸದೆ ಚರಸ್ಥಿರ ಆಸ್ತಿಗಳನ್ನು ಹರಾಜು ಹಾಕಿದರು. ಜಮೀನುಗಳಲ್ಲಿದ್ದ ಅಲ್ಪಸ್ವಲ್ಪ ಬೆಳೆಯನ್ನೂ ಜಪ್ತಿ ಮಾಡಿದರು. ದನಕರುಗಳನ್ನು ಹಿಡಿದುಕೊಂಡು ಹೋದರು. ಜಮೀನುಗಳನ್ನು ಹರಾಜು ಮಾಡಿದರು. ಅಲ್ಲದೆ ಕೆಲವರನ್ನು ದಸ್ತಗಿರಿ ಮಾಡಿದರು. ಇದೆಲ್ಲದರಿಂದ ಜನರ ಉತ್ಸಾಹವೇರಿತು. ಸರ್ಕಾರದ ದಂಡನೆ ಹೆಚ್ಚಿದಷ್ಟು ಜನರ ಧೈರ್ಯವೂ ಉತ್ಸಾಹವೂ ವೃದ್ಧಿಯಾಗಿ ಸೆರೆಮನೆಯ ದಿಗಿಲು ಹಾರಿಹೋಯಿತು. ಸ್ವಲ್ಪ ದಿನದಲ್ಲೇ ಸರ್ಕಾರದವರು ನ್ಯಾಯುವರಿತು ರಾಜಿಗೆ ಬಂದರು. ಹಣವಂತರು ತಮ್ಮ ಕಂದಾಯ ಕೊಡಬೇಕೆಂದೂ ಬಡವರ ಕಂದಾಯುವನ್ನು ಮನ್ನಾಮಾಡುವುದಾಗಿಯೂ ರಾಜಿಯಾಯಿತು. ಅಂತೂ ಖೇಡಾ ರೈತರ ಸತ್ಯಾಗ್ರಹ ಸಂಪೂರ್ಣ ಜಯುವಲ್ಲದಿದ್ದರೂ ರೈತರ ನಿಶ್ಚಲವಾದ ಪ್ರಯತ್ನಕ್ಕೆ ತಕ್ಕ ಫಲ ದೊರೆಯಿತು. ಅಷ್ಟೇ ಅಲ್ಲದೆ ತಮ್ಮ ಇಂತಹ ಕಷ್ಟನಿವಾರಣೆಗೆ ನ್ಯಾಯವಾದ ಮತ್ತು ಅತ್ಯುತ್ತಮವಾದ ಮಾರ್ಗ ಸತ್ಯಾಗ್ರಹವೆಂಬುದನ್ನು ಅವರು ಮನಗಂಡರು.

ಯೂರೋಪಿನ ಮಹಾ ಯುದ್ಧ ಇನ್ನೂ ನಡೆಯುತ್ತಲೇ ಇದ್ದಿತು. ಈ ಯುದ್ಧದಿಂದ ಬ್ರಿಟಿಷ್ ಸಾರ್ವಭೌಮತ್ವಕ್ಕೆ ಆಪತ್ತು ಒದಗಿತ್ತು. ಹಿಂದೂಸ್ಥಾನದಿಂದ ಜನಬಲ ಮತ್ತು ಧನಬಲವನ್ನು ಪಡೆಯುವ ಸಲುವಾಗಿ ವೈಸರಾಯರು ದೆಹಲಿಯಲ್ಲಿ ಮಂತ್ರಾಲೋಚನ ಸಭೆಯೊಂದನ್ನೇರ್ಪಡಿಸಿ ಅದಕ್ಕೆ ಹಲವರು ಮುಂದಾಳುಗಳನ್ನು ಕರೆದರು. ಗಾಂಧೀಜಿಗೂ ಆಹ್ವಾನಬಂತು. ಈ ಆಮಂತ್ರಣವನ್ನು ಸ್ವೀಕರಿಸಿ ಅವರು ದೆಹಲಿಗೆ ಹೋದರು. ಆ ಸಭೆಯಲ್ಲಿ ಯುದ್ಧಕ್ಕಾಗಿ ಭಾರತದಲ್ಲಿ ಸೈನಿಕರನ್ನು ಕೂಡಿಸಬೇಕೆಂಬ ಗೊತ್ತುವಳಿಯಾಯಿತು. ವೈಸರಾಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಗಾಂಧೀಜಿ ಹಿಂದೂಸ್ಥಾನಿಯಲ್ಲೇ ಮಾತಾಡಿದರು. ಹೀಗೆ

ಮಾತಾಡಿದವರಲ್ಲಿ ಇವರೇ ಮೊದಲನೆಯವರು. ಅವರಿಗೆ ಭಾರತೀಯರು ಸೇರಿದ ಸಭೆಯಲ್ಲಿ ಪರಭಾಷೆಯಲ್ಲಿ ಮಾತಾಡುವುದೆಂದರೆ ಅಸಹ್ಯವಾಗಿ ಕಂಡಿತು. ಸಭೆ ಮುಗಿಯಿತು. ಗಾಂಧೀಜಿ ವೈಸರಾಯರಿಗೊಂದು ಕಾಗದ ಬರೆದರು. "ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸಂಬಂಧಪಟ್ಟ ಇತರ ನೆಲಸೆಗಳಂತೆ ಭರತಖಂಡಕ್ಕೂ ಇನ್ನು ಕೊಂಚಕಾಲದಲ್ಲಿಯೇ ಸ್ವಾತಂತ್ರ್ಯ ಸಿಗುವುದೆಂಬ ಆಸೆ ನಮಗಿದೆ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಕಷ್ಟವೊದಗಿರುವಾಗ ಭಾರತದೇಶ ಅದಕ್ಕೆ ಸಹಾಯಮಾಡಬೇಕಾದುದು ಧರ್ಮವೆಂಬುದನ್ನು ತಿಳಿದುಕೊಂಡಿದ್ದೇವೆ. ಆದರಂತೆ ಸಹಾಯಮಾಡಲೂ ನಾವು ಒಪ್ಪಿದ್ದೇವೆ. ನಮ್ಮ ಸ್ವಾತಂತ್ರ್ಯ ಬೇಗನೆ ದೊರಕುವುದೆಂಬ ನಂಬಿಕೆ ಈ ಸಹಕಾರಕ್ಕೆ ಕಾರಣವೆಂಬುದು ನಿಜವಾದ ಮಾತು. ತಾವು ಯುದ್ಧ ಸಭೆಯಲ್ಲಿ ಭಾಷಣಮಾಡಿ ಸೂಚಿಸಿದ ರಾಜಕೀಯ ಸುಧಾರಣೆಗಳು, ರಾಷ್ಟ್ರ ಮಹಾಸಭೆ ಮತ್ತು ಮುಸ್ಲಿಂ ಸಂಸ್ಥೆ ಸೂಚಿಸುವ ಆಡಳಿತ ಕ್ರಮಕ್ಕೆ ಹೊಂದಿಕೊಳ್ಳುತ್ತವೆ ಎಂಬ ಆಸೆಯಿಂದ ಯುದ್ಧಸಭೆಗೆ ಸೇರಿದ್ದವರೆಲ್ಲ ತಮ್ಮ ಹೃತ್ಪೂರ್ವಕ ಸಹಾಯವನ್ನು ನೀಡಲು ಒಪ್ಪಿದ್ದಾರೆ ಎಂಬುದು ನನ್ನ ನಂಬಿಕೆ. ಈ ಸಮಯದಲ್ಲಿ ಮತ್ತೊಂದು ವಿಷಯ ತಿಳಿಸಬೇಕಾಗಿದೆ. ಸರಕಾರದ ನಿರಂಕುಶವರ್ತನೆಯನ್ನು ತಡೆಯಲು ನನ್ನ ಶಕ್ತಿಯೆಲ್ಲಾ ವೆಚ್ಚವಾದರೂ ಚಿಂತೆಯಿಲ್ಲ. ಯಾವ ಮನುಷ್ಯನನ್ನೂ ಅನಾದರಣೆಯಿಂದ ಕಾಣಕೂಡದೆಂದೂ ಎಂದಿಗಿಂತಲೂ ಅತಿಶಯವಾಗಿ ಪ್ರಜಾಭಿಪ್ರಾಯಗಳನ್ನು ಮನಸ್ಸಿಗೆ ತಂದುಕೊಂಡು ಅದನ್ನನುಸರಿಸಿ ನಡೆದುಕೊಳ್ಳಬೇಕೆಂದೂ ನಿಮ್ಮ ಅಧಿಕಾರಿಗಳಿಗೆಲ್ಲ ತಿಳಿಸಿ. ಈಗ ಸರ್ಕಾರಕ್ಕೆ ವಿರೋಧವಾಗಿದ್ದ ಜನರು ಕೂಡ ಧರ್ಮಕ್ಕಾಗಿ ಕಷ್ಟವನ್ನು ಸಹಿಸಿ ಸಾಮ್ರಾಜ್ಯಕ್ಕೆ ಸಹಕಾರ ನೀಡಲು ಸಿದ್ಧರಿದ್ದಾರೆ. ಅನ್ಯಾಯ ಸಂಭವಿಸಿದಾಗ ಅದನ್ನು ವಿನಯದಿಂದಲೂ ಕ್ರಮದಿಂದಲೂ ಎದುರಿಸಿದರೆ ಆ ವಿರೋಧವನ್ನು ಸರ್ಕಾರದವರು ಸಹಿಸಲೇಬೇಕಾಗಿದೆ. ಭಾರತೀಯರ ನಂಬಿಕೆಯನ್ನು ನಿಶ್ಚಯ

ಗೊಳಿಸಿ ಆಸೆಯನ್ನು ನೆರವೇರಿಸಿ ಅವರಿಗೆ ಒಳ್ಳೆಯದನ್ನು ಮಾಡಲು ಸರಕಾರ ಸಿದ್ಧವಾಗಿ ನಿಲ್ಲಬೇಕಾಗಿದೆ. ಮುಂದೆ ಭಾರತೀಯರಿಗೆ ಆಶಾಭಂಗವಾದರೆ ಬ್ರಿಟಿಷ್ ಸಾಮ್ರಾಜ್ಯದ ಆಸೆ ಮಣ್ಣುಗೂಡಿದಂತೆ ಎಂಬುದು ನಿಜವಾದ ಮಾತು." ಈ ಅರ್ಥಬರುವಂತಿದ್ದ ಆ ಕಾಗದವನ್ನು ವೈಸರಾಯರಿಗೆ ಕಳಿಸಿ ತಾವು ಸೈನಿಕರನ್ನು ಸೇರಿಸಲು ಹೊರಟರು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಜನರಿಗೆ ನಂಬಿಕೆ ಹುಟ್ಟುವಂತೆ ಮಾಡುವುದು ಬಹು ಕಷ್ಟವಾಯಿತು. ಆದರೆ ಮಹಾತ್ಮರು ಜನರನ್ನು ಒಲಿಸಿಕೊಂಡರು. ಅನಂತರ ಅವರ ಕೆಲಸ ಸುಲಭಸಾಧ್ಯವಾಯಿತು.

ಈ ಕೆಲಸದ ಆತುರದಲ್ಲಿ ಮಹಾತ್ಮರು ತಮ್ಮ ದೇಹ ಸೌಕರ್ಯವನ್ನು ಲಕ್ಷ್ಯಮಾಡಲಿಲ್ಲ. ಆದುದರಿಂದ ಅವರು ಆಮಶಂಕೆ ಕಾಯಿಲೆಗೆ ಒಳಗಾದರು. ಈ ಕಾಯಿಲೆ ಬಲಗೊಂಡು ಕೊನೆಗೆ ವಿಷಮಶೀತಜ್ವರಕ್ಕೆ ತಿರುಗಿತು. ಕಾಯಿಲೆ ಹೆಚ್ಚಾಯಿತು. ನಡಿಯಾದನ್ನು ಬಿಟ್ಟು ಅಹಮದಾಬಾದಿಗೆ ಬಂದರು. ಅಲ್ಲಿಂದ ಅವರನ್ನು ಸಬರಮತಿ ಆಶ್ರಮಕ್ಕೆ ಸಾಗಿಸಿದುದಾಯಿತು. ಕಾಯಿಲೆ ಕಡಮೆಯಾಗಲೇ ಇಲ್ಲ. ನಿತ್ರಾಣ ಹೆಚ್ಚಾಗಿ ಬದುಕಿಕೊಳ್ಳುವುದೇ ಕಷ್ಟವಾಗಿ ಕಂಡಿತು. ಇವರ ಜೊತೆಗೆ ವೈದ್ಯರು ಹೇಳಿದಂತೆ ಕೇಳದೆ ಯಾವ ಔಷಧಿಯನ್ನೂ ತೆಗೆದುಕೊಳ್ಳದೆ ತನ್ನ ದಾರಿಯನ್ನೇ ಹಿಡಿಯುವ ಅವರ ಹಟಮಾರಿತನ ಬೇರೆ ಸೇರಿ ನಿಜವಾಗಿಯೂ ಅಪಾಯದಿಂದ ಪಾರಾಗುವರೇ ಎಂಬ ಸಂಶಯ ಹುಟ್ಟಿ ಎಲ್ಲರೂ ಹೆದರಿದರು. ಕೊನೆಗೆ ಹಲವರ ಸಾಹಸದ ಫಲವಾಗಿ ವೈದ್ಯರೊಬ್ಬರ ಮಂಜಿನಗಡ್ಡೆಯ ಚಿಕಿತ್ಸೆಗೆ ಒಪ್ಪಿದರು. ಅದರಿಂದ ಸ್ವಲ್ಪಮಟ್ಟಿನ ಗುಣ ಕಂಡಿತು. ಅನಂತರ ಡಾ|| ದಲಾಲರು ತಮ್ಮ ಚಿಕಿತ್ಸೆಯನ್ನು ನಡಸಿದರು. ಡಾ|| ದಲಾಲರು ಗಾಂಧೀಜಿ ಹಾಲು ತೆಗೆದುಕೊಳ್ಳದಿದ್ದರೆ ದೇಹವನ್ನು ಶಕ್ತಿಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಮಹಾತ್ಮರು ಇನ್ನೂ ಹಾಲು ತೆಗೆದುಕೊಳ್ಳದಿರುವ ಪ್ರತಿಜ್ಞೆಯನ್ನು ಪಾಲಿಸುತ್ತಿದ್ದರು. ಈ ಪ್ರತಿಜ್ಞೆಗೆ ಕಾರಣ

ಗೌಳಿಗರು ಹೆಚ್ಚು ಹಾಲು ಪಡೆಯುವ ಆಸೆಯಿಂದ ಆಕಳು ಎಮ್ಮೆಗಳಿಗೆ ಸಂಕಟವನ್ನುಂಟುಮಾಡುತ್ತಿದ್ದುದು. ಈಗ ಈ ಹಾಲು ತೆಗೆದುಕೊಳ್ಳುವ ಪ್ರಶ್ನೆಯೆದ್ದಾಗ ಕಸ್ತೂರಿಬಾಯಿಯವರು ಮೇಕೆಯ ಹಾಲನ್ನು ತೆಗೆದು ಕೊಳ್ಳಬಹುದಲ್ಲಾ, ಎಂದು ಸಲಹೆ ಇತ್ತರು. ಡಾಕ್ಟರು ಸರಿ ಎಂದರು. ಗಾಂಧೀಜಿ ನಿರ್ವಾಹವಿಲ್ಲದೆ ಮೇಕೆಯ ಹಾಲನ್ನು ತೆಗೆದುಕೊಳ್ಳಲು ಒಪ್ಪಿದರು.

ಗಾಂಧೀಜಿಗೆ ಕಾಯಿಲೆ ಇನ್ನೂ ವಾಸಿಯಾಗಿರಲಿಲ್ಲ. ಜರ್ಮನಿ ಸೋತುಹೋಗಿ ಬ್ರಿಟಿಷರಿಗೆ ಜಯ ಲಭಿಸಿ ಯುದ್ಧ ನಿಂತಿತು. (೧೯೧೮ ನವೆಂಬರು) ಇದಾದ ಸ್ವಲ್ಪ ದಿನಕ್ಕೆ ಭಾರತೀಯರ ಸ್ವಾತಂತ್ರ್ಯಕ್ಕೆ ಬದಲು ಇದ್ದಬದ್ದ ಅಷ್ಟಿಟ್ಟು ಹಕ್ಕುಬಾಧ್ಯತೆಗಳನ್ನೂ ಭಾರತೀಯರಿಂದ ಕಿತ್ತು ಕೊಳ್ಳಲು ಅನುಕೂಲವಾಗುವಂತಹ ಕಾನೂನು ಮಾಡಲು ರೌಲತ್ ವರದಿ ಹೊರಬಿತ್ತು. ಆ ವರದಿಯನ್ನು ನೋಡಿ ಗಾಂಧೀಜಿ ನಿರಾಶೆಯಿಂದ ಭಾರತದ ಕಷ್ಟಮಯ ಭವಿಷ್ಯವನ್ನು ಮನಗಂಡರು. ಈ ರೌಲತ್ ವರದಿ ಯನ್ನು ಎದುರಿಸುವ ದಾರಿಗಾಣಲು ಕೂಡಲೆ ಆಶ್ರಮದಲ್ಲಿ ಸಣ್ಣದೊಂದು ಸಭೆ ಸೇರಿತು. ಆ ಸಭೆ ಸತ್ಯಾಗ್ರಹವೇ ಅದಕ್ಕೆ ಸರಿಯಾದ ದಾರಿಯೆಂದು ತೀರ್ಮಾನಿಸಿತು. ಸತ್ಯಾಗ್ರಹ ಕ್ರಮವೂ ಸಿದ್ಧವಾಯಿತು. ಸತ್ಯಾಗ್ರಹ ಸಮಿತಿಯೊಂದು ಏರ್ಪಾಡಾಗಿ ಅದರ ಕೇಂದ್ರ ಬೊಂಬಾಯಿ ಎಂದು ನಿರ್ಧಾರವಾಯಿತು. ಮಹಾತ್ಮರು ಆ ಸಮಿತಿಯ ಅಧ್ಯಕ್ಷರಾದರು. ರೌಲತ್ ವರದಿಯ ಬಹಿಷ್ಕಾರ ಚಳುವಳಿ ದೇಶದಲ್ಲೆಲ್ಲ ಕಾಳ್ಗಿಚ್ಚಿನಂತೆ ಹರಡುತ್ತ ಹೋಯಿತು. ಹೀಗೆ ಪ್ರಜಾ ಚಳುವಳಿಯ ಆಂದೋಲನವೆದ್ದಿರಲು ಸರಕಾರ ಪ್ರಜಾಭಿಪ್ರಾಯಕ್ಕೆ ಲಕ್ಷ್ಯಗೊಡದೆ ವರದಿಯ ಸೂಚನೆಗಳನ್ನು ಕಾನೂನುಮಾಡಲು ಚುರುಕು ಕಾರ್ಯಕ್ರಮವನ್ನು ಕೈಗೊಂಡಿತು. ವರದಿಯ ಸೂಚನೆಯನ್ನು ಅಂಗೀಕರಿಸುವ ಮಸೂದೆ ಒಪ್ಪಿಗೆ ಪಡೆಯಲು ಕೇಂದ್ರ ನ್ಯಾಯವಿಧಾಯಕಸಭೆಯ ಮುಂದೆ ಬಂತು. ಅಲ್ಲಿ ಮಂದಗಾಮಿ ಪಕ್ಷದ

ನಾಯಕರಾದ ರೈಟ್-ಆನರಬಲ್ ಶ್ರೀನಿವಾಸಶಾಸ್ತ್ರಿ ಮೊದಲಾದವರೂ ಕೂಡ ಆ ಮಸೂದೆಯನ್ನು ವಿರೋಧಿಸಿ ಉದ್ವೇಗಪೂರ್ಣವಾದ ಭಾಷಣ ವನ್ನು ಮಾಡಿದರು. ಆದರೆ ಸರಕಾರದವರು ತಮ್ಮ ನೀತಿಯನ್ನು ಬದಲಾ ಯಿಸಲಿಲ್ಲ.

ಗಾಂಧೀಜಿ ಬರಬೇಕೆಂದು ಮದರಾಸಿನಿಂದ ಆಹ್ವಾನಬಂತು. ಇದಕ್ಕೆ ಕಾರಣರು, ಚಕ್ರವರ್ತಿ ರಾಜಗೋಪಾಲಚಾರಿಯವರಾಗಿದ್ದರು. ಆಹ್ವಾನ ವನ್ನು ಸ್ವೀಕರಿಸಿ ಗಾಂಧೀಜಿ ಮದರಾಸಿಗೆ ಹೋದರು. ಅವರಿಗೆ ಆಗಲೇ ರಾಜಗೋಪಾಲಚಾರ್ಯರ ವ್ಯಕ್ತಿತ್ವ ಗೊತ್ತಾದುದು. ಗಾಂಧೀಜಿ ರೌಲತ್ ವರದಿಯನ್ನು ದೇಶದಲ್ಲಿ ಹೇಗೆ ಎದುರಿಸಬೇಕೆಂಬುದನ್ನು ಸಂಗಡಿಗರೊಡನೆ ಚರ್ಚಿಸಿದರು. ಸಭೆಗಳಲ್ಲಿ ಭಾಷಣಮಾಡಿ ಜನರಿಗೆ ವಿವರಿಸಿದರು.

ಇಷ್ಟರಲ್ಲಿ ರೌಲತ್‌ವರದಿಯ ಸೂಚನೆಗಳು ಕಾನೂನಾದ ವರ್ತ ಮಾನ ಗಾಂಧೀಜಿಗೆ ಗೊತ್ತಾಯಿತು. ಈ ವಿಷಯ ಗೊತ್ತಾದ ದಿನ ರಾತ್ರಿ ಯೆಲ್ಲ ಈ ವಿಷಯದಲ್ಲಿ ಮುಂದೆ ಏನು ಕಾರ್ಯಕ್ರಮವನ್ನು ಕೈಗೊಳ್ಳಬೇ ಕೆಂದು ಯೋಚಿಸಿದರು. ಬೆಳಗಿನ ಜಾವ ನಿದ್ರೆಯ ಮಬ್ಬಿನಲ್ಲಿ ಕನಸಿನಂತೆ ಒಂದು ಯೋಚನೆ ಅವರಿಗೆ ಹೊಳೆಯಿತು. ಅದು, ದೇಶವೆಲ್ಲಾ ಆ ಕಾನೂನಿನ ಸಲುವಾಗಿ ಹರತಾಳವನ್ನಾಚರಿಸಬೇಕೆಂಬುದು. ರಾಜಗೋ ಪಾಲಚಾರ್ಯರು ಮೊದಲಾದವರು ಅದಕ್ಕೆ ಒಪ್ಪಿದರು. ಹರತಾಳವನ್ನಾಚ ರಿಸಬೇಕಾದ ದಿನ ಏಪ್ರಿಲ್ ಆರನೆ ತಾರೀಖಿನ ದಿನ (೧೯೧೯) ವೆಂಬುದು ಗೊತ್ತಾಯಿತು. ಈ ಸಂಗತಿಯನ್ನು ದೇಶದ ಎಲ್ಲಾ ಭಾಗಗಳಿಗೂ ತಿಳಿಸಿ ದುದಾಯಿತು. ಭಾರತದಲ್ಲಿ ಒಂದು ಕೊನೆಯಿಂದ ಮತ್ತೊಂದು ಕೊನೆಯ ವರೆಗೆ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಹರತಾಳವನ್ನು ಯಶಸ್ವಿಯಾಗಿ ಆಚರಿ ಸಿದರು. ಅದು ಗಂಭೀರ ದೃಶ್ಯವಾಗಿತ್ತು. ಹರತಾಳದಲ್ಲಿ ಹಿಂದುಗಳೂ ಮುಸಲ್ಮಾನರೂ ಒಂದಾಗಿ ಭಾಗ ವಹಿಸಿದ್ದರು. ದೆಹಲಿಯಲ್ಲಿ ಮಹ ಮ್ಮದೀಯರು ಜುಮ್ಮಮಸೀದಿಯಲ್ಲಿ ಭಾಷಣಮಾಡಲು ಸ್ವಾಮಿ

ಶ್ರದ್ಧಾನಂದರನ್ನು ಆಹ್ವಾನಿಸಿದ್ದರು. ಇದೆಲ್ಲವನ್ನು ನೋಡಿ ಸರಕಾರದವರು ಸಹನೆಗೆಟ್ಟರು. ಹರತಾಳದ ಮೆರವಣಿಗೆಯ ಮೇಲೆ ನಿಷ್ಕಾರಣವಾಗಿ ಗುಂಡುಹಾರಿಸಿದರು. ಇದರಿಂದ ಹಲವರಿಗೆ ಪೆಟ್ಟುಬಿತ್ತು. ಅನೇಕರು ಪ್ರಾಣಬಿಟ್ಟರು. ಲಾಹೋರಿನಲ್ಲಿಯೂ ಹಾಗೆಯೇ ಆಯಿತು. ಅಮೃತಸರದಲ್ಲಿಯಂತೂ ಹತ್ಯಾಕಾಂಡವೇ ನಡೆದುಹೋಯಿತು. ಹರತಾಳವಾಗುವ ದಿನ ಗಾಂಧೀಜಿ ಮದ್ರಾಸಿನಿಂದ ಬೊಂಬಾಯಿಗೆ ಬಂದರು. ಸರಕಾರದವರು ಬಹಿಷ್ಕರಿಸಿದ ತಮ್ಮ ಕೆಲವು ಪುಸ್ತಕಗಳನ್ನು ಅಚ್ಚುಹಾಕಿಸಿ ಆ ದಿನ ಮಾರಾಟಕ್ಕಿಟ್ಟರು. ಪುಸ್ತಕದ ಬೆಲೆ ನಾಲ್ಕಾಣೆ ಮಾತ್ರವಿದ್ದರೂ ಜನರು ಒಂದೊಂದು ಪುಸ್ತಕಕ್ಕೆ ಐವತ್ತುರೂಪಾಯಿಗಳವರೆಗೆ ಕೊಟ್ಟು ಕೊಂಡುಕೊಂಡು ಕಾನೂನು ಮುರಿದರು.

ಗಾಂಧೀಜಿ ಬರಬೇಕೆಂದು ಅಮೃತಸರದಿಂದಲೂ ದೆಹಲಿಯಿಂದಲೂ ತಂತಿ ಬಂತು. ಮಹಾದೇವ ದೇಸಾಯಿಯವರನ್ನು ದೆಹಲಿಗೆ ಕಳಿಸಿ ಗಾಂಧೀಜಿ ಅಮೃತಸರಕ್ಕೆ ಹೊರಟರು. ಪಂಜಾಬು ಪ್ರಾಂತ್ಯದೊಳಗೆ ಪ್ರವೇಶಿಸಿದರೆ ಶಾಂತಿಗೆ ಭಂಗಬರುವುದೆಂದು ಹೇಳಿ ಅವರು ಆ ಪ್ರಾಂತ್ಯದೊಳಗೆ ಬರಕೂಡದೆಂದು ಪಂಜಾಬು ಸರಕಾರ ಅಪ್ಪಣೆ ಮಾಡಿತು. "ನಾನು ಹೋಗುವುದು ಶಾಂತಿ ಸ್ಥಾಪನೆಗಾಗಿ, ಶಾಂತಿ ಭಂಗಕ್ಕಲ್ಲ. ಆದುದರಿಂದ ಆ ಆಜ್ಞೆಯನ್ನು ಅನುಸರಿಸಲಾರೆ" ಎಂದು ಗಾಂಧೀಜಿ ಉತ್ತರ ಕೊಟ್ಟರು. ಅನಂತರ ಗಾಂಧೀಜಿಯಿದ್ದ ರೈಲು ಪಂಜಾಬಿನ ಎಲ್ಲೆಯೊಳಗೆ ಒಂದು ಸ್ಟೇಷನ್ನಿಗೆ ಬಂದಾಗ ಪೋಲೀಸರು ಅವರನ್ನು ದಸ್ತಗಿರಿ ಮಾಡಿ ರೈಲಿನಿಂದಿಳಿಸಿ ಅನೇಕ ಬಗೆಯ ಪ್ರಯಾಣದಿಂದ ಅವರನ್ನು ಬೊಂಬಾಯಿಗೆ ತಂದು ಬಿಟ್ಟುಬಿಟ್ಟರು. ಇಷ್ಟರಲ್ಲಾಗಲೆ ಬೊಂಬಾಯಿಯಲ್ಲಿ ಅವರ ದಸ್ತಗಿರಿಯ ವಿಷಯ ಗೊತ್ತಾಗಿತ್ತು. ಜನರು ಕುದಿಗೊಂಡಿದ್ದರು. ಪಾಯದುನಿಯ ಬಳಿ ಜನರು ನೆರೆದಿದ್ದರು. ಅವರಲ್ಲಿ ಉದ್ರೇಕ ತಾಂಡವಾಡುತ್ತಿತ್ತು. ಯಾವ ಗಳಿಗೆಯಲ್ಲಿ

ಬೇಕಾದರೂ ಗಲಭೆಯಾಗಬಹುದೆಂದು ನಿರೀಕ್ಷಿಸಬಹುದಾದ ಸನ್ನಿವೇಶ ಇದು. ಗಾಂಧೀಜಿ ಆ ಜನರನ್ನು ಸಮಾಧಾನಗೊಳಿಸಲು ಆ ಸ್ಥಳಕ್ಕೆ ಮೋಟಾರು ಗಾಡಿಯಲ್ಲಿ ಹೋದರು. ಜನರು ಸಂತೋಷದಿಂದ ಜಯಘೋಷ ಮಾಡಿದರು. ಇಷ್ಟರಲ್ಲಿ ಸವಾರರ ದಳವೊಂದು ಆ ಸ್ಥಳಕ್ಕೆ ಬಂತು. ಇದನ್ನು ಕಂಡು ಜನರು ರೇಗಿದರು. ಇಟ್ಟಿಗೆ ಚೂರುಗಳು ಬೀಳಲಾರಂಭವಾಯಿತು. ಸವಾರರು ಜನರ ಮೆರವಣಿಗೆಯನ್ನು ತಡೆದರು. ಜನರಮೇಲೆ ನುಗ್ಗಿದರು. ಸವಾರರ ಭರ್ಜಿಗಳಿಂದಲೂ ಕುದುರೆಗಳಿಂದಲೂ ಬಹುಜನ ನೊಂದರು. ಈ ಘಟನೆಯಾದ ಮೇಲೆ ಚೌಪತಿಯಲ್ಲಿ ಭಾರಿ ಸಭೆ ಸೇರಿತು. "ಸತ್ಯಾಗ್ರಹ ಸತ್ಯವಂತರ ಆಯುಧ. ಅದರಲ್ಲಿ ಅಹಿಂಸಾಕ್ರಮವನ್ನನುಸರಿಸಿ ನಡೆಯಬೇಕು. ಮನೋವಾಕ್ಕಾಯಗಳಿಂದ ಸತ್ಯವನ್ನು ಅನುಸರಿಸದಿದ್ದರೆ ನಾನು ನಿಂತು ಸತ್ಯಾಗ್ರಹ ಯುದ್ಧವನ್ನು ನಡೆಸಲಾರೆ" ಎಂದು ಗಾಂಧೀಜಿ ಆ ಸಭೆಗೆ ಹೇಳಿದರು. ಬೊಂಬಾಯಿಯಿಂದ ಗಾಂಧೀಜಿ ಅಹಮದಾಬಾದಿಗೆ ಹೋದರು. ಅಲ್ಲಿಯೂ ವಿಪರೀತ ದಾಂದಲೆ ನಡೆದಿತ್ತು. ಸಮಾಚಾರ ಕೊಡುವ ತಂತಿಗಳನ್ನು ಜನರು ಕತ್ತರಿಸಿದ್ದರು. ಕಂಬಗಳನ್ನು ಉರುಳಿಸಿದ್ದರು. ರೈಲು ಕಂಬಿಗಳನ್ನು ಸಡಿಲಿಸಿಬಿಟ್ಟಿದ್ದರು. ಇದೆಲ್ಲದರಿಂದ ಸತ್ಯಾಗ್ರಹ ತತ್ವವನ್ನು ಜನರು ಸರಿಯಾಗಿ ಅರಿತುಕೊಂಡಿಲ್ಲವೆಂಬುದು ಗೊತ್ತಾಯಿತು. ಆದರಿಂದ ಗಾಂಧೀಜಿ ಸಧ್ಯಕ್ಕೆ ಸತ್ಯಾಗ್ರಹವನ್ನು ನಿಲ್ಲಿಸಿಬಿಟ್ಟರು. ಅಹಮದಾಬಾದಿನಿಂದ ಬೊಂಬಾಯಿಗೆ ಬಂದರು. ಅಲ್ಲಿ ಸ್ವಯಂಸೇವಕರ ದಳವೊಂದನ್ನು ಸೇರಿಸಿ ಅವರಿಗೆಲ್ಲ ಸತ್ಯಾಗ್ರಹಶಿಕ್ಷಣ ಕೊಡುವ ಏರ್ಪಾಡು ಮಾಡಿದರು.

ದೇಶದಲ್ಲೆಲ್ಲಾ ಅಹಿಂಸಾ ಮಾರ್ಗದಲ್ಲಿ ಚಳುವಳಿ ಹರಡುತ್ತಿರಲು ಸರಕಾರದವರು ತಮ್ಮ ದಬ್ಬಾಳಿಕೆಯನ್ನು ಹರಿಬಿಟ್ಟರು. ಪಂಜಾಬಿನಲ್ಲಂತೂ ದಬ್ಬಾಳಿಕೆ ಮಿತಿಮೀರಿ ಹೋಯಿತು. ಅಲ್ಲಿನ ಮುಂದಾಳುಗಳನ್ನೆಲ್ಲಾ ಸೆರೆ ಹಿಡಿದರು. ಯುದ್ಧಕಾಲದ ಕಾನೂನುಗಳನ್ನು ಜಾರಿಗೆ ತಂದರು. ದಸ್ತಗಿರಿ

ಯಾದವರ ವಿಚಾರಣೆಗಾಗಿ ಬೇರೆ ನ್ಯಾಯಸ್ಥಾನಗಳು ಏರ್ಪಟ್ಟವು. ಇವು ಹೆದರಿಕೆಯನ್ನುಂಟುಮಾಡುವುದಕ್ಕಾಗಿ ಅಲ್ಲದೆ ಜನರನ್ನು ಆದಷ್ಟು ಕಠಿಣ ವಾಗಿ ಹಿಂಸಿಸುವ ಸಲುವಾಗಿ ಇದ್ದವು. ರುಜುವಾತಿನ ಬೆಂಬಲವಿಲ್ಲದೆ ನ್ಯಾಯಕ್ಕೆ ತಿಲಾಂಜಲಿ ಬಿಟ್ಟು, ದಂಡನೆಗಳನ್ನು ವಿಧಿಸುತ್ತಿದ್ದವು. ಅಮೃತ ಸರದಲ್ಲಿ ನಿರ್ದೋಷಿಜನರನ್ನು ಹುಳುಗಳಂತೆ ಹೊಟ್ಟೆಯಿಂದ ತೆವಳಿ ಸಿದರು. ಜಲಿಯನ್‌ವಾಲಾ ಬಾಗಿನ ಹತ್ಯಾಕಾಂಡವಂತೂ ಹೇಳತೀರದು. ಅದು ಭರತಖಂಡದ ಮತ್ತು ಇಡೀ ಪ್ರಪಂಚ ದೃಷ್ಟಿಯನ್ನು ಸೆಳೆಯಿತು. ಆ ದುರಂತ ಸಮಯದಲ್ಲಿ ಮಹಾತ್ಮರು ಪಂಜಾಬಿಗೆ ಹೋಗಬೇಕೆಂದು ಹಲವರು ಅಭಿಪ್ರಾಯಪಟ್ಟರು. ಆದರೆ ಅವರು ಅಲ್ಲಿಗೆ ಕಾಲಿಟ್ಟೊಡನೆ ಅವರ ದಸ್ತಗಿರಿಯಾಗುತ್ತಿತ್ತು. ಅದರಿಂದ ಮತ್ತೆ ಜನರು ಉದ್ರೇಕಗೊಂಡು ರಾದ್ಧಾಂತವಾಗುವ ಸಂಭವವಿತ್ತು. ಆದುದರಿಂದ ಗಾಂಧೀಜಿ ಪಂಜಾಬಿಗೆ ಹೋಗಲು ಮನಸ್ಸುಮಾಡದೆ ಎಲ್ಲವನ್ನೂ ಹಲ್ಲುಕಚ್ಚಿ ಸಹಿಸಬೇಕಾಯಿತು.

ಸತ್ಯಾಗ್ರಹದ ದಾರಿಯನ್ನು ದೇಶದ ಜನರಲ್ಲಿ ಹರಡಬೇಕಾಗಿತ್ತು. ಪಂಜಾಬಿನ ನಿಜವಾದ ಸ್ಥಿತಿಯೂ ಪ್ರಪಂಚಕ್ಕೆ ಗೊತ್ತಾಗಬೇಕಾಗಿತ್ತು. ಅದಕ್ಕಾಗಿ ಗಾಂಧೀಜಿ ನವಜೀವನ, ಯಂಗ್ ಇಂಡಿಯಾ ಈ ಪತ್ರಿಕೆಗಳ ಮೂಲಕ ಪ್ರಚಾರಕಾರ್ಯವನ್ನು ನಡಸತೊಡಗಿದರು. ದೀನಬಂಧು ಆಂಡ್ರೂಸರು ಪಂಜಾಬಿಗೆ ಹೋದರು. ಅವರು ಗಾಂಧೀಜಿ ಅಲ್ಲಿಗೆ ಬರಬೇಕೆಂದು ಬರೆದರು. ಗಾಂಧೀಜಿಯೂ ಪಂಜಾಬಿಗೆ ಹೋಗ ಬೇಕೆಂದು ಕಾತರರಾಗಿದ್ದರು. ಅಲ್ಲಿಗೆ ಹೋಗಲು ವೈಸ್‌ರಾಯರಿಂದ ಅಪ್ಪಣೆ ಪಡೆದು ಪ್ರಯಾಣಹೊರಟು ಲಾಹೋರನ್ನು ತಲಪಿದರು. ಅಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ರೈಲ್ವೆ ನಿಲ್ದಾಣದಲ್ಲೆಲ್ಲ ಜನರು ತುಂಬಿದ್ದು ಬಹುಕಾಲ ಅಗಲಿದ್ದ ಆಪ್ತಬಂಧುವಿನಂತೆ ಅವರನ್ನು ಆದರದಿಂದ ಎದುರುಗೊಂಡರು. ಪಂ. ಮದನಮೋಹನಮಾಳವೀಯ, ಸ್ವಾಮಿ ಶ್ರದ್ಧಾನಂದರು, ಪಂ. ಮೋತಿಲಾಲನೆಹರುರವರು ಪಂ. ಜವಾಹಿರ

ಲಾಲನೆಹರುರವರು ಮುಂತಾದವರು ಲಾಹೋರಿಗೆ ಬಂದಿದ್ದರು. ಗಾಂಧೀಜಿಗೂ ಪಂ. ಮೋತಿಲಾಲರು ಮತ್ತು ಜವಹಿರಲಾಲರವರಿಗೂ ನಿಕಟ ಸಂಬಂಧ ಉಂಟಾದುದು ಆಗಲೇ.

ಜಲಿಯನ್‌ವಾಲಾಬಾಗಿನ ಹತ್ಯಾಕಾಂಡದ ವಿಚಾರಣೆಗಾಗಿ ಸರಕಾರದಿಂದ ನಿಯಮಿತವಾಗಿದ್ದ ಹಂಟರ್ ಸಮಿತಿಯಮುಂದೆ ಕಾಂಗ್ರೆಸ್ಸಿನವರಾರೂ ಸಾಕ್ಷ್ಯ ಕೊಡಕೂಡದೆಂದು ನಿಶ್ಚಯವಾಯಿತು. ಕಾಂಗ್ರೆಸ್ ಸಭೆಯಪರ ವಿಚಾರಣೆ ನಡೆಸಲು ಒಂದು ಸಮಿತಿಯು ಏರ್ಪಾಡಾಯಿತು. ಆ ಸಮಿತಿಯ ಕಾರ್ಯಕ್ರಮವನ್ನು ಗೊತ್ತುಮಾಡುವ ಜವಾಬ್ದಾರಿ ಗಾಂಧೀಜಿಯ ಪಾಲಿಗೆ ಬಿತ್ತು. ಇದರಿಂದ ಪಂಜಾಬಿನ ಮತ್ತು ಅಲ್ಲಿಯ ಜನರ ಹೆಚ್ಚು ಪರಿಚಯ ಅವರಿಗಾಯಿತು. ಕಾಂಗ್ರೆಸ್ ನಿಯಮಿಸಿದ ಸಮಿತಿಯ ವರದಿ ಸತ್ಯವಾದ ವಿಷಯಗಳನ್ನು ಒಳಗೊಂಡು ಹೊರಬಿದ್ದಿತು. ಈ ವರದಿಯಲ್ಲಿದ್ದ ಸತ್ಯಾಂಶಗಳಿಂದ ಬ್ರಿಟಿಷ್ ಸರಕಾರ ಹಿಂದೂಸ್ಥಾನದಲ್ಲಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಎಂತೆಂತಹದಾದರೂ ಘಾತಕ ಮತ್ತು ಅಮಾನುಷ ಕೃತ್ಯಗಳನ್ನೂ ಅತ್ಯಾಚಾರಗಳನ್ನೂ ನಡಸಲು ಹಿಂಜರಿಯುವುದಿಲ್ಲವೆಂಬುದು ಸ್ಪಷ್ಟವಾಯಿತು.



ಗಾಳಿ ಸಂಚಾರಕ್ಕೆ



ಬ್ರಿಟನ್ನಿಗೆ ತೆರಳಿದ್ದಾಗ ಅಲ್ಲಿ ಜನರ ಮಧ್ಯೆ

ಗಾಂಧೀ ಯುಗ

ದೆಹಲಿಯಲ್ಲಿ ಖಿಲಾಫತ್ತು ಪ್ರಶ್ನೆಯನ್ನು ಕುರಿತು ಆಲೋಚಿಸಲೋಸುಗ ನಡೆಯಲಿದ್ದ ಹಿಂದೂ ಮುಸಲ್ಮಾನರ ಸಮ್ಮೇಳನಕ್ಕೆ ಬರಬೇಕೆಂದು ಆಹ್ವಾನ ಬಂದುದರಿಂದ ಗಾಂಧೀಜಿ ಆ ಸಭೆಗೆ ಹೋದರು. ಈ ಸಭೆ ಮುಖ್ಯವಾಗಿ ಖಿಲಾಫತ್ ಪ್ರಶ್ನೆಯನ್ನು ಬ್ರಿಟಿಷರು ಸರಿಯಾಗಿ ನಿವಾರಿಸದಿದ್ದರೆ ಪರದೇಶೀ ಬಹಿಷ್ಕಾರ ಮತ್ತು ಅಸಹಕಾರ ಚಳವಳಿ ನಡಸಬೇಕೆಂದು ಗೊತ್ತುಮಾಡಿತು. ಆ ವರ್ಷದ (೧೯೧೯) ಕಾಂಗ್ರೆಸ್ ಸಭೆ ಅಮೃತಸರದಲ್ಲಿ ಪಂ. ಮೋತಿಲಾಲ ನೆಹರುರವರ ಅಧ್ಯಕ್ಷತೆಯಲ್ಲಿ ಕೂಡಿತು. ಪಂಜಾಬು ಸರಕಾರ ಸೆರೆಹಿಡಿದಿದ್ದ ರಾಜಕೀಯ ಖೈದಿಗಳನ್ನೆಲ್ಲಾ ಬಹುದಿನ ಇಟ್ಟುಕೊಳ್ಳಲು ಸಾಧ್ಯವಿರಲಿಲ್ಲ. ಆದ್ದರಿಂದ ಮುಕ್ಕಾಲು ಭಾಗ ಕೈದಿಗಳು ಬಿಡುಗಡೆಯಾಯಿತು. ಆಲಿ ಸಹೋದರರೂ ಬಿಡುಗಡೆ ಹೊಂದಿ ಕೂಡಲೆ ಮಹಾಸಭೆಗೆ ಬಂದರು. ಗಾಂಧೀಜಿಯೂ ದೆಹಲಿಯಿಂದ ಆ ಸಭೆಯಲ್ಲಿ ಸೇರಲೋಸುಗ ಅಮೃತಸರಕ್ಕೆ ಹೋದರು.

ಹೊಸ ಸುಧಾರಣೆಯನ್ನು ಕುರಿತು ಚಕ್ರವರ್ತಿಗಳ ಪ್ರಸಿದ್ಧಪತ್ರಿಕೆ ಆಗತಾನೇ ಪ್ರಕಟವಾಗಿದ್ದಿತು. ಅನೇಕ ಕುಂದುಗಳನ್ನೊಳಗೊಂಡಿದ್ದು ಭಾರತೀಯರನ್ನು ತೃಪ್ತಿಪಡಿಸಲಾರದ್ದಾಗಿದ್ದರೂ ಮುಂದಕ್ಕೆ ಒಳ್ಳೆಯದಾಗಬಹುದೆಂಬ ಭರವಸೆಯಿಂದ ಆ ಸುಧಾರಣೆಯನ್ನು ಸ್ವೀಕರಿಸಬೇಕೆಂದು ಗಾಂಧೀಜಿ ವಾದಿಸಿದರು. ಚಿತ್ತರಂಜನದಾಸರು ಅದನ್ನು ವಿರೋಧಿಸಿದರು. ಇದರಿಂದ ಆ ಮಹಾಸಭೆಯಲ್ಲಿ ಎರಡು ಪಂಗಡಗಳುಂಟಾದವು. ಇದನ್ನು ನೋಡಿ ಮಹಾಸಭೆಯ ಒಮ್ಮುಖತೆಯನ್ನು ಬಯಸಿ ನೆರೆದಿದ್ದ ಜನರು ಬೇಸರಗೊಂಡರು. ಆದರೆ ಕೊನೆಯಲ್ಲಿ ಎರಡು ಪಕ್ಷಗಳಿಗೂ ರಾಜಿಯಾಗಿ ಐಕ್ಯವುಂಟಾಯಿತು. ದೇಶವೆಲ್ಲ ಸಂತೋಷಗೊಂಡಿತು.

ಅಮೃತಸರದ ರಾಷ್ಟ್ರಮಹಾಸಭೆಯ ಅಧಿವೇಶನ ಜಲಿಯನ್ ವಾಲಾಬಾಗಿನಲ್ಲಿ ಬಲಿಯಾದವರ ಸ್ಮಾರಕವೊಂದನ್ನು ಸ್ಥಾಪಿಸಲು

ನಿರ್ಧರಿಸಿತು. ಹಣ ವಸೂಲಿಮಾಡುವುದರಲ್ಲಿ ಅಗಾಧ ಶಕ್ತಿ ಮತ್ತು ಅನುಭವ ಗಾಂಧೀಜಿಗಿತ್ತು. ಅದಕ್ಕಾಗಿ ಆ ಸ್ಮಾರಕ ನಿಧಿಯನ್ನು ಕೂಡಿಸುವ ಜವಾಬ್ದಾರಿ ಗಾಂಧೀಜಿಯವರ ಮೇಲೆ ಜಾರಿತು. ಕಾಂಗ್ರೆಸ್ಸಿನ ನಿಯಮಗಳು ಹಳೆಯವಾಗಿದ್ದು ಬದಲಾವಣೆಯಾಗಬೇಕಾಗಿತ್ತು. ಆ ವಿಷಯದಲ್ಲಿಯೂ ಗಾಂಧೀಜಿಯವರು ಅಮಿತ ಶಕ್ತಿಯನ್ನು ಗಳಿಸಿದ್ದರು. ಸ್ಮಾರಕ ನಿಧಿಯನ್ನು ಕೂಡಿಸುವುದರ ಜೊತೆಗೆ ಈ ಕೆಲಸವೂ ಸೇರಿತು. ಅವರು ಈ ಎರಡು ಕೆಲಸಗಳನ್ನೂ ಸಮರ್ಪಕವಾಗಿ ಮಾಡಿ ಮುಗಿಸಿದರು. ಅಂದಿನಿಂದ ರಾಷ್ಟ್ರಮಹಾಸಭೆ ಇವರಿಗೆ ಗಂಟುಬಿತ್ತು. ಅವರು ಕಾಂಗ್ರೆಸ್ ಸೂತ್ರವನ್ನು ಕೈಗೆ ತೆಗೆದುಕೊಂಡರು. ಅಮೃತಸರದ ಅಧಿವೇಶನದಿಂ ದೀಚೆಗೆ ಕಾಂಗ್ರೆಸ್ ಗಾಂಧೀಕಾಂಗ್ರೆಸ್ಸಾಯಿತು. ಅಲ್ಲಿ ನೆರೆದಿದ್ದ ಪ್ರತಿನಿಧಿ ಗಳಲ್ಲಿ ಬಹುಸಂಖ್ಯಾತರೂ ದೇಶದ ಲಕ್ಷಾಂತರ ಜನರೂ ಮಹಾತ್ಮರ ನಾಯಕತ್ವವನ್ನು ಎದುರುನೋಡುತ್ತಿದ್ದರು. 'ಮಹಾತ್ಮಾ ಗಾಂಧೀ ಕಿ ಜೈ' ಎಂಬ ಘೋಷ ದಿಗಂತವನ್ನು ಮುಟ್ಟುತ್ತಿತ್ತು. ರಾಷ್ಟ್ರೀಯ ಚಳುವಳಿಗೆ ಹೊಸ ರೂಪವೂ ಹೊಸ ಸ್ಥಾನವೂ ಲಭಿಸಿದವು.

ದೆಹಲಿಯಲ್ಲಿ ನಡೆದ ಖಿಲಾಫತ್ತು ಸಭೆಯಲ್ಲಿ ಅಸಹಕಾರ ಚಳವಳಿ ಅಂಗೀಕಾರವಾಗಿತ್ತಷ್ಟೆ. ಆದರೆ ಅಷ್ಟರಿಂದಲೇ ಗಾಂಧೀಜಿಗೆ ತೃಪ್ತಿಯಿರಲಿಲ್ಲ. ಅಹಿಂಸಾತ್ಮಕವಾದ ಆ ಚಳವಳಿಯನ್ನು ರಾಷ್ಟ್ರಮಹಾ ಸಭೆ ಅಂಗೀಕರಿಸಬೇಕಾಗಿತ್ತು. ಇದಕ್ಕಾಗಿ ಮಹಾಸಭೆಯ ವಿಶೇಷಾಧಿ ವೇಶನ ಲಾಲಾಲಜಪತರಾಯ್‌ರವರು ಅಧ್ಯಕ್ಷತೆಯಲ್ಲಿ ಕಲಿಕತ್ತೆಯಲ್ಲಿ ಸೇರಲು ಏರ್ಪಾಡಾಯಿತು. ಮಹಾಸಭೆ ಪ್ರರಂಭವಾಯಿತು. ಹಿಂದೂ ಮುಸಲ್ಮಾನರು ಒಂದಾಗಿ ನೆರೆದರು. ಪಂಜಾಬಿನಲ್ಲಿ ನಡೆದ ಅತ್ಯಾಚಾರ, ಖಿಲಾಫತ್ ವಚನಭಂಗ ಇವುಗಳನ್ನು ವಿರೋಧಿಸುವುದಕ್ಕಾಗಿಯೂ ಸ್ವರಾಜ್ಯಸಾಧನೆಗಾಗಿಯೂ ಅಹಿಂಸಾತ್ಮಕವಾದ ಅಸಹಕಾರಕ್ಕೆ ಮಹಾಸಭೆ ಒಪ್ಪಿಗೆಯಿತ್ತಿತು. ಈ ಸಭೆ ನಡೆಯುವ ಹೊತ್ತಿಗೆ ಲೋಕಮಾನ್ಯ

ತಿಲಕರು ತೀರಿಹೋಗಿದ್ದರು. ಅವರ ಸಿಂಹವಾಣಿ ಮರೆಯಾಗಿ ಅವರ ಬುದ್ಧಿವಾದ ಆ ಸಭೆಗೆ ದೊರೆಯದಂತಾದುದಕ್ಕಾಗಿ ನೆರೆದಿದ್ದವರೆಲ್ಲರಿಗೂ ಅಪಾರ ದುಃಖವಾಯಿತು. ಈ ವಿಶೇಷಾಧಿವೇಶನವೇ ಕಾಂಗ್ರೆಸ್ ಇತಿಹಾಸದಲ್ಲಿ ಗಾಂಧೀಯುಗದ ಅರುಣೋದಯವಾಯಿತು. ಅಂದಿನಿಂದಲೂ ಆ ಯುಗ ಅಖಂಡವಾಗಿ ನಡೆದುಬಂದಿದೆ. ಅಲ್ಲಿಂದೀಚೆಗೆ ಕಾಂಗ್ರೆಸ್ಸಿನ ಸ್ವರೂಪವೇ ವ್ಯತ್ಯಾಸವಾಯಿತು. ಕಾಂಗ್ರೆಸ್ಸಿನ ಸದಸ್ಯರಲ್ಲಿ .ಪಾಶ್ಚಾತ್ಯ ಉಡುಪುಗಳು ಮರೆಯಾಗಿ ಎಲ್ಲ ಖಾದಿಮಯವಾಯಿತು.

ನಾಗಪುರದಲ್ಲಿ ಕಾಂಗ್ರೆಸ್ ಮಹಾಸಭೆಯ ವಾರ್ಷಿಕಾಧಿವೇಶನ ಸೇರಿತು. ಅಲ್ಲಿ ಕಲ್ಕತ್ತೆಯ ವಿಶೇಷಾಧಿವೇಶನದಲ್ಲಾದ ಅಸಹಕಾರ ಗೊತ್ತುವಳಿ ಕೆಲವು ತಿದ್ದುಪಡಿಗಳೊಡನೆ ಒಮ್ಮತದಿಂದ ಅಂಗೀಕೃತವಾಯಿತು. ಮಹಾಸಭೆಯ ವ್ಯವಸ್ಥಾಕ್ರಮದ ಮಾರ್ಪಾಡನ್ನು ಕುರಿತ ಗೊತ್ತುವಳಿಯೂ ಸಭೆಯ ಒಪ್ಪಿಗೆ ಪಡೆಯಿತು. ಜೊತೆಗೆ ರಾಷ್ಟ್ರಸಭೆಯ ಧ್ಯೇಯ “ಬ್ರಿಟಿಷ್ ಚಕ್ರಾಧಿಪತ್ಯದ ಅಧೀನದಲ್ಲಿ, ಇಲ್ಲವೆ ಅದರ ಹೊರಗೆ, ಸ್ವರಾಜ್ಯವನ್ನು ಸಾಧಿಸುವುದೇ” ಎಂದು ಗೊತ್ತಾಯಿತು. ಹಿಂದೂ ಮುಸಲ್ಮಾನರ ಒಗ್ಗಟ್ಟು, ಅಸ್ಪೃಶ್ಯತಾನಿವಾರಣೆ ಮತ್ತು ಖಾದಿ ಪ್ರಚಾರ ಈ ವಿಷಯಗಳನ್ನು ಕುರಿತ ಠರಾವುಗಳು ಈ ಅಧಿವೇಶನದಲ್ಲಿ ಅಂಗೀಕೃತವಾದವು. ಅಂದಿನಿಂದ ರಾಷ್ಟ್ರಮಹಾಸಭೆಯ ಹಿಂದೂ ಸದಸ್ಯರು ಹಿಂದೂ ಧರ್ಮದಿಂದ ಅಸ್ಪೃಶ್ಯತಾ ಕಳಂಕವನ್ನು ಅಳಸಿಬಿಡುವ ಜವಾಬ್ದಾರಿಯನ್ನು ತಮ್ಮ ಮೇಲೆ ಹೊತ್ತುಕೊಂಡಿದ್ದಾರೆ. ಮತ್ತು ಕಾಂಗ್ರೆಸ್ ಭರತಖಂಡದ ಬಡವರೊಂದಿಗೆ ಖಾದಿಯಮೂಲಕ ಚೈತನ್ಯದಾಯಕ ಸಂಬಂಧವನ್ನು ಸ್ಥಾಪಿಸಿದೆ. ಹಿಂದೂಮುಸಲ್ಮಾನರ ಐಕ್ಯವನ್ನು ಸಾಧಿಸಿ ಭರತಖಂಡದ ಸ್ವಾತಂತ್ರ್ಯವನ್ನು ಗಳಿಸಬೇಕೆಂಬುದು ರಾಷ್ಟ್ರಸಭೆಯ ಧ್ಯೇಯವೆಂಬುದಕ್ಕೆ ಖಿಲಾಫತ್ತಿನ ಸಲುವಾಗಿ ಅಸಹಕಾರ ಚಳುವಳಿಯನ್ನು ಹೂಡಿದುದೊಂದೇ ಸಾಕು.

ಅಸಹಕಾರ ಚಳವಳಿ ದೇಶದಲ್ಲೆಲ್ಲಾ ಭರದಿಂದ ನಡೆಯ ತೊಡ ಗಿತು. ಇದನ್ನು ಎದುರಿಸಿ ಧ್ವಂಸಮಾಡಬೇಕೆಂದು ಸರಕಾರ ತನ್ನ ಬಾಲ ಬೀಸಿತು. ೧೯೨೧ರಲ್ಲೆಲ್ಲಾ ದಸ್ತಗಿರಿಗಳು ಕೊನೆಮೊದಲಿಲ್ಲದೆ ನಡೆದು ಆತಂಕವಿಲ್ಲದೆ ಮನಸ್ವೀ ಶಿಕ್ಷೆಗಳು ವಿಧಿಸಲ್ಪಟ್ಟವು. ಆ ವರ್ಷದ ಕೊನೆಯಲ್ಲಿ ರಾಜಕೀಯ ಪರಿಸ್ಥಿತಿ ವಿಷಮಸ್ಥಿತಿಗೇರಿತು. ಬ್ರಿಟನ್ನಿನ ಯುವರಾಜರು (Prince of Wales) ಹಿಂದೂಸ್ಥಾನಕ್ಕೆ ಬರುವ ರಿದ್ದರು. ಅವರ ಮರ್ಯಾದೆಗಾಗಿ ನಡೆಯುವ ಎಲ್ಲಾ ಬಗೆಯ ಪ್ರದರ್ಶನ ಗಳಿಗೂ ಕಾಂಗ್ರೆಸ್ ಬಹಿಷ್ಕಾರ ಹಾಕಿತು. ಇದರಿಂದ ಸರಕಾರ ರೇಗಿ ತನ್ನ ಶಕ್ತಿಯನ್ನು ತೋರಲು ನಿರ್ಧರಿಸಿತು. ವೀರರಾದ ಕಾಂಗ್ರೆಸ್ಸಿನ ಸ್ವಯಂಸೇವಕರೂ ಕಾಳಗಕ್ಕೆ ಸಿದ್ಧರಾದರು. ಘರ್ಷಣ ಪ್ರಾರಂಭ ವಾಯಿತು.

ರಾಜಕುಮಾರರು ಹಿಂದೂಸ್ಥಾನಕ್ಕೆ ಬಂದರು. ಅವರು ಹೋದೆಡೆ ಯಲ್ಲೆಲ್ಲಾ ಹರತಾಳಗಳು; ನಿರ್ಜನವಾದ ರಸ್ತೆಗಳು. ಹಲವರು ಪೋಲೀಸರು ಕೆಲವರು ಅಧಿಕಾರಿಗಳು ಮಾತ್ರ ಅವರಿಗೆ ಸ್ವಾಗತವಿತ್ತರು. ಇದನ್ನು ನೋಡಿ ಸರಕಾರದ ತಲೆ ಕೆರಳಿ ಕೆಟ್ಟಿತು. ಎಲ್ಲೆಲ್ಲೂ ಹುಚ್ಚಾ ಬಟ್ಟೆ ದಸ್ತಗಿರಿಗಳೂ ಶಿಕ್ಷೆಗಳೂ ನಡೆದವು. ಕಾಂಗ್ರೆಸ್ ನಾಯಕರನೇಕರು ಸೆರೆಮನೆಗೆ ನುಗ್ಗಿದರು. ಸಾವಿರಗಟ್ಟಲೆ ಸ್ವಯಂಸೇವಕರಿಂದ ಸೆರೆಮನೆ ಗಳೆಲ್ಲ ಕಿಕ್ಕಿರಿದು ತುಂಬಿಹೋದವು. ಇಷ್ಟೆಲ್ಲಾ ನಡೆದರೂ ಸರಕಾರ ದವರು ಮಹಾತ್ಮರನ್ನು ಸೆರೆ ಹಿಡಿಯಲಿಲ್ಲ. ಅವರನ್ನು ಸೆರೆ ಹಿಡಿದರೆ ಏನಾಗಿಬಿಡುವದೋ, ಭಾರತೀಯ ಸೈನಿಕರೂ ಪೋಲೀಸರೂ ಎಲ್ಲಿ ಸರಕಾರದ ಮೇಲೆ ತಿರುಗಿಬೀಳುವರೋ ಎಂದು ಹೆದರಿ ಸರಕಾರ ಅವರ ತಂಟೆಗೆ ಹೋಗಲಿಲ್ಲ. ಮಹಾತ್ಮರು ಹೊರಗಿದ್ದುದರಿಂದ ಅಪ್ರಿಯವೂ ಹಿಂಸಾತ್ಮಕವೂ ಆದ ಘಟನೆಗಳು ನಡೆಯಲು ತಡೆಯಾಯಿತು. ಅವರು ಪ್ರತಿನಿತ್ಯವೂ ಕಾಂಗ್ರೆಸ್ ಯೋಧರಿಗೆ ಸಂದೇಶಗಳನ್ನೂ ಸಲಹೆಗಳನ್ನೂ

ನೀಡುತ್ತ ಸತ್ಯಾಗ್ರಹಯುದ್ಧ ಅಹಿಂಸಾಮಾರ್ಗದಲ್ಲೇ ನಡೆಯುವಂತೆ ಮಾಡಿದರು. ಆದರೆ ೧೯೨೨ ನೆಯ ಫೆಬ್ರುವರಿ ಮೊದಲಭಾಗದಲ್ಲಿ ಹಠಾತ್ತಾಗಿ ಕಾರ್ಯರಂಗ ಬೇರೆ ದಾರಿ ಹಿಡಿಯಿತು. ಚೌರಿಚೌರ ಎಂಬ ಹಳ್ಳಿಯ ಬಳಿ ರೇಗಿದ ಜನರ ಗುಂಪೊಂದು ಪೋಲೀಸರ ಮೇಲೆ ತಿರುಗಿಬಿದ್ದು ಹಲವರು ಪೋಲೀಸರನ್ನು ಒಳಗೆ ಕೂಡಿ ಪೋಲೀಸು ಠಾಣೆಗೆ ಬೆಂಕಿಯಿಟ್ಟರು. ಇದರ ಫಲವಾಗಿ ಮಹಾತ್ಮರು ಇಂತಹ ಹಿಂಸಾತ್ಮಕ ಕೃತ್ಯಗಳನ್ನು ನಿಷೇಧಿಸಿ ಅಸಹಕಾರ ಚಳುವಳಿಯನ್ನು ನಿಲ್ಲಿಸಿಬಿಟ್ಟರು. ಇದರಿಂದ ದೇಶದಲ್ಲೆಲ್ಲ ಆಶ್ಚರ್ಯವೂ ದಿಗ್ಭ್ರಮೆಯೂ, ಕೆಲವೆಡೆ ಅಸಮಾಧಾನವೂ, ಉಂಟಾಯಿತು. ಸೆರೆಮನೆಗಳಲ್ಲಿದ್ದ ಮುಖಂಡರು ಗಾಂಧೀಜಿಯ ಈ ನೀತಿಯನ್ನು ನೋಡಿ ಅಸಮಾಧಾನಗೊಂಡರು. ದೇಶದ ಮೂಲೆಯ ಒಂದು ಹಳ್ಳಿಯಲ್ಲಿ ಆವೇಶಗೊಂಡ ಜನರು ಮಾಡಿದ ಅವಿವೇಕಕ್ಕಾಗಿ ಇಡೀ ದೇಶದ ಸ್ವಾತಂತ್ರ್ಯದ ಹೋರಾಟವನ್ನೇ ನಿಲ್ಲಿಸಿಬಿಡಬಹುದೆ ಎಂಬ ಕೂಗೆದ್ದಿತು. ಆದರೆ ಅಹಿಂಸಾಧರ್ಮದಿಂದ ಭಾರತ ಸಾಮ್ರಾಜ್ಯವನ್ನು ಸ್ಥಾಪಿಸಲಿರುವ ಗಾಂಧೀಜಿಗೆ ಚೌರಿಚೌರದ ಅತ್ಯಾಚಾರವೇ ಅತಿಯಾಗಿದ್ದಿತು.

ಅಸಹಕಾರ ಚಳುವಳಿಯನ್ನು ನಿಲ್ಲಿಸಿದುದಕ್ಕೆ ಚೌರಿಚೌರದ ಘಟನೆಯೊಂದೇ ಕಾರಣವಾಗಿರಲಿಲ್ಲ. ಮಹಾತ್ಮರು ಅನೇಕ ವರ್ಷಗಳ ಜನಸಂಪರ್ಕ ಮತ್ತು ಅನುಭವಗಳಿಂದ ಜನಜಂಗುಳಿಯ ಮನೋಧರ್ಮವನ್ನು ಚೆನ್ನಾಗಿ ಅರಿತಿದ್ದರು. ದೇಶದ ನಾಡಿಯ ಮಿಡಿತವನ್ನು ಅವರು ಸ್ಪಷ್ಟವಾಗಿ ಅರಿಯಬಲ್ಲರು. ಯಾವ ಯಾವ ಸಂದಿಗ್ಧಸಮಯದಲ್ಲಿ ಜನತೆಗೆ ಏನೇನು ಮಾಡಲು ಶಕ್ತಿಯಿದೆ ಎಂಬುದು ಅವರಿಗೆ ಗೊತ್ತಾಗಿ ಹೋಗುತ್ತಿತ್ತು. ಸಾಮಾನ್ಯವಾಗಿ ಜನಪ್ರಿಯರಾದ ಮಹಾನಾಯಕರಲ್ಲಿ ಇರಬೇಕಾದ ಪ್ರತಿಭೆ ಅವರಲ್ಲಿತ್ತು. ಇದನ್ನೇ ಅವರು 'ಆಂತರಿಕ ವಾಣಿ' ಎನ್ನುತ್ತಾರೆ. ಆ ಹೃದಯವಾಣಿಗೆ ಅನುಸಾರವಾಗಿಯೇ ಅವರು ತಮ್ಮ ಕಾರ್ಯವನ್ನು ನಡಸುತ್ತಾರೆ. ಕಾರ್ಯರಂಗವನ್ನು ಆ ವಾಣಿಗನುಸಾರವಾಗಿ

ಹಠಾತ್ತಾಗಿ ತಿರುಗಿಸಿಬಿಟ್ಟಾಗ ಆಶ್ಚರ್ಯ ಮತ್ತು ಅಸಮಾಧಾನಗಳಿಂದ ಕೂಡಿದ ತಮ್ಮ ಅನುಯಾಯಿಗಳನ್ನೂ ಸಹೋದ್ಯೋಗಿಗಳನ್ನೂ ನೋಡಿ, ಅವರಿಗೆ ಭವಿಷ್ಯದ ಚಿತ್ರ ತೋರಿಸಿ ಸಮಾಧಾನಗೊಳಿಸಿ ಅವರನ್ನೂ ಆ ದಾರಿಗೆ ತಿರುಗಿಸಿದರು.

ಭರತಖಂಡದಲ್ಲೆಲ್ಲಾ ವ್ಯಾಪಿಸಿ ಉತ್ಸಾಹದಿಂದ ಶಕ್ತಿಯುತವಾಗಿ ಪ್ರಾರಂಭವಾದ ಚಳವಳಿ ಕುಂದುತ್ತಾ ಬರುತ್ತಿತ್ತು. ದೇಶದ ಗಣ್ಯ ಪುರುಷರೆಲ್ಲ ಸೆರೆಮನೆಯಲ್ಲಿದ್ದರು. ಜನತೆ ಸ್ವತಂತ್ರವಾಗಿ ಚಳವಳಿ ನಡಸುವಷ್ಟು ಶಿಕ್ಷಣ ಪಡೆದಿರಲಿಲ್ಲ. ಯಾರುಬೇಕಾದರೂ ಕಾಂಗ್ರೆಸ್ ಸೂತ್ರಗಳನ್ನು ಕೈಗೆ ತೆಗೆದುಕೊಳ್ಳಬಹುದಾಗಿತ್ತು. ಕಾಂಗ್ರೆಸ್ಸಿನ ದ್ವೇಷಿಗಳನೇಕರು ಇದೇ ಸಮಯವೆಂದು ಕಾಂಗ್ರೆಸ್ ಸಂಸ್ಥೆಗಳ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಮುಂದೆ ನುಗ್ಗಿಬಂದರು. ಇದನ್ನು ತಡೆಯಲು ಬೇರೆ ದಾರಿಯೇ ಇರಲಿಲ್ಲ. ಅಲ್ಲದೆ ಜನತೆಯ ಉತ್ಸಾಹ, ಉದ್ರೇಕಗಳಲ್ಲಿ ಸತ್ವವಿರಲಿಲ್ಲ. ಜನತೆಯಲ್ಲಿ ಶಕ್ತಿ ಕಡಮೆಯಾದಾಗ ಚಳವಳಿ ಮುಂದುವರಿದಿದ್ದರೆ ಹಿಂಸಾತ್ಮಕ ಪ್ರಸಂಗಗಳು ಒದಗುತ್ತಿದ್ದುವು. ಹೀಗಾಗಿದ್ದರೆ ಚಳವಳಿಯನ್ನು ಮಟ್ಟಹಾಕಲು ಸರಕಾರಕ್ಕೆ ಸುಲಭವಾಗುತ್ತಿತ್ತು. ಇದೆಲ್ಲದರಿಂದ ಅದುವರೆಗೆ ಗಳಿಸಿದ್ದ ದೇಶಶಕ್ತಿ ಕುಗ್ಗಿ ನೀತಿ ಕೆಡುತ್ತಿತ್ತು. ಆದುದರಿಂದ ಕುಂದನ್ನೆಲ್ಲ ತೊಡೆದು ಹೊಸಚೇತನವನ್ನು ತುಂಬಬೇಕಾಗಿತ್ತು. ಈ ಎಲ್ಲಾ ಕಾರಣಗಳಿಂದ ಮಹಾತ್ಮರು ಶಾಸನಭಂಗ ಚಳವಳಿಯನ್ನು ನಿಲ್ಲಿಸಿದರು. ಅನೇಕ ತಿಂಗಳುಗಳಿಂದ ಹೆದರಿಕೆಯಿಂದ ಪೇಚಾಡುತ್ತಿದ್ದ ಸರಕಾರಕ್ಕೆ ಸ್ವಲ್ಪ ನೆಮ್ಮದಿ ದೊರಕಿತು. ಚಳವಳಿ ನಿಂತ ಕೆಲವು ವಾರಗಳಮೇಲೆ ಸರ್ಕಾರದವರು ಗಾಂಧೀಜಿಯನ್ನು ಸೆರೆ ಹಿಡಿದು ಆರು ವರ್ಷಗಳ ಶಿಕ್ಷೆ ವಿಧಿಸಿ ಸೆರೆಯಲ್ಲಿಟ್ಟರು.

೧೯೨೪ರ ಆದಿಯಲ್ಲಿ ಮಹಾತ್ಮರು ಸೆರೆಮನೆಯಲ್ಲಿ ಕಾಯಿಲೆ ಬಿದ್ದರು. ಕಾಯಿಲೆ ಹೆಚ್ಚಾಗಿ ಬಂದಿಯಾಗಿಯೇ ಆಸ್ಪತ್ರೆಗೆ ಸಾಗಿದರು.

ಅಲ್ಲಿ ಅವರಿಗೆ ಶಸ್ತ್ರಚಿಕಿತ್ಸೆಯಾಯಿತು. ಈ ಸುದ್ದಿಯಿಂದ ಏನಾಗಿ ಬಿಡುವುದೋ ಎಂದು ಭಯಗ್ರಸ್ತವಾಗಿ ದೇಶವೆಲ್ಲ ತಲ್ಲಣಗೊಂಡಿತು. ಭರತಖಂಡದ ಭಾಗ್ಯದಿಂದ ವಿಷಮಾವಸ್ಥೆ ಕಳೆಯಿತು. ಗಾಂಧೀಜಿಯ ದರ್ಶನಕ್ಕೆ ದೇಶದ ನಾಯಕರೂ ಜನರೂ ತಂಡತಂಡವಾಗಿ ಪೂನಾನಗರಕ್ಕೆ ನುಗ್ಗಿಬಂದರು. ಗಾಂಧೀಜಿ ಆಸ್ಪತ್ರೆಯಲ್ಲಿರುವಾಗಲೆ ಸರಕಾರದವರು ಮಿಕ್ಕ ಶಿಕ್ಷೆಯನ್ನು ಮನ್ನಿಸಿ ಅವರನ್ನು ಬಿಡುಗಡೆ ಮಾಡಿದರು. ಮಹಾತ್ಮರು ಆರೋಗ್ಯದ ಸಲುವಾಗಿ ಬೊಂಬಾಯಿನ ಹತ್ತಿರವಿದ್ದ ಸಮುದ್ರತೀರದ ಜುಹೂ ಎಂಬ ಸ್ಥಳಕ್ಕೆ ಹೋದರು. ಕ್ರಮೇಣ ಅವರು ಆರೋಗ್ಯ ಹೊಂದಿದರು.

ಇಷ್ಟರಲ್ಲಾಗಲೆ ಚಿತ್ತರಂಜನದಾಸ್‌ರವರ ಮತ್ತು ಮೋತೀಲಾಲ್ ನೆಹರುರವರ ಮುಂದಾಳುತನದಲ್ಲಿ ಹುಟ್ಟಿಕೊಂಡಿದ್ದ ಸ್ವರಾಜ್ಯಪಕ್ಷ ಗಾಂಧೀಜಿಯನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಪಟ್ಟಿತು. ಆದರೆ ಅದು ಸಾಧ್ಯವಾಗಲಿಲ್ಲ. ೧೯೨೪ ರ ಮಧ್ಯೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಅಹಮದಾಬಾದಿನಲ್ಲಿ ನಡೆಯಿತು. ಆ ಸಭೆಯಲ್ಲಿ ಕಾಂಗ್ರೆಸ್ ಸದಸ್ಯತನದ ಯೋಗ್ಯತೆಯ ವಿಷಯದಲ್ಲಿಯೂ ಶಾಸನ ಸಭೆಗಳಲ್ಲಿ ಸೇರಿ ಸ್ವರಾಜ್ಯಕ್ಕಾಗಿ ಹೊಡೆದಾಡಬೇಕೆಂಬ ವಿಷಯದಲ್ಲಿಯೂ ಗಾಂಧೀಜಿ ಮತ್ತು ಸ್ವರಾಜ್ಯಪಕ್ಷಕ್ಕೆ ಭಿನ್ನಾಭಿಪ್ರಾಯ ಉಂಟಾಯಿತು. ಗಾಂಧೀಜಿ ಕಾಂಗ್ರೆಸ್ಸಿನ ಮೂಲರಚನೆಯಲ್ಲಿಯೂ ಸದಸ್ಯತ್ವದ ನಿಯಮಗಳಲ್ಲಿಯೂ ವ್ಯತ್ಯಾಸಗಳಾಗಬೇಕೆಂದು ಸೂಚನೆಕೊಟ್ಟರು. ಅಲ್ಲಿನವರೆಗೆ ಕಾಂಗ್ರೆಸ್ ರಚನೆಯಲ್ಲಿ ಸ್ವರಾಜ್ಯದ ಗುರಿ ಮತ್ತು ಅಹಿಂಸಾ ಸಾಧನೆ ಈ ನಿಯಮಗಳಿಗೆ ಒಪ್ಪಿ ನಾಲ್ಕಾಣೆಯನ್ನು ಕೊಟ್ಟರೆ ಯಾರಾದರೂ ಸದಸ್ಯರಾಗಬಹುದಾಗಿತ್ತು. ನಾಲ್ಕಾಣೆಯ ಬದಲು ಒಂದು ಗೊತ್ತಾದ ಪ್ರಮಾಣದಷ್ಟು ಸ್ವತಃ ನೂತ ನೂಲನ್ನು ಕೊಟ್ಟರೆ ಸದಸ್ಯರಾಗಬಹುದು ಎಂಬುದು ಮಹಾತ್ಮರ ಸೂಚನೆ. ಕಾಯಕದ ಯೋಗ್ಯತೆ ಗೌರವಗಳನ್ನು ಸದಸ್ಯತನಕ್ಕೆ ಉಂಟುಮಾಡಿದರೆ

ಕಾಂಗ್ರೆಸ್ಸಿನ ಪವಿತ್ರತೆ ಹೆಚ್ಚುತ್ತದೆಂಬ ಆಸೆಯಿಂದ ಈ ಸೂಚನೆಯನ್ನು ತಂದರು. ಆದರೆ ಸ್ವರಾಜ್ಯಪಕ್ಷದವರು ಇದನ್ನು ವಿರೋಧಿಸಿದರು. ಸ್ವರಾಜ್ಯ ಪಕ್ಷದವರ ವಾದವನ್ನು ಒಪ್ಪದಿದ್ದರೂ ಕೊನೆಗೆ ಗಾಂಧೀಜಿ ಸ್ವರಾಜ್ಯ ಪಕ್ಷ ದವರ ಇಚ್ಛೆಗೆ ಅಡ್ಡಿ ಬರಲಿಲ್ಲ. ನೂಲು ಸದಸ್ಯತ್ವ ತಪ್ಪಿ ನಾಲ್ಕಾಣೆ ಸದಸ್ಯತ್ವವೇ ಉಳಿದುಕೊಂಡಿತು. ಶಾಸನ ಸಭೆಗಳಲ್ಲಿದ್ದು ಹೊಡೆದಾಡ ಬೇಕೆಂಬ ಸ್ವರಾಜ್ಯ ·ಪಕ್ಷದವರ ನೀತಿಯನ್ನೂ ಗಾಂಧೀಜಿ ಹರಸಿದರು. ಆದರೆ ತಾವು ಮಾತ್ರ ಆ ಪಕ್ಷದಿಂದ ದೂರವಾಗಿಯೇ ಉಳಿದರು.

ಮುಂದೆ ಕರ್ಣಾಟಕದಲ್ಲಿ ಬೆಳಗಾಮಿನಲ್ಲಿ ನಡೆದ ಕಾಂಗ್ರೆಸ್ ಮಹಾ ಸಭೆಗೆ (೧೯೨೪) ಮಹಾತ್ಮಾ ಗಾಂಧಿಯವರು ಅಧ್ಯಕ್ಷರಾದರು. ಮುಂದಿನ ಎರಡು ವರ್ಷಗಳಲ್ಲಿ ಕೋಮುವಾರು ವೈಶಮ್ಯ ಹೆಚ್ಚಿತು. ಪಕ್ಷಪ್ರತಿಪಕ್ಷ ಗಳು ಹುಟ್ಟಿಕೊಂಡವು. ಈ ಪಕ್ಷಗಳನ್ನು ಒಂದುಗೂಡಿಸಿ ಸೌಹಾರ್ದ ತರುವುದಕ್ಕೆ ಮಹಾತ್ಮರು ತುಂಬಾ ದುಡಿದರು. ೧೯೨೭ ನೆಯ ಡಿಸಂಬರು ತಿಂಗಳಲ್ಲಿ ಮದರಾಸಿನಲ್ಲಿ ಕಾಂಗ್ರೆಸ್ ಮಹಾಧಿವೇಶನ ನೆರೆಯಿತು. ಈ ಸಭೆಗೆ ಡಾಕ್ಟರ್ ಅನ್ಸಾರಿಯವರು ಅಧ್ಯಕ್ಷರಾಗಿದ್ದರು. ಈ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆದವು. ಮಹಾತ್ಮರು ಕಾರ್ಯಕಲಾಪ ಗಳಲ್ಲಿ ಭಾಗವಹಿಸದಿದ್ದರೂ ಎಲ್ಲಾ ಕಾರ್ಯಗಳೂ ಅವರ ಸೂಚನೆಯಂತೆಯೇ ನಡೆದವು.

ಇಷ್ಟರಲ್ಲಿ ದೇಶ ಮಹಾತ್ಮರ ಮುಂದಾಳುತನದಲ್ಲಿ ಬಹುಮಟ್ಟಿಗೆ ಎಚ್ಚತ್ತಿತ್ತು. ರೈತರಸಭೆ, ಯುವಜನ ಸಂಘ ಮೊದಲಾದ ಸಂಸ್ಥೆಗಳು ದೇಶದಲ್ಲಿ ಹುಟ್ಟಿಕೊಂಡು ಜನತೆಯಲ್ಲಿ ರಾಜಕೀಯ ವಿಷಯದಲ್ಲಿ ಒಂದು ಬಗೆಯ ಉತ್ಸಾಹವೂ ಅಭಿಲಾಷೆಯೂ ಮೂಡಿ ಚಟುವಟಿಕೆ ಎಲ್ಲಾ ಕಡೆಯೂ ಎದ್ದು ಕಾಣುತ್ತಿತ್ತು. ಜನಜಂಗುಳಿಯಲ್ಲಾದ ಈ ಎಚ್ಚರಿಕೆ ಯಿಂದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನ ನಡೆಯಿತು.

೧೯೨೮ರಲ್ಲಿ ಬ್ರಿಟಿಷ್ ಸದಸ್ಯರನ್ನು ಮಾತ್ರ ಒಳಗೊಂಡಿದ್ದ ಸೈಮನ್ ಸಮಿತಿ ಭಾರತದೇಶ ಸ್ವಾತಂತ್ರಕ್ಕೆ ಎಷ್ಟರಮಟ್ಟಿಗೆ ಯೋಗ್ಯವೆಂಬುದನ್ನು ಅಳೆಯಲು ಇಲ್ಲಿಗೆ ಕಾಲಿಟ್ಟಿತು. ಇದರಿಂದ ರಾಜಕೀಯ ರಂಗದಲ್ಲಿ ಹೊಸ ಸ್ಫೂರ್ತಿ ಚಿಮ್ಮಿತು. ಭಾರತೀಯರ ಪ್ರಾತಿನಿಧ್ಯವಿಲ್ಲದ ಈ ಸಮಿತಿಯನ್ನು ಕಾಂಗ್ರೆಸ್ ಬಹಿಷ್ಕರಿಸಿತು. ಸೈಮನ್ ಸಮಿತಿ ಹೋದೆಡೆಯಲ್ಲೆಲ್ಲಾ 'ಸೈಮನ್ ಹಿಂದಿರುಗು' ಎಂಬ ವಿರೋಧ ಘೋಷ ಕೇಳಿಬರುತ್ತಿತ್ತು. ಇದೇ ಅರ್ಥ ಕೊಡುವ ಕಪ್ಪು ಬಾವುಟದ ಪ್ರದರ್ಶನದ ತಂಡಗಳು ಸಮಿತಿಯವರನ್ನು ಕಾಡಿದವು. ಇದೇ ಸಮಯದಲ್ಲಿ ಪಂಡಿತ ಮೋತಿಲಾಲರ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಮ್ಮೇಳನ ಸೇರಿ ಭಾರತಕ್ಕೆ ಬೇಕಾದ ಸ್ವಾತಂತ್ರ್ಯವನ್ನು ನಿರ್ಧರಿಸಲು ಚರ್ಚೆ ನಡೆಯುತ್ತಿತ್ತು. ಸೈಮನ್ ಸಮಿತಿಗೆ ವಿರೋಧಪ್ರದರ್ಶನವನ್ನು ಮಾಡಲು ನೆರೆದಿದ್ದ ಜನರನ್ನು ಪೋಲೀಸರು ಲಾಟಿಯಿಂದ ಹೊಡೆದರು. ಲಾಹೋರಿನಲ್ಲಾದ ವಿರೋಧಪ್ರದರ್ಶನಕ್ಕೆ ಲಾಲಾ ಲಜಪತರಾಯರು ಮುಂದಾಳುಗಳಾಗಿದ್ದರು. ಶಾಂತಿಯುತವಾದ ಪ್ರದರ್ಶನ ನಡಸುತ್ತಿದ್ದ ಲಾಲಾಜಿಯವರ ಎದೆಯ ಮೇಲೆ ಇಂಗ್ಲೀಷ್ ಪೋಲೀಸಿನವನೊಬ್ಬನು ಬಲವಾದ ಏಟು ಕೊಟ್ಟನು. ಆದರಿಂದಾದ ಬೇನೆಗೆ ಕೆಲವು ದಿನಗಳಲ್ಲೇ ಲಾಲಾಜಿಯವರು ಬಲಿಯಾದರು. ಅವರ ಮರಣವಾರ್ತೆಯನ್ನು ದೇಶ ಕಂಪನದಿಂದಲೂ ಉದ್ವೇಗದಿಂದಲೂ ಸಹಿಸಿತು. ತಮ್ಮ ಸಚ್ಚಿನ ನಾಯಕನ ತೇಜೋವಧೆ ಆದೆಂದು ಜನರು ಹಲುಬಿದರು. ಪಂಜಾಬಿನ ಯುವಕರಂತೂ ಇದರಿಂದಾದ ವ್ಯಥೆಯನ್ನು ಸಹಿಸಲಾರದೆ ಕುದಿಗೊಂಡರು. ಇದೇ ಭಗತ್‌ಸಿಂಗ್ ಮೊದಲಾದ ವೀರರ ಪ್ರಬಲ ಮನೋವೃತ್ತಿಗೆ ಕಾರಣವಾಯಿತು.

ಈ ವರ್ಷದ ಕೊನೆಯಲ್ಲಿ (೧೯೨೮) ಕಲ್ಕತ್ತಾದಲ್ಲಿ ಕಾಂಗ್ರೆಸ್ ಮಹಾಧಿವೇಶನ ಪಂಡಿತ ಮೋತೀಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ಕೂಡಿತು. ಸರ್ವ ಪಕ್ಷಗಳು ಸೇರಿದ್ದ ಸಭೆಯೊಂದು ಸಿದ್ಧಪಡಿಸಿದ

ರಾಜ್ಯಾಂಗರಚನೆಯ ವರದಿಯನ್ನು ಆ ಸಭೆ ಒಪ್ಪಿತು. ಅಲ್ಲದೆ ಆ ರಾಜ್ಯಾಂಗ ರಚನೆಯನ್ನು ಬ್ರಿಟಿಷ್ ಸರಕಾರ ಒಂದು ವರ್ಷದೊಳಗಾಗಿ ಒಪ್ಪಿಕೊಳ್ಳದಿದ್ದಲ್ಲಿ ಕಾಂಗ್ರೆಸ್ ಸ್ವಾಂತತ್ರ್ಯ ಸಂಗ್ರಾಮವನ್ನು ಹೂಡುವುದೆಂಬ ನಿರ್ಣಯವನ್ನು ಸಭೆ ನಿರ್ಧರಿಸಿತು.

ಈ ಎಲ್ಲಾ ಚಳವಳಿಯೂ ಮಹಾತ್ಮರು ರಾಜಕರಣದಿಂದ ದೂರಾದಂತಿದ್ದರೂ ಅವರು ತೋರಿಸಿ ಕೊಟ್ಟ ದಾರಿಯಲ್ಲೇ ನಡೆಯುತ್ತಿದ್ದವು. ಎಲ್ಲಾ ವಿದ್ಯಮಾನಗಳ ಸಂಪೂರ್ಣ ಅರಿವು ಅವರಿಗಿತ್ತು. ಮುಂದಾಳುಗಳು ದೇಶದ ನಾಯಕನಾದ ಗಾಂಧೀಜಿಯ ಅಪ್ಪಣೆ ಪಡೆಯದೆ ಮುಂದೆ ಹೆಜ್ಜೆ ಇಡುತ್ತಿರಲಿಲ್ಲ. ರಾಜಕೀಯ ರಂಗದಲ್ಲಿನ ದಿನದಿನದ ಕೆಲಸಗಳನ್ನು ಮುಂದಾಳುಗಳ ಮೇಲೆ ಜಾರಿಸಿ ಮಹಾತ್ಮರು ಖಾದಿ ಪ್ರಚಾರವನ್ನು ತಮ್ಮ ಮುಖ್ಯ ಕೆಲಸವಾಗಿ ತೆಗೆದುಕೊಂಡಿದ್ದರು. ಇದಕ್ಕಾಗಿ ಭಾರತದಲ್ಲಿ ದೀರ್ಘಪ್ರವಾಸವನ್ನು ಕೈಗೊಂಡಿದ್ದರು. ಹೋದೆಡೆಯಲ್ಲೆಲ್ಲಾ ಲಕ್ಷಾಂತರ ಜನರು ಇವರ ದರ್ಶನಕ್ಕಾಗಿ ನುಗ್ಗುತ್ತಿದ್ದರು. ಜನರು ಗುಂಪುಗುಂಪಾಗಿ ರಾತ್ರಿಯಲ್ಲಿ ಪ್ರಯಾಣ ಮಾಡಿ ಬಂದು ಮಹಾತ್ಮರ ದರ್ಶನ ಪಡೆದು ತಾವು ಕೃತಾರ್ಥರಾದೆವು ಅಂದುಕೊಂಡು ತಮ್ಮ ಆತ್ಮಕ್ಕೆ ನೆಮ್ಮದಿ ಪಡೆದರು. ರೈಲು, ಮೋಟಾರುಗಳಲ್ಲಿ ಪ್ರಯಾಣ ಮಾಡುತ್ತಿದ್ದಾಗಲು ಕೂಡ ರಸ್ತೆಯ ಇಕ್ಕಡೆಗಳಲ್ಲೂ ಜನರು ದರ್ಶನಾಕಾಂಕ್ಷೆಯಿಂದ ಗಂಟೆಗಟ್ಟಲೆ ಕಾಯ್ತಿರುತ್ತಿದ್ದರು. ಈ ಪ್ರವಾಸಕಾಲದಲ್ಲಿ ಮಹಾತ್ಮರು ಖಾದಿ ಪ್ರಚಾರಕ್ಕಾಗಿ ಹಣ ಕೂಡಿಸಿದರು. ಗ್ರಾಮ ಕೈಗಾರಿಕೆಗಳ ಮೂಲಕ ಬಡ ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವುದರ ಸಲುವಾಗಿ ಈ ಹಣ ಶೇಖರವಾಯಿತು.

ಗಾಂಧೀಯುಗ ಪ್ರಾರಂಭವಾದಂದಿನಿಂದ ತನ್ನದೇ ಒಂದು ಸಾಮ್ರಾಜ್ಯವನ್ನು ನಿರ್ಮಿಸುತ್ತಿರುವ ಒಂದು ಬಗೆಯ ಸರಳ ಜೀವನವನ್ನು ತಂದಿರುವ ಖಾದಿಯ ವಿಷಯ ಹೇಳಬೇಕಾಗಿದೆ. ೧೯೧೮ರಲ್ಲಿಯೇ ಸತ್ಯಾಗ್ರಹಾಶ್ರಮ

ದಲ್ಲಿ ಖಾದಿ ಜನ್ಮತಾಳಿತು. ಅದು ಈಗಿನ ಸ್ಥಿತಿಗೆ ಬರಬೇಕಾದರೆ ಅನೇಕ ಅವಸ್ಥೆಗಳನ್ನು ದಾಟಬೇಕಾಯಿತು. ಮೊದಲು ಈ ದೇಶದ ಗಿರಣಿಗಳಲ್ಲಿ ನೂತ ನೂಲಿನಿಂದ ಕೈಮಗ್ಗಗಳಲ್ಲಿ ಬಟ್ಟೆಯನ್ನು ನೆಯ್ದು ಆಶ್ರಮವಾಸಿಗಳಿಗೆ ಉಡುಪುಗಳನ್ನು ಮಾಡಿಕೊಳ್ಳಲು ಕೊಡುತ್ತಿದ್ದರು. ಈ ಕೆಲಸದಲ್ಲಿ ಸಾಹಸವನ್ನು ತೋರಿಸಿ ಶುದ್ಧ ಖಾದಿಯನ್ನು ಪುನರುಜ್ಜೀವನಗೊಳಿಸಿದ ಗಂಗಾಬಾಯಿ ಮಜಮುದಾರರು ೧೯೧೭ ರಲ್ಲಿ ಗಾಂಧೀಜಿಯವರ ನೆರವಿಗೆ ಬಂದರು. ಇವರು ಪ್ರಯಾಸಪಟ್ಟು ಬರೋಡ ಸಂಸ್ಥಾನಕ್ಕೆ ಸೇರಿದ ವಿಜಾಪುರ ಎಂಬ ಊರಲ್ಲಿ ಹಳೆಯ ರಾಟಿಗಳಿದ್ದುದನ್ನು ಕಂಡುಹಿಡಿದರು. ಆ ಊರಿನ ಹೆಂಗಸರು ನೂತ ನೂಲನ್ನು ಕೊಳ್ಳುವುದಾದರೆ ತಾವು ನೂತುಕೊಡುವುದಾಗಿ ಒಪ್ಪಿದರು. ನೂಲು ತಯಾರಿಸಲು ಕೈಯಲ್ಲಿ ಮಾಡಿದ ಹಂಜಿಗಳು ಸಿಗುತ್ತಿರಲಿಲ್ಲ. ಗಿರಣಿಯ ಹಂಜಿಗಳನ್ನೇ ಉಪಯೋಗಿಸುತ್ತಿದ್ದರು. ಸ್ವಲ್ಪ ದಿನದಮೇಲೆ ಎಕ್ಕುವ ಬಿಲ್ಲನ್ನಿಟ್ಟುಕೊಂಡು ಹಂಜಿಗಳನ್ನು ಕೈಯಿಂದಲೇ ಮಾಡಿಕೊಳ್ಳಲು ಪ್ರಾರಂಭವಾಯಿತು. ಹೀಗೆ ಶುದ್ಧ ಖಾದಿ ಜನ್ಮ ತಾಳಿತು. ಗಾಂಧೀಜಿಯವರು ಶುದ್ಧ ಖಾದಿಯನ್ನೇ ಉಪಯೋಗಿಸಲು ಆತುರರಾಗಿದ್ದರು. ಅವರ ಪಂಚೆ ಇನ್ನೂ ಸ್ವದೇಶಿ ಗಿರಣಿಯದಾಗಿತ್ತು. ಆಗ ತಯಾರಾಗುತ್ತಿದ್ದ ಒರಟು ಖಾದಿಯ ಅಗಲ ೩೦ ಅಂಗುಲಕ್ಕೆ ಮೀರಿರಲಿಲ್ಲ. ಒಂದು ತಿಂಗಳೊಳಗಾಗಿ ೪೫ ಅಂಗುಲದ ಶುದ್ಧ ಖಾದಿಯ ಪಂಚೆಯನ್ನು ತಯಾರುಮಾಡಿ ಕೊಡದಿದ್ದರೆ ಆ ಅಗಲಕ್ಕಿಂತ ಕಿರಿದಾದ ಪಂಚೆಯನ್ನೇ ಉಡುವುದಾಗಿ ಶ್ರೀಮತಿ ಗಂಗಾಬಾಯಿಗೆ ಗಾಂಧೀಜಿ ತಿಳಿಸಿದರು. ಅವರ ನಿರ್ಧಾರವನ್ನು ಕೇಳಿ ಗಂಗಾಬಾಯಿಯವರು ಗಾಬರಿಗೊಂಡರು. ಆದರೂ ಸಾಹಸಪಟ್ಟು ಒಂದು ತಿಂಗಳು ಮುಗಿಯುವುದಕ್ಕೆ ಮೊದಲೆ ೪೫ ಅಂಗುಲ ಅಗಲದ ಒಂದು ಜೊತೆ ಪಂಚೆಗಳನ್ನು ಮಹಾತ್ಮರಿಗೆ ಅರ್ಪಿಸಿದರು. ಕ್ರಮೇಣ ಆಶ್ರಮದ ಅನೇಕರು ನೂಲುವವರೂ ನೇಯುವವರೂ ಆದರು.

ಆಗ ಒಂದು ದಿನ ಗಾಂಧೀಜಿ ಗಿರಣಿಯ ಮಾಲಿಕರೊಬ್ಬರೊಡನೆ ಸ್ವದೇಶಿ ಬಟ್ಟೆಗಳ ವಿಷಯ ಮಾತಾಡುತ್ತ ಹೀಗೆ ಹೇಳಿದರು—" ಇನ್ನೂ ಬಹುಕಾಲದವರೆಗೆ ಗಿರಣಿಗಳಿಗೆ ಗಿರಾಕಿಯ ಕೊರತೆಯೇನೂ ಒದಗುವುದಿಲ್ಲ. ಕೈನೂಲಿನ ಬಟ್ಟೆಯ ತಯಾರಿಕೆಯ ವ್ಯವಸ್ಥೆ ಮಾಡಿ ಅದನ್ನು ಖರ್ಚುಮಾಡುವುದಕ್ಕೆ ತಕ್ಕ ಉಪಾಯವನ್ನು ಕಂಡುಹಿಡಿಯುವುದೇ ನನ್ನ ಕರ್ತವ್ಯ. ಆದುದರಿಂದ ಖಾದಿಯ ಉತ್ಪತ್ತಿಯಕಡೆಗೆ ಸಂಪೂರ್ಣ ಗಮನ ಕೊಡುತ್ತಿದ್ದೇನೆ. ಈ ರೀತಿಯ ಸ್ವದೇಶಿಯಲ್ಲಿ ನನಗೆ ತುಂಬ ನಂಬಿಕೆಯಿದೆ. ಇದರ ಮೂಲಕ ಅರೆಹೊಟ್ಟೆ ತಿನ್ನುವ ಭರತಖಂಡದ ಹೆಂಗಸರಿಗೆ ಉದ್ಯೋಗ ಕೊಡಬಲ್ಲೆನು. ಈ ಹೆಂಗಸರಿಂದ ನೂಲನ್ನು ತೆಗೆಯಿಸಿ ಆ ನೂಲನ್ನು ನೆಯ್ದು ಮಾಡಿದ ಖಾದಿಯಿಂದ ಭರತಖಂಡದ ಜನರಿಗೆ ಉಡುಗೆಯನ್ನೊದಗಿಸಬೇಕೆಂಬುದೇ ನನ್ನ ಕಲ್ಪನೆ. ಈ ಉದ್ಯಮ ಎಷ್ಟರಮಟ್ಟಿಗೆ ಫಲಿಸುವುದೋ ನಾನು ಹೇಳಲಾರೆ. ಈಗ ಅದಿನ್ನೂ ಕೇವಲ ಪ್ರಾರಂಭದೆಸೆಯಲ್ಲಿದೆ. ಆದರೂ ನನಗೆ ಸಂಪೂರ್ಣ ಭರವಸೆ ಕಾಣುತ್ತಿದೆ."

ಖಾದಿಯ ಕೈಗಾರಿಕೆ ಕ್ರಮೇಣ ಅಭಿವೃದ್ಧಿಹೊಂದಿತು. ಖಾದಿಯನ್ನು ಧರಿಸುವುದೇ ಅನೇಕರಿಗೆ ಒಂದು ಆನಂದವಾಯಿತು. ಖಾದಿ ಧರಿಸಿದರೆ ಅದಕ್ಕಾಗಿ ವಿನಿಯೋಗಿಸಿದ ದುಡ್ಡು ಅದನ್ನು ತಯಾರು ಮಾಡಿದ ಬಡವರಲ್ಲಿ ಹಂಚಿಕೆಯಾಗುತ್ತದೆ. ಈಗ ಖಾದಿ ತನ್ನ ಸಾಮ್ರಾಜ್ಯವನ್ನು ಕಟ್ಟುತ್ತಿದೆ. ದೇಶದ ಬಡವರಿಗೆ ಉದ್ಯೋಗ ಸಿಕ್ಕಿ ಅವರ ಸಂಪಾದನೆ ಹೆಚ್ಚುವಂತಾಗುವ ಅತ್ಯುತ್ತಮ ಮಾರ್ಗವೊಂದು ಗೊತ್ತಾಗುವವರೆಗೆ, ಖಾದಿ ದೇಶದ ಬಡಜನರ ಜೀವನಾಧಾರವಾಗಿ ಉಳಿಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಇನ್ನು ೧೯೨೪ ಕ್ಕೆ ಬರೋಣ. ಮಹಾತ್ಮರನ್ನು ಅಖಿಲಭಾರತ ಕಾಂಗ್ರೆಸ್ ಸಮಿತಿ ಮತ್ತೆ ಅಧ್ಯಕ್ಷಪದವಿಗೆ ಆಹ್ವಾನಿಸಿತು. ಅಧ್ಯಕ್ಷೋ

ತ್ರಮರಾಗಿದ್ದ ಇವರು ಅದನ್ನು ನಿರಾಕರಿಸಿದರು. ಆ ವರ್ಷದ ಸಭೆಗೆ ಪಂಡಿತ ಜವಾಹಿರಲಾಲರು ಅಧ್ಯಕ್ಷರಾದರು. ರಾಜಕೀಯ ರಂಗದಲ್ಲಿ ಚಟುವಟಿಕೆ ಹೆಚ್ಚಿತು. ಈ ಚಟುವಟಿಕೆಯನ್ನು ಕುಂದಿಸಬೇಕೆಂಬ ಯುಕ್ತಿಯಿಂದ ಆಗ ವೈಸ್‌ರಾಯರಾಗಿದ್ದ ಲಾರ್ಡ್ ಅರ್ವಿನ್ನರು ಹಿಂದೂಸ್ಥಾನಕ್ಕೆ ಯಾವ ಸುಧಾರಣೆ ಕೊಡಬೇಕೆಂಬುದನ್ನು ಯೋಚಿಸಲು ಚಕ್ರಗೋಷ್ಠಿಯೊಂದು ಸೇರಲಿದೆಯೆಂದು ಪ್ರಕಟನೆಹೊರಡಿಸಿದರು. ಪದಗಳನ್ನು ಬಹು ಜಾಣ್ಮೆಯಿಂದ ಜೋಡಿಸಿ ಈ ಪ್ರಕಟನೆ ರಚನೆಯಾಗಿತ್ತು. ಈ ಸಂದರ್ಭದಲ್ಲಿ ಸರ್ವಪಕ್ಷ ಸಮ್ಮೇಳನ ದೆಹಲಿಯಲ್ಲಿ ಸೇರಿತು. ಅದರಲ್ಲಿ ಮಹಾತ್ಮರೂ ಭಾಗವಹಿಸಿದ್ದರು. ಕೆಲವು ನಿಯಮಗಳ ಮೇಲೆ ಆ ಸಭೆ ವೈಸ್‌ರಾಯರ ಪ್ರಕಟನೆಯನ್ನು ಅಂಗೀಕರಿಸಿತು. ಆ ನಿಯಮಗಳಿವು:—

ಭರತಖಂಡಕ್ಕೆ ಸಂಪೂರ್ಣ 'ಡೊಮಿನಿಯನ್ ಸ್ಟೇಟಸ್ಸ' ನ್ನು ಕೊಡಲೋಸುಗವೇ ಚಕ್ರಗೋಷ್ಠಿ ಸೇರತಕ್ಕದ್ದು.

ಚಕ್ರಗೋಷ್ಠಿಯಲ್ಲಿ ಕಾಂಗ್ರೆಸ್ಸಿಗೇ ಹೆಚ್ಚು ಪ್ರಾತಿನಿಧ್ಯವಿರತಕ್ಕದ್ದು.

ಸರಕಾರ ರಾಜಕೀಯ ಬಂದಿಗಳನ್ನೆಲ್ಲ ಯಾವ ನಿಯಮವನ್ನೂ ಹಾಕದೆ ಬಿಡುಗಡೆಮಾಡಬೇಕು.

ಇನ್ನು ಮುಂದೆ ಇಂಡಿಯ ಸರಕಾರ ಡೊಮಿನಿಯನ್ ಸರಕಾರದ ದಾರಿಯಲ್ಲಿ ಸಾಗಬೇಕು.

ಆದರೆ ಈ ನಿಯಮಗಳನ್ನು ಸರಕಾರ ಒಪ್ಪಲಿಲ್ಲ. ೧೯೩೦ ರಲ್ಲಿ ಲಾಹೋರಿನಲ್ಲಿ ನಡೆದ ಮಹಾಸಭೆ ಸ್ವಾತಂತ್ರ್ಯ ಸೂಚನೆಯನ್ನು ಒಪ್ಪಿತು. ಸಂಗ್ರಾಮ ಕಹಳೆಯನ್ನು ಕೂಗಿ ನೌಕೆಯನ್ನು ಸಮುದ್ರದೊಳಗೆ ಇಳಿಸಿದ್ದಾಯಿತು. ಆದರೆ ಯುದ್ಧದ ನಾಯಕತ್ವ ಮಹಾತ್ಮರದಾಗಿತ್ತು. ಹೋರಾಟ ಯಾವಾಗ, ಹೇಗೆ, ಪ್ರಾರಂಭವಾಗಬೇಕೆಂಬ ನಿರ್ದೇಶಕರೂ ಅವರೇ ಆಗಿದ್ದರು.

೧೯೩೦ ರ ಜನವರಿ ೨೬ ನೆಯ ದಿನ ಸ್ವಾತಂತ್ರ ದಿನಾಚರಣೆಯನ್ನು ದೇಶದ ಎಲ್ಲಾ ಕಡೆಯೂ ಗಂಭೀರವಾಗಿ ಆಚರಿಸಿದರು. ಆ ಸಮಯ ಆಗ ಜನರಲ್ಲಿದ್ದ ಉತ್ಸಾಹವನ್ನೂ ನಿಶ್ಚಲತೆಯನ್ನೂ ತೋರಿಸಿತು. ದೇಶವೆಲ್ಲಾ ರಣಗಹಳೆಯ ಕೂಗನ್ನು ಆತುರತೆಯಿಂದ ಕಾಯ್ದು ತುದಿಕಾಲಿನಲ್ಲಿ ನಿಂತಿತು. ಜನತೆಯ ಮಧ್ಯೆ ಇದ್ದು ಇದ್ದು ಅದರ ಗತಿಯನ್ನು ಚೆನ್ನಾಗಿ ಅರಿತಿದ್ದ ಗಾಂಧೀಜಿಗೆ ಈ ಬಗೆ ಗೊತ್ತಾಯಿತು. ಧನ್ವಂತರಿಯಂತೆ ಜನಗಂಗುಳಿಯ ನಾಡಿ ಮಿಡಿತವನ್ನು ತಿಳಿದು ಕಾರ್ಯಾರಂಭಕ್ಕೆ ಅದು ಸರಿಯಾದ ಕಾಲವೆಂಬುದನ್ನು ಅರಿತರು. ಇದಕ್ಕೆ ಅನುಗುಣವಾಗಿ ಸನ್ನಿವೇಶಗಳು ಒದಗಿ ಬಂದವು. ಚೌರಿಚೌರ ಘಟನೆಯಿಂದ ಚಳವಳಿ ನಿಂತಮೇಲೆ ಮಹಾತ್ಮರು ಜನರಿಗೆ ಹೊಡೆದಾಟದ ರೀತಿನೀತಿಗಳನ್ನು ಸದಾ ಬೋಧಿಸಿ ಅದು ಅವರ ರಕ್ತಗತವಾಗುವಂತೆ ಮಾಡಿದ್ದರು. ಹಿಂದೆ ಅಹಿಂಸಾವಾದದಲ್ಲಿ ಕೆಲವರಿಗಿದ್ದ ಅಪನಂಬಿಕೆ ಅಳಿದು ಅಹಿಂಸಾ ಮಾರ್ಗದಿಂದಲೇ ಸ್ವರಾಜ್ಯ ಸಾಧಿಸಲು ಸಾಧ್ಯವೆಂಬ ನಂಬಿಕೆ ಹುಟ್ಟಿತ್ತು. ಅಹಿಂಸಾಮಾರ್ಗವನ್ನವಲಂಬಿಸಿದರೆ ಮಾತ್ರ ಮಹಾತ್ಮರು ಸಂತೋಷ ಗೊಳ್ಳುವರೆಂದು ಎಲ್ಲರಿಗೂ ಗೊತ್ತಾಗಿತ್ತು. ಶಾಸನಭಂಗರೂಪದಲ್ಲಿ ಹೋರಾಟ ಬಳಿಸಾರಿತು.

ಇದ್ದಕ್ಕಿದ್ದಂತೆಯೇ ಮಹಾತ್ಮರು ಉಪ್ಪಿನ ಸತ್ಯಾಗ್ರಹ ಹೂಡಿದರು. ಅವರೇ ಸಬರಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹಕ್ಕಾಗಿ ಯಾತ್ರೆಯನ್ನು ಮೊದಲು ಮಾಡಿದರು. ಆಶ್ರಮದ ಸೋದರಿಯರು ನಾಯಕನ ಹಣೆಗೆ ಕುಂಕುಮವಿಟ್ಟು ಆರತಿಯೆತ್ತಿ ಸಂಗ್ರಾಮದಲ್ಲಿ ಜಯವನ್ನು ಬಯಸಿ ವಿಜಯ ಯಾತ್ರೆಗೆ ಬೀಳ್ಕೊಟ್ಟರು. ವಿದ್ಯುತ್ಪ್ರವಾಹದಂತೆ ಈ ಸುದ್ದಿ ದೇಶದಲ್ಲಿ ಹರಡಿತು. ಯಾತ್ರಿಕರ ಶ್ರೇಣಿ ದಿನೇ ದಿನೇ ಬೆಳೆಯುತ್ತಾ ಹೋಯಿತು. ಮಹಾನಾಯಕನು ದಂಡಧರನಾಗಿ ಶಾಂತಿಯುತವಾಗಿ ಪ್ರಸನ್ನವಾಗಿ ನಿರ್ಭೀತವಾಗಿ ಪ್ರಭಾವವನ್ನು ಬೀರುತ್ತಿದ್ದ ಮುಖನಿದ್ರೆ

ಯಿಂದ ಕೂಡಿ ದೃಢವಾದ ಹೆಜ್ಜೆಗಳನ್ನಿಡುತ್ತ ಸಮುದ್ರದೆಡೆಗೆ ನಡೆಯುತ್ತಿದ್ದನು. ಅನುಯಾಯಿಗಳ ಶ್ರೇಣಿ ನಾಯಕನನ್ನು ಅನುಸರಿಸಿ ಸಾಗುತ್ತಿತ್ತು. ಆವೇಶದ ತುದಿ ಮುಟ್ಟಿಸುವ ದೃಶ್ಯವದು. ಇಷ್ಟರಲ್ಲಾಗಲೆ ಅನಿವಾರ್ಯವಾಗಿ ಒದಗಿದ ಹೋರಾಟಕ್ಕಾಗಿ ಏರ್ಪಾಡುಮಾಡಲು ಅಹಮದಾಬಾದಿನಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ ಸೇರಿ ಸಮಿತಿಯು ಪರವಾಗಿ ಕ್ರಮ ನಡಸಲು ಅಧ್ಯಕ್ಷರಿಗೆ ವಿಶೇಷಾಧಿಕಾರವನ್ನು ಕೊಟ್ಟಿತು. ಸೆರೆಯಾದ ಕಾರ್ಯನಿರ್ವಾಹಕಮಂಡಲಿಯ ಸದಸ್ಯರ ಸ್ಥಳದಲ್ಲಿ ಬೇರೆಯವರನ್ನು ನೇಮಿಸಿಕೊಳ್ಳುವ, ತಾನು ಸೆರೆಯಾದರೆ ತನ್ನ ಅಧಿಕಾರವನ್ನು ನಿರ್ವಹಿಸಲು ಸರ್ವಾಧಿಕಾರಿಯನ್ನಾಗಿ ಬೇರೊಬ್ಬರನ್ನು ನೇಮಿಸುವ ಸರ್ವಾಧಿಕಾರವನ್ನು ಅಧ್ಯಕ್ಷರು ಪಡೆದರು. ಪ್ರಾಂತಿಕ ಮತ್ತು ಸ್ಥಳೀಯ ಕಾಂಗ್ರೆಸ್ ಸಮಿತಿಗಳಲ್ಲೂ ಈ ಏರ್ಪಾಡು ನಡೆಯಿತು.

ಮಹಾತ್ಮರು ಉಪ್ಪಿನ ಶಾಸನೋಲ್ಲಂಘನೆ ಮಾಡಿ ಚಳುವಳಿಯ ಪ್ರಾರಂಭೋತ್ಸ ಮಾಡುವುದನ್ನು ದೇಶ ಆತುರದಿಂದ ಕಾಯ್ದಿತ್ತು. ಜಲಿಯನ್‌ವಾಲಾಬಾಗ್‌ನ ಬಲಿದಾನದ ಜ್ಞಾಪಕಾರ್ಥವಾಗಿ ವರ್ಷವರ್ಷವೂ ಆಚರಿಸುತ್ತಿದ್ದ ರಾಷ್ಟ್ರೀಯ ಸಪ್ತಾಹ ಏಪ್ರಿಲ್ ೬ ನೆಯ ದಿನ ಪ್ರಾರಂಭವಾಯಿತು. ಆ ದಿನವೇ ಸಂಗ್ರಾಮದ ಸೂತ್ರಧಾರರಾದ ಗಾಂಧೀಜಿ ದಂಡಿಯ ಬಳಿ ಸಮುದ್ರ ತೀರದಲ್ಲಿ ಉಪ್ಪಿನ ಶಾಸನಭಂಗದ ಆರಂಭೋತ್ಸವವನ್ನು ನೆರವೇರಿಸಿದರು. ಕೂಡಲೇ ದೇಶದ ಎಲ್ಲೆಲ್ಲಿಯೂ ಉಪ್ಪಿನ ಶಾಸನಭಂಗದ ಮಾತೇಮಾತಾಗಿ ಹೋಯಿತು. ಮಹಾತ್ಮರು ಶಾಸನ ಭಂಗಮಾಡಿ ಮಾಡಿದ ಉಪ್ಪನ್ನು ಜನರು ಬೇಕಾದಷ್ಟು ಹಣ ಸುರಿದು ಪವಿತ್ರ ವಸ್ತುವಿನಂತೆ ಕೊಂಡರು. ಕೊಂಡವರಿಗೆ ಸಾಮಾನಿನ ಗುಣಾವಗುಣಗಳ ಲಕ್ಷ್ಯವಿರಲಿಲ್ಲ. ಆ ಹೇಸಿಗೆ ಕಾನೂನು ಮುರಿಯಿತಲ್ಲ, ಅಷ್ಟೇ ಅವರಿಗೆ ಬೇಕಾಗಿದ್ದುದು. ಎಲ್ಲೆಲ್ಲಿಯೂ ಉತ್ಸಾಹ ಚಿಮ್ಮಿ ಉಪ್ಪನ್ನು ಮಾಡುವ ಕಾರ್ಯ ಕಾಡಿಗಿಚ್ಚಿನಂತೆ ದೇಶವನ್ನೆಲ್ಲಾ ತುಂಬಿತು.

ಜನತೆಯಲ್ಲಿ ತಮ್ಮ ಪ್ರಭಾವದ ಮುದ್ರೆಯನ್ನೊತ್ತಿ ಕಾರ್ಯರಂಗಕ್ಕೆ ದುಮುಕುವಂತೆ ಮಾಡುವ ಗಾಂಧೀಜಿಯ ಅಸಮಾನವಾದ ಜಾಣ್ಮೆಯನ್ನು ಕಂಡು ಪ್ರಪಂಚ ಆಶ್ಚರ್ಯಗೊಂಡಿತು.

ಸತ್ಯಾಗ್ರಹದ ಜೊತೆಗೆ ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ ಬಲು ಜೋರಿನಿಂದ ನಡೆಯಿತು. ಸರಕಾರದವರೂ ಸುಮ್ಮನಿರಲಿಲ್ಲ. ಸತ್ಯಾಗ್ರಹಿಗಳ ಮೇಲೂ ಮೆರೆವಣಿಯಲ್ಲಿ ಸೇರಿದ್ದ ಜನರ ಮೇಲೂ ಪೋಲೀಸರು ಲಾಟಿಪ್ರಯೋಗಮಾಡಿದರು. ವಾಯುವ್ಯ ಗಡಿನಾಡಿನಲ್ಲೆಲ್ಲಾ ಗುಂಡಿನ ಸುರಿಮಳೆಯಾಯಿತು. ಗಡಿನಾಡಿನ ವೀರ ಪಠಾಣರು ಗುಂಡಿನೆದುರು ಶಾಂತಿಯಿಂದ ಎದೆಗೊಟ್ಟು ನಿಂತು ಅಹಿಂಸಾಧರ್ಮವನ್ನು ಜಗತ್ತಿಗೆ ಸಾರಿದರು. ಗಾರ್‌ಹಾಲಿ ಸೈನಿಕರು ನಿರಾಯುಧರಾದ ಜನರ ಮೇಲೆ ಗುಂಡು ಹಾರಿಸಲು ನಿರಾಕರಿಸಿದರು.

ಆ ರಾಷ್ಟ್ರೀಯ ಸಂಗ್ರಾಮದಲ್ಲಿ ನಡೆದ ಮಹಾ ಘಟನೆಗಳಲ್ಲೆಲ್ಲಾ ದೇಶದ ಸೋದರಿಯರು ತೆಗೆದುಕೊಂಡ ಪಾತ್ರ ಮಹತ್ತಾದುದು. ಅವರು ತಮ್ಮ ತಮ್ಮ ಗೃಹಗಳಿಂದ ಹೊರಬಿದ್ದು ಸಾರ್ವಜನಿಕ ಚಲನವಲನಗಳಲ್ಲಿ ಅಭ್ಯಾಸವೇ ಇಲ್ಲದಿದ್ದರೂ, ಒದಗುವ ತೊಂದರೆಗಳನ್ನೆಲ್ಲ ಲಕ್ಷಿಸದೆ, ರಣರಂಗಕ್ಕೆ ನುಗ್ಗಿದರು. ಪರದೇಶೀವಸ್ತ್ರ ಬಹಿಷ್ಕಾರ, ಪಾನನಿರೋಧ ಈ ಕಾರ್ಯಗಳನ್ನು ಯಶಸ್ವಿಯಾಗಿ ನಡಸಿದರು. ಹಲವು ಕಡೆ ಕಾಂಗ್ರೆಸ್ ಸಂಸ್ಥೆಗಳ ಸರ್ವಾಧಿಕಾರಿಗಳಾಗಿ ಕಾಂಗ್ರೆಸ್ ಸೂತ್ರವನ್ನು ಹಿಡಿದು ಸಂಗ್ರಾಮ ನಡಸಿದರು.

ಉಪ್ಪಿನ ಶಾಸನ ಭಂಗ ಸ್ವಲ್ಪಕಾಲದಲ್ಲಿಯೇ ಚಳವಳಿಯ ಒಂದು ಅಂಗವಾಯಿತು. ಇದರಿಂದ ಪ್ರಾರಂಭವಾದ ಶಾಸನೋಲ್ಲಂಘನ ಮಿಕ್ಕ ಕ್ಷೇತ್ರಗಳನ್ನೂ ಆವರಿಸಿತು. ಈ ಚಳುವಳಿಯನ್ನು ಮುರಿಯಲು ಹಲವು ರೀತಿಯ ವಿಶೇಷಾಧಿಕಾರಗಳನ್ನು ವೈಸರಾಯರು ಉಪಯೋಗಿಸಿದರು. ಆ ವಿಶೇಷಾಧಿಕಾರ ಶಾಸನವನ್ನು ಮುರಿಯುವುದೂ ಚಳವಳಿಗೆ



ಮಕ್ಕಳೊಡನೆ



ಗೌರ್ನರ್ ಜನರಲ್ ಮೌಂಟ್‌ಬ್ಯಾಟನ್ ದಂಪತಿಗಳೊಡನೆ

ಸೇರಿದಂತಾಯಿತು. ವಿಶೇಷಾಧಿಕಾರ ಶಾಸನಗಳು ಹೊರಬಿದ್ದಂತೆ ಚಳವಳಿ ಹೊಸ ಹೊಸ ಹುರುಪನ್ನು ಪಡೆಯುತ್ತಿತ್ತು.

ಮೇ ತಿಂಗಳು ಐದನೆಯದಿನ ಮಹಾತ್ಮರ ಬಂಧನವಾಯಿತು. ಕೂಡಲೆ ಚಳವಳಿ ಹೊಸ ರೂಪವನ್ನು ತಾಳಿತು. ಸರಕಾರದ ಉಪ್ಪಿನ ಕೋಟೆಗಳ ಮೇಲೆ ಧಾಳಿ ನಡೆಯಿತು. ಈ ಧಾಳಿಯ ಸಮಯದಲ್ಲಿ ಪೋಲೀಸರು ದೇಶಸೇವಕರಿಗೆ ವಿಚಿತ್ರ ರೀತಿಯ ಹಿಂಸೆಗಳನ್ನು ಕೊಟ್ಟರು. ಲಾಠಿಪ್ರಹಾರಗಳು ದಸ್ತರಿಗಳು ಹುಚ್ಚುಹೊಳೆಯಾಗಿ ನಡೆದುಹೋದವು. ಸರಕಾರ ಮನಬಂದಂತೆ ವರ್ತಿಸಿತು. ನಾಯಕರನ್ನೆಲ್ಲ ಸೆರೆ ಹಿಡಿದು ಬಂಧನದಲ್ಲಿಟ್ಟರು. ಮತ್ತೆ ಸೆರೆಮನೆಗಳು ಕಿಕ್ಕಿರಿದು ತುಂಬಿಹೋದವು.

ಜನತೆಯ ಹೃದಯಪ್ರವಾಹವನ್ನರಿತು ಅದಕ್ಕನುಗುಣವಾಗಿ ಗುಂಡಿಯನ್ನಮುಕುವ ಮಹಾತ್ಮರ ಅದ್ಭುತ ಶಕ್ತಿಗಾಗಿ ಪ್ರಪಂಚ ಬೆಕ್ಕಸ ಬೆರಗಾಯಿತು. ಗಾಂಧೀಜಿಯ ಮಹತ್ತು ಜನತೆಯಲ್ಲಿ ಸ್ಥಿರಸ್ಥಾಯಿಯಾದ ಸ್ಫೂರ್ತಿ ಮತ್ತು ಉತ್ಸಾಹವನ್ನು ತರಬಲ್ಲದು. ಗೋಖಲೆಯವರು ಗಾಂಧೀಜಿಯನ್ನು ಕುರಿತು ಹೀಗೆ ಹೇಳಿದ್ದಾರೆ: "ಜೇಡಿ ಮಣ್ಣಿನಿಂದ ಜಗಜಟ್ಟಿಯನ್ನು ಸೃಷ್ಟಿಸುವ ಶಕ್ತಿ ಗಾಂಧಿಯವರಿಗಿದೆ." ಈ ಮಹಾ ಶಕ್ತಿಯಿಂದ ಅವರು ಪ್ರಾರಂಭಿಸುವ ಕೆಲಸ ಎಷ್ಟು ಸಣ್ಣದಾಗಿ ಕಂಡರೂ ಕ್ಷಿಪ್ರದಲ್ಲೇ ಅದ್ಭುತಶಕ್ತಿ ಹೊಂದಿ ಆಂದೋಳನವನ್ನು ತರುತ್ತದೆ. ಉಪ್ಪಿನ ಶಾಶನಭಂಗಚಳವಳಿಯನ್ನು ಹೂಡಿ ಶಾಂತಿ ಮತ್ತು ಅಹಿಂಸೆಯಿಂದ ಕೂಡಿದ ಅಸಹಕಾರ ಮತ್ತು ಶಾಸನೋಲ್ಲಂಘನ ಚಳವಳಿಯೇ ಸ್ವರಾಜ್ಯ ಸಾಧನೆಗೆ ದಾರಿ ಎಂಬುದನ್ನು ತೋರಿಸಿಕೊಟ್ಟರು. ಈ ಚಳವಳಿಯಿಂದ ಜನತೆ ಅಪೂರ್ವವಾದ ಚೇತನವನ್ನೂ ನಂಬಿಕೆಯನ್ನೂ ಪಡೆಯಿತು. "ಸ್ವರಾಜ್ಯ ಬಂದೇ ಬರುತ್ತದೆ" ಎಂಬ ಉದ್ಗಾರ ಎಲ್ಲೆಲ್ಲೂ ಕೇಳಬರುತ್ತಿತ್ತು.

ದಿನದಿನವೂ ಹೊಸ ಹುರುಪುಗೊಂಡು ಚಳವಳಿ ಸಾಗುತ್ತಿರಲು, ಸಪ್ರು, ಜಯಕರ್‌ರವರು ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ರಾಜಿಮಾಡಲು

ಸಂಧಾನ ನಡಸುತ್ತಿದ್ದರು. ಅವರ ಸಾಹಸದಿಂದ, ಸರ್ಕಾರ ನಾನಾಕಡೆ ಬಂಧನದಲ್ಲಿದ್ದ ನಾಯಕರನ್ನೆಲ್ಲಾ ಯೆರವಾಡ ಜೈಲಿನಲ್ಲಿ ಗಾಂಧೀಜಿ ಇದ್ದಲ್ಲಿ ಸೇರಿಸಿ ರಾಜಿಗಾಗಿ ಯೋಚಿಸಲು ಏರ್ಪಾಡಾಯಿತು. ಅಲ್ಲಿ ಮೂರು ದಿನಗಳು ಚರ್ಚೆ ನಡೆದು, ಶಾಸನೋಲ್ಲಂಘನ ಚಳವಳಿ ನಿಲ್ಲಿಸಿ ಕಾಂಗ್ರೆಸ್ ಸರಕಾರದೊಡನೆ ಸಹಕರಿಸಬೇಕಾದರೆ ಅದು ಒಪ್ಪಬೇಕಾದ ನಿಯಮ ಗಳನ್ನು ಸರಕಾರಕ್ಕೆ ಕಳಿಸಿಕೊಟ್ಟುದಾಯಿತು. ಆ ನಿಯಮಗಳಿಗೆ ಸರಕಾರ ಒಪ್ಪಲಿಲ್ಲವಾಗಿ ಸಂಧಾನ ನಿಷ್ಫಲವಾಯಿತು.

ದೇಶದಲ್ಲಿ ಆಂದೋಳನವೆದ್ದು ಸ್ತ್ರೀಪುರುಷರು ದೇಶದ ಹಿತಕ್ಕಾಗಿ ಜನತೆಯ ಮೇಲ್ಮೆಗಾಗಿ ಸುಖವನ್ನು ತ್ಯಜಿಸಿ ನಾನಾಕಷ್ಟಸಂಕಟಗಳನ್ನು ಅನುಭವಿಸುತ್ತಿರುವಾಗ ಕೆಲವು ಭಾರತೀಯರು ಬ್ರಿಟಿಷ್ ಸರಕಾರದ ಅತಿಥಿ ಗಳಾಗಿ ಇಂಗ್ಲೆಂಡಿನಲ್ಲಿ ಭಾರತ ಭೂಮಿ ನಿರಾಕರಿಸಿದ್ದ ಚಕ್ರಗೋಷ್ಠಿಯಲ್ಲಿ ಭಾಗವಹಿಸಿ ಬ್ರಿಟಿಷರಿಗೆ ಸಹಕಾರವನ್ನು ನೀಡುತ್ತಿದ್ದರು. ಅಂತೂ ಯಾವ ಫಲವೂ ಇಲ್ಲದೆ ಆ ಚಕ್ರಗೋಷ್ಠಿ ಮುಗಿಯಿತು.

ಇಷ್ಟರಲ್ಲಿ ಪಂಡಿತ ಮೋತೀಲಾಲರು ಸೆರೆಮನೆಯಲ್ಲಿ ಕಾಯಿಲೆ ಬಿದ್ದರು. ಕಾಯಿಲೆ ಹೆಚ್ಚಿ ಕಷ್ಟಕ್ಕೆ ಬಂದಾಗ ಬಿಡುಗಡೆ ಹೊಂದಿದ್ದರು. ದಿನೇದಿನೇ ರೋಗ ವೃದ್ಧಿಯಾಗಿ ವಿಷಮಸ್ಥಿತಿಗೇರಿತು. ಆಗ(೨೬-೧-೩೧) ಮಹಾತ್ಮರ ಬಿಡುಗಡೆಯಾಯಿತು. ಅದರ ಮಾರನೆಯ ದಿನ ಅವರು ಬೊಂಬಾಯಿಯಲ್ಲಿ ಹಿಂದೆಂದೂ ಸೇರದಂತಹ ಬಹು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಬೊಂಬಾಯಿಯಿಂದ ನೇರವಾಗಿ ಅಲಹಾ ಬಾದಿಗೆ ಹೋದರು. ಗಾಂಧೀಜಿಯ ಬಿಡುಗಡೆಯಾದ ದಿನವೇ ಜವಾಹಿರಲಾಲರೂ ಬಿಡುಗಡೆ ಹೊಂದಿ ಅಲಹಾಬಾದಿಗೆ ಬಂದಿದ್ದರು. ಮಹಾತ್ಮರ ದರ್ಶನದಿಂದಲೂ ಅವರ ನುಡಿಯಿಂದಲೂ ಮೋತೀಲಾಲರು ಸಮಾಧಾನ ಪಡೆದರು. ಅವರ ಮನೆಯವರೆಲ್ಲರೂ ಗಾಂಧೀಜಿಯ ಆಗ ಮನದಿಂದ ಸ್ವಲ್ಪಮಟ್ಟಿಗೆ ನೆಮ್ಮದಿ ಹೊಂದಿದರು. ಆದರೇನು ! ಪಂಡಿತರು

ಫೆಬ್ರವರಿ ಆರನೆಯ ದಿನ ದೈವಾಧೀನರಾದರು. ದೇಶವೆಲ್ಲ ಅಪಾರ ದುಃಖದಲ್ಲಿ ಮುಳುಗಿತು.

ಇಷ್ಟರಲ್ಲಿ ಮಹಾತ್ಮರು ಆಗ ವೈಸ್‌ರಾಯರಾಗಿದ್ದ ಲಾರ್ಡ್ ಅರ್ವಿನರನ್ನು ನೋಡಿ ದೇಶದ ಮುಂದಿದ್ದ ವಿಷಯಗಳನ್ನು ಚರ್ಚಿಸಲು ಅವಕಾಶ ಕೇಳಿದರು. ವೈಸ್‌ರಾಯ್‌ರವರು ಅದಕ್ಕೆ ಸಂತೋಷದಿಂದ ಒಪ್ಪಿದರು. ಭೇಟಿಯಾಯಿತು. ಚರ್ಚೆ ಹಲವು ದಿನ ನಡೆಯಿತು. ಆ ಸಮಯದಲ್ಲಿ ದೆಹಲಿ ಪ್ರಪಂಚದ ದೃಷ್ಟಿಯನ್ನು ಸೆಳೆಯಿತು. ಮಹಾತ್ಮರು ಮತ್ತು ಅರ್ವಿನರ ಮಧ್ಯೆ ಒಂದು ಬಗೆಯ ಒಪ್ಪಂದವಾಯಿತು. ಅದರಂತೆ ಶಾಸನಭಂಗ ಚಳವಳಿ ನಿಂತಿತು.

ಸರ್ಕಾರದವರು ಕಂದಾಯ ಹೆಚ್ಚಿಸಲು, ಅದನ್ನು ಎದುರಿಸಿ ಬಾರ್ಡೋಲಿಯ ರೈತರು ಹೂಡಿದ ಚಳವಳಿಯ ನಾಯಕತ್ವವನ್ನು ವಹಿಸಿ ಆ ಚಳವಳಿಯಲ್ಲಿ ನಿಜವಾದ ಗೆಲುವನ್ನು ಪಡೆದು ಇಡೀ ಭಾರತ ಭೂಮಿಯಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಆ ವರ್ಷ ಕಾಂಗ್ರೆಸ್ ಮಹಾಧಿವೇಶನ ಕರಾಚಿಯಲ್ಲಿ ಸೇರಿತು. ಆದರೂ ನಿಜವಾದ ಸೂತ್ರಧಾರಿ ಮಹಾತ್ಮರೇ ಆಗಿದ್ದರು. ಆ ಅಧಿವೇಶನ ದೆಹಲಿ ಒಪ್ಪಂದವನ್ನು ಒಪ್ಪಿ ಲಂಡನಿನಲ್ಲಿ ಕೂಡಲಿದ್ದ ಎರಡನೆಯ ಚಕ್ರಗೋಷ್ಠಿಗೆ ಮಹಾತ್ಮರನ್ನು ತನ್ನ ಏಕಮಾತ್ರ ಪ್ರತಿನಿಧಿಯಾಗಿ ಕಳಿಸಲು ನಿರ್ಣಯಿಸಿತು.

ಚಕ್ರಗೋಷ್ಠಿಯಲ್ಲಿ ಭಾಗವಹಿಸಲು ಮಹಾತ್ಮರು ಲಂಡನಿಗೆ ತೆರಳಿದರು. ಆ ಗೋಷ್ಠಿಯಲ್ಲಿ ದೇಶದ ಬಯಕೆಯನ್ನು ತಿಳಿಸಿ ಸಾಧ್ಯವಾದರೆ ಬ್ರಿಟಿಷ್ ಸರಕಾರವನ್ನು ತಮ್ಮ ಇಷ್ಟದಂತೆ ನಡಸಲು ಅವರೊಬ್ಬರೇ ಸಾಕಾಗಿತ್ತು. ಬ್ರಿಟಿಷರ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದಿದ್ದ ಇನ್ನೂ ಹಲವರು ಆ ಸಭೆಯಲ್ಲಿ ಭಾಗವಹಿಸಿದ್ದರು. “ಆ ಜನಭರಿತವಾದ ಮಹಾಭವನದಲ್ಲಿ ಗಾಂಧೀಜಿ ಏಕಾಕಿಯಾಗಿ ಕುಳಿತಿದ್ದರು. ಅವರ ಉಡುಪು

ಇತರರಿಂದ ಅವರನ್ನು ಬೇರ್ಪಡಿಸಿತ್ತು. ಅಲ್ಲದೆ ಅವರ ಆಲೋಚನೆಗೂ ಆಡಂಬರದ ಉಡುಪುಟ್ಟು ಅವರ ಸುತ್ತಲೂ ನೆರೆದಿದ್ದವರ ಆಲೋಚನೆಗೂ ಅಜಗಜಾಂತರವಿತ್ತು. ಆ ಸಭೆಯಲ್ಲಿ ಅವರ ಸ್ಥಾನ ಬಹು ಕಷ್ಟದ್ದಾಗಿತ್ತು. ಅವರು ಇದನ್ನು ಹೇಗೆ ಸಹಿಸಿದರೆಂದು ಬಹು ದೂರದಲ್ಲಿದ್ದ ನಾವು ಆಶ್ಚರ್ಯಗೊಂಡೆವು. ಆದರೆ ಅವರು ಅದ್ಭುತವಾದ ತಾಳ್ಮೆಯಿಂದ ಏನಾದರೊಂದು ಒಪ್ಪಂದವನ್ನು ತರಲು ಪ್ರಯತ್ನದಮೇಲೆ ಪ್ರಯತ್ನ ನಡಸುತ್ತಿದ್ದರು.'' ಮುಸ್ಲಿಮ ಪ್ರತಿನಿಧಿಗಳು ಮತದ ಹೆಸರಿನಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಕುಂದು ತರುವ ಹಲವು ಬೇಡಿಕೆಗಳನ್ನು ಮುಂದಿಟ್ಟು ಗಾಂಧೀಜಿ ಮತ್ತು ಕಾಂಗ್ರೆಸ್ಸಿನೊಡನೆ ಸಹಕರಿಸಲಿಲ್ಲವಾದುದರಿಂದಲೂ ಇತರ ಸದಸ್ಯರು ಬ್ರಿಟಿಷ್ ಸರಕಾರದ ಒಳಸಂಚಿನ ಬಲೆಗೆ ಸಿಕ್ಕಿದುದರಿಂದಲೂ ಆ ಸಭೆಯಿಂದ ಯಾವ ಫಲವೂ ಲಭಿಸಲಿಲ್ಲ. ಬ್ರಿಟಿಷ್ ಸರಕಾರ ತನ್ನ ಚಾಣಿಕ್ಯ ತಂತ್ರದಿಂದ ವಿಜಯಿಯಾಯಿತು. ಈ ಗೋಷ್ಠಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂಬುದು ಭಾರತೀಯರಿಗೆ ಮೊದಲೇ ತಿಳಿದಿತ್ತು.

ಅಂತೂ ಮಹಾತ್ಮರು ಚಕ್ರಗೋಷ್ಠಿಯ ಪ್ರಯೋಜನ ದೃಷ್ಟಿಯಿಂದಲೇ ನೋಡಿದರೆ ಬರಿಗೈಯ್ಯಲ್ಲಿ ಹಿಂತಿರುಗಿದರು. ಆದರೆ ಅವರು ತಮ್ಮೊಡನೆ ತರುತ್ತಿದ್ದ ಭಾರತದ ಎಚ್ಚರಿಕೆಯ ಸಿಡಿಮದ್ದನ್ನು ಗೋಷ್ಠಿಯ ನಡವಳಿಕೆಯಿಂದ ಬೇಸತ್ತಿದ್ದ ಭಾರತ ಹೇಗೆ ಉಪಯೋಗಿಸಬಹುದೆಂಬುದನ್ನು ಊಹಿಸಿದ ಇಂಡಿಯಾ ಸರಕಾರ, ಮುನ್ನಡೆಯಬಹುದಾದ ಚಳುವಳಿಯನ್ನೆಲ್ಲಾ ಮೊದಲೇ ಮಟ್ಟಹಾಕಲು ನಿರ್ಧರಿಸಿತು. ಕೂಡಲೇ ವಿಶೇಷ ಶಾಸನ ಬಾಣಗಳ ಪ್ರಯೋಗ ನಡೆಯಿತು. ದಸ್ತಗಿರಿಗಳು ಮಿತಿಯಿಲ್ಲದೆ ನಡೆದವು.

ಮಹಾತ್ಮರು ಬೊಂಬಾಯಿಗೆ ಬಂದು ಹಡಗು ಇಳಿದರು. ಅಷ್ಟರಲ್ಲಾಗಲೆ ಸರಕಾರ ನಡಸಿದ್ದ ದಾಂದಲೆಯಿಂದ ಶಾಂತಿಯ ಕುರುಹು

ಗಳೆಲ್ಲಾ ಅಳಿಸಿಹೋಗಿದ್ದವು. ಆದರೂ ಅವರು ವೈಸ್‌ರಾಯರನ್ನು ನೋಡಿ ಮಾತಾಡಲು ಅವಕಾಶ ಕೇಳಿದರು. ಆಗ ವೈಸ್‌ರಾಯರಾಗಿದ್ದ ಲಾರ್ಡ್ ವಿಲಿಂಗ್ಡನ್ನರು ಆಗಿನ ದೇಶದ ಸ್ಥಿತಿಯನ್ನು ಚರ್ಚಿಸಲು ಅಲ್ಲವಾಗಿದ್ದರೆ ಮಾತ್ರ ಭೇಟಿ ಸಾಧ್ಯವೆಂದು ಉತ್ತರಕೊಟ್ಟರು. ಆ ಸಂದಿಗ್ಧ ಸಮಯದಲ್ಲಿ ಗಾಂಧೀಜಿಯಾಗಲಿ ಮತ್ತಾವ ಕಾಂಗ್ರೆಸ್ಸಿನವನಾಗಲಿ ದೇಶದಸ್ಥಿತಿಯನ್ನು ಚರ್ಚಿಸದೆ ಮತ್ತೇನನ್ನು ಚರ್ಚಿಸಿಯಾರು? ಸರಕಾರ ಕಾಂಗ್ರೆಸ್ಸನ್ನು ಧ್ವಂಸಮಾಡುತ್ತೇನೆಂದು ಹೊರಟಿತು. ಕಾಂಗ್ರೆಸ್ ಮತ್ತೆ ಶಾಸನಭಂಗ ಚಳವಳಿ ಹೂಡಿತು. ವೈಸರಾಯರು ಭೇಟಿಕೊಡಬೇಕೆಂದು ಮತ್ತೆ ಮಹಾತ್ಮರು ಅವರಿಗೆ ತಂತಿ ಕಳಿಸಿದರು. ಅದಕ್ಕೆ ಉತ್ತರವಾಗಿ ಅವರ ದಸ್ತಗಿರಿಯಾಯಿತು.

ಸರಕಾರದ ದಬ್ಬಾಳಿಕೆ ಎಡೆಬಿಡದೆ ನಡೆಯಿತು. ಸ್ತ್ರೀಪುರುಷಾದಿಯಾಗಿ ದೇಶಭಕ್ತರೆಲ್ಲ ಆ ದಬ್ಬಾಳಿಕೆಗೆ ಎದೆಗೊಟ್ಟು ಲಾಠಿಯ ಏಟುಗಳನ್ನೂ ವಿಚಿತ್ರಹಿಂಸೆಗಳನ್ನೂ ಶಾಂತಿಯಿಂದ ಸಹಿಸಿದರು. ಸಾವಿರಾರು ಜನರು ಗುಂಪುಗುಂಪಾಗಿ ಸೆರೆಮನೆ ಸೇರಿದರು. ಇದ್ದ ಸೆರೆಮನೆಗಳು ಸಾಲದೆ ಹೊಸ ಹೊಸವು ನಿರ್ಮಾಣವಾದವು. ಇಲ್ಲಿ ಹೀಗೆ ಹೋರಾಟ ನಡೆಯುತ್ತಿರಲು, ಅಲ್ಲಿ ಬ್ರಿಟಿಷ್ ಮುಖ್ಯಮಂತ್ರಿಗಳಾಗಿದ್ದ ಮೆಕ್ಡೊನಾಲ್ಡರು ಭಾರತದಲ್ಲಿ ಹರಿಜನರಿಗೆ ಪ್ರತ್ಯೇಕ ಚುನಾವಣೆ ಇರಬೇಕೆಂದು ತೀರ್ಮಾನಿಸಿದರು. ಇದಕ್ಕೆ ಅಸಮ್ಮತಿಯನ್ನು ಸೂಚಿಸಿ ಮಹಾತ್ಮರು ಮರಣಾಂತ ಉಪವಾಸ ಹಿಡಿದರು. ಅಸ್ಪೃಶ್ಯತೆಯ ನಿವಾರಣೆಗಾಗಿ ತಮ್ಮನ್ನೇ ಬಲಿಗೊಡಲು ಸಿದ್ಧರಾದರು. ಯರವಾಡ ಸೆರೆಮನೆಯಿಂದ ಸಿಡಿಲು ಬಡಿದಂತೆ ಈ ವರ್ತಮಾನ ಹೊರಟು ದೇಶವನ್ನು ದಿಗ್ಭ್ರಾಂತಿಯಲ್ಲಿ ಮುಳುಗಿಸಿತು. ಇದನ್ನು ಕೇಳಿ ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು. ಇನ್ನು ಮುಂದೆ ಗತಿ ಏನು, ಎಂಬ ಭಯ ಎಲ್ಲರಲ್ಲಿಯೂ ಮೂಡಿತು.

ಗಾಂಧೀಜಿ ಅಳಿದು ದೇಶವನ್ನು ನಡುನೀರಿನಲ್ಲಿ ಕೈಬಿಡುವರೇ, ಎಂಬ ಹೆದರಿಕೆ ಎಲ್ಲರನ್ನೂ ನಡುಗಿಸಿತು. ಮಹಾತ್ಮರಿಲ್ಲದ ಭವಿಷ್ಯ ಅಂಧಕಾರಮಯವಾಗಿ ಕಂಡಿತು. ಕೂಡಲೆ ಇಡೀ ನಾಡಿನ ಹಿಂದೂ ಸಮಾಜದಲ್ಲೆಲ್ಲಾ ಉತ್ಸಾಹದ ಐಂದ್ರಜಾಲಿಕ ಅಲೆ ವಿದ್ಯುತ್ಪ್ರವಾಹದಂತೆ ಹರಿದು ಅಸ್ಪೃಶ್ಯತೆಯ ನಾಶಕ್ಕೆ ಕಾರಣವಾಯಿತು. ಯರವಾಡ ಸೆರೆಮನೆಯಲ್ಲಿ ಕುಳಿತಿದ್ದ ಆ ಮರ್ಮಜ್ಞ ಜನರ ಎದೆಗಳನ್ನು ಕದಡಿ ದೇಶವನ್ನು ಚೈತನ್ಯಗೊಳಿಸುವ ಸಲುವಾಗಿ ಸೂತ್ರಗಳನ್ನು ಯಾವಾಗ ಹೇಗೆ ಎಳೆಯಬೇಕೆಂಬುದನ್ನು ಅಷ್ಟು ಚೆನ್ನಾಗಿ ಅರಿತಿದ್ದರು.

ಅಸ್ಪೃಶ್ಯರ ನಾಯಕರು ಪೂಣೆಗೆ ಬಂದು ಗಾಂಧೀಜಿಯೊಡನೆ ಚರ್ಚಿಸಿ ಚುನಾವಣೆಯ ವಿಷಯದಲ್ಲಿ ಒಂದು ಒಪ್ಪಂದಕ್ಕೆ ಬಂದರು. ಆ ಒಪ್ಪಂದಕ್ಕೆ ಅನುಸಾರವಾಗಿ ಬ್ರಿಟಿಷ್ ಮುಖ್ಯಮಂತ್ರಿಯವರು ತಾವು ಮೊದಲುಮಾಡಿದ್ದ ನಿರ್ಣಯವನ್ನು ಬದಲಾಯಿಸಿದರು. ಆ ಕೆಲಸ ಆದಷ್ಟು ಜಾಗ್ರತೆಯಾಗಿಯೇ ನಡೆಯಿತು. ಅದರಿಂದ ಮಹಾತ್ಮರ ಉಪವಾಸ ನಿಂತಿತು. ಕಷ್ಟ ಪರಿಹಾರವಾಗಿ ದೇಶ ಮತ್ತೆ ಉಸಿರು ಹೊಯ್ದುಕೊಂಡಿತು.

೧೯೩೩ ರ ಮೇ ತಿಂಗಳಲ್ಲಿ ಮತ್ತೆ ಗಾಂಧೀಜಿ ಇಪ್ಪತ್ತೊಂದು ದಿನಗಳ ಉಪವಾಸವನ್ನು ಪ್ರಾರಂಭಿಸಿದರು. ಕೂಡಲೇ ಸೆರೆಮನೆಯಿಂದ ಬಿಡುಗಡೆಯಾಯಿತು. ಮತ್ತೆ ದೇಶದಲ್ಲಿ ಭಯ ತಲೆದೋರಿತು. ೬೫ ವರ್ಷದ ಮುದುಕ ೨೧ ದಿವಸದ ಉಪವಾಸವನ್ನು ತಡೆಯಲು ಸಾಧ್ಯವೇ ಎಂಬ ಹೆದರಿಕೆ ಎಲ್ಲರನ್ನೂ ಕಾಡಲು ಪ್ರಾರಂಭಿಸಿತು. ಆದರೆ ಅವರ ಕಾರ್ಯದಲ್ಲಿದ್ದ ನಂಬಿಕೆ ಒಂದು ಆಸೆಯನ್ನು ತಂದಿತ್ತು. ಬಹು ಕಾತರತೆಯಿಂದ ಜನರು ದಿನಗಳನ್ನು ಎಣಿಸುತ್ತಿದ್ದರು. ಮಹಾತ್ಮರು ಸುರಕ್ಷಿತವಾಗಿ ವ್ರತವನ್ನು ಮುಗಿಸಿದರು. ದೇಶ ಆನಂದದಿಂದ ಓಲಾಡಿತು.

ಹರಿಜನ ಚಳವಳಿ ನಡೆಯುತ್ತಲೇ ಇತ್ತು. ಈ ಮಧ್ಯೆ ಗುಜರಾತಿನ ರೈತರಿಗೆ ಶಾಸನಭಂಗ ತತ್ವವನ್ನು ಬೋಧಿಸಿದರೆಂಬ ಆಪಾದನೆಯ ಮೇಲೆ ಸರಕಾರ ಮಹಾತ್ಮರನ್ನು ಬಂಧಿಸಿ ಮತ್ತೆ ಸೆರೆಮನೆಗೆ ಕಳಿಸಿತು. ಸೆರೆಮನೆಯಿಂದಲೇ ಹರಿಜನ ಸೇವಾಕಾರ್ಯವನ್ನು ನಡಸಿಕೊಂಡುಹೋಗಲು ಸರಕಾರ ಅವಕಾಶಕೊಡಲಿಲ್ಲವೆಂದು ಮಹಾತ್ಮರು ಮತ್ತೆ ಉಪವಾಸವ್ರತ ಹಿಡಿದರು. ೨೧ ದಿವಸದ ಉಪವಾಸ ಮುಗಿದು ಅವರಿನ್ನೂ ಸರಿಯಾದ ಶಕ್ತಿ ಗಳಿಸಿರಲಿಲ್ಲ. ಆದರೂ ಮತ್ತೆ ಉಪವಾಸ! ಆಯ್ಯೋ, ಮಹಾತ್ಮರು ಹೀಗೇಕೆ ದೇಶವನ್ನು ಮತ್ತೆ ಮತ್ತೆ ಭಯದಿಂದ ಮುಳುಗಿಸುತ್ತಿರುವರು! ಎಂದು ದೇಶ ನಿಟ್ಟುಸುರು ಬಿಟ್ಟಿತು. ಒಂದುವಾರ ಕಳೆಯಿತು. ಗಾಂಧೀಜಿ ವಿಪರೀತ ನಿಶ್ಶಕ್ತರಾದರು. ಸರಕಾರದವರು ಅವರನ್ನು ಬಂದಿಯಾಗಿಯೇ ಆಸ್ಪತ್ರೆಗೆ ಸಾಗಿಸಿದರು. ಗಾಂಧೀಜಿಯವರು ಬದುಕುವ ಆಸೆಯನ್ನು ಬಿಟ್ಟು ಸಾವಿಗೆ ಸಿದ್ಧರಾದರು. ತಮ್ಮಲ್ಲಿದ್ದ ಸಾಮಾನುಗಳನ್ನು ತಮ್ಮನ್ನು ಉಪಚರಿಸಿದ ದಾದಿಯರಿಗೆ ಬಹುಮಾನವಾಗಿ ಹಂಚಿದರು. ಆದರೆ ಸರಕಾರ ಹೆದರಿ ಅವರನ್ನು ಬಿಡುಗಡೆ ಮಾಡಿತು.

ಗಾಂಧೀಜಿ ಜೈಲಿನಲ್ಲಿರಬೇಕಾದ ಅವಧಿ ಇನ್ನೂ ಹತ್ತು ತಿಂಗಳಿತ್ತು. ಆ ಅವಧಿಯಲ್ಲಿ ಹರಿಜನರಿಗಾಗಿ ಮಾತ್ರ ಕೆಲಸಮಾಡಲು ಮನಸ್ಸುಮಾಡಿದರು. ಯರವಾಡ ಸೆರೆಮನೆಯೊಳಗಿಂದಲೂ ಹೊರಗೆ ಬಂದಮೇಲೂ ಅಸ್ಪೃಶ್ಯರ ನಿವಾರಣೆಗೆ ಮಾರ್ಗದರ್ಶಕರಾದರು. ಹರಿಜನರಿಗೆ ದೇವಾಲಯ ಪ್ರವೇಶಕ್ಕಿರುವ ತೊಂದರೆಯನ್ನು ತೆಗೆದುಹಾಕಲು ದೊಡ್ಡ ಚಳವಳಿ ನಡೆಯಿತು. ಅದಕ್ಕಾಗಿ ಒಂದು ನಿಧಿಯನ್ನು ಕೂಡಿಸುವುದಕ್ಕಾಗಿ ಭರತ ಖಂಡದಲ್ಲೆಲ್ಲಾ ಪ್ರವಾಸಮಾಡಿದರು. ಇದರಿಂದ ಎಲ್ಲೆಲ್ಲಿಯೂ ಅಸ್ಪೃಶ್ಯತೆಯಿಂದ ಹಿಂದೂಧರ್ಮಕ್ಕೆ ಅಂಟಿ ಬಂದಿದ್ದ ಕಳಂಕವನ್ನು ತೊಡೆಯಲು ಜನತೆಯಲ್ಲಿ ಒಂದು ಹೊಸಚೇತನ ಉದ್ಭವಿಸಿತು. ಮಹಾತ್ಮರು ಹೋದೆಡೆಯಲ್ಲೆಲ್ಲಾ ಜನರು ಉತ್ಸಾಹದಿಂದ ಕೂಡಿದರು. ನಿಧಿ ಶೇಖರ

ವಾಯಿತು. 'ಹರಿಜನ' ಎಂಬ ವಾರಪತ್ರಿಕೆ ಹೊರಟಿತು. ಗಾಂಧೀಜಿ ತಮ್ಮ ಎದೆಬಿಚ್ಚಿ ಎಲ್ಲಾ ವಿಷಯಗಳಲ್ಲೂ ಆ ಪತ್ರಿಕೆಯ ಮೂಲಕ ಹೇಳಿಕೊಂಡರು. ಅಲ್ಲಿಂದ ಮುಂದೆ ಅಸ್ಪೃಶ್ಯತಾನಿವಾರಣೆ ಭರದಿಂದ ಸಾಗಿತು.

೧೯೩೪ ನೆಯ ವರ್ಷದಿಂದ ಮಹಾತ್ಮಾಜಿ ಕಾಂಗ್ರೆಸ್ಸನ್ನು ತರುಣರಮೇಲೆ ಜಾರಿಸುವ ಆಸೆಯಿಂದ ಅದರಿಂದ ನಿವೃತ್ತರಾದರು. ಬೊಂಬಾಯಿಯಲ್ಲಿ ಆ ವರ್ಷ ನಡೆದ ಕಾಂಗ್ರೆಸ್ ಮಹಾಸಭೆಯಲ್ಲಿ ಅವರ ರಾಜಕೀಯ ಸಂನ್ಯಾಸ ಸ್ಪಷ್ಟಗೊಂಡಿತು. ಆದರೂ ವಾಸ್ತವವಾಗಿ ತಮ್ಮ ಪ್ರಭಾವನ್ನು ರಾಜಕೀಯ ರಂಗದಲ್ಲಿ ತಾವೇ ತಡೆಯಲಾರದವರಾದರು. ಕಾಂಗ್ರೆಸ್ ಮಹಾತ್ಮರನ್ನೇ ಆಶ್ರಯಿಸಿತು. ಕಾಂಗ್ರೆಸ್ಸನ್ನೂ ದೇಶವನ್ನೂ ತಿದ್ದುವ ಜವಾಬ್ದಾರಿಯನ್ನು ಅವರಿಂದ ಬೇರೆ ಮಾಡಲು ಸಾಧ್ಯವೇ ಇರಲಿಲ್ಲ. ಏನೋ ಒಂದು ನಿಶ್ಚಲ ನಂಬಿಕೆಯಿಂದ ತನ್ನ ಮೋಕ್ಷಕ್ಕೆ ಮಹಾತ್ಮರ ಕಡೆಗೆ ನೋಡದೆ ವಿಧಿಯಿರಲಿಲ್ಲ. ೧೯೩೯ ರಲ್ಲಿ ನಡೆದ ತ್ರಿಪುರಿ ಕಾಂಗ್ರೆಸ್ಸಿನ ಮಹಾಸಭೆಯಲ್ಲಿ ಆದ ಮುಂದಿನ ಕಾರ್ಯಕ್ರಮದ ಗೊತ್ತುಪಾಟು ಮಹಾತ್ಮರ ಇಚ್ಛೆಯಂತೆಯೇ ನಡೆಯಬೇಕು ಎಂದು ಆದ ನಿರ್ಣಯದಿಂದ ಇದು ಸ್ಪಷ್ಟವಾಗುತ್ತದೆ.

ಸ್ಥೂಲವಾಗಿ ರಾಜಕೀಯ ಸಂನ್ಯಾಸವನ್ನು ತೆಗೆದುಕೊಂಡಂದಿನಿಂದ ಮಹಾತ್ಮರ ಮುಖ್ಯ ಕಾರ್ಯಕ್ರಮ ಗ್ರಾಮ ಪುನರುಜ್ಜೀವನ ಆಯಿತು. "ನನ್ನ ಹೃದಯ ಹಳ್ಳಿಗಳಲ್ಲಿದೆ," "ಇಷ್ಟು ದಿನವೂ ನಾನು ಸ್ವತಃ ತೊಂದರೆಗಳಿಗ ಸಿಕ್ಕಿಕೊಳ್ಳದೆ ಮಾತಿನಲ್ಲಿ ಗ್ರಾಮಸೇವೆಯನ್ನು ಬೋಧಿಸುತ್ತಿದ್ದೆ.... ನನಗೀಗ ಸ್ಪಷ್ಟವಾಗಿ ಗೊತ್ತಾಗಿದೆ, ನನ್ನ ಸ್ಥಳ ಹಳ್ಳಿ ಎಂಬುದು" ಎಂದು ಹೇಳಿ ೧೯೩೬ನೆಯ ಏಪ್ರಿಲ್ ೩೦ರಲ್ಲಿ ವರ್ಧಾ ಬಳಿಯಿರುವ ಸೇವಾಗ್ರಾಂ ಹಳ್ಳಿಗೆ ಹೋಗಿ ನೆಲಸಿದರು. ಆಗ ಆ ಗ್ರಾಮವು ದೇಶದ ಎಲ್ಲಾ ಬಗೆಯ ಕೆಲಸಗಳಿಗೂ ಕೇಂದ್ರವಾಗಿ ಪರಿಣಮಿಸಿತು. ಅಖಿಲಭಾರತ ಗ್ರಾಮ

ಕೈಗಾರಿಕೆಯ ಕೇಂದ್ರ ವರ್ಧಾದಲ್ಲಿದೆ. ಮಹಾತ್ಮರು ಹಳ್ಳಿಯಲ್ಲಿ ನೆಲಸಿ ದಂದಿನಿಂದ ಗ್ರಾಮಪುನರುಜ್ಜೀವನ ಕಾರ್ಯ ಬಿರುಸಾಗಿ ನಡೆಯುತ್ತಿದೆ. ಜನರೂ ಸರಕಾರಗಳೂ ಆ ಕಾರ್ಯಕ್ಕೆ ಕೈ ಹಾಕಿವೆ. ಭಾರತಭೂಮಿಯ ೭,೦೦,೦೦೦ ಹಳ್ಳಿಗಳಲ್ಲಿ ನೆಲಸಿ ತಮ್ಮ ಹೀನಸ್ಥಿತಿಯನ್ನು ಹೇಳಿಕೊಳ್ಳ ಲಾರದ, ಅರೆಹೊಟ್ಟೆ ತಿನ್ನುವ, ಮೂಕಜನರ ರಕ್ಷಣೆಯ ಭಾರವನ್ನು ಹೊತ್ತಿರುವ ಕಾಂಗ್ರೆಸ್ಸು ೧೯೩೭ ನೆಯ ಇಸವಿಯಲ್ಲಿ ಪ್ರಾಂತೀಯ ಆಡಳಿತದಲ್ಲಿ ಒಳಹೊಕ್ಕು ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳಲ್ಲಿ ತನ್ನ ಮಂತ್ರಿಮಂಡಲವನ್ನು ಏರ್ಪಡಿಸಿತು. ಈ ಸರಕಾರಗಳು ಮಹಾತ್ಮರ ಸಲಹೆಯಂತೆ ಆಡಳಿತ ನಡಸುತ್ತ ಗ್ರಾಮಾಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡವು. ಕಾಂಗ್ರೆಸ್ ಮಹಾಸಭೆಯ ವಾರ್ಷಿಕಾಧಿವೇಶನಗಳು ಕೂಡ ಹಳ್ಳಿಗಾಡಿನಲ್ಲೇ ನಡೆದುವು.

೧೯೩೮ ರಲ್ಲಿ ಹರಿಪುರದಲ್ಲಿ ನಡೆದ ಮಹಾಸಭೆಯಲ್ಲಿ ಕಾಂಗ್ರೆಸ್ ದೇಶೀಯ ಸಂಸ್ಥಾನಗಳ ಪ್ರಜೆಗಳ ಹೋರಾಟದಲ್ಲಿ ತಾಟಸ್ಥ್ಯವನ್ನು ವಹಿಸ ಬೇಕು, ಎಂಬ ತೀರ್ಮಾನವಾಯಿತು. ಅಲ್ಲಿಂದೀಚೆಗೆ 'ಸ್ಟೇಟ್ ಕಾಂಗ್ರೆಸ್' 'ಪ್ರಜಾಪರಿಷತ್' ಮೊದಲಾದ ಸ್ವತಂತ್ರ ಸಂಸ್ಥೆಗಳು ಸಂಸ್ಥಾನ ಗಳಲ್ಲಿ ಉದ್ಭವಿಸಿ ಜವಾಬ್ದಾರಿ ಸರಕಾರಕ್ಕಾಗಿ ದೊಡ್ಡ ಚಳವಳಿ ಯೆದ್ದಿತು. ಸಂಸ್ಥಾನದ ಪ್ರಜೆಗಳು ಎಚ್ಚತ್ತರು. ತಮ್ಮ ಹಕ್ಕುಭಾದ್ಯತೆ ಗಳನ್ನು ಗೊತ್ತುಹಚ್ಚಿದರು. ನಿರಂಕುಶ ವರ್ತನೆಯಿಂದ ಆಳುತ್ತಿದ್ದ ತಮ್ಮ ತಮ್ಮ ಸರಕಾರಗಳೊಡನೆ ಪ್ರಜಾಸ್ವಾತಂತ್ರ್ಯಕ್ಕಾಗಿ ಭಾರತೀಯ ಕಾಂಗ್ರೆಸ್ ಹಾಕಿಕೊಟ್ಟ ಅಹಿಂಸಾಮಾರ್ಗದಲ್ಲಿಯೇ ಹೋರಾಟಕ್ಕೆ ನಿಂತರು. ಹಲವು ರಾಜರು ತಮ್ಮ ಸ್ವೇಚ್ಛಾವರ್ತನೆಗೆ ಆತಂಕ ಬಂದುದನ್ನು ಕಂಡು ಕೋಪಗೊಂಡು ಸರ್ವಸನ್ನಾಹಗಳಿಂದ ತಮ್ಮ ಪ್ರಜೆಗಳ ಮೇಲೆ ಧಾಳಿ ನಡಸಿದರು. ಆದರೆ ಎಂದಾದರೂ ತಮ್ಮ ಸೋಲು ಸಿದ್ಧ ನೆಂಬುದನ್ನು ಮನಗಂಡರು. ಆದರೂ ತಮ್ಮ ಪ್ರತಿಷ್ಠೆಯನ್ನು ಬಿಡಲು

ಒಪ್ಪಲಿಲ್ಲ. ಇದು ಕಾಥೇವಾಡದ ರಾಜಕೋಟೆ ಸಂಸ್ಥಾನದಲ್ಲಿ ವಿಷಮಾವಸ್ಥೆಗೆ ಇಟ್ಟುಕೊಂಡಿತು. ಅಲ್ಲಿನ ಪ್ರಜಾಪರಿಷತ್ತಿನ ಚಳವಳಿಯಿಂದ ಸರಕಾರ ತಮ್ಮ ಸೋಲನ್ನು ಒಪ್ಪಿಕೊಂಡಿತು. ಆ ಚಳವಳಿಯ ನಾಯಕರಾಗಿದ್ದ ಸರ್ದಾರ್ ಪಟೇಲರೊಡನೆ ಆ ಸಂಸ್ಥಾನದ ಠಾಕೂರ ಪ್ರಭುಗಳು ಸಂಧಾನ ನಡಸಿ ರಾಜಿಗೆ ಒಪ್ಪಿದರು. ಆದರೆ ಅವರು ಒಪ್ಪಂದದಂತೆ ನಡೆಯಲು ತಪ್ಪಿದರು. ಮತ್ತೆ ಚಳವಳಿ ಪ್ರಾರಂಭವಾಯಿತು. ತೀರ ಮುಪ್ಪಿನಲ್ಲಿಯೂ ಕಸ್ತೂರ ಬಾ ಗಾಂಧಿಯವರು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. ಮಹಾತ್ಮರು ರಾಜಕೋಟೆಯ ಪರಿಸ್ಥಿತಿಯನ್ನು ತಿಳಿಯಲು ಸೇವಾಗ್ರಾಂನಿಂದ ಅಲ್ಲಿಗೆ ಹೋದರು. ಸ್ಥಿತಿಗತಿಗಳನ್ನು ತಿಳಿದ ಮೇಲೆ ಠಾಕೂರರು ಒಂದು ಬಗೆಯ ಒಪ್ಪಂದಕ್ಕೆ ಬರಬೇಕೆಂದು ಕೇಳಿಕೊಂಡರು. ಠಾಕೂರರು ಅದಕ್ಕೆ ಒಪ್ಪಲಿಲ್ಲ. ಮಹಾತ್ಮರು ಅಲ್ಲಿನ ಪರಿಸ್ಥಿತಿ ಸರಿಹೋಗುವ ವರೆಗೆ ಅಥವಾ ಮರಣಾಂತ ಉಪವಾಸವ್ರತ ಹಿಡಿದರು. ಎಲ್ಲೆಲ್ಲಿಯೂ ಮತ್ತೆ ಗಾಂಧೀಜಿಯ ಜೀವನದ ವಿಷಯದಲ್ಲಿ ಹಾಹಾಕಾರವೆದ್ದಿತು. ಎಪ್ಪತ್ತು ವರ್ಷದ ಮುಪ್ಪಿನಲ್ಲಿ ಅದರಲ್ಲೂ ದೇಹಸ್ಥಿತಿ ಕೆಟ್ಟಿರುವಾಗ ಉಪವಾಸವೆಂದರೇನು, ಎಂಬ ದಿಗಿಲು ಎಲ್ಲೆಲ್ಲೂ ಆವರಿಸಿತು. ವೈಸರಾಯರು ರಾಜಕೋಟೆಯ ಪರಿಸ್ಥಿತಿಗೆ ಕೈಹಾಕಿ ಮಹಾತ್ಮರ ಉಪವಾಸ ನಿಲ್ಲುವಂತೆ ಮಾಡದಿದ್ದರೆ ತಾವು ರಾಜಿನಾಮೆ ಕೊಡುವುದಾಗಿ ಬ್ರಿಟಿಷ್ ಪ್ರಾಂತಗಳ ಮಂತ್ರಿಗಳು ತಿಳಿಸಿದರು. ದೇಶದ ದೃಷ್ಟಿಯೆಲ್ಲಾ ರಾಜಕೋಟೆಯ ಕಡೆ ತಿರುಗಿತು. ಅಂತೂ ವೈಸರಾಯರು ಪರಿಸ್ಥಿತಿಯಲ್ಲಿ ಪ್ರವೇಶಿಸಿದರು. ಆದರಿಂದ ಗಾಂಧೀಜಿಯವರ ಉಪವಾಸ ನಿಂತಿತು. ನಾಡು ನೆಮ್ಮದಿಗೊಂಡಿತು.

ಮಹಾತ್ಮರು ರಾಜಕೋಟೆಯ ವಿಷಯದಲ್ಲಿ ಪ್ರವೇಶಿಸಿದುದರಿಂದ ದೇಶೀಯ ಸಂಸ್ಥಾನಗಳಲ್ಲಿ ಒಂದುಬಗೆಯ ಆಶೆ ಹುಟ್ಟಿತು. ಅಲ್ಲದೆ ಅವರು ಸಂಸ್ಥಾನಗಳ ಚಳವಳಿಯಲ್ಲಿ ತಮ್ಮ ಬುದ್ಧಿವಾದವನ್ನು ಕೊಡಲು ಸದಾ

ಸಿದ್ಧರಿದ್ದರು. ಬ್ರಿಟಿಷ್ ಭಾರತದಲ್ಲಿ ಒಂದುಬಗೆಯ ಆಡಳಿತ. ದೇಶೀಯ ಸಂಸ್ಥಾನಗಳಲ್ಲಿ ಅದಕ್ಕೆ ತೀರ ಭಿನ್ನವಾದ ಆಡಳಿತ ಇರುವುದು ಸರಿಯಲ್ಲ ವೆಂದು ಅವರು ಹೇಳಿದರು. ಆದಷ್ಟು ಬೇಗನೆ ರಾಜರು ತಮ್ಮ ಜನರಿಗೆ ಜವಾಬ್ದಾರಿ ಸರಕಾರವನ್ನು ಕೊಡಬೇಕೆಂದು ಸೂಚಿಸಿ, ಅವರು ಹೇಳಿದುದು: "ಹಲವು ಸಂಸ್ಥಾನಗಳಲ್ಲಿ ಒಂದೇ ತಡವೆ ಎಚ್ಚರಿಕೆ ಮೂಡಿರುವುದು ಸ್ವಾತಂತ್ರ್ಯಸಂಗ್ರಾಮದಲ್ಲಿ ಅತಿ ಮುಖ್ಯವಾದುದು. ಆ ಜಾಗೃತಿ ಒಬ್ಬ ವ್ಯಕ್ತಿಯ ಅಥವಾ ಹಲವು ವ್ಯಕ್ತಿಗಳ ಅಥವಾ ಯಾವದೋ ಸಂಸ್ಥೆಯ ಪ್ರೋತ್ಸಾಹದಿಂದಾಯಿತೆನ್ನುವುದು ತಪ್ಪು. ಹರಿಪುರದ ಕಾಂಗ್ರೆಸ್ ಮಹಾಸಭೆಯಲ್ಲಾದ ಠರಾವು ಸಂಸ್ಥಾನದ ಜನರನ್ನು ಎಚ್ಚರಗೊಳಿಸಿ ಅವರ ಮೋಕ್ಷ ಅವರ ಶಕ್ತಿಯ ಮೇಲೆಯೇ ನಿಂತಿದೆ ಎಂಬುದನ್ನು ಅವರು ತಿಳಿದುಕೊಳ್ಳುವಂತೆ ಮಾಡಿರಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ಕಾಲ ಪ್ರಭಾವ ಈ ಎಚ್ಚರಿಕೆಯನ್ನು ತಂದಿದೆ. ರಾಜರೂ ಅವರ ಮಂತ್ರಿಗಳೂ ತಮ್ಮ ಪ್ರಜೆಗಳಲ್ಲಾಗಿರುವ ಈ ಜಾಗೃತಿಯನ್ನು ಅರಿತು ನ್ಯಾಯವಾದ ಆಸೆಗಳನ್ನು ಸಲ್ಲಿಸುವರೆಂದು ನಂಬಬೇಕಾಗಿದೆ. ಸಂಸ್ಥಾನಗಳೆಲ್ಲ ಮಾಯ ವಾಗುವುದು ಅಥವಾ ರಾಜರು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ವಹಿಸಿ ತಾವು ಅವರ ಧರ್ಮದರ್ಶಿಗಳಾಗಿ ಅವರ ಶ್ರಮಕ್ಕೆ ತಕ್ಕ ಫಲ ದೊರೆಯು ವಂತೆ ಮಾಡುವುದು, ಇವೆರಡು ಬಿಟ್ಟು ಬೇರೆ ದಾರಿಯೇ ಇಲ್ಲ."

ಹೀಗೆ ಮಹಾತ್ಮರು ರಾಜರಿಗೂ ಪ್ರಜೆಗಳಿಗೂ ಒಂದು ರಾಜನೀತಿ ಯನ್ನು ಹೇಳಿಕೊಟ್ಟರು. ಪ್ರಜೆಗಳೇನೋ ಅದನ್ನು ಅನುಸರಿಸಿದರು. ಎಲ್ಲ ವಿಷಯಗಳಲ್ಲೂ ಜನರು ಎಚ್ಚತ್ತರು. ಜವಾಬ್ದಾರಿ ಸರಕಾರ ಪಡೆಯಲು ಹೋರಾಟ ಪ್ರಾರಂಭಿಸಿದರು. ಆದರೆ ಬ್ರಿಟಿಷರ ಕೈವಾಡಕ್ಕೆ ಸಿಕ್ಕಿ ಅವರ ರೀತಿನೀತಿಯನ್ನೇ ಅನುಸರಿಸಿಕೊಂಡು ಬಂದಿದ್ದ ರಾಜರು ತಮ್ಮ ಅಸ್ತಿತ್ವಕ್ಕೇ ಆಧಾರವಾದ ಪ್ರಜೆಗಳನ್ನು ನಿರ್ಲಕ್ಷಿಸಿದರು. ಕೊನೆ ಯವರಿಗೂ ಬ್ರಿಟಿಷರು ತಮ್ಮನ್ನು ರಕ್ಷಿಸುವರೆಂಬ ತಪ್ಪು ಅಭಿಪ್ರಾಯ

ವನ್ನು ಹೊಂದಿ ಜನರನ್ನು ಸದೆಬಡಿಯ ತೊಡಗಿದರು. ಆದರೆ ರಾಜರ ಈ ಕಠೋರತೆಯೆ ಪ್ರಜೆಗಳಿಗೆ ಶಕ್ತಿದಾಯಕವಾಯಿತು. ಬ್ರಿಟಿಷರು ಭಾರತ ವನ್ನು ಬಿಟ್ಟುಹೋಗುವವರಿಗೂ ರಾಜರ ವಕ್ರತೆ ಹೋಗಲಿಲ್ಲ. ಈಗ ಭಾರತಸ್ವಾತಂತ್ರವಾದಾಗ ರಾಜರಿಗೆ ಬುದ್ಧಿಬಂತು. ಪ್ರಜೆಗಳ ಪ್ರಯತ್ನ ಫಲಿಸಿತು. ಎಲ್ಲಾ ಸಂಸ್ಥಾನಗಳಲ್ಲೂ ಪ್ರಜಾಸರ್ಕಾರ ಸ್ಥಾಪನೆಯಾಯಿತು.

೧೯೩೯ ರಲ್ಲಿ ಪ್ರಪಂಚದ ಎರಡನೆಯ ಮಹಾಯುದ್ಧ ಪ್ರಾರಂಭ ವಾಯಿತು. ಬ್ರಿಟಿಷರದು ಈ ಯುದ್ಧದಲ್ಲಿ ಮುಖ್ಯಪಾತ್ರ. ಅವರು ಭಾರತದ ಜನಾಭಿಪ್ರಾಯವನ್ನು ಕೇಳದೆಯೇ ಭಾರತವನ್ನು ಯುದ್ಧದಲ್ಲಿ ಭಾಗಿಯನ್ನಾಗಿ ಮಾಡಿದರು. ಇಲ್ಲಿನ ಸರ್ವಸ್ವವನ್ನೂ ಜನರನ್ನೂ ಯುದ್ಧಕ್ಕೆ ಉಪಯೋಗಿಸಿ ಇಲ್ಲಿ ಕ್ಷಾಮಡಾಮರಗಳನ್ನೂ ತಂದರು. ಗಾಂಧೀಜಿ ಎಲ್ಲ ಯುದ್ಧದ ವಿರೋಧಿ. ಪ್ರಪಂಚದಲ್ಲಿ ಎಲ್ಲೇ ಆಗಲಿ ಮನುಷ್ಯ ಮನುಷ್ಯನನ್ನು ಕೊಲ್ಲುವವರೆಗೆ ಜನರು ಸಂಸ್ಕೃತರು ಅನ್ನಿಸಿ ಕೊಳ್ಳಲಾಗುವುದಿಲ್ಲ. ವೈರದಿಂದ ವೈರ ಹುಟ್ಟುತ್ತದೆ. ಪ್ರೇಮ ಪ್ರೇಮ ವನ್ನು ತರುತ್ತದೆ. ತನ್ನ ಎದುರಾಳಿಯನ್ನು ಪ್ರೇಮದಿಂದ ಗೆಲ್ಲುವುದೇ ಸತ್ಯವಾದ ದಾರಿ. ಇದು ಗಾಂಧೀ ವಾದ. ಪ್ರಪಂಚ ಆ ದಾರಿ ಹಿಡಿಯುವಂತೆ ಅವರು ದುಡಿದರು.

ಈ ಯುದ್ಧವನ್ನು ಪ್ರಾರಂಭಿಸದ ಹಿಟ್ಲರನಿಗೂ ಕೂಡ ಯುದ್ಧ ನಿಲ್ಲಿಸುವಂತೆ ಬರೆದರು. ಯುದ್ಧ ವಿರೋಧವಾಗಿ ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿದರು. ತಮ್ಮ 'ಹರಿಜನ' ಪತ್ರಿಕೆಯ ಮೂಲಕ ಯುದ್ಧ ವಿರೋಧವಾಗಿ ಬರೆದರು. ಯುದ್ಧ ಶಾಂತಿಯನ್ನು ತರುವುದಿಲ್ಲ, ಇನ್ನೊಂದು ಮಹಾಯುದ್ಧಕ್ಕೆ ದಾರಿ ಹಾಕುತ್ತದೆ ಎಂದರು. ಹೀಗೆಯೇ ನಡೆದರೆ ಸಂಸ್ಕೃತಿ ಅಳಿಯುತ್ತದೆ, ಮಾನವತ್ವವೇ ಹಾಳಾಗುತ್ತದೆ, ಎಂದು ಸಾರಿದರು. ಆದರೆ ಯುದ್ಧದ ಕಿಚ್ಚು ಹೊತ್ತ, ರಣ ದುಂದುಭಿಗೆ ಕಿವಿಗೊಟ್ಟ ವಿವಿಧ ರಾಷ್ಟ್ರಗಳಿಗೆ ಇವರ ವಾಣಿ ರುಚಿಸಲಿಲ್ಲ.

೧೯೪೨ ರ ಆಗಸ್ಟು ೮ ರಂದು ಅಖಿಲಭಾರತ ಕಾಂಗ್ರೆಸ್ ಸಮಿತಿ ಬೊಂಬಾಯಿಯಲ್ಲಿ ಸೇರಿತು. ಭಾರತವಾಣಿಯನ್ನು ನಿರ್ಲಕ್ಷಿಸಿ ಅಧೋಗತಿಗೆ ತಳ್ಳುತ್ತಿದ್ದ ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸಲು ಕೊನೆಯ ಶಾಂತಿಸಂಗ್ರಾಮ ಹೂಡಲು ಆ ಸಮಿತಿ ನಿರ್ಧರಿಸಿತು. ಎಂದಿನಂತೆ ಆ ಸಂಗ್ರಾಮದ ನಾಯಕತ್ವ ಗಾಂಧೀಜಿಯ ಪಾಲಿಗೇ ಬಂತು. ಅವರು ಆ ಮಹಾಸಭೆಯಲ್ಲಿ ಅದ್ಭುತ ಭಾಷಣಮಾಡಿ, "ಭಾರತವನ್ನು ಬಿಟ್ಟುಹೋಗಿ" ಎಂದು ಬ್ರಿಟಿಷರಿಗೆ ಹೇಳಿದರು. ಅಂದಿನ ರಾತ್ರಿಯೇ ಅವರ ಮತ್ತು ಕಾಂಗ್ರೆಸ್ಸಿನ ಇತರ ನಾಯಕರ ದಸ್ತಗಿರಿಯಾಯಿತು. ಮಾರನೆಯ ದಿನ ಈ ಸುದ್ದಿ ದೇಶದ ಮೂಲೆಮೂಲೆಗೆ ಹರಡಿತು. ಜನ ಇದನ್ನು ಸಹಿಸಲಾರದೆ ಹೋದರು. ನಾಯಕರೆಲ್ಲ ಸೆರೆಮನೆ ಸೇರಿದ ಮೇಲೆ ತಮಗೆ ತಾವೇ ನಾಯಕರಾದರು. ದೇಶದ ಬಿಡುಗಡೆಗೆಂದು ತಮಗೆ ತೋಚಿದಂತೆ ಚಳವಳಿಯನ್ನು ಪ್ರಾರಂಭಿಸಿದರು. ಎಲ್ಲೆಲ್ಲೂ ಹಾಹಾಕಾರವೆದ್ದಿತು. ತಮ್ಮ ರೋಷದಲ್ಲಿ ಜನರು ಅಹಿಂಸಾತತ್ವವನ್ನು ಮರೆತರು. ಇದನ್ನು ನೋಡಿ ಆಗಿನ ಸರಕಾರದ ತಲೆಕೆಟ್ಟಿತು. ಅದು ತನ್ನ ಸರ್ವಶಕ್ತಿಯನ್ನು ಹರಿಯಬಿಟ್ಟಿತು. ಪೋಲೀಸರೂ, ಸಿಪಾಯಿಗಳೂ ಜನರ ಮೇಲೆ ಸಿಕ್ಕಾಬಟ್ಟೆ ಗುಂಡುಹಾರಿಸಿ ತಮ್ಮ ಕೈತೀಟೆ ತೀರಿಸಿಕೊಂಡರು. ದೇಶ ಇನ್ನಿಲ್ಲದ ಕಷ್ಟಕ್ಕೆ ಗುರಿಯಾಯಿತು.

ಹೊರಗಡೆದೇಶದಲ್ಲಿ ಈ ಅವಾಂತರ ನಡೆಯುತ್ತಿತ್ತು. ಆದರೆ ಜೈಲಿನಲ್ಲಿ ಗಾಂಧೀಜಿ ಸುಮ್ಮನೆ ಕೂಡಲಿಲ್ಲ. ತಾವು ವೈಸರಾಯರಿಗೆ ಪತ್ರ ಬರೆದು ಅವರ ತಪ್ಪನ್ನು ತೋರಿಸಿಕೊಡಲು ಪ್ರಯತ್ನ ಪಡುತ್ತಿದ್ದರು. ಇಷ್ಟರಲ್ಲಿ ಅವರ ಜೊತೆಯಲ್ಲೇ ಬಂದಿಯಾಗಿದ್ದ ಅವರ ಪಟ್ಟಶಿಷ್ಯ ಮಹದೇವದೇಶಾಯಿ ಹೃದಯಸ್ತಂಭನದಿಂದ ಇಹಲೋಕ ತ್ಯಜಿಸಿದರು. ಆಮೇಲೆ ಕೊಂಚ ದಿನದ ಮೇಲೆ, ಪ್ರಿಯಪತ್ನಿ ಕಸ್ತೂರಬಾ ಸ್ವರ್ಗಸ್ಥರಾದರು. ಇಷ್ಟು ದೊಡ್ಡ ನಷ್ಟವಾದರೂ ಅನಾಸಕ್ತರಾದ ಗಾಂಧೀಜಿ ತಮ್ಮ

ಕರ್ಮಕ್ಕೆ. ಕಿಂಚಿತ್ತೂ ಕುಂದುತರಲಿಲ್ಲ. ದೇಶ ಕಲ್ಯಾಣಕ್ಕಾಗಿ, ಎದು ರಾಳಿಯ ಹೃದಯಪರಿವರ್ತನೆಗಾಗಿ ಜೈಲಿನಲ್ಲೇ ೨೧ ದಿನ ಮಹೋಪ ವಾಸವನ್ನು ಕೈಗೊಂಡರು. ಈ ವಾರ್ತೆ ಕೇಳಿ ದೇಶ ತಲ್ಲಣಿಸಿತು. ಈಸಾರಿ ಮಹಾತ್ಮರು ಉಪವಾಸದಿಂದ ಬದುಕುವುದಿಲ್ಲವೆಂದು ಕಳವಳಿ ಸಿತು. ಆದರೆ ಬ್ರಿಟಿಷರ ಹೃದಯವೇನೂ ಅದರಿಂದ ಪರಿವರ್ತನೆಯಾಗ ಲಿಲ್ಲ. ಒಂದೊಂದು ದಿನವನ್ನೂ ದೇಶ ಉಸಿರುಕಟ್ಟಿ ಕಳೆಯುತಿತ್ತು. ಇಪ್ಪತ್ತೊಂದು ದಿನ ಕಳೆಯಿತು. ದೇಶಕ್ಕೆ ನೆಮ್ಮದಿ ದೊರೆಯಿತು.

ಕೊಂಚ ದಿನದಮೇಲೆ ಸರಕಾರ ಗಾಂಧೀಜಿಯನ್ನು ಬಿಡುಗಡೆ ಮಾಡಿತು. ಅನಂತರ ಕೊಂಚಕಾಲದಲ್ಲಿ ಕಾಂಗ್ರೆಸ್ಸು ನಾಯಕರೆಲ್ಲ ಬಿಡು ಗಡೆಯಾದರು. ಸರಿ, ಸರಕಾರ ಸಂಧಾನದ ಮೇಲೆ ಸಂಧಾನ ನಡಸಿತು. ಕಾಂಗ್ರೆಸ್ಸು ಮುಸ್ಲಿಂಲೀಗಿನೊಡನೆ ಕೂಡಿ ಅಧಿಕಾರ ವಹಿಸುವಂತಾಯಿತು. ಆದರೂ ದೇಶದ ಅನಿಷ್ಟ ಕಳೆದಿರಲಿಲ್ಲ. ಕೊನೆಗೆ ದೇಶಕ್ಕೆ ಪೂರ್ಣ ಸ್ವರಾಜ್ಯಬಂದದ್ದು ಭಾರತ ಇಬ್ಭಾಗವಾಗಿ ಪಾಕಿಸ್ತಾನ ಬೇರೆಯಾದಾಗ.

ಸ್ವರಾಜ್ಯವೇನೊ ಬಂತು. ಮಹಾತ್ಮಾ ಗಾಂಧೀಜಿ ಮೂವತ್ತು ವರ್ಷದಿಂದಲೂ ಅಹಿಂಸಾಮಾರ್ಗದಲ್ಲಿ ದೇಶವನ್ನು ನಡಸಿದುದರ ಫಲ ವಾಗಿ ರಕ್ತಚೆಲ್ಲದೆ ಸ್ವರಾಜ್ಯಸಾಧನೆಯಾಯಿತು. ಪರಕೀಯರ ನೊಗದ ಭಾರ ಹೆಗಲಿಂದ ಕಳಚಿತು. ಆದರೆ ದೇಶದ ದುರದೃಷ್ಟ! ದೂರದೃಷ್ಟಿ ಯಿಲ್ಲದ ಜನ ಅಷ್ಟುದಿನವೂ ಚೆಲ್ಲಿದ್ದ ಕೋಮುವಾರು ವಿಷಬೀಜ ಬೆಳೆದು ಫಲಕೊಟ್ಟಿತು. ಕಲ್ಕತ್ತಾದಲ್ಲಿ ಪಾಕಿಸ್ತಾನ್ ದಿನವಾಚರಿಸಿದಾಗ ಪ್ರಾರಂಭ ವಾದ ಕೋಮುವಾರು ಗಲಭೆ ಉಲ್ಬಣಾವಸ್ಥೆಗೊಂಡು, ಹಿಂದೂ ಮುಸ ಲ್ಮಾನರು ಒಬ್ಬರ ಕೊರಳಿಗೆ ಒಬ್ಬರು ಕತ್ತಿ ಇಟ್ಟರು. ಬಂಗಾಳದ ನವಖಲಿ ಯಲ್ಲಿ ಮುಸಲ್ಮಾನರು ಹುಚ್ಚೆದ್ದು ಹಿಂದೂ ಜನರನ್ನು ಸದೆಬಡಿದರು, ಸುಟ್ಟರು, ಇರಿದರು, ಮಾನಭಂಗಮಾಡಿದರು. ಇದು ಅಲ್ಲಿ ಕಷ್ಟಕ್ಕೀಡಾದ ಬೀಹಾರಿಗಳನ್ನು ಕೆರಳಿಸಿತು. ಬೀಹಾರಿನಲ್ಲಿ ಅವರು ಮುಸಲ್ಮಾನರ ಹತ್ಯಕಾಂಡ ನಡಸಿದರು.

ಹೀಗೆ ಭಾರತಭೂಮಿ ರಕ್ತದಿಂದ ತೊಯ್ದಿದ್ದಾಗ ಆ ಬದಿಯನ್ನು ತುಳಿದು ಕಣ್ಣೀರಿಡುತ್ತ, ಅಷ್ಟು ದಿನವೂ ಅಹಿಂಸಾಮಾರ್ಗದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಎದುರಿಸಿ ಸೋಲಿಸಿದ್ದ, ದೇಶದ ನಾಯಕರು ಸ್ವರಾಜ್ಯದ ಗುಡಿಗೆ ೧೯೪೭ ನೆಯ ಆಕ್ಟೋಬರು ೧೫ ರ ನಡುರಾತ್ರಿಯಲ್ಲಿ ಪ್ರವೇಶಿಸಿದರು. ಅಂತೂ ಭಾರತ ಮಾತೆ ತನ್ನ ಮಕ್ಕಳ ಅಂತಃಕಲಹ ರಕ್ತದ ಕಲೆಯ ಕಳಂಕವಿದ್ದರೂ ಅಂದು ಭಾರತ ಸಾಮ್ರಾಜ್ಞಿಯಾಗಿ ಮೆರೆದಳು.

ಈ ಸ್ವಾತಂತ್ರ್ಯಸಂಭ್ರಮ ದೆಹಲಿಯಲ್ಲಿ ವೈಭವದಿಂದ ನಡೆಯುತ್ತಿದ್ದಾಗ, ದೇಶದ ಜನರೆಲ್ಲ ಸಂತೋಷದಿಂದ ಮೆರೆಯುತ್ತಿದ್ದಾಗ ಬಾಪೂಜೀ ನವಖಲಿಯಲ್ಲಿ ನೊಂದವರನ್ನು ಸಂತೈಸುತ್ತ ದುಃಖಪಡುವವರ ಕಣ್ಣೀರೊರಸುತ್ತ ತನ್ನ ಆತ್ಮಬಲದಿಂದ ದುರಾಚಾರಿಗಳ ಮನಸ್ಸು ಒಲಿಸಿಕೊಳ್ಳುತ್ತ ಹಳ್ಳಿಯಿಂದಹಳ್ಳಿಗೆ ಪಾದಚಾರಿಯಾಗಿ ಏಕಾಕಿಯಾಗಿ ಯಾತ್ರೆ ಹೊರಟಿದ್ದರು. ಈ ದೃಶ್ಯ ಶ್ರೀರಾಮಚಂದ್ರ ಲೋಕಕಲ್ಯಾಣಕ್ಕಾಗಿ, ಶಿಷ್ಟರಕ್ಷಣೆಗಾಗಿ ಈರೇಳು ವರ್ಷ ವನವಾಸಕ್ಕೆ ಹೊರಟ ದೃಶ್ಯಕ್ಕೇನೂ ಕಡಿಮೆಯಿಲ್ಲ. ರಾಮಚಂದ್ರನಿಗಾದರೋ ಧರ್ಮಪತ್ನಿ, ಸಾಧ್ವೀ, ಸೀತೆ ಸಹವಾಸಿಯಾಗಿದ್ದಳು. ಅಣ್ಣನ ಆಜ್ಞಾನುಸಾರ ನಡೆದುಕೊಳ್ಳಲು ತಮ್ಮ ಲಕ್ಷ್ಮಣನಿದ್ದ. ಈ ಎರಡನ್ನೂ ಬಾಪೂಜಿ ಆಗಾಖಾನ್ ಅರಮನೆಯ ಸೆರೆಮನೆಯಲ್ಲೇ ಕಳೆದುಕೊಂಡಿದ್ದರು.

ಬಾಪುಜೀಯ ನವಖಲಿಯಾತ್ರೆಯಿಂದ ಕೋಮುವಾರು ವೈಷಮ್ಯ ನಿಂತೀತು ಎನ್ನುತಿದ್ದಂತೆಯೇ ಪಂಜಾಬಿನಲ್ಲಿ ಆ ಜ್ವಾಲೆಯೆದ್ದಿತು. ಅಲ್ಲಿ ಪ್ರಪಂಚದಲ್ಲೇ ಎಲ್ಲೂ ನಡೆಯದ ಅಂತಃಕಲಹ ನಡೆಯಿತು. ಕುಡಿದ ಮತ್ತಿನಲ್ಲಿ ಯಾದವರು ತಮ್ಮತಮ್ಮಲ್ಲೇ ಹೊಡದಾಡಿ ಅಳಿದಂತೆ ದ್ವೇಷದ ಮತ್ತಿನಲ್ಲಿ ಪಂಜಾಬಿನ ಮುಸಲ್ಮಾನ ಸಿಕ್ಕ ಹಿಂದೂ ಸೋದರರು ತಮ್ಮತಮ್ಮಲ್ಲೇ ಅಂತಃಕಲಹ ನಡಸಿದರು. ಇದರಲ್ಲಿ ನೊಂದವರ, ಅಳಿದವರ ಸಂಖ್ಯೆ ಅಷ್ಟಿಷ್ಟಲ್ಲ. ಪಾಕೀಸ್ಥಾನದಿಂದ ಭಾರತಕ್ಕೆ ಭಾರತದಿಂದ ಪಾಕೀ

ಸ್ಥಾನಕ್ಕೆ ಪ್ರಪಂಚದ ಇತಿಹಾಸದಲ್ಲೇ ನಡೆಯದ ವಲಸೆ ನಡೆಯಿತು. ಇದು ಗಾಂಧೀಜಿಗೆ ತುಂಬ ವ್ಯಥೆಯನ್ನುಂಟುಮಾಡಿತು. ಪಾಕಿಸ್ತಾನದಲ್ಲಿ ನೊಂದವರನ್ನು ಸಂತೈಸಲು ಹೊರಡಬೇಕೆಂದಿದ್ದಷ್ಟರಲ್ಲಿ ಮತ್ತೆ ಕಲ್ಕತ್ತದಲ್ಲಿ ಗಲಭೆ ಎದ್ದಿತು. ಅದನ್ನು ನಿಲ್ಲಿಸಲು ಅವರ ಕೊನೆಯ ಅಸ್ತ್ರವಾದ ಉಪವಾಸವನ್ನು ಕೈಕೊಂಡರು. ಆ ಪವಿತ್ರ ಉದ್ದೇಶದ ಫಲವಾಗಿ ಅಲ್ಲಿನ ಜನರಿಗೆ ಬುದ್ಧಿ ಬಂದು ಸೌಹಾರ್ದ ಮೂಡಿತು. ಆದರೆ ದೆಹಲಿಯಲ್ಲಿ ಗಲಭೆ ಗಾರಂಭವಾಯಿತು. ಅಲ್ಲಿಗೆ ಬಂದು ಅಲ್ಲಿನ ಸ್ಥಿತಿಯನ್ನು ಹತೋಟಿಗೆ ತಂದರು. ಸರ್ವಶಕ್ತಿಯುತ ಸರಕಾರ ಹತೋಟಿಗೆ ತರಲಾರದ ಸ್ಥಿತಿಯನ್ನು ಈ ಒಂದೇ ವ್ಯಕ್ತಿ ತನ್ನ ಆತ್ಮಬಲದಿಂದ ಸುವ್ಯವಸ್ಥೆಗೊಳಿಸಿದರು. ಕ್ರೂರಿಗಳನ್ನೂ ಸಾಧುಗಳನ್ನಾಗಿ ಮಾಡಿದರು. ವೈರಿವೈರಿಗಳಲ್ಲಿ ಸೌಹಾರ್ದವನ್ನು ತಂದರು.

ಅಮೃತಮಂಥನಕಾಲದಲ್ಲಿ ಹುಟ್ಟಿದ ವಿಷವನ್ನೆಲ್ಲ ನುಂಗಿದ ನಂಜುಂಡನಂತೆ ದೇಶದಲ್ಲಿ ಉದ್ಭವಿಸಿದ ಎಲ್ಲ ವಿಷವನ್ನು ಉಂಡು ದೇಶವನ್ನು ಪವಿತ್ರಗೊಳಿಸಿದರು. ಆದರೆ ಕೋಮುವಾರುದ್ವೇಷಜ್ವಾಲೆ ಪೂರ್ಣ ತಣ್ಣಗಾಗಲಿಲ್ಲ. ದ್ವೇಷದ ಮತ್ತಿನಲ್ಲಿ ಕೆಲವರು, ಹಿಂದೂಧರ್ಮವನ್ನು ಪವಿತ್ರಗೊಳಿಸಿದ, ಉಳಿಸಿದ, ನಿಜವಾದ ಹಿಂದೂವಾದ ಗಾಂಧೀಜಿ ವೈರಿಯನ್ನೂ ಪ್ರೀತಿಸಿರಿ, ಎಂದು ಬೋಧಿಸಿದ್ದರಿಂದ ಅವರು ಮುಸಲ್ಮಾನ ಪಕ್ಷಪಾತಿ ಎಂದು ಉನ್ಮತ್ತರಾದರು. ಜನವರಿ ೩೦ ನೆಯ ದಿನ ಶುಕ್ರವಾರ ಸಂಜೆ ೫ ಗಂಟೆ ಸಮಯದಲ್ಲಿ ಪ್ರಾರ್ಥನಾಸಭೆಯಲ್ಲಿ ಯಾವನೋ ತಲೆತಿರುಕನೊಬ್ಬನು ಗುಂಡಿಕ್ಕಿ ಗಾಂಧೀಜಿಯ ದೇಹವನ್ನು ಕೊಂದನು. 'ಹೇ ರಾಮ್ ಹೇ ರಾಮ್' ಎನ್ನುತ್ತ ಮಹಾತ್ಮಾ ಗಾಂಧೀಜಿ ಅಮರರಾದರು.

ಭಾರತ ಸ್ವಾತಂತ್ರ್ಯವಾದರೂ ನಾನಾ ಸಮಸ್ಯೆಗಳು ಉದ್ಭವವಾಗಿ ಅವಾಂತರ ಎದ್ದಿದೆ. ಈ ವಿಷಮಪರಿಸ್ಥಿತಿಯಲ್ಲಿ ಗಾಂಧೀಜಿಯ ಮಾರ್ಗ



ನವಖಲಿ ಯಾತ್ರೆ



ದರ್ಶನ ಅನಿವಾರ್ಯವಾಗಿತ್ತು. ಎಷ್ಟೋ ಸಮಸ್ಯೆಗಳನ್ನು ಅವರೊಬ್ಬರೇ ಪರಿಹಾರಮಾಡುತ್ತಿದ್ದರು. ಅವರ ಆತ್ಮಶಕ್ತಿಯ ಬೆಳಕು ಎಂತಹ ಅಂಧಕಾರದಲ್ಲಾದರೂ ನಮ್ಮನ್ನು ಸುಗಮವಾಗಿ ನಡಸುತ್ತಿತ್ತು.

ಗಾಂಧೀಜಿ ಉದ್ಭವಿಸಿದರು. ದಿವ್ಯಜೀವನ ನಡೆಸಿದರು. ವಿಶ್ವದಲ್ಲಿ ಗುರುಸ್ಥಾನಕ್ಕೇರಿದರು. ನಮ್ಮನ್ನಂತು ತಂದೆಯಂತೆ, ನಾಯಕನಂತೆ, ಗುರುವಿನಂತೆ ನಡಸಿದರು, ಬುದ್ಧಿಕಲಿಸಿದರು, ಕಾಪಾಡಿದರು.

ಗಾಂಧೀಜಿಯ ವಿಯೋಗ ವಿಶ್ವಕ್ಕೆ ಒಂದು ಆಘಾತವಾಗಿದೆ. ಭಾರತಕ್ಕಂತು ಕಂಗಾಲುಗೆಟ್ಟು ದಿಕ್ಕುತೋಚದಂತಾಗಿದೆ. ನಮಗೆ ಭವಿಷ್ಯ ಅಂಧಕಾರಮಯವಾಗಿ ಕಾಣುತ್ತಿದೆ. ಆದರೂ ಆ ಮಹಾಪುರುಷ ತೋರಿಸಿಕೊಟ್ಟ ದಾರಿಯಲ್ಲಿ ಶ್ರದ್ಧಾಸಕ್ತಿಯಿಂದ ನಡೆದರೆ ಬೆಳಕು ಕಾಣಲು ಸಾಧ್ಯ.

ಗಾಂಧೀಜಿ ಬದುಕಿದ್ದುದು ರಾಮರಾಜ್ಯ ಸ್ಥಾಪನೆಯ ಸಲುವಾಗಿ. ರಾಮರಾಜ್ಯ: ಅಲ್ಲಿ ಜಾತಿ, ಕೋಮು, ವರ್ಣಭೇದಭಾವವಿಲ್ಲ; ಮೇಲು ಕೀಳುಭಾವನೆಯಿಲ್ಲ; ಸೋಂಬೇರಿತನವಿಲ್ಲ; ದ್ವೇಶಾಸೂಯೆಯಿಲ್ಲ; ಬಡವಬಲ್ಲಿದನಿಲ್ಲ; ಸಮಾಜಹಿತದಲ್ಲಿ ಯಾರು ಏನೇ ಕೆಲಸಮಾಡಲಿ ಎಲ್ಲರೂ ಸಮಾನರು; ಸಮಾಜದ ಹಿತದಲ್ಲಿ ಸತ್ಯಮಾರ್ಗದಲ್ಲಿ ದುಡಿಯಲು ಪ್ರತಿಯೊಬ್ಬನೂ ಬಾಧ್ಯನು; ಎಲ್ಲರಿಗೂ ದುಡಿಯಲು ಹಕ್ಕಿರಬೇಕು; ದುಡಿದವನು ತೃಪ್ತಿಯಿಂದ ಬಾಳಲು ಹಕ್ಕಿರಬೇಕು; ದೇಶದಸಂಪತ್ತಿಗೆ ದೇಶದ ಪ್ರತಿಯೊಬ್ಬನೂ ಬಾಧ್ಯನಾಗಿರುವಂತೆಯೇ ದೇಶ ಸಂಪತ್ಸಮೃದ್ಧಿ ಹೊಂದಲೂ ಪ್ರತಿಯೊಬ್ಬನೂ ದುಡಿಯಲೂ ಬಾಧ್ಯನಾಗಿರಬೇಕು.

ಹೀಗೆ ರಾಮರಾಜ್ಯಸ್ಥಾಪನೆಯಾಗಿ ವಿಶ್ವ ಅಹಿಂಸಾಧರ್ಮದಿಂದ ಸತ್ಯಮಾರ್ಗದಲ್ಲಿ ಚಿರಶಾಂತಿ ಸಮಾಧಾನದಿಂದ ನಡೆಯಲಿ ಎಂಬುದು ಗಾಂಧೀಜಿಯ ಕನಸಾಗಿತ್ತು. ಅದನ್ನು ನೆನಸುಮಾಡಲು ಕೊನೆಯವರೆಗೂ ದುಡಿದರು. ಈಗ ಆ ಸಾಧನಕಾರ್ಯ ನಮ್ಮ ಪಾಲಿಗೆ ಬಂದಿದೆ. ಗಾಂಧೀಜಿಯನ್ನು ಪ್ರೀತಿಸುವವರೆಲ್ಲರೂ ಆ ಮಾರ್ಗದಲ್ಲಿ ದೃಢನಿಶ್ಚಯದಿಂದ ಶ್ರದ್ಧಾಸಕ್ತಿಯಿಂದ ದುಡಿಯಬೇಕು; ದುಡಿದು ಕೃತಾರ್ಥರಾಗಬೇಕು.

ಶ್ರದ್ಧಾಂಜಲಿ

ಈ ವರ್ಷ ಫೆಬ್ರುವರಿ ೨ನೆಯ ತಾರೀಖಿನ ದಿನ ಭಾರತದ ಪಾರ್ಲಿಮೆಂಟ್ ಸಭೆ ದುಃಖಪೂರಿತ ವಾತಾವರಣದಲ್ಲಿ ಸೇರಿ ಮಹಾತ್ಮಾ ಗಾಂಧೀಜಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸಿತು. ಆದಿನ ಸಭಾಂಗಣ ಎಂದಿನಂತಿರಲಿಲ್ಲ. ಗಾಂಧೀಜಿಯ ಹೆಸರೆತ್ತಿದಕೂಡಲೆ ಎಲ್ಲೆಲ್ಲೂ ಮೊಳಗುತ್ತಿದ್ದ ಜಯಕಾರ, ಹಸನ್ಮುಖದ ಸರಸಸಲ್ಲಾಪ ಎಲ್ಲೂ ಕಾಣಲಿಲ್ಲ. ಉತ್ಸಾಹದ ಸುಳಿವೇ ಇರಲಿಲ್ಲ. ಆ ಸಂದರ್ಭದಲ್ಲಿ ಪಂಡಿತ ನೆಹರು ಹೀಗೆ ಹೇಳಿದರು:

ಮಹಾತ್ಮ ಗಾಂಧೀಜಿಯ ಕೊಲೆ ಯಾವನೋ ಒಬ್ಬ ಹುಚ್ಚ ನಡಸಿದ ಕೃತ್ಯ ಮಾತ್ರವಲ್ಲ. ಅನೇಕ ವರ್ಷಗಳಿಂದ—ಅದರಲ್ಲೂ ಈಚಿನ ಕೆಲವು ತಿಂಗಳುಗಳಿಂದ–ದ್ವೇಷ ಮತ್ತು ಹಿಂಸೆಯ ವಾತಾವರಣ ನಮ್ಮ ದೇಶದಲ್ಲೆಲ್ಲಾ ವ್ಯಾಪಿಸಿದೆ. ಈ ಕೃತ್ಯ ಅದರ ಪರಿಣಾಮ. ಆ ವಾತಾವರಣ ನಮ್ಮನ್ನೆಲ್ಲಾ ಸುತ್ತಿ ಕವಿದುಕೊಂಡಿದೆ. ಮಹಾತ್ಮಾ ಗಾಂಧೀಜಿ ನಮ್ಮ ಮುಂದಿಟ್ಟಿರುವ ಆದರ್ಶಕ್ಕೆ ಸೇವೆ ಸಲ್ಲಿಸಬೇಕಾದರೆ ನಾವು ಈ ವಾತಾವರಣವನ್ನು ಎದುರಿಸಬೇಕು. ಅದನ್ನು ಪ್ರತಿಭಟಿಸಿ ಹೋರಾಡಬೇಕು. ದ್ವೇಷವನ್ನೂ ಹಿಂಸೆಯನ್ನೂ ಬೇರುಸಹಿತ ಕಿತ್ತೊಗೆಯಬೇಕು. ನಮ್ಮ ಸರ್ಕಾರವೇನೋ ಈ ಕೆಲಸದ ನಿರ್ವಹಣೆಯಲ್ಲಿ ಸರ್ವಪ್ರಯತ್ನವನ್ನೂ ಮಾಡದೆ ಬಿಡುವುದಿಲ್ಲ. ಹಾಗೆ ಮಾಡದೆ ನಮ್ಮ ದೌರ್ಬಲ್ಯದಿಂದಾಗಲಿ ಅಥವಾ ನಮಗೆ ಸರಿದೋರಬಹುದಾದ ಮತ್ತೆ ಯಾವ ಕಾರಣದಿಂದಾಗಲಿ ಈ ಹಿಂಸೆಯನ್ನು ನಿಲ್ಲಿಸದಿದ್ದರೆ, ಬಾಯಿಮಾತಿನಿಂದಲೂ, ಬರವಣಿಗೆಯಿಂದಲೂ, ಕೃತ್ಯಗಳಿಂದಲೂ, ಹಬ್ಬುತ್ತಿರುವ ದ್ವೇಷಕ್ಕೆ ತಡೆ ಹಾಕದಿದ್ದರೆ ಖಂಡಿತ ನಾವು ಈ ಸರ್ಕಾರ ನಡಸಲು ಯೋಗ್ಯರಲ್ಲ; ಗಾಂಧೀಜಿಯ ಅನುಯಾಯಿಗಳು ಎನ್ನಿಸಿಕೊಳ್ಳಲು ಯೋಗ್ಯರಲ್ಲ; ನಮ್ಮನ್ನು ಅಗಲಿ

ಹೋಗಿರುವ ಮಹಾತ್ಮನ ವಿಷಯದಲ್ಲಿ ಹೊಗಳಿಕೆಯ ಮಾತಾಡಲೂ ಯೋಗ್ಯರಲ್ಲ.

ಶತಮಾನಗಳು ಕಳೆದ ಮೇಲೆ, ಬಹುಶಃ ಸಾವಿರಾರು ವರ್ಷಗಳು ಕಳೆದ ಮೇಲೆ ಸಹ, ಆಗಿನ ಜನರು ನಮ್ಮನ್ನು--ಈ ದೈವಿಕ ಪುರುಷನು ಭೂಮಿಯ ಮೇಲೆ ನಡೆಯುತ್ತಿದ್ದಾಗ ಬದುಕಿದ್ದವರನ್ನು, ಅವರ ಪಾದಸ್ಪರ್ಶದಿಂದ ಪವಿತ್ರವಾದ ನೆಲದಲ್ಲಿ ಹೆಜ್ಜೆಯಿಟ್ಟವರನ್ನು--ಸ್ಮರಿಸಿ ಕೊಳ್ಳುತ್ತಾರೆ. ಅದಕ್ಕೆ ತಕ್ಕ ಯೋಗ್ಯತೆಯನ್ನು ನಾವು ಪಡೆಯಬೇಕು.

ಗತಿಸಿಹೋದ ಮಹಾಪುರುಷರಿಗೆ ಶ್ರದ್ಧಾಂಜಲಿಯನ್ನರ್ಪಿಸಿ ಅವರನ್ನು ಹೊಗಳುವುದೂ, ಅವರು ಕಾಲವಾದದ್ದಕ್ಕೆ ಸಂತಾಪ ಸೂಚಿಸು ವುದೂ ಈ ಸಭೆಯಲ್ಲಿ ವಾಡಿಕೆ. ಆದರೆ ಈ ಸಂದರ್ಭದಲ್ಲಿ ನಾನಾಗಲಿ ಇತರ ಸಭಿಕರಾಗಲಿ ಹೆಚ್ಚು ಮಾತಾಡುವುದು ಉಚಿತವೆ, ಎಂಬ ಸಂದೇಹ ನನ್ನ ಮನಸ್ಸಿನಲ್ಲಿದೆ. ಏಕೆಂದರೆ ನಮ್ಮ ಅತ್ಯಮೂಲ್ಯವಾದ ನಿಧಿಯನ್ನು ನಾವು ಕಾಪಾಡಿಕೊಳ್ಳಲಿಲ್ಲ. ಇದನ್ನು ನೆನೆದು ನಾನು--ವ್ಯಕ್ತಿಶಃ ಮತ್ತು ಇಂಡಿಯ ಸರ್ಕಾರದ ಮಹಾಪ್ರಧಾನಿಯಾಗಿ--ಅಸಹ್ಯವಾದ ನಾಚಿಕೆಯಿಂದ ತಲೆತಗ್ಗಿಸಿದ್ದೇನೆ.

ಕಳೆದ ಕೆಲವು ತಿಂಗಳಲ್ಲಿ ನಿರಪರಾಧಿಗಳಾದ ಎಷ್ಟೋ ಜನ ಗಂಡಸರು, ಹೆಂಗಸರು ಮಕ್ಕಳಿಗೆ ನಾವು ರಕ್ಷಣೆ ಕೊಡಲಾರದೆ ಹೋದೆವು. ಆ ಕೆಲಸದಲ್ಲಿ ನಮಗೆ ಸೋಲಾಯಿತು. ಈ ಸಂದರ್ಭದಲ್ಲಿಯೂ ಸೋಲಾಯಿತು. ನಾವು ನಿರ್ವಹಿಸಬೇಕಾಗಿದ್ದ ಕೆಲಸ, ಹೊರಬೇಕಾಗಿದ್ದ ಭಾರ, ನಮಗಾಗಲಿ ಮತ್ತೆ ಯಾವ ಸರ್ಕಾರಕ್ಕಾಗಲಿ ಶಕ್ತಿಗೆ ಮೀರಿದ್ದು ಎನ್ನಬಹುದು. ಆದರೂ ನಮಗೆ ಸೋಲಾದದ್ದೇನೋ ನಿಜ. ನಾವು ಯಾರಲ್ಲಿ ಅಮಿತ ಪ್ರೇಮವನ್ನೂ ಭಕ್ತಿಯನ್ನೂ ಇಟ್ಟಿದ್ದೆವೋ ಆ ಮಹಾವ್ಯಕ್ತಿ ಗತಿಸಿದ್ದಕ್ಕೆ ನಾವೇ ಕಾರಣ. ಭಾರತದ ಪ್ರಜೆಯೊಬ್ಬ ಭಾರತದ ಸರ್ವೋತ್ತಮ ವ್ಯಕ್ತಿಯ ಮೇಲೆ ಕೈಮಾಡಿದ; ಭಾರತದ

ಪ್ರಜೆಯಾದ ನಾನು ಅದಕ್ಕಾಗಿ ತಲೆ ತಗ್ಗಿಸುತ್ತೇನೆ. ಹಿಂದೂ ಸಂಗಡದವನೊಬ್ಬ ಸರ್ವೋತ್ತಮನ ಹಿಂದುವಿನ ಮೇಲೆ ಕೈಯೆತ್ತಿದ; ಹಿಂದೂವಾದ ನಾನು ಅದಕ್ಕಾಗಿ ತಲೆ ತಗ್ಗಿಸುತ್ತೇನೆ.

ಅವರನ್ನು ಹೊಗಳಬೇಕಾದರೆ ಒಳ್ಳೆಯ ಪದಗಳನ್ನಾರಿಸಿ ಹೊಗಳುತ್ತೇನೆ. ಅವರ ಮಹತ್ವವನ್ನು ಅಳೆಯುವುದಕ್ಕೆ ಏನೋ ಒಂದು ಬಗೆಯ ಮಾನದಂಡವನ್ನು ಮಾಡಿಕೊಂಡಿದ್ದೇನೆ. ಗಾಂಧೀಜಿಯನ್ನು ನಾವು ಹೇಗೆ ಹೊಗಳೋಣ, ಹೇಗೆ ಅಳೆಯೋಣ! ಅವರು ನಮ್ಮೆಲ್ಲರಂತೆ ಸಾಧಾರಣ ಮೃತ್ತಿಕೆಯಿಂದ ಮಾಡಿದವರಲ್ಲ. ಇತಿಹಾಸದಲ್ಲೆಲ್ಲಾ ಮತ್ತೆ ಯಾವ ವ್ಯಕ್ತಿಯೂ ತನ್ನ ಜೀವನದಲ್ಲಿ ಪಡೆಯದಿದ್ದಷ್ಟು ಖ್ಯಾತಿಯನ್ನು ಅವರು ಪಡೆದಿದ್ದಾರೆ; ಅವರು ಕಾಲವಾದಮೇಲೆ ಈ ಮೂರು ದಿನಗಳಂತೂ ಇಡೀ ಪ್ರಪಂಚವೇ ಅವರನ್ನು ಸ್ಮರಿಸಿ, ಸ್ತುತಿಸಿ ತಲೆಬಾಗಿ ನಮಿಸಿದೆ. ಆ ಸ್ತುತಿಗೆ ನಾವು ಸೇರಿಸಬೇಕಾದದ್ದೇನಿದೆ? ಅವರನ್ನು ಹೊಗಳುವುದಾದರೂ ಹೇಗೆ? ನಾವು ಅವರ ಮಕ್ಕಳು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ವಿಶೇಷ ರೀತಿಯಲ್ಲಿ ಅವರ ಮಕ್ಕಳು. ಏಕೆಂದರೆ ಸ್ವಲ್ಪ ಹೆಚ್ಚು ಕಡಿಮೆ ನಾವೆಲ್ಲರೂ ಅವರ ಆತ್ಮದ ಪುತ್ರರು. ಅವರನ್ನು ನಾವು ಯಾವ ರೀತಿಯಲ್ಲಿ ಹೊಗಳಬೇಕು!

ಆ ದಿವ್ಯಪ್ರಭೆ ಕಣ್ಮರೆಯಾಯಿತು. ನಮ್ಮ ಬಾಳಿಗೆ ಕಾವು ಕೊಟ್ಟು ಬೆಳಕು ಮಾಡಿದ್ದ ಆ ಸೂರ್ಯ ಅಸ್ತನಾಗಿ ಹೋಗಿದ್ದಾನೆ. ಈಗ ನಾವು ಕತ್ತಲೆಯಲ್ಲಿ ಬೆದರಿ ಚಳಿಯಲ್ಲಿ ನಡುಗುತ್ತಿದ್ದೇವೆ. ಆದರೂ ನಾವು ಹಾಗೆ ಭಾವಿಸುವುದು ಅವರಿಗೆ ಪ್ರಿಯವಾಗಲಾರದು. ಏನೇ ಆಗಲಿ, ಇಷ್ಟು ವರ್ಷ ಕಾಲ ಕಣ್ಣೆದುರಿಗಿದ್ದ ಆ ದಿವ್ಯಪ್ರಭೆಯಿಂದ ದಿವ್ಯಾಗ್ನಿಯಿಂದ ಪ್ರಜ್ವಲಿಸುತ್ತಿದ್ದ ಆ ಮಹಾ ಪುರುಷನಿಂದ ನಮ್ಮ ಸ್ವಭಾವವೂ ಮಾರ್ಪಟ್ಟಿದೆ. ನಾವು ಎಂಥವರಾದರೂ ನಮ್ಮನ್ನು ಸಹ ಅವರು ತಮ್ಮ ಅಚ್ಚಿನಲ್ಲಿಟ್ಟು ರೂಪುಗೊಳಿಸಿದ್ದಾರೆ. ಈ ಹಲವು ವರ್ಷಗಳಲ್ಲಿ ನಮ್ಮಲ್ಲಿ ಅನೇಕರು ಆ ದಿವ್ಯಾಗ್ನಿ

ಯಿಂದ ಸಣ್ಣಕಿಡಿಯೊಂದನ್ನು ಸಂಗ್ರಹಿಸಿ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದೇವೆ. ಆ ಶಕ್ತಿಯಿಂದ ಅವರು ತೋರಿಸಿದ ರೀತಿಯಲ್ಲಿ ಸ್ವಲ್ಪ ಮಟ್ಟಿಗಾದರೂ ದುಡಿದಿದ್ದೇವೆ. ಆದ್ದರಿಂದ ನಾವು ಅವರನ್ನು ಹೊಗಳಿದರೆ ನಮ್ಮ ಮಾತುಗಳು ಅಲ್ಪವಾಗಿ ಕಾಣುತ್ತವೆ; ಸ್ವಲ್ಪ ಮಟ್ಟಿಗೆ ನಮ್ಮನ್ನು ನಾವೇ ಹೊಗಳಿಕೊಂಡಂತಾಗುತ್ತದೆ.

ಪ್ರಸಿದ್ಧ ಪುರುಷರಿಗೆ ಕಂಚಿನ ಅಥವಾ ಅಮೃತ ಶಿಲೆಯ ಸ್ಮಾರಕಗಳನ್ನು ಕಟ್ಟುತ್ತೇವೆ. ಆದರೆ ದಿವ್ಯತೇಜಸ್ಸುಳ್ಳ ಈತನಿಗೆ ತಾನು ಬದುಕಿರುವಾಗಲೇ ಕೋಟ್ಯನು ಕೋಟಿ ಜನರ ಹೃದಯದೊಡನೆ ಬೆರೆತು ಹಾಸು ಹೊಕ್ಕಾಗುವುದು ಸಾಧ್ಯವಾಗಿತ್ತು. ಆದ್ದರಿಂದ ಸ್ವಲ್ಪಮಟ್ಟಿಗೆ ಅತ್ಯಲ್ಪ ಪ್ರಮಾಣದಲ್ಲಿಯಾದರೂ ಅವರಲ್ಲಿದ್ದ ಗುಣ ನಮ್ಮಲ್ಲಿಯೂ ಜೀವಂತವಾಗಿದೆ. ಅವರು ಭಾರತದಲ್ಲೆಲ್ಲಾ ಅರಮನೆಗಳಲ್ಲೂ ಸಭೆಗಳಲ್ಲೂ ಮಾತ್ರವಲ್ಲ ಪ್ರತಿಯೊಂದು ಹಳ್ಳಿಯಲ್ಲೂ ಸಂಕಟದಿಂದ ನರಳುವ ಬಡವರ ಗುಡಿಸಲುಗಳಲ್ಲೂ ವ್ಯಾಪಿಸಿದ್ದರು.

ಮೂವತ್ತು ವರ್ಷಗಳಿಗಿಂತ ಹೆಚ್ಚುಕಾಲ ಅವರೇ ನಮ್ಮ ರಾಷ್ಟ್ರ ನಿರ್ಮಾಪಕರಾಗಿದ್ದರು. ಆ ಕ್ಷೇತ್ರದಲ್ಲಿ ಅವರಂತೆ ತ್ಯಾಗದ ಔನ್ನತ್ಯವನ್ನು ಮುಟ್ಟಿದವರು ಮತ್ತೆಲ್ಲಿಯೂ ಇಲ್ಲ. ಆ ಕಾರ್ಯದಲ್ಲಿ ಅವರು ಜಯಶೀಲರಾದರು. ಕೊನೆಕೊನೆಯಲ್ಲಿ ಅವರಿಗೆ ತೀವ್ರವಾದ ಸಂಕಟ ತರುವಂಥ ಪ್ರಸಂಗಗಳು ನಡೆದುಹೋದುವು. ಆದರೂ ಪ್ರೇಮಪೂರ್ಣವಾದ ಅವರ ಮುಖದಲ್ಲಿ ಮುಗುಳುನಗೆಯೇನೂ ಬಾಡಲಿಲ್ಲ. ಯಾರೊಬ್ಬರೂ ಅವರಿಂದ ಒಂದು ಬಿರುನುಡಿಯನ್ನು ಕೇಳಲಿಲ್ಲ. ಆದರೆ ತಾವು ತಿದ್ದಿ ರೂಪಿಸಿದ್ದ ಈ ಜನರ ಮನೋದೌರ್ಬಲ್ಯಕ್ಕಾಗಿ, ತೋರಿಸಿಕೊಟ್ಟ ದಾರಿಯನ್ನು ನಾವು ತಪ್ಪಿ ನಡೆದದ್ದಕ್ಕಾಗಿ, ಅವರು ಬಹಳ ನೊಂದಿರಬೇಕು. ಕೊನೆಗೆ ತಮ್ಮ ಮಕ್ಕಳಲ್ಲೇ ಒಬ್ಬನ ಕೈಯಿಂದ—ಭಾರತದ ಪ್ರಜೆಗಳೆಲ್ಲರಂತೆ ಅವನೂ ಮಹಾತ್ಮರ ಮಕ್ಕಳಲ್ಲೊಬ್ಬನಲ್ಲವೆ?—ಅವರು ಮಡಿದರು.

ಸಾವಿರಾರು ವರ್ಷಗಳು ಕಳೆದಮೇಲೆ ನಾವು ಜೀವಿಸಿರುವ ಈ ಕಾಲದ ವಿಷಯವಾಗಿ ಇತಿಹಾಸ ತೀರ್ಪುಕೊಡುತ್ತದೆ. ಈ ಕಾಲಕ್ಕೆ ತೀರ ಹತ್ತಿರ ಇರುವುದರಿಂದ ನಾವು ಇದರ ವಿಷಯ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ; ಈಗ ನಡೆದಿರುವ ಮತ್ತು ನಡೆಯಲಿರುವ ಘಟನೆಗಳನ್ನು ತಿಳಿದು ಅರ್ಥಮಾಡಿಕೊಳ್ಳಲೂ ಸಾಧ್ಯವಿಲ್ಲ. ನಮ್ಮೆದುರಿಗೆ ದಿವ್ಯಜ್ಯೋತಿಯೊಂದು ಇತ್ತು; ಈಗ ಅದು ಇಲ್ಲ; ತಾತ್ಕಾಲಿಕವಾಗಿ ಕತ್ತಲೆ ಕವಿದಿದೆ; ಇಷ್ಟನ್ನು ಮಾತ್ರ ಬಲ್ಲೆವು. ಆ ಕತ್ತಲೆ ಅಷ್ಟು ಹೆಚ್ಚಿನದಲ್ಲ. ನಮ್ಮ ಹೃದಯವನ್ನು ಕಣ್ಣಿಟ್ಟು ನೋಡಿದರೆ ಅವರು ಹೊತ್ತಿಸಿದ ಜೀವಜ್ಯೋತಿ ಇನ್ನೂ ಇಲ್ಲಿಯೇ ಇರುವುದನ್ನು ಕಾಣುತ್ತೇವೆ. ಆ ಜ್ಯೋತಿ ಬೆಳಗುವವರೆಗೆ ಈ ಭೂಮಿಯಲ್ಲಿ ಕತ್ತಲೆ ಇರಲಾರದು. ನಾವು ಎಷ್ಟೇ ಸಣ್ಣವರಾಗಲಿ, ಅವರು ನಮ್ಮಲ್ಲಿ ಹೊತ್ತಿಸಿದ ಜ್ಯೋತಿ ಇನ್ನೂ ಉರಿಯುತ್ತಿದೆ. ಅವರ ಸ್ಮರಣೆ ಮಾಡಿ ಅವರ ಹಾದಿಯಲ್ಲೇ ನಡೆಯುವ ಪ್ರಯತ್ನ ಮಾಡಿದರೆ ಈ ದೇಶವನ್ನೆಲ್ಲಾ ಬೆಳಕುಮಾಡಬಹುದು.

ಮಹಾತ್ಮಾ ಗಾಂಧೀಜಿ ಹಿಂದಿನ ಭಾರತದ ಮಹಾಪ್ರತೀಕ; ನಾವು ಮುಂದೆ ನಿರ್ಮಿಸಬಹುದಾದ ಭವಿಷ್ಯ ಭಾರತದ ಪ್ರತೀಕವೆಂದರೂ ಎನ್ನಬಹುದು. ಈಗ ನಾವು ಹಿಂದಿನ ಕಾಲದ ಮತ್ತು ಮುಂದೆ ಬರುವ ಕಾಲದ ನಡುವೆ ಭಯಂಕರವಾದ ಪ್ರಪಾತದ ತುದಿಯಲ್ಲಿ ನಿಂತಿದ್ದೇವೆ. ಎಷ್ಟೋ ವಿಧವಾದ ವಿಪತ್ತುಗಳನ್ನು ಎದುರಿಸುತ್ತಿದ್ದೇವೆ. ಈಗ ನಮ್ಮ ಆದರ್ಶಗಳೆಲ್ಲಾ ಅಸತ್ಯವಾದಂತೆ ತೋರುತ್ತಿವೆ; ಉನ್ನತ ಧ್ಯೇಯಗಳ ವಿಷಯವಾಗಿ ನಾವು ಆಡಿದ್ದೆಲ್ಲಾ ಹುರುಳಿಲ್ಲದ ಮಾತಾಗಿ ಕಾಣುತ್ತಿದೆ; ಜೀವನ ಬೇರೆ ಯಾವುದೋ ದಾರಿಯನ್ನು ಹಿಡಿಯುವಂತೆ ತೋರುತ್ತಿದೆ. ಇದನ್ನೆಲ್ಲಾ ನೋಡಿದಾಗ ನಮ್ಮಲ್ಲಿ ಉಂಟಾಗುವ ಶಂಕೆ, ಅಪನಂಬಿಕೆ, ಹೃದಯದೌರ್ಬಲ್ಯ—ಇವು ಎಲ್ಲಕ್ಕಿಂತಲೂ ದೊಡ್ಡ ವಿಪತ್ತು. ಆದರೂ ಈ ವಿಪತ್ತಿನ ಕಾಲ ಹೇಗೋ ಕಳೆದುಹೋಗುತ್ತದೆ; ಬೇಗನೇ ಕಳೆದು

ಹೋಗುತ್ತದೆಂದು ನನಗೆ ನಂಬಿಕೆಯಿದೆ. ಈ ದೈವಿಕ ಪುರುಷನ ಜೀವನದಲ್ಲಿ ಎಷ್ಟು ಉನ್ನತ ವ್ಯಕ್ತಿಯಾಗಿದ್ದರೋ ಸಾವಿನಲ್ಲಿ ಅದಕ್ಕಿಂತಲೂ ಉನ್ನತಿಗೇರಿದ್ದಾರೆ. ಬದುಕಿನಲ್ಲಿ ತಮ್ಮ ಆದರ್ಶನಕ್ಕೆ ಸೇವೆ ಸಲ್ಲಿಸಿದಂತೆಯೇ ಸಾವಿನಲ್ಲಿಯೂ ಸೇವೆ ಸಲ್ಲಿಸುತ್ತಾರೆ.

ನಾವು ಮನುಷ್ಯಮಾತ್ರರು ನಮ್ಮ ಗುರುವನ್ನು ಮರೆಯಲಾರೆವು. ಆದ್ದರಿಂದ ಅವರ ಮರಣಕ್ಕಾಗಿ ಎಂದೆಂದಿಗೂ ದುಃಖಪಡುತ್ತೇವೆ. ಹಾಗೆ ಮಾಡುವುದು ಅವರ ಇಷ್ಟಕ್ಕೆ ವಿರೋಧವೆಂದು ನಾನು ಬಲ್ಲೆ. ಅವರಿಗೆ ಅತ್ಯಂತ ಹತ್ತಿರವಾದವರೂ ಪ್ರಿಯರಾದವರೂ ಗತಿಸಿದಾಗ ಸಹ ಅವರ ಕಣ್ಣಿನಲ್ಲಿ ಒಂದು ಹನಿ ನೀರು ಕಾಣಲಿಲ್ಲ; ಕೈಗೊಂಡ ಕಾರ್ಯಕ್ಕೆ ನಿಶ್ಚಲಚಿತ್ತದಿಂದ ಸೇವೆ ಮಾಡಬೇಕೆಂಬ ನಿರ್ಧಾರಮಾತ್ರ ಕಾಣುತ್ತಿತ್ತು. ಆದ್ದರಿಂದ ನಾವು ಅವರ ಮರಣಕ್ಕಾಗಿ ಬರಿಯ ಸಂತಾಪ ತೋರಿಸಿದರೆ ಅವರ ಅಸಮಾಧಾನಕ್ಕೆ ಪಾತ್ರರಾಗುತ್ತೇವೆ. ಹಾಗೆ ಮಾಡುವುದರಿಂದ ಅವರಿಗೆ ನಾವು ಅಲ್ಪಗೌರವ ಸಲ್ಲಿಸಿದಂತಾಗುತ್ತದೆ. ನಮ್ಮ ಭಕ್ತಿಪ್ರದರ್ಶನಕ್ಕಿರುವ ಒಂದೇ ದಾರಿಯೆಂದರೆ—ಅವರು ಯಾವ ಮಹಾಕಾರ್ಯದ ಹೊರೆಯನ್ನು ಹೊತ್ತು ಬಹುಮಟ್ಟಿಗೆ ನಿರ್ವಹಿಸಿದರೋ ಆ ಕೆಲಸಕ್ಕೆ ನಾವು ಪಣತೊಟ್ಟು ನಿಲ್ಲುವುದು.

ಆದ್ದರಿಂದ ನಾವು ಕಾರ್ಯತತ್ಪರರಾಗಬೇಕು, ದುಡಿಯಬೇಕು, ತ್ಯಾಗಮಾಡಬೇಕು; ಸ್ವಲ್ಪಮಟ್ಟಿಗಾದರೂ ಅವರ ಅನುಯಾಯಿಗಳೆನ್ನಿಸಿಕೊಳ್ಳುವ ಯೋಗ್ಯತೆಯನ್ನು ಗಳಿಸಬೇಕು.

ಮಹಿಮಾತಿಶಯ

ಗಾಂಧೀಜಿಯ ಬರವಣಿಗೆಯನ್ನು ನೋಡಿಯೇ ಅವರ ಕಾರ್ಯವನ್ನು ತಿಳಿದೇ ಅವರನ್ನು ಮೆಚ್ಚಿರುವವರು ವಿಶ್ವದಲ್ಲೆಲ್ಲ ಇದ್ದಾರೆ. ಆದರೆ ಅದ ರಿಂದಲೇ ಅವರ ಪೂರ್ಣ ವ್ಯಕ್ತಿತ್ವವನ್ನು ತಿಳಿದುಕೊಳ್ಳುವುದು ಕಷ್ಟ. ಅವರು ತಮ್ಮ ಬರವಣಿಗೆಗಿಂತ, ತಮ್ಮ ಮಹಾಕಾರ್ಯಗಳಿಗಿಂತ ಬಲು ದೊಡ್ಡ ವರು. ಅವರ ಕಿರುನಗು ಹರ್ಷಪ್ರದವಾಗಿತ್ತು. ಅವರ ನಗು ಇತರರಲ್ಲೂ ನಗುವನ್ನು ಚಿಮ್ಮಿಸುವಂಥದ್ದಾಗಿತ್ತು; ಸರಳತೆಯನ್ನು ಪ್ರವಹಿಸುವಂಥ ದ್ದಾಗಿತ್ತು. ಅವರಲ್ಲಿ ಒಂದು ಬಗೆಯ ಅನಿರ್ವಚನೀಯ ಶಿಶುಭಾವದ ಲಾವಣ್ಯ ತುಂಬಿತ್ತು. ತಾವು ಎಲ್ಲಿಗೆ ಹೋದರೆ ಅಲ್ಲಿನ ಆವರಣವನ್ನು ಚೇತನಗೊಳಿಸುವ, ಪರಿಶುದ್ಧಗೊಳಿಸುವ ದಿವ್ಯಶಕ್ತಿ ಅವರಿಗಿತ್ತು. ಅವರ ಎಲ್ಲ ಕಾರ್ಯವನ್ನೂ ಸಾಧನೆಯನ್ನೂ ಮೀರಿ ಸರ್ವಶ್ರೇಷ್ಠವಾಗಿ ನಿಂತಿದೆ ಅವರ ಜೀವನ.

ಗಾಂಧೀಜಿ, ಪ್ರತಿಯೊಬ್ಬನ ಜೀವನವೂ ಆಂತರಿಕ ಪ್ರವಿತ್ರತೆಯನ್ನು ಹೊಂದಬೇಕೆನ್ನುತ್ತಾರೆ. ಜೀವನದಲ್ಲಿ ಅನುಸರಿಸಬೇಕಾದ ನೀತಿಯನ್ನು ಅವರು ಹೀಗೆ ಹೇಳಿದ್ದಾರೆ: ಮನುಷ್ಯನ ಏಳ್ಗೆಗೆ ಮುಖ್ಯವಾಗಿ ಸಂಸ್ಕೃತಿ ಅವಶ್ಯಕ. ಧಾರ್ಮಿಕ ಪ್ರೋತ್ಸಾಹವಿಲ್ಲದೆ ಯಾರೂ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ. ಮತಗ್ರಂಥಗಳನ್ನೆಲ್ಲ ಓದುವುದರಿಂದ ಬರುವ ತಿಳಿವಳಿಕೆ ಮನುಷ್ಯನನ್ನು ಧಾರ್ಮಿಕನನ್ನಾಗಿ ಮಾಡಲಾರದು. ಹೃದಯದ ಪರಿಪಾಕವೇ ಧರ್ಮವೆಂಬುದು. ಧರ್ಮಗ್ರಂಥಗಳಲ್ಲಿ ಜೀವನದ ಅನೇಕ ನಿಯಮಗಳನ್ನು ಹೇಳಿವೆ. ಎಲ್ಲರೂ ಅವುಗಳನ್ನು ಪಾಲಿಸಲು ಯತ್ನಿಸ ಬೇಕು. ಸಂಸ್ಕೃತಿಗೆ ಇವು ಅವಶ್ಯ:

ಸತ್ಯ — ಬಾಳಿನ ಪ್ರತಿಯೊಂದು ಸಂದರ್ಭದಲ್ಲಿಯೂ ಸತ್ಯ ನಮಗೆ ಮಾರ್ಗದರ್ಶಕವಾಗಬೇಕು. ಆದಕ್ಕನುಸಾರವಾಗಿ ನಡೆಯಲು ಯಾವ

ಪರಿಣಾಮವಾಗುವುದೆನ್ನುವುದನ್ನು ಲೆಕ್ಕಿಸದೆ ಸತ್ಯವನ್ನು ಮನಸಾ ವಾಚಾ ಕರ್ಮಣಾ ಪರಿಪಾಲಿಸಬೇಕು.

ಎಲ್ಲಿ ಸತ್ಯವಿದೆಯೋ ಅಲ್ಲಿ ಸತ್ಯವಾದ ಜ್ಞಾನವೂ ಇದೆ. ಎಲ್ಲಿ ಸತ್ಯವಿಲ್ಲವೋ ಅಲ್ಲಿ ಸತ್ಯವಾದ ಜ್ಞಾನವೂ ಇರಲಾರದು. ಆದ್ದರಿಂದಲೇ "ಚಿತ್" ಅಥವಾ "ಜ್ಞಾನ" ವೆಂಬ ಪದವೂ ದೇವರ ಹೆಸರಿನೊಂದಿಗೆ ಸೇರಿದೆ. ಎಲ್ಲಿ ಸತ್ಯವಾದ ಜ್ಞಾನವಿದೆಯೋ ಅಲ್ಲಿ ಆನಂದವೂ ಶಾಶ್ವತ ವಾಗಿ ಇರುತ್ತದೆ; ದುಃಖಕ್ಕೆ ಅಲ್ಲಿ ಸ್ಥಳವೇ ಇಲ್ಲ. ಮತ್ತು ಸತ್ಯವು ಹೇಗೆ ಚಿರಸ್ಥಾಯಿಯೋ ಆದರಿಂದ ಬಂದಿರುವ ಆನಂದವೂ ಹಾಗೆಯೇ ಚಿರಸ್ಥಾಯಿ. ಆದ್ದರಿಂದಲೇ ಭಗವಂತನನ್ನು ಸತ್-ಚಿತ್-ಆನಂದ, ಸಚ್ಚಿದಾನಂದ—ಯಾವನು ಸತ್ಯ, ಜ್ಞಾನ ಮತ್ತು ಆನಂದ ಇವುಗಳ ಸಂಗಮವಾಗಿರುವವನು—ಎನ್ನುತ್ತೇವೆ. ಹೀಗಿರುವುದರಿಂದ ಸತ್ಯವನ್ನು ಸಂಪೂರ್ಣವಾಗಿ ಅರಿಯುವುವೆಂದರೆ ಆತ್ಮಸಾಧನೆಮಾಡಿಕೊಂಡಂತೆ; ಪರಿ ಪೂರ್ಣತ್ವವನ್ನು ಪಡೆದಂತೆ.

ಅಹಿಂಸೆ-ಅಹಿಂಸೆಯೇ ಪರಮ ಧರ್ಮ; ವಿಶ್ವಪ್ರೇಮಕ್ಕಿಂತ ಅದು ಬೇರೆಯಲ್ಲ. ಇದರ ನಿಜವಾದ ಅರ್ಥ ಯಾರನ್ನೂ ನೋಯಿಸಬಾರದು; ವೈರಿಯೆಂದುಕೊಳ್ಳುವವನ ವಿಷಯದಲ್ಲಿ ಕೂಡ ದುರಭಿಪ್ರಾಯವಿಟ್ಟು ಕೊಳ್ಳಕೂಡದು ಎಂದು. ಅಹಿಂಸೆಯನ್ನು ಆಚರಿಸುವವನಿಗೆ ವೈರಿಯಿರು ವುದಕ್ಕೆ ಅವಕಾಶವಿಲ್ಲ. ಈ ನಿಯಮದ ಪ್ರಕಾರ ಹೊಂಚುಹಾಕಿ ಕೊಲ್ಲು ವುದಕ್ಕೆ ಎಡೆಯಿಲ್ಲ; ದೇಶದ ಮೇಲ್ಮೆಗಾಗಿಯಾದರೂ ಹಿಂಸೆಕೂಡದು; ಆಶ್ರಿತರಾಗಿರುವ ಮಹಿಳೆಯರ ಮಾನರಕ್ಷಣೆಯನ್ನಾದರೂ ಅಹಿಂಸೆ ಯಿಂದಲೇ ಮಾಡಬೇಕು. ಇದಕ್ಕೆ ಎದುರಾಳಿಗೆ ಹೊಡೆಯುವುದಕೆ ಬೇಕಾಗುವ ಶಕ್ತಿಗಿಂತ ಹೆಚ್ಚಾಗಿ ಮಾನಸಿಕ ಮತ್ತು ಶಾರೀರಶಕ್ತಿ ಅವಶ್ಯ. ಸ್ವಲ್ಪ ದೇಹಬಲವಿದ್ದರೂ—ಅದು ಧೈರ್ಯವಲ್ಲ—ಅದು ಮುಗಿದ ಮೇಲೆ ಆಗುವುದೇನು? ಎರಡು ಕಡೆಯವರಲ್ಲಿಯೂ ರೋಷ, ಪಶುವೃತ್ತಿ.

ಆಗ ನಿನ್ನನ್ನುರುಳಿಸಿ ವೈರಿ ತನ್ನ ಕೆಲಸವನ್ನು ಕೈಗೂಡಿಸುತ್ತಾನೆ. ಆದರೆ ಇದಕ್ಕೆ ಬದಲಾಗಿ ವೈರಿ ನಿನ್ನನ್ನು ಹೊಡೆಯಲು ಬಂದಾಗ ನೀನು ಸುಮ್ಮನಿದ್ದರೆ, ಆತನ ಹಿಂಸೆಯೆಲ್ಲ ನಿನ್ನ ಮೇಲೆಯೇ ವೆಚ್ಚವಾಗಿ ನಿನ್ನ ರಕ್ಷಣೆಯಲ್ಲಿರುವವರ ಮಾನ ಉಳಿಯುತ್ತದೆ. ಅಹಿಂಸಾಧರ್ಮವು ಕೇವಲ ಋಷಿಗಳಿಗಾಗಲಿ, ಸಾಧುಗಳಿಗಾಗಲಿ ಮಾತ್ರವಲ್ಲ; ಜನಸಾಮಾನ್ಯಕ್ಕೂ ಅನುಸರಣೀಯವಾದುದು. ಮೃಗಗಳಿಗೆ ಹಿಂಸೆಯು ಹೇಗೆ ಧರ್ಮವೋ ಹಾಗೆಯೇ ಮಾನವನಿಗೆ ಅಹಿಂಸೆಯೇ ಧರ್ಮ. ಮೃಗಗಳಲ್ಲಿ ಆತ್ಮಶಕ್ತಿ ಕಡಿಮೆ ದೇಹಶಕ್ತಿ ಹೆಚ್ಚು. ಆದರೆ ಮಾನವನ ಆತ್ಮಶಕ್ತಿ ವಿಕಾಸವಾಗಿದೆ. ಅದಕ್ಕೆ ದೈಹಿಕಶಕ್ತಿಯು ಶರಣಾಗಬೇಕು. ಅಹಿಂಸಾಧರ್ಮಿಯು ವೈರಿಯನ್ನೂ ಕೂಡ ಕ್ಷಮಿಸುತ್ತಾನೆ. ಕ್ಷಮೆಯು ಯೋಧನಿಗೆ ಅಲಂಕಾರಪ್ರಿಯ. ದಂಡಿಸಲು ಸಮರ್ಥನಾದವನು ದಂಡಿಸದೆ ಇದ್ದರೆ ಅದು ಕ್ಷಮೆ. ಬೆಕ್ಕಿನ ಕೈಗೆ ಸಿಕ್ಕಿ ಹೆದರಿ ಸಾಯುವ ಇಲಿಯು ಬೆಕ್ಕನ್ನು ಕ್ಷಮಿಸುವುದೆಂದರೆ ಅದಕ್ಕೆ ಅರ್ಥವಿಲ್ಲ. ಭಾರತವು ಎಂದಿಗೂ ನಿಶ್ಶಕ್ತಿ ನಾಡಲ್ಲ. ಆದುದರಿಂದ ಇಲ್ಲಿ ಹಿಂಸೆಯು ಕಾರ್ಯರಂಗದಲ್ಲಿ ಪ್ರಯೋಗಾತ್ಮಕವಾದುದು.

ಬಹ್ರಚರ್ಯ— ಮದುವೆಯಾಗಿರಲಿ ಇಲ್ಲದಿರಲಿ ಬ್ರಹ್ಮಚರ್ಯ ಸಾಧನವು ಅವಶ್ಯ. ರಾಷ್ಟ್ರಸೇವಕನಿಗೂ ಧರ್ಮಜೀವಿಗೂ ಇದು ಅನಿವಾರ್ಯ.

ಬ್ರಹ್ಮಚರ್ಯ ಎಂಬ ಪದದ ಅರ್ಥವನ್ನು ನೆನಪಿಗೆ ತಂದುಕೊಳ್ಳೋಣ. ಚರ್ಯ ಎಂದರೆ ನಡತೆಯ ಕ್ರಮ; "ಬ್ರಹ್ಮಚರ್ಯ" ಎಂದರೆ "ಬ್ರಹ್ಮ"ವನ್ನು ಅಂದರೆ ಸತ್ಯವನ್ನು ಕಾಣುವುದಕ್ಕೋಸ್ಕರ ಅನುಸರಿಸುವ ನಡತೆ. ಈ ಅರ್ಥದಂತೆ ಪಂಚೇಂದ್ರಿಯಗಳ ನಿಗ್ರಹ ಎಂಬ ವಿಶೇಷಾರ್ಥ ಉದಯವಾಗುತ್ತದೆ. ಆದರಿಂದ ಲಿಂಗಸಂಬಂಧವೊಂದಕ್ಕೆ ಮಾತ್ರ ಗಮನಕೊಡುವ ಅಸಂಪೂರ್ಣ ಲಕ್ಷಣವನ್ನು ಮರೆಯಬೇಕು.

ಬ್ರಹ್ಮಚರ್ಯವೆಂದರೆ ಪಂಚೇಂದ್ರಿಯಗಳ ನಿಗ್ರಹ ಎಂದರ್ಥ. ಯಾವನು ಒಂದು ಇಂದ್ರಿಯವನ್ನು ಮಾತ್ರ ನಿಗ್ರಹಿಸಲು ಪ್ರಯತ್ನಿಸಿ ಉಳಿದವುಗಳನ್ನೆಲ್ಲ ಸ್ವೇಚ್ಛಾಪ್ರವೃತ್ತಿಗೆ ಬಿಡುತ್ತಾನೆಯೋ ಅವನು ಬ್ರಹ್ಮಚರ್ಯವನ್ನು ಸಾಧಿಸಲಾರನು. ಕಿವಿಯಿಂದ ಉದ್ರೇಕವಾದ ಕಥೆಗಳನ್ನು ಕೇಳುವುದು, ಕಣ್ಣುಗಳಿಂದ ಕಾಮೋದ್ದೀಪಕ ದೃಶ್ಯಗಳನ್ನು ನೋಡುವುದು, ನಾಲಿಗೆಯಿಂದ ಉದ್ರೇಕಕರವಾದ ಆಹಾರವನ್ನು ರುಚಿಸುವುದು, ಕೈಯಿಂದ ರೋಮಾಂಚವನ್ನು ತರತಕ್ಕ ವಸ್ತುಗಳನ್ನು ಮುಟ್ಟುವುದು, ಆದರೆ ಮಿಕ್ಕ ಒಂದು ಇಂದ್ರಿಯವನ್ನು ಹತೋಟಿಯಲ್ಲಿಟ್ಟುಕೊಂಡಿದ್ದೇನೆಂದು ನಂಬಿರುವುದು ಬರಿ ಭ್ರಮೆ. ಇದು ಉರಿಯುತ್ತಿರುವ ಬೆಂಕಿಯಲ್ಲಿ ಕೈನೀಡಿ ಸುಡಬಾರದೆಂದು ನಂಬುವಂತೆ.

ಕಾಯಾ ವಾಚಾ ಮನಸಾ ಬ್ರಹ್ಮಚರ್ಯವನ್ನು ಆಚರಿಸಬೇಕು. ಮಾನವಜೀವನದ ಗುರಿಯಾದ ಸತ್ಯಸಾಧನೆಗೆ ಈ ಬ್ರಹ್ಮಚರ್ಯವೇ ಸಾಧನಮಾರ್ಗ.

ರುಚಿಶುದ್ಧಿ—ಪಶುವೃತ್ತಿಯನ್ನು ದಾಟಿ ಮನುಷ್ಯತ್ವವನ್ನು ಸಾಧಿಸಬೇಕಾದರೆ ಆಹಾರದಲ್ಲಿ ಒಂದು ನಿಯಮವನ್ನು ಆಚರಣೆಗೆ ತರಬೇಕು.

ಆಹಾರವನ್ನು ನಾವು ಔಷಧಿಯನ್ನು ತೆಗೆದುಕೊಳ್ಳುವಂತೆ ತೆಗೆದುಕೊಳ್ಳಬೇಕು. ದೇಹದ ಪೋಷಣೆಗೆ ಎಷ್ಟು ಅವಶ್ಯಕತೆಯೋ ಯಾವುದು ಅವಶ್ಯಕತೆಯೊ ಅಷ್ಟನ್ನು ಮಾತ್ರ ಅದನ್ನು ಮಾತ್ರ ತೆಗೆದುಕೊಳ್ಳಬೇಕು. ಔಷಧಿಯನ್ನು ಬಹಳ ಸ್ವಲ್ಪ ತೆಗೆದುಕೊಂಡುಬಿಟ್ಟರೆ ಹೇಗೆ ಅದರಿಂದಾಗುವ ಉಪಯೋಗ ತಪ್ಪುವುದೋ ಅಥವಾ ಅತಿಯಾಗಿ ತೆಗೆದುಕೊಂಡುಬಿಟ್ಟರೆ ಜೀವಕ್ಕೆ ಅಪಾಯವಾಗುವುದೋ ಹಾಗೆಯೇ ಆಹಾರದ ವಿಚಾರದಲ್ಲಿಯೂ. ಆದ್ದರಿಂದ ರುಚಿಕರವಾಗಿದೆ ಎಂಬ ಕಾರಣದಿಂದಲೇ ನಾವು ಯಾವುದಾದರೂ ಆಹಾರವನ್ನು ದೇಹಕ್ಕೆ ಅವಶ್ಯಕವಿಲ್ಲದಿದ್ದರೂ ತೆಗೆದುಕೊಂಡರೆ ಈ ನಿಯಮನ್ನು ಉಲ್ಲಂಘಿಸಿದಂತಾಗುತ್ತದೆ. ನಿಜವಾಗಿಯೂ

ಆವಶ್ಯಕವಿಲ್ಲದಿರುವಾಗ ನಮಗೆ ನಾವೇ ನಮ್ಮ ಪ್ರಕೃತಿಗೆ ಆವಶ್ಯಕವೆಂದು ಭ್ರಮಿಸಿ ಆಹಾರವನ್ನೂ ರುಚಿಯನ್ನೂ ಹೆಚ್ಚಿಸಿಕೊಂಡು ಹೋಗುತ್ತೇವೆ. ಈ ನಮ್ಮ ವರ್ತನೆ ಸ್ವಾರ್ಥಪರರಾಗಲು ಪ್ರಚೋದಿಸುತ್ತದೆ. ಆಗ ನಾವು ಇಂದ್ರಿಯಗಳ ಗುಲಾಮರಾಗುತ್ತೇವೆ.

ನಾವು ನಮ್ಮ ದೇಹಪೋಷಣೆಗೆ ಅಗತ್ಯವಾಗಿ ಬೇಕಾದುದಷ್ಟನ್ನು ಮಾತ್ರ ಆಹಾರವಾಗಿ ತೆಗೆದುಕೊಳ್ಳತೊಡಗಿದರೆ ನಮ್ಮ ಇಂದ್ರಿಯಗಳು ನಮ್ಮ ಹತೋಟಿಗೊಳಪಡುತ್ತವೆ; ಸ್ವಾರ್ಥನಿಗ್ರಹಕ್ಕೆ ಮಾರ್ಗವಾಗುತ್ತದೆ; ಆರೋಗ್ಯದಿಂದ ಬಾಳುತ್ತೇವೆ.

ಅಸ್ತೇಯ-- ನಮ್ಮ ಬಾಳಿನ ಗುರಿ ಸತ್ಯ. ಪ್ರೇಮ ಅದರ ಸಾಧನಾಮಾರ್ಗ. ಈ ದಾರಿಯನ್ನು ನಡೆಸುವವನು ಅಸ್ತೇಯವನ್ನು ಆಚರಿಸಬೇಕು. ಆದರೂ ನಮ್ಮಲ್ಲಿ ಪ್ರತಿಯೊಬ್ಬರೂ ಅರಿತೋ ಅರಿಯದೆಯೋ ಕಳ್ಳರಾಗಿದ್ದೇವೆ. ಇತರರ ವಸ್ತುವನ್ನಷ್ಟೇ ಅಲ್ಲ ತನ್ನದೆಂದೇ ತಿಳಿದುಕೊಂಡಿರುವುದರ ಉಪಯೋಗದಲ್ಲಿಯೂ ಹಲವು ವೇಳೆ ಮನುಷ್ಯ ಕಳ್ಳನಾಗುತ್ತಾನೆ. ನಮಗೆ ಆವಶ್ಯಕವಿಲ್ಲದ ವಸ್ತುವನ್ನು ನಾವು ಮತ್ತೊಬ್ಬನಿಂದ ಅವನ ಅಪ್ಪಣೆಯನ್ನು ಪಡೆದು ತೆಗೆದುಕೊಂಡರೂ ಅದು ಕಳ್ಳತನವೇ. ಯಾರೊಬ್ಬರೂ ತಮಗೆ ನಿಜವಾಗಿ ಆವಶ್ಯಕವಿಲ್ಲದ ವಸ್ತುವನ್ನು ಉಪಯೋಗಿಸಲೇ ಕೂಡದು. ಈ ವಿಚಾರಕ್ಕೆ ನಾವು ಸ್ವಲ್ಪ ಗಮನಕೊಟ್ಟರೆ ನಮ್ಮ ಅನೇಕ ಅಭಿಲಾಷೆಗಳನ್ನು ತೊರೆಯಬಹುದೆಂದು ನಾವು ಅರಿಯಬಹುದು. ಈ ಪ್ರಪಂಚದಲ್ಲಿ ದುಃಖಕರವಾದ ಬಡತನಕ್ಕೆ ಬಹುಮಟ್ಟಿಗೆ ಈ ಸ್ತೇಯ ಕಾರಣ.

ಮೇಲೆ ಹೇಳಿರುವುದು ಬಾಹ್ಯ ಕಳ್ಳತನ. ಇದಕ್ಕೂ ಕೀಳಾದುದು ಮಾನಸಿಕ ಕಳ್ಳತನ. ಮತ್ತೊಬ್ಬರಿಗೆ ಸೇರಿದ ವಸ್ತುವನ್ನು ತಾನು ಪಡೆಯಬೇಕೆಂಬ ದುರಾಶೆ ಮಾನಸಿಕ ಕಳ್ಳತನ.

ನಮ್ಮ ತಾತ್ಕಾಲಿಕ ಉಪಯೋಗಕ್ಕೆ ಬೇಕಾಗುವಷ್ಟು ಮಾತ್ರ ಇಟ್ಟುಕೊಂಡು ಮಿಕ್ಕುದನ್ನು ಅದರ ಅವಶ್ಯಕತೆ ಇರುವವರಿಗೆ ಬಿಡದಿದ್ದರೆ ಒಂದು ವಿಧದಲ್ಲಿ ಕಳ್ಳರೆನಿಸಿಕೊಳ್ಳುತ್ತೇವೆ. ಪ್ರಕೃತಿಯು ಸ್ವಾಭಾವಿಕವಾಗಿ ದಿನದಿನವೂ ನಮಗೆ ಬೇಕಾದಷ್ಟು ಸೃಷ್ಟಿಸುತ್ತದೆ. ಪ್ರತಿಯೊಬ್ಬನೂ ತನಗೆ ಅಗತ್ಯವಿದ್ದುದನ್ನು ಮಾತ್ರ ತೆಗೆದುಕೊಂಡರೆ ಬಡತವೇ ಇರುವುದಿಲ್ಲ; ಹೊಟ್ಟೆಗಿಲ್ಲದೆ ಯಾರೂ ಸಾಯುವುದಿಲ್ಲ. ನಮ್ಮ ದೇಶದ ಬಡತನ ನೀಗಬೇಕಾದರೆ ತನಗೆ ತಾತ್ಕಾಲಿಕವಾಗಿ ಅಗತ್ಯವಾಗಿರುವುದಕ್ಕಿಂತ ಹೆಚ್ಚಾಗಿ ಶೇಖರಿಸುವ ಸ್ತೇಯ ಅಥವಾ ಕಳ್ಳತನ ಕಣ್ಮರೆಯಾಗಬೇಕು.

ಅಪರಿಗ್ರಹ—ಅಸ್ತೇಯನಿಯಮವನ್ನು ಆಚರಿಸುವವನು ಮುಂದೆ ತಾನೇನನ್ನೂ ಶೇಖರಿಸಿಡಬೇಕೆಂಬ ವಿಚಾರವನ್ನೇ ಮಾಡುವುದಿಲ್ಲ. ಅನೇಕ ಕಳ್ಳತನಗಳಿಗೆ ಈರೀತಿಯಲ್ಲಿ ಭವಿಷ್ಯಕ್ಕಾಗಿ ಶೇಖರಿಸುವ ಕೆಟ್ಟ ಆಸಕ್ತಿಯೇ ಮೂಲಕಾರಣ. ಇಂದು ನಾವು ಒಂದು ವಸ್ತು ಪಡೆಯಲು ಆಶಿಸಿದರೆ ನಾಳೆ ಅದನ್ನು ಪಡೆಯಲು ದುಷ್ಟವಾದ ಮಾರ್ಗವನ್ನಾದರೂ ಅವಲಂಬಿಸಲು ಯೋಚಿಸುತ್ತೇವೆ.

ಸ್ವಾಮ್ಯಭಾವನೆಯು ಅಸ್ತೇಯದೊಂದಿಗೆ ಸೇರಿದೆ. ಒಂದು ವಸ್ತುವನ್ನು ಕದಿಯದಿದ್ದರೂ ಅವಶ್ಯಕತೆಯಿಲ್ಲದಿದ್ದಲ್ಲಿ ತನ್ನೊಡನಿಟ್ಟುಕೊಂಡಿರುವುದು ಸ್ತೇಯವೆಂದೇ ಭಾವಿಸಬೇಕು. ತನಗೆ ಕೂಡಲೆ ಅಗತ್ಯವಿಲ್ಲದುದನ್ನು ಭವಿಷ್ಯಕ್ಕೆಂದು ಕಾದಿಟ್ಟುಕೊಂಡಿರುವುದಕ್ಕೆ ಸ್ವಾಮ್ಯವೆಂದು ಹೇಳಬಹುದು. ಸತ್ಯಾನ್ವೇಷಿಯೂ ಪ್ರೇಮನಿಯಮವನ್ನು ಅನುಸರಿಸುವವನೂ ಮುಂದಕ್ಕೆಂದು ಏನನ್ನೂ ಪಡೆಯಲಾರನು. ಪ್ರಕೃತಿ ಕಾಲಕಾಲಕ್ಕೆ ಎಷ್ಟೆಷ್ಟು ಬೇಕೋ ಅಷ್ಟಷ್ಟನ್ನು ಹೊರತು ಅನಗತ್ಯವಾಗಿ ಸೃಷ್ಟಿಸುವುದಿಲ್ಲ.

ಈಗಿರುವ ರೀತಿಯಲ್ಲಿ ಬಡವರಷ್ಟೇ ಅಲ್ಲದೆ ಶ್ರೀಮಂತರೂ ಕಡಿಮೆಯಿಲ್ಲದ ಅತೃಪ್ತರಾಗಿದ್ದಾರೆ. ಬಡವನು ಲಕ್ಷಾಧಿಕಾರಿಯಾಗಬೇಕೆಂದೂ

ಲಕ್ಷಾಧೀಶನು ಕೋಟ್ಯಾಧೀಶನಾಗಬೇಕೆಂದೂ ಕಾತುರಪಡುವರು. ಸರ್ವರಲ್ಲಿಯೂ ತೃಪ್ತಿಯನ್ನು ಹರಡಲೋಸುಗ ಶ್ರೀಮಂತರು ಕೂಡಿಟ್ಟಿರುವ ತಮ್ಮ ಆಸ್ತಿಯನ್ನು ತ್ಯಾಗಮಾಡಲು ಮುಂದೆ ಬರಬೇಕು. ತಮಗೆ ಆಗತ್ಯವಿದ್ದಷ್ಟು ಆಸ್ತಿಯನ್ನು ಹೊಂದಿದ್ದರೆ ಮಾತ್ರ ದುಡಿದರೂ ಹೊಟ್ಟೆಗಿಲ್ಲದೆ ಬಳಲುವವರಿಗೆ ಸಾಕಾದಷ್ಟು ಅನ್ನ ದೊರೆಯುತ್ತದೆ. ಆಗ ಎಲ್ಲರೂ ತೃಪ್ತರಾಗಿ ಬಾಳುವಂತಾಗುತ್ತದೆ.

ಸಂಸ್ಕೃತಿ ಅದರ ನಿಜವಾದ ಅರ್ಥದಲ್ಲಿ ಬೇಕುಬೇಕೆಂದು ನಮ್ಮ ಆಸೆಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿಲ್ಲ; ಆದರೆ ಪ್ರಯತ್ನಪೂರ್ವಕವಾಗಿ ಅವುಗಳನ್ನು ಕಡಮೆಮಾಡಿಕೊಳ್ಳುವುದರಲ್ಲಿದೆ.

ಸ್ವದೇಶಿ—ನಮ್ಮ ಊರಿನಲ್ಲಿ ದೊರೆಯುವ ಪದಾರ್ಥಗಳನ್ನು ಬೇರೆ ಕಡೆಯಿಂದ ಕೊಳ್ಳುವುದು ಅನ್ಯಾಯ. ಸ್ವದೇಶಿ ಸಾಮಾನುಗಳು ಗುಣದಲ್ಲಿ ಕೀಳಾದರೂ ಸಹಿಸಿಕೊಂಡು ಉಪಯೋಗಿಸುತ್ತ ಅವುಗಳನ್ನು ಉತ್ತಮಗೊಳಿಸಲು ಯತ್ನಿಸಬೇಕು. ಆಗ ದೇಶ ಅಭಿವೃದ್ಧಿಮಾರ್ಗ ಹಿಡಿಯುತ್ತದೆ.

ನಿರ್ಭಯ ಮನಸ್ಸಿನಲ್ಲಿದ್ದ ಭಾವವನ್ನು ವ್ಯಕ್ತಪಡಿಸುವುದಕ್ಕೆ ಹೆದರುವುದು ಹೇಡಿತನ. ಮನಸ್ಸಿಗೆ ಸರಿಯೆನಿಸಿದ ಯಾವ ಕೆಲಸ ಮಾಡುವಾಗಲೂ ದೇವರಿಗೆ ಹೊರತು ಮತ್ತಾರಿಗೂ ಹೆದರಬೇಕಾಗಿಲ್ಲ. ಭಯವು ಸತ್ಯಸಾಧನೆಗೆ ಅಡ್ಡಿಯಾಗುತ್ತದೆ.

ಗೀತೆಯಲ್ಲಿ ನಿರ್ಭಯಕ್ಕೆ ಸರ್ವಶ್ರೇಷ್ಠಸ್ಥಾನವು ಸಿಕ್ಕಿದೆ. ಏಕೆಂದರೆ ಉಳಿದ ಉದಾತ್ತ ಗುಣಗಳ ಬೆಳವಣಿಗೆಗೆ ಇದು ಅಪರಿಹಾರ್ಯವಾದದ್ದು. ನಿರ್ಭಯವಿಲ್ಲದೆ ಸತ್ಯಾನ್ವೇಷಣೆಯಾಗಲಿ ಪ್ರೇಮಾಭಿವೃದ್ಧಿಯಾಗಲಿ ಸಾಧ್ಯವಿಲ್ಲ. ಹರಿಯ ಮಾರ್ಗ ಧೀರರ ಮಾರ್ಗ; ಹೇಡಿಗಳದಲ್ಲ. ಇಲ್ಲಿ ಹರಿ ಎಂದರೆ ಸತ್ಯ, ಧೀರರೆಂದರೆ ನಿರ್ಭಯಕವಚ ತೊಟ್ಟಿರುವವರು.

ಖಡ್ಗ ಬಂದೂಕು ಮೊದಲಾದುವುಗಳನ್ನು ತೊಟ್ಟವರು ಧೀರರಲ್ಲ; ಇವುಗಳನ್ನು ಭಯಪೀಡಿತರು ತೊಡುತ್ತಾರೆ.

ನಿರ್ಭಯತೆ ಎಂದರೆ ಸತ್ಯಕ್ಕಾಗಿ ಎಲ್ಲ ಬಾಹ್ಯ ಬಯದಿಂದಲೂ ಬಿಡುಗಡೆ ಹೊಂದುವುದು. ಮೋಹಪೀಡಿತನಾಗಿರುವವನು, ಕೀರ್ತಿಯ ಆಸೆಯುಳ್ಳವನು, ಅಧಿಕಾರಲಾಲಸೆಯುಳ್ಳವನು ಭಯಗ್ರಸ್ತನೆಂದೇ ಹೇಳಬೇಕು. ಅನ್ಯಾಯವನ್ನೂ ಅಸತ್ಯವನ್ನೂ ಹಿಂಸೆಯನ್ನೂ ಧೈರ್ಯದಿಂದ ಎದುರಿಸಿ ಅದರ ನಿವಾರಣೆಗೆ ದುಡಿಯುವವನೇ ನಿರ್ಭಯನು.

ಶರೀರಶ್ರಮ — ಯಜ್ಞ ಮಾಡದೆ ಊಟಮಾಡುವವನು ಕದ್ದ ಆಹಾರವನ್ನು ತಿನ್ನುತ್ತಾನೆ ಎಂದು ಗೀತೆ ಹೇಳಿದೆ. ಇಲ್ಲಿ ಯಜ್ಞವೆಂದರೆ ಮತ್ತೇನೂ ಅಲ್ಲ, ಆಹಾರಕ್ಕೋಸ್ಕರ ದೇಹಶ್ರಮ. ಕಾರ್ಯಕಾರಣವಿಚಾರವು ನಮ್ಮನ್ನು ಇದೇ ರೀತಿಯ ನಿರ್ಧಾರಕ್ಕೆ ಒಯ್ಯುತ್ತದೆ. ಹೀಗಿರುವಲ್ಲಿ ದುಡಿಯದವನು ಉಣ್ಣಲು ಹೇಗೆ ಅರ್ಹನಾದಾನು? 'ಶರೀರ ಶ್ರಮದಿಂದ ನಿನ್ನ ಆಹಾರ ಸಂಪಾದಿಸು' ಎಂದು ಬೈಬಲ್ ಹೇಳುತ್ತದೆ.

ಸೋಂಬೇರಿಯಾದ ಲಕ್ಷಾಧೀಶನಿಗೆ ಆಹಾರವನ್ನು ಬಾಯಿಗಿಡುತ್ತಾ ಹೋದರೆ ಸ್ವಲ್ಪ ದಿನಗಳಲ್ಲಿಯೇ ಹಸಿವುಗೆಟ್ಟು ಅವನ ಆರೋಗ್ಯ ಕೆಡುತ್ತದೆ. ಅದರಿಂದ ಅವನು ಏನಾದರೊಂದು ವ್ಯಾಯಾಮ ಮಾಡಿ ಹಸಿವು ಉಂಟುಮಾಡಿಕೊಳ್ಳಬೇಕು. ಪ್ರತಿಯೊಬ್ಬನೂ ಹೀಗೆಯೇ ಯಾವುದಾದರೂ ಒಂದು ರೀತಿಯಲ್ಲಿ ವ್ಯಾಯಾಮಮಾಡಬೇಕೆಂದು ಹೇಳುವುದಾದರೆ ಅದು ಆಹಾರವನ್ನು ಸಂಪಾದಿಸುವ ಮಾರ್ಗವನ್ನೇ ಏಕೆ ಅವಲಂಬಿಸಬಾರದು! ಅಂದರೆ 'ಕೆಲಸ-ಅನ್ನ'. ರೈತನಿಗೆ ಯಾರೂ ಶ್ವಾಸಕೋಶದ ಶಕ್ತಿಯನ್ನು ಹೆಚ್ಚಿಸುವ, ಮಾಂಸಖಂಡಗಳಿಗೆ ಶಕ್ತಿ ಕೊಡುವ ವ್ಯಾಯಾಮ ಮಾಡಲು ಎಂದೂ ಹೇಳುವುದಿಲ್ಲ. ಹತ್ತರಲ್ಲಿ ಒಂಬತ್ತುಪಾಲು ಜನ ಭೂಮಿಯನ್ನು ಉತ್ತು ಜೀವನಮಾಡುತ್ತಾರೆ. ಉಳಿದ ಹತ್ತನೆಯ ಒಂದುಪಾಲು ಜನವೂ ತಮ್ಮ ಆಹಾರ ಸಂಪಾದನೆಗೆ

ಬೇಕಾದಷ್ಟು ಬೆವರು ಸುರಿಸುವ ಕೆಲಸವನ್ನು ಮಾಡಿದರೆ ಈ ಪ್ರಪಂಚ ಈಗ್ಗಿಂತ ಎಷ್ಟೋ ಸುಖಕರವಾಗಿ ಆರೋಗ್ಯಕರವಾಗಿ ಶಾಂತಿಕರವಾಗಿ ಇರುತ್ತದೆ. ಹೊರತಿಲ್ಲದೆ ಪ್ರತಿಯೊಬ್ಬರೂ 'ಕೆಲಸ-ಅನ್ನ' ತತ್ವವನ್ನು ಅನುಸರಿಸಿ ಬಾಳಿದರೆ ಅರ್ಥವಿಲ್ಲದ ಸಮಾಜದ ಬೇಧಗಳು ನಿವಾರಣೆ ಆಗುವುವು.

ಸರ್ವಧರ್ಮಸಮಭಾವನೆ—ತನ್ನ ಧರ್ಮ ಹಿರಿದು ಅವನದು ಕಿರಿದು ಎಂಬುದು ಅವಿವೇಕ. ನದಿಗಳೆಲ್ಲವುಗಳಿಗಿರುವಂತೆ ಧರ್ಮಗಳಿಗೆಲ್ಲ ಒಂದೇ ಗುರಿ. ನಮ್ಮ ಧರ್ಮಕ್ಕೆ ಕೊಡುವಷ್ಟು ಗೌರವವನ್ನೇ ಇತರರ ಧರ್ಮಗಳಿಗೂ ಸಲ್ಲಿಸಬೇಕು.

ಮನುಷ್ಯನು ಪರಿಪೂರ್ಣನಾಗುವ ವರೆಗೆ ಅವನು ಅನುಸರಿಸುವ ಧರ್ಮವೂ ಅಪರಿಪೂರ್ಣ. ಆದರೂ ಎಲ್ಲ ಮತಗಳೂ ಸತ್ಯವನ್ನು ಮನಗಾಣುವ ಮಾರ್ಗವನ್ನು ಹೇಳುತ್ತವೆ. ಇತರರ ಧರ್ಮದಲ್ಲಿ ಮರ್ಯಾದೆ ತೋರಿಸಿದ ಮಾತ್ರಕ್ಕೆ ಅವುಗಳಲ್ಲಿರುವ ದೋಷಗಳಿಗೆ ಕುರುಡಾಗಬೇಕೆಂದಿಲ್ಲ. ನಮ್ಮ ಮತಗಳಲ್ಲಿರುವ ದೋಷಗಳನ್ನೂ ಅರಿತು ಅವುಗಳನ್ನು ತಿದ್ದಲು ಪ್ರಯತ್ನಿಸಬೇಕು.

ಬಾಳು ಮೇಲ್ಮೆಗೊಂಡಾಗ ಪರಿಪೂರ್ಣಗೊಂಡಾಗ ಎಲ್ಲ ಮತಗಳು ಮಿಶ್ರಪ್ರೇಮದಲ್ಲಿ ಲೀನವಾಗುತ್ತವೆ.

ನಮ್ರತೆ—ನಮ್ರತೆ ಮಾನವರಿಗೆ ಇರಬೇಕಾದ ಸಹಜಗುಣ. ನಮ್ರತೆ ತಾನಾಗಿಯೇ ಒಂದು ಆಚರಣೆಯಾಗಲಾರದು. ಏಕೆಂದರೆ ಅದು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಲು ಬರುವುದಿಲ್ಲ. ನಮ್ರತೆ ಎಂದರೆ ಬರೀ ನಡತೆ ಅಥವಾ ಸಭ್ಯಾಚಾರವೆಂದು ಅಪಾರ್ಥಮಾಡಿಕೊಳ್ಳಬಾರದು. ತನ್ನ ಹೃದಯದಲ್ಲಿ ದ್ವೇಶತುಂಬಿದ್ದರೂ ಎದುರಾಳಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದರೆ ಅದು ನಮ್ರತೆ ಅಲ್ಲ, ಚಾತುರ್ಯ.





ಪ್ರಾರ್ಥನಾ ಸಭೆಗೆ ಹೋಗುತ್ತಿರುವುದು

ಅಹಂಕಾರದಿಂದ ಮುಕ್ತನಾಗಬೇಕು. ತಾನು 'ಬೆಲೆಯುಳ್ಳವನು' ಎಂದು ಊಹಿಸಿಕೊಂಡೊಡನೆಯೇ ಅಲ್ಲಿ 'ಅಹಂ' ಬಂದಂತೆ. ತನ್ನ ಗುಣಗಳಿಗೆ ಜಂಬಪಡುವವನು ಅನೇಕವೇಳೆ ಸಮಾಜಕ್ಕೆ ಹಾನಿಕರವಾಗುತ್ತಾನೆ. ತನ್ನ ನಡತೆ ತನ್ನ ಶೀಲ ಸಾರ್ಥಕವಾದರೆ ಸಾಕು ಎಂದು ನಮ್ರನಾಗಿ ದುಡಿಯುವವನೇ ಧನ್ಯ.

ಅಸ್ಪೃಶ್ಯತೆ--ಇದು ಅನಾದಿಕಾಲದಿಂದ ಬಂದುದೆಂಬುದಕ್ಕೆ ಶಾಸ್ತ್ರಾಧಾರವಿಲ್ಲ. ಇದು ಪುರಾಣಕಾಲದ ಈಚೆಗೆ ಸ್ವಾರ್ಥಪರರಾದವರು ತಮ್ಮ ಲಾಭಕ್ಕಾಗಿ ಕಲ್ಪಿಸಿಕೊಂಡ ಕುತಂತ್ರ. ಇದು ಸನಾತನಿಗಳಿಗೆ ಅಂಟಿ ಬಂದ ಪಾಪ. ಇದು ನಿರ್ನಾಮವಾದ ಹೊರತು ನಮಗೆ ಏಳಿಗೆಯಿಲ್ಲ. ಧರ್ಮದಿಂದ ಬೇರೆಯಾದ ರಾಜಕೀಯ ಅರ್ಥವಿಲ್ಲದ್ದಾಗುತ್ತದೆ. ಆದುದರಿಂದ ರಾಜಕೀಯ ಬೇರೆ, ಧರ್ಮ ಬೇರೆ ಎಂದು ಹೇಳಲಾಗುವುದಿಲ್ಲ.

ಈ ಗುಣಗಳೆಲ್ಲವೂ ಗಾಂಧೀಜಿಯಲ್ಲಿ ಸ್ವಾಭಾವಿಕವಾಗಿ ಬಂದವು. ಜೊತೆಗೆ ತಮ್ಮ ಸಾಧನೆಯಿಂದ ಅವುಗಳಲ್ಲಿ ಪೂರ್ಣತೆಯನ್ನು ಹೊಂದಿದರು. ಈ ಗುಣಗಳನ್ನು ಹೊಂದಿದ ಜನರಿಂದ ತುಂಬಿ ಭಾರತ ಭೂಮಿ ಶೋಭಿಸಲೆಂಬುದು ಅವರ ಬಯಕೆ. ಅದಕ್ಕಾಗಿ ಅವರು ಬಿಡುವಿಲ್ಲದೆ ದುಡಿದರು.

ಈ ಅರೆಬೆತ್ತಲೆಯ ಮಹಾವ್ಯಕ್ತಿ ಅರೆಹೊಟ್ಟೆ ಉಂಡು ಚಿಂದಿಯ ಬಟ್ಟೆಯುಟ್ಟು ಜೀವನದಲ್ಲಿ ಹೆಣಗುತ್ತಿರುವ ಜನತೆಯ ಪ್ರತಿಬಿಂಬವಾಗಿದ್ದರು. ಆ ಜನರ ಜೀವನದ ಹೊರೆಯನ್ನೆಲ್ಲಾ ತಾವೇ ಹೊತ್ತು ಅವರನ್ನು ಮುಕ್ತರನ್ನಾಗಿ ಮಾಡುವ ಆಸೆಯ ರೂಪವಾಗಿದ್ದರು. ಅವರ ಸರಳತೆ, ಸ್ವಚ್ಛತೆ, ದೃಢತೆ, ಪವಿತ್ರ ಜೀವನ ಮತ್ತು ನಿಸ್ವಾರ್ಥ ಪ್ರೇಮ ಭಾರತೀಯರನ್ನೆಲ್ಲಾ ಒಲಿಸಿಕೊಂಡಿದ್ದವು.

ಮಹಾತ್ಮಾಜಿ ಯಾವ ಕೆಲಸವನ್ನೇ ಆಗಲಿ ತಮ್ಮ 'ಅಂತರ್ವಾಣಿ'ಗೆ ಅನುಸಾರವಾಗಿ ಕೈಗೊಂಡು ನಡೆಸಿದರು. ಘನವಾದ ಸಮಸ್ಯೆಗಳ ಪರಿಹಾರ

ಕ್ಕಾಗಿ ಅವರು ಆ ಹೃದಯವಾಣಿಯನ್ನೇ ನಂಬಿದ್ದರು. ಅಂತರ್ವಾಣಿ ಅಥವಾ ದೈವವಾಣಿ ಎಂದರೇನೆಂಬುದನ್ನು ಅವರು ಹೀಗೆ ಹೇಳಿದ್ದಾರೆ:

"ನನ್ನಂಥ ದೀನ ಸತ್ಯಶೋಧಕನು ಬಹಳ ಜಾಗರೂಕನಾಗಿರಬೇಕು, ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಂಡಿರಬೇಕು. ದೇವರು ದಾರಿ ತೋರುವ ಮೊದಲು ಅವನು ಅಹಂಕಾರವನ್ನು ತೊರೆದು ಶೂನ್ಯತ್ವವನ್ನು ಪಡೆಯಬೇಕು. ಈ ವಿಷಯವನ್ನು ವಿಶದಪಡಿಸುವುದಕ್ಕೆ ನಾನು ಕಷ್ಟಪಡಬೇಕಾಗಿಲ್ಲ. ನಾನು ಹೇಳುವುದರಲ್ಲಿ ಅಸಾಮಾನ್ಯವಾದುದೇನೂ ಇಲ್ಲ. ಸ್ವಲ್ಪವೂ ಮುಚ್ಚುಮರೆಯಿಲ್ಲದೆ ತಮ್ಮ ಸರ್ವಸ್ವವನ್ನೂ ದೇವರ ಪದತಲದಲ್ಲಿ ಅರ್ಪಿಸುವವರ ಬಾಳನ್ನು ದೇವರು ಸರಿಪಡಿಸುವನು. ಗೀತೆಯಲ್ಲಿ ಹೇಳಿರುವಂತೆ ಪೂರ್ಣ ಅನಾಸಕ್ತರಾಗಿರುವವರ ಮೂಲಕ ದೇವರು ಕಾರ್ಯ ನಡಸುತ್ತಾನೆ. ಇಲ್ಲಿ ಮಿಥ್ಯಾಜ್ಞಾನದ ಪ್ರಶ್ನೆಯಿಲ್ಲ. ನಾನು ಹೇಳಿರುವುದು ಸುಗಮವಾದ ಒಂದು ವೈಜ್ಞಾನಿಕ ಸತ್ಯ. ಸಾಕಷ್ಟು ತಾಳ್ಮೆ ಮತ್ತು ಮನೋದಾರ್ಢ್ಯವುಳ್ಳವರು ಇದನ್ನು ಪರೀಕ್ಷಿಸಬಹುದು."

ಇತರರು ದೇಶದ ಅಥವಾ ಜನತೆಯ ಹಿತದೃಷ್ಟಿಯಲ್ಲಿ ತಪ್ಪು ಮಾಡಿದರೆ ಆ ತಪ್ಪಿಗೆ ಪ್ರಾಯಶ್ಚಿತ್ತರೂಪವಾಗಿ ತಾವು ಉಪವಾಸವ್ರತ ಕೈಗೊಳ್ಳುವುದನ್ನು ಮಹಾತ್ಮರು ಬಹು ದಿನದಿಂದ ಬೆಳಸಿಕೊಂಡು ಬಂದಿದ್ದರು. ಅದರಿಂದ ತಪ್ಪು ಮಾಡಿದವರ ಅಂತಃಕರಣಶುದ್ಧಿಯಾಗಿ ತಮ್ಮ ತಪ್ಪನ್ನು ತಿದ್ದಿಕೊಳ್ಳುವರೆಂಬುದು ಅವರ ನಂಬಿಕೆ. ಅವರು ಉಪವಾಸವ್ರತವನ್ನು ಆಚರಿಸಿದ ಎಲ್ಲಾ ಸಂದರ್ಭಗಳಲ್ಲಿಯೂ ಇದು ನಿಜವಾಗಿ ಪರಿಣಮಿಸಿದೆ. ತಮ್ಮ ಉಪವಾಸದ ವಿಷಯದಲ್ಲಿ ಅವರು ಹೇಳುವುದಿದು:

"ನಾನು ಯಾರಿಗಾಗಿ ಉಪವಾಸವನ್ನು ಕೈಗೊಂಡಿದ್ದೇನೋ ಅವರ ಹೆಸರನ್ನಾಗಲಿ, ಸಂಖ್ಯೆಯನ್ನಾಗಲಿ ಹೇಳಲು ಸಾಧ್ಯವಿಲ್ಲ. ಲಕ್ಷಾಂತರ ಸಂಖ್ಯೆಯಲ್ಲಿರುವ ಅವರಿಗೂ ನನಗೂ ಒಂದು ಗಾಢ ಸಂಬಂಧ

ವಿದೆ. ಅವರ ಮನಸ್ಸನ್ನು ಅವರಿಗೇ ತಿಳಿಯದಂತೆ ಪರಿಣಾಮಗೊಳಿಸುವುದೇ ಇದರ ಉದ್ದೇಶ. ಇಂತಹ ಉಪವಾಸಗಳು ಹೇಗೆ ಪರಿಣಾಮಕಾರಿಗಳಾಗುತ್ತವೋ ಹೇಳಲಾರೆ. ಆದರೆ ಅವು ಪರಿಣಾಮಕಾರಿಗಳಾಗುತ್ತವೆಂಬುದನ್ನು ನನ್ನ ಅನುಭವದಲ್ಲೇ ಅನೇಕಸಲ ಕಂಡಿದ್ದೇನೆ............ ಜನರು ತಮ್ಮ ಮನಸ್ಸಿಗೆ ವಿರೋಧವಾಗಿ ನಡೆಯುವಂತೆ ಮಾಡುವುದು ನನ್ನ ಉಪವಾಸದ ಉದ್ದೇಶವಲ್ಲ. ಅಶಕ್ತರಿಗೆ ಶಕ್ತಿ ನೀಡುವುದಕ್ಕೂ ಸೋಮಾರಿಗಳನ್ನು ಕಾರ್ಯಪರರನ್ನಾಗಿ ಮಾಡುವುದಕ್ಕೂ ಸಂದೇಹವಾದಿಗಳಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕೂ ಅದು ಸಹಾಯಕವಾಗುತ್ತದೆ. ಯಾರಿಗೆ ಸುಧಾರಣೆಯಲ್ಲಿ ವಿಶ್ವಾಸವಿಲ್ಲವೋ ಅವರ ಮೇಲೆ ನನ್ನ ಉಪವಾಸ ಯಾವ ಪರಿಣಾಮವನ್ನೂ ಮಾಡುವುದಿಲ್ಲ. ಮಾತ್ರವಲ್ಲದೆ ಅದು ದುರಂತವಾದರೆ ಅವರಿಗೆ ಸಂತೋಷವಾಗುತ್ತದೆ ಎಂಬುದು ಸ್ವಲ್ಪ ಯೋಚಿಸಿದರೆ ತಿಳಿಯುತ್ತದೆ. ಮಾನರಕ್ಷಣೆಗಾಗಿ ಮಾತ್ರವಲ್ಲದೆ ನನ್ನಲ್ಲಿ ನಂಬಿಕೆಯುಳ್ಳ ಸಾವಿರಾರು ಜನರಲ್ಲಿ ಸತ್ಕಾರ್ಯಪ್ರವೃತ್ತಿಯನ್ನು ಹುಟ್ಟಿಸುವುದಕ್ಕೂ ಸಂದರ್ಭವೊದಗಿದಾಗ ಉಪವಾಸ ಕೈಕೊಳ್ಳುವುದು ಅವಶ್ಯ. ಧಾರ್ಮಿಕ ಸ್ವಭಾವದ ಪ್ರತಿಯೊಂದು ಚಳವಳಿಯಲ್ಲಿಯೂ ಇದೇ ಮನೋಭಾವ ಮುಖ್ಯ."

ಮಹಾತ್ಮರ ಮತವಾವುದು ಎಂಬುದನ್ನು ಅವರ ಮಾತಿನಲ್ಲೇ ತಿಳಿಯೋಣ. "ನಾನೊಬ್ಬ ಸನಾತನಿ. ತಾವು ಸನಾತನಿಗಳೆಂದು ಹೇಳಿಕೊಂಡು ಹಿಂದೂಧರ್ಮದಲ್ಲಿ ಅಸ್ಪೃಶ್ಯತೆಗೆ ಆಧಾರವಿದೆ ಎಂದು ಶಾಸ್ತ್ರಾಧಾರವನ್ನು ತೋರಿಸಲು ಪ್ರಯತ್ನಿಸುವವರ ಸನಾತನ ಧರ್ಮದ ಅರ್ಥಕ್ಕೂ ನನ್ನ ಅರ್ಥಕ್ಕೂ ಅಜಗಜಾಂತರ. ನನಗೆ ಸನಾತನಧರ್ಮ ವೇದಗಳ ಆಧಾರದ ಮೇಲೆ ನಿಂತು ಅನಾದಿಯಿಂದಲೂ ಜನಾಂಗಕ್ಕೆ ದತ್ತವಾಗಿ ಬಂದ ಧರ್ಮ. ದೇವರನ್ನೂ ಹಿಂದೂ ಧರ್ಮವನ್ನೂ ಹೇಗೆ ವರ್ಣಿಸಲು ಅಸದಳವೋ ಅಂತೆಯೇ ವೇದಗಳನ್ನೂ ವರ್ಣಿಸಲು ಬಾರದು. ಈ ವೇದದಲ್ಲಿರುವುದು

ಅಪರಿಚಿತ ಋಷಿವರ್ಯರ ವಾಕ್ಯಗಳು. ಅವರ ಮುಂದಿನವರು ತಮಗೆ ಹೊಳೆದದ್ದನ್ನು ಅದಕ್ಕೆ ಸೇರಿಸಿದ್ದಾರೆ. ಆ ಪರ್ವಕಾಲದಲ್ಲಿ 'ಗೀತೆ'ಯನ್ನು ರಚಿಸಿದ ವಿಭೂತಿ ಉದ್ಭವಿಸಿದನು. ಅವನು ಜನಾಂಗಕ್ಕೆ ಸನಾತನ ಧರ್ಮದ ಸಾರವನ್ನು ಹಿಂಡಿಕೊಟ್ಟನು. ಅದು ಏಕಕಾಲದಲ್ಲಿ ವೇದಾಂತ ವಿಚಾರಪೂರಿತವಾಗಿಯೂ ಯಾವ ಸತ್ಯಾನ್ವೇಷಕನಿಗೂ ಗೊತ್ತಾಗು ವಂತೆಯೂ ಇದೆ. ಮನಸ್ಸಿಟ್ಟು ಓದಬೇಕೆನ್ನುವ ಸನಾತನಿಗೆ ಇದು ಅಮೂಲ್ಯವಾದ ಗ್ರಂಥ. ಅಲ್ಲದೆ ಎಲ್ಲಾ ಶಾಸ್ತ್ರ ಗ್ರಂಥಗಳು ಭಸ್ಮವಾಗಿ ಹೋದರೂ ಏಳುನೂರು ಶ್ಲೋಕಗಳ ಈ ಅಮರವಾದ ಗ್ರಂಥವೊಂದೇ ಸಾಕು, ಹಿಂದೂ ಧರ್ಮವೇನೆಂಬುದನ್ನು ಹೇಳುವುದಕ್ಕೆ. ನಲವತ್ತುವರ್ಷ ಗಳಿಂದಲೂ ಆ ಗ್ರಂಥದ ಉಪದೇಶವನ್ನು ಅಕ್ಷರಶಃ ಅನುಸರಿಸಿ ಬಾಳನ್ನು ರೂಪುಗೊಳಿಸುತ್ತಿದ್ದೇನೆ. ಅದರ ನಿಜಾರ್ಥಕ್ಕೆ ವಿರೋಧವಾಗಿರುವುದನ್ನೆಲ್ಲಾ ತ್ಯಜಿಸುತ್ತೇನೆ. ಸನಾತನಧರ್ಮ ಯಾವ ಪಂಥವನ್ನಾಗಲಿ ಯಾವ ಗುರುವನ್ನಾಗಲಿ ದೂರೀಕರಿಸಿಲ್ಲ. ಕೊರಾನ್, ಬೈಬಲ್, ಅವೆಸ್ತ ಮತ್ತು ಇತರ ಧರ್ಮಶಾಸ್ತ್ರಗಳನ್ನು ಗೀತೆಯಲ್ಲಿಟ್ಟಿರುವ ಭಕ್ತಿಯಿಂದಲೇ ಅಭ್ಯಾಸಿ ಸಿದ್ದೇನೆ. ಈ ಅಭ್ಯಾಸ ಗೀತೆಯಲ್ಲಿನ ನನ್ನ ಭಕ್ತಿಯನ್ನು ಇನ್ನೂ ಹೆಚ್ಚಿಸಿದೆ: ನನ್ನ ದೃಷ್ಟಿಯನ್ನು ವಿಕಾಸಗೊಳಿಸಿ ನನ್ನ ಸನಾತನಧರ್ಮ ವಿಶಾಲವಾದದ್ದೆಂಬುದನ್ನು ತೋರಿಸಿಕೊಟ್ಟಿದೆ.

ಜೊರಾಷ್ಟರ್, ಕ್ರಿಸ್ತ ಮತ್ತು ಮಹಮದ್ ಇವರ ಜೀವನ ನಾನು ತಿಳಿದುಕೊಂಡಿರುವವಮಟ್ಟಿಗೆ ಗೀತೆಯ ಹಲವು ಶ್ಲೋಕಗಳನ್ನು ಪ್ರಕಾಶಗೊಳಿಸಿದೆ. ಆದುದರಿಂದ ಸನಾತನಿಗಳು ನನ್ನನ್ನು ಎಷ್ಟೆಷ್ಟು ಎದುರಿಸಿದರೆ ಅಷ್ಟಷ್ಟು ಆ ವಿಷಯದಲ್ಲಿ ಗೀತೆಯ ಆಶ್ರಯ ಹೊಂದಲು ಅದು ಪ್ರೇರಿಸುತ್ತದೆ. ನಾನು ಹಿಂದುವೆಂದು ಹೇಳಿಕೊಳ್ಳಲು ನನಗೆ ಹೆಮ್ಮೆಯನ್ನುಂಟುಮಾಡುತ್ತದೆ. ಏಕೆಂದರೆ ಹಿಂದೂಧರ್ಮ ಮತ ಸಹಿಷ್ಣುತೆಯನ್ನು ತೋರುವುದಲ್ಲದೆ ಪ್ರಪಂಚದ ಧರ್ಮವನ್ನೆಲ್ಲ ಹೀರಿ

ಕೊಳ್ಳುವಷ್ಟು ವಿಶಾಲವಾದ ಧರ್ಮ. ಈ ಜೀವನಗೀತೆಯಲ್ಲಿ ಅಸ್ಪೃಶ್ಯತೆಗೆ ಯಾವ ಆಧಾರವೂ ಇಲ್ಲ. ಅದಕ್ಕೆ ಬದಲಾಗಿ ದೈವಿಕಭಾಷೆಯಲ್ಲಿ ಎಲ್ಲರೂ ದೇವರಿಂದ ಬಂದಿದ್ದು ಮತ್ತೆ ಅಲ್ಲಿಗೇ ಹೋಗಬೇಕು ಎಂಬ ತತ್ವದ ಹೊಳಪನ್ನು ನನ್ನ ಹೃದಯಕ್ಕೆ ತಂದುಕೊಟ್ಟಿದೆ. ಸನಾತನ ಧರ್ಮ ಹೇಳುವುದಿದು. ಜೀವನ ಹೊರಗಡೆಯ ಆಚಾರ ಮತ್ತು ವ್ರತಗಳಿಂದ ಪವಿತ್ರವಾಗದು ; ಅದು ಆಂತರಿಕವಾಗಿ ಪವಿತ್ರವಾಗಿರಬೇಕು, ಆತ್ಮ ಮತ್ತು ಮನಸ್ಸು ದೇವತ್ವದಲ್ಲಿ ಐಕ್ಯವಾಗಬೇಕು. ಈ ಗೀತಾ ಸಂದೇಶ ವನ್ನು ಸಾವಿರಾರು ಮಂದಿಗೆ ಸಾರಿದ್ದೇನೆ. ಅವರು ಅದನ್ನು ಆಲಿಸಿರು ವುದು ನಿಜವಾಗಿಯೂ ನನ್ನ ರಾಜಕೀಯ ನೀತಿಗಾಗಿ ಅಲ್ಲ, ನನ್ನ ವಾಗ್ಮಿತೆಗಾಗಿಯೂ ಅಲ್ಲ; ಆದರೆ ನಾನು ಅವರಲ್ಲೊಬ್ಬನೆಂದು, ಅವರ ಧರ್ಮಕ್ಕೆ ಸೇರಿದವನೆಂದು. ದಿನಗಳು ಉರುಳಿದಂತೆ ನಾನು ಸನಾತನಿ ಎಂಬ ನಂಬಿಕೆ ಹೆಚ್ಚು ಹೆಚ್ಚು ಸ್ವಚ್ಛವಾಗುತ್ತಿದೆ.''

ಒಮ್ಮೆ ಸರ್. ರಾಧಾಕೃಷ್ಣನ್ ಅವರು ಈ ಮೂರು ಪ್ರಶ್ನೆಗಳಿಗೆ ಉತ್ತರವೀಯುವಂತೆ ಗಾಂಧೀಜಿಯನ್ನು ಕೇಳಿದರು. ನಿಮ್ಮ ಧರ್ಮವಾ ವುದು? ನೀವು ಅದನ್ನು ಅನುಸರಿಸುವ ಬಗೆಹೇಗೆ? ಸಾಮಾಜಿಕ ಜೀವನದ ಮೇಲೆ ಅದರ ಪರಿಣಾಮವೇನು? ಈ ಪ್ರಶ್ನೆಗಳಿಗೆ ಗಾಂಧೀಜಿಯ ಉತ್ತರವಿದು :

" ನನ್ನದು ಹಿಂದೂಧರ್ಮ. ನನಗೆ ತಿಳಿದ ಎಲ್ಲಾ ಧರ್ಮಗಳ ಸಾರವನ್ನೊಳಕೊಂಡಿರುವುದರಿಂದ ಇದು ಮಾನವರೆಲ್ಲರ ಧರ್ಮವೆಂದು ತಿಳಿದಿದ್ದೇನೆ.

" ಎರಡನೆಯ ಪ್ರಶ್ನೆಯಲ್ಲಿ ಭೂತಕಾಲಕ್ಕೆ ಬದಲಾಗಿ ವರ್ತಮಾನ ಕಾಲವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದಂತಿದೆ. ನನ್ನನ್ನು ನನ್ನ ಧರ್ಮಕ್ಕೊಯ್ಯುತ್ತಿರುವುದು ಸತ್ಯ, ಅಹಿಂಸೆ ಮತ್ತು ವಿಶ್ವಪ್ರೇಮ. ನಾನು ಅನೇಕವೇಳೆ ನನ್ನದು ಸತ್ಯದ ಧರ್ಮವೆಂದು ಹೇಳಿದ್ದೇನೆ.

ಇತ್ತೀಚಿಗೆ ' ದೇವರು ಸತ್ಯಸ್ವರೂಪನು ' ಎನ್ನುವುದಕ್ಕೆ ಬದಲು ' ಸತ್ಯವೇ ದೇವರು ಎಂದು ಹೇಳುತ್ತಿದ್ದೇನೆ. ಇದರಿಂದ ನನ್ನ ಮತದ ಸ್ವರೂಪ ಸ್ಫುಟವಾಗಿದೆಯೆಂದು ನಂಬಿದ್ದೇನೆ. ಈಗ ನನ್ನ ದೇವರನ್ನು ವರ್ಣಿಸುವುದಕ್ಕೆ ' ಸತ್ಯ 'ದಷ್ಟು ಒಳ್ಳೆಯ ಶಬ್ದ ಬೇರೊಂದಿಲ್ಲ. ದೇವರನ್ನು ನಿರಾಕರಿಸುವುದನ್ನು ನಾವು ನೋಡಿದ್ದೇವೆ. ಸತ್ಯದ ನಿರಾಕರಣೆ ನೋಡಿದವರಿಲ್ಲ. ಮನುಷ್ಯನು ಎಷ್ಟು ಅಜ್ಞಾನಿಯೇ ಆಗಿರಲಿ ಅವನಲ್ಲಿ ಕೊಂಚವಾದರೂ ಸತ್ಯವಿಲ್ಲದೆ ಇಲ್ಲ. ನಾವೆಲ್ಲರೂ ಸತ್ಯದ ಕಿಡಿಗಳು. ಈ ಎಲ್ಲ ಕಿಡಿಗಳ ಮೊತ್ತವೇ ವರ್ಣನಾತೀತನಾದ ದೇವರು, ಈ ವರೆಗೂ ತಿಳಿಯದಿರುವ ಸತ್ಯ. ನಿರಂತರ ಪ್ರಾರ್ಥನೆಯಿಂದ ನಾನು ಪ್ರತಿದಿನವೂ ಇದನ್ನು ಸಮೀಪಿಸುತ್ತಿದ್ದೇನೆ.

" ಜನರ ದಿನಚರ್ಯೆಯಲ್ಲಿ ನಾವು ಬೆರೆತರೆ ಮಾತ್ರ ಈ ಧರ್ಮದ ಸ್ವರೂಪವನ್ನು ಸಮಾಜ ಜೀವನದಲ್ಲಿ ಕಾಣಬಹುದು. ಅಪಾರವಾದ ಈ ಜೀವನಸಾಗರದಲ್ಲಿ ಬೆರೆತು ಅರಿತ ಹೊರತು ಸತ್ಯದ ಸಾಕ್ಷಾತ್ಕಾರ ಅಸಾಧ್ಯ. ಆದುದರಿಂದ ನನಗೆ ಸಮಾಜ ಸೇವೆಯಿಂದ ಬಿಡುಗಡೆಯಿಲ್ಲ. ಅದನ್ನು ಬಿಟ್ಟರೆ ಇನ್ನೆಲ್ಲಿಯೂ ನನಗೆ ಸುಖವಿಲ್ಲ. ಈ ಸಮಾಜ ಸೇವೆ ಎಲ್ಲಾ ಬಗೆಯ ಜೀವನವನ್ನೊಳಗೊಂಡಿದೆ. ಇದರಲ್ಲಿ ಮೇಲು-ಕೀಳೆಂಬ ಭಾವಕ್ಕೆ ಎಡೆಯಿಲ್ಲ. ಏಕೆಂದರೆ ನಾವೆಲ್ಲಾ ಬೇರೆಬೇರೆಯಾಗಿ ತೋರಿದರೂ ನಿಜವಾಗಿ ಒಂದೇ."

ಮಹಾತ್ಮರು ಜನತೆಗೆ ಗೊತ್ತಾದಂದಿನಿಂದಲೂ ಅವರ ತೇಜಸ್ಸು ಹೆಚ್ಚುತ್ತಲೇ ಬಂತು. ಅವರ ವಿಷಯದಲ್ಲಿ ಜನಜಂಗುಳಿಯಲ್ಲಿ ಮೂಡಿದ ಭಕ್ತಿಯೂ ಪ್ರೀತಿಯೂ ಕುಂದದೆ ಇನ್ನೂ ವೃದ್ಧಿಯಾಗುತ್ತಲೇ ಇದೆ. " ಸೂಕ್ಷ್ಮಶರೀರಿಯಾದ ಇವರಲ್ಲಿ ಯಾವುದೋ ಬಗೆಯ ಉಕ್ಕಿನಂತಹ ಶಕ್ತಿಯಿತ್ತು. ಬಂಡೆಯಂತಿರುವ ಆ ಆತ್ಮಶಕ್ತಿ ಎಷ್ಟೇ ಬಲಶಾಲಿಯಾದ ಪ್ರಕೃತಿಯನ್ನೂ ಗೆಲ್ಲುವಂತಹುದು. ಸಣ್ಣ ಬಟ್ಟೆಯೊಂದನ್ನುಟ್ಟು ಬರಿ

ನೈಯಲ್ಲಿದ್ದು ಅಷ್ಟೇನೂ ಪ್ರೇಕ್ಷಣೀಯರಾಗಿಲ್ಲದಿದ್ದರೂ ಅವರಲ್ಲಿರುವ ಅವರ್ಣನೀಯವಾದ ಒಂದು ರಾಜತ್ವವೂ ಹಿರಿಮೆಯೂ ಮಿಕ್ಕವರಿಂದ ಭಕ್ತಿಯ ಪ್ರಣಾಮವನ್ನು ಪಡೆಯತಕ್ಕಂತಹವಾಗಿದ್ದವು. ಅವರು ಉದ್ದೇಶ ಪೂರ್ವಕವಾಗಿ ಅಶಕ್ತರಾಗಿಯೂ ವಿನೀತರಾಗಿಯೂ ಕಂಡರೂ ಅಧಿಕಾರ ಮತ್ತು ಶಕ್ತಿ ಸಂಪನ್ನರಾಗಿದ್ದರು. ಸಂದರ್ಭಗಳಲ್ಲಿ ಸಾರ್ವಭೌಮ ರೀತಿ ಯಿಂದ ಪರಿಪಾಲಿಸಲೇ ಬೇಕಾದ ಆಜ್ಞೆಗಳನ್ನು ಮಾಡುತ್ತಿದ್ದರು. ಗಂಭೀರ ವಾದ ಶಾಂತವಾದ ಅವರ ಕಣ್ಣು ಜನರ ಮನಸ್ಸನ್ನು ಆಕರ್ಷಿಸಿ ಅವರ ಹೃದಯಾಂತರಾಳವನ್ನು ಮೆಲ್ಲನೆ ಸೇರುತ್ತಿತ್ತು. ಸ್ಪಷ್ಟವಾದ, ಸರಳವಾದ ಅವರ ಧ್ವನಿ ಎದೆಮುಟ್ಟಿ ಮಾರ್ದನಿಗೊಡುತ್ತಿತ್ತು. ಅವರ ಮಾತನ್ನು ಕೇಳುವವರು ಒಬ್ಬರಿರಲಿ, ಸಾವಿರಗಟ್ಟಲೆ ಇರಲಿ, ವ್ಯಕ್ತಿತ್ವದ ಆಕರ್ಷಣ ಶಕ್ತಿ ಪ್ರವಹಿಸಿ ಆ ಜನರಲ್ಲಿ ಮಾತಾಡುವ ಅವರ ಭಾವದ ಪ್ರತಿ ನುಡಿ ಉದ್ಭವಿಸುತ್ತಿತ್ತು. ಈ ಮಂತ್ರಶಕ್ತಿ ವಾಗ್ಮಿತೆಯಿಂದಾಗಲಿ ಸೊಗಸಾದ ವಾಕ್ಯಗಳಿಂದಾಗಲಿ ಬರುತ್ತಿರಲಿಲ್ಲ. ಭಾಷೆ ಸರಳವಾಗಿ ಗುರಿಮುಟ್ಟುವುದಾಗಿದ್ದು ಅನಾವಶ್ಯಕವಾದ ಪದ ಒಂದಾದರೂ ಇರುತ್ತಿರ ಲಿಲ್ಲ. ಅವರ ಸ್ವಚ್ಛ ಹೃದಯವೂ ವ್ಯಕ್ತಿತ್ವವೂ ಜನರನ್ನು ಸೆರೆಹಿಡಿದು ಅವರಲ್ಲಿ ಅಡಗಿರುವ ಅಮೋಘ ಶಕ್ತಿಯ ಪ್ರಭಾವವನ್ನು ಬೀರುತ್ತಿದ್ದವು. ಸಂದರ್ಭಕ್ಕೆ ಸರಿಹೋಗುವ ಆವರಣವನ್ನು ಸೃಷ್ಟಿಸುವ ಸಂಪ್ರದಾಯ ವನ್ನು ಅವರು ಬೆಳಸಿಕೊಂಡಿದ್ದರು. ಈ ಸಂಪ್ರದಾಯ ಗೊತ್ತಿಲ್ಲದ ಮತ್ತು ಸುತ್ತಣ ವಾತಾವರಣಕ್ಕೆ ಹೊಂದಿಕೊಳ್ಳದ ಅಪರಿಚಿತನೂ ಈ ಮಂತ್ರದ ಹಿಡಿತಕ್ಕೆ ಸಂಪೂರ್ಣ ಆಕರ್ಷಿತನಾಗುತ್ತಿದ್ದನು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಅವರಲ್ಲಿರುವ ಒಂದು ಅತಿಶಯವಾದ ಮಹತ್ತೆಂದರೆ ಪ್ರತಿಪಕ್ಷ ದವರನ್ನೂ ತಮ್ಮ ಪ್ರೀತಿಯಿಂದ ವಶಪಡಿಸಿಕೊಳ್ಳುತ್ತಿದ್ದುದು.” ಇದೆಲ್ಲ ಗುಣ, ಅವರ ಜೀವನದಲ್ಲಿ ಸಮರಸದಿಂದ ಕೂಡಿದ್ದವು. ಈ ಶಕ್ತಿಯಿಂದ ಅವರು ದಿವ್ಯಜ್ಯೋತಿಯಾಗಿ ಬೆಳಗುತ್ತಿದ್ದರು.